ಡಿಗರ ಮನೆ ಮನೆಯ ವಾರಪತ್ರಿಕೆ 23-8-92, ರೂ. 4

ರಾಗಸಂಗಮ



ಉತ್ತಮ
ಮಟ್ಟದ
ಚಲನಚಿತ್ರ
ವಾರಪತ್ರಿಕೆ

ಬೆಲೆ ರೂ.
2–50 ಮಾತ್ರ

ಏಜೆಂಟರಿಲ್ಲದ
ಕಡೆ ಠೇವಣಿ
ಇಡಬಲ್ಲ
ಏಜೆಂಟರು
ಇಂದೇ
ವ್ಯವಹರಿಸಿರಿ

ಸಂಗಮ
ಪ್ರಕಾಶನ
ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ'
ಬೀದಿ,
ಬೆಂಗಳೂರು –
560 002.

ದೂರವಾಣಿ : 625004

ಪುಸ್ತಕ ರೂಪದ ಏಕೈಕ ಚಲನಚಿತ್ರ ವಾರಪತ್ರಿಕೆ

ಪ್ರತಿ ಶುಕ್ರವಾರ ಹೊರಬೀಳುತ್ತದೆ

ಸಿನಿರೇಖಾ

ನೀವು ಓದಿದ್ದೀರಾ? ಇಲ್ಲದಿದ್ದರೆ ಇಂದೇ ಕೊಂಡು ಓದಿ



ಫ್ಲಾವಿಡಿಯ ಪಕ್ಷಿನೋಟ

★ ತಾರೆಗಳ ಸಂದರ್ಶನ
★ ಸ್ಟುಡಿಯೋ ಜಾಗಿಂಗ್ ★ ಇಣುಕು ನೋಟ ★ ಸಿನಿಬಂಧ
★ ತೆರೆಮರೆಯ ತಜ್ಞರು ★ ಸಿನಿ ಪ್ರಶ್ನೋತ್ತರ
★ ನೀವು ಕೇಳಿದ ವಿಳಾಸ ★ ಸಿನಿ ಕ್ವಿಜ್ ★ ಚಿತ್ರ ವಿಮರ್ಶೆ
★ ಹೊಸ ಚಿತ್ರದ ಹಾಡಿನ ಪುಸ್ತಕ ★ ಫೋಟೋ ಕಲೆಕ್ಷನ್
★ ದಕ್ಷಿಣ ಭಾರತದ ಚಿತ್ರರಂಗ ★ ಹಾಲಿವುಡ್ ಸುದ್ದಿ
★ ಹಿಂದಿ ಚಿತ್ರರಂಗದ ಸುದ್ದಿಗಳು ★ ಚಿತ್ರಕಥೆ–ಸಂಭಾಷಣೆ

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 | 23–8–92 | ರಾಗ : 26

ಕಾದಂಬರಿ ವಿಭಾಗ

ಮ್ಯಾಗಜಿನ್ ವಿಭಾಗ

ಪ್ರಧಾನ ಸಂಪಾದಕ
ಎನ್. ಸುಂದರ್ ರಾಜನ್

ಕಲೆ
ಜೆ...

ಸಂಪಾದಕಿ
ಕಮಲಾ ಸುಂದರ್ ರಾಜನ್

ಮುಖಪುಟ
ಕಸ್ತೂರಿ

ಸಹಾಯಕ ಸಂಪಾದಕಿ
ಎಸ್. ರೇಖಾ

ವರ್ಣ ಪಾರದರ್ಶಿಕೆ
ಮೋಹನರಾಜು

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು–560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
ಬಿಡಿ ಪ್ರತಿಯ ಬೆಲೆ	ರೂ. 4.50

ಶೀಘ್ರದಲ್ಲಿ...

ಸಂಗಮ ಪ್ರಕಾಶನ

ಸಂಸ್ಥೆಯಿಂದ

ಮತ್ತೊಂದು


ಹೊಸ

ವಿನೂತನ

ವಾರಪತ್ರಿಕೆ

ಕಾದಂಬರಿ

ವಿಭಾಗ




ಸೂರಿ ಹಾರ್ದಳ್ಳಿ

ಸಂಪೂರ್ಣ ಕಾದಂಬರಿ

ಮನೆ


ಸೂರಿ ಹಾರ್ದಳ್ಳಿ




ಜಾಹ್ನವಿ

"ಈ ಮಹರಾಯನ ಕಯ್ ಹಿಡಿದು ನಾನು ಬಂಜೆಯಾಗಿ ಹೋದೆ. ಅಂದೇ ಆ ರುದ್ರನಿಂದ ಮಗು ಪಡೆಯುವ ಧೈರ್ಯವನ್ನು ನಾನು ತೋರಬೇಕಿತ್ತು. ಧರ್ಮ ಸಂಪ್ರದಾಯವೆಂದು ನಾನು ಹಾಳಾದೆ.''

"ಎಲಾ ಬಿರಾಮ ನಿನ್ನ ಕರಾಮತ್ತೆಲ್ಲ ನಂಗೆ ಗೊತ್ತಯ್ತೆ. ನೀನು ನನ್ನ ಮನೆಯಲ್ಲಿ ಆಡಿದ ಆಟ, ಮಾಡಿದ ಮೋಸಕ್ಕೆ ನಿನ್ನ ನಾನು ಸುಮ್ನೆ ಬಿಡಾಕಿಲ್ಲ ತಿಳ್ಕೋ.''



ರುದ್ರ



ಭೋಜಯ್ಯ

"ನಗೂದೆಂತಕ, ನಾ ಮುದಿಯಾಯಿನಿ ಅಂತೇಳಿಯಾ, ನೀವೆಲ್ಲ ಒಂದಿನ ಮುದಿಯಾತಿರಿ. ನಿಮ್ ಕೂದ್ಲೆಲ್ಲ ಬೆಳ್ಳಗಾತ್ತ್. ನೀವೂ ಸಾಯ್ತಿ. ಆಮೇಲೆ ನಿಮ್ನ ಹೊಂಡಕ್ ಹಾಕ್ತ್ರ.''

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

ಯವ್ವನ ಒಂದು ಅಪರಾಧ, ಪಾರ್ಥ್ಯಕ್ಯ ಹೋರಾಟ, ವೃದ್ಧಾಪ್ಯವು ವಿಷಾದ
–ಬೆಂಜಮಿನ್ ಡಿಸ್ರೇಲಿ

ಮೂರು ದಿನಗಳಿಂದ ಎಡೆಬಿಡದ ಮಳೆ. ಇಡೀ ಆಕಾಶವೇ ಕರಗಿ ನೀರಾಗಿ ಸುರಿಯುತ್ತಿದೆಯೇನೋ ಎಂಬಷ್ಟು. ಬಾನೇ ತೂತಾಗಿದೆಯೇನೋ ಎನಿಸುವಷ್ಟು, ಪ್ರಳಯ ಕಾಲವೇ ಹತ್ತಿರ ಬಂದಿದೆಯೇನೋ ಎನ್ನಿಸುವಷ್ಟು, ಕಿತ್ತಿಟ್ಟ ಅಗೆಸೂಡಿಗಳು ಸಮುದ್ರದ ಬಾಯಿ ಸೇರಿಬಿಟ್ಟಿವೆ. ಮಳೆಯ ರಭಸ ಸಹಿಸಲಾರದ ಮರಗಳು ತಮ್ಮ ಅಂಗಾಂಗಗಳನ್ನು ಮುದುರಿಕೊಂಡು ಬೋಳಾಗಿವೆ. ಕಪ್ಪೆಗಳು ವರ್ಷಧಾರೆಗೆ ಹೆದರಿ ಮನೆಯೊಳಗೆ ನುಗ್ಗಿ ಗುಟುರ್ ಗುಟುರ್ ರಾಗ ಹಾಡುತ್ತಿವೆ. ದಿನಾ ಬಾನಲ್ಲಿ ಒಂದು ದರ್ಶನ ಕೊಟ್ಟು ಬೇಸತ್ತಿದ್ದ ರವಿ ಮೂರು ದಿನಗಳಿಂದ ರಜೆಯ ಮೇಲಿದ್ದಾನೆ ಎನಿಸುತ್ತದೆ.

ದಿನಾ ಮುಂಜಾನೆ ರೈತರು ಎತ್ತಿನ ಹೆಗಲಿಗೆ ನೊಗ ಕಟ್ಟಿ 'ಓಲೊಳಾಯೀ' ಎಂದೋ, 'ಮೊಳಾಯೀ' ಎಂದೋ ಸ್ವಾಗತಗೀತೆ ಹಾಡಿದನಂತರವೇ ಸೂರ್ಯ ಕೆಂಪು ಚಾಪೆ ಹಾಸಿದ್ದ ಬಾನಲ್ಲಿ ಶೀವಿಯ ಹೆಜ್ಜೆ ಇಡುತ್ತಿದ್ದುದು. ಮಳೆಯ ಅರ್ಭಟದಿಂದಾಗಿ ಆ ಕ್ರಿಯೆ ಪ್ರಕ್ರಿಯೆಗಳಲ್ಲದ್ದರಿಂದ ಸೂರ್ಯದೇವ ಮುನಿಸಿಕೊಂಡಿರಬಹುದು ಎಂದು ಕಲ್ಪಿಸಿ ತಮ್ಮಲ್ಲೇ ನಸುನಕ್ಕರು ಭೋಜಯ್ಯ. ಮೆಲ್ಲಗೆ ನಗುವಿನ ದನಿ ಏರಿಸಿದರು. ಮಾಡಿನಿಂದ ಸಶಬ್ದವಾಗಿ ಕೆಳಬೀಳುತ್ತಿದ್ದ ಜಲಧಾರೆಯೊಡನೆ ಆ ನಗು ಸ್ಪರ್ಧಿಸಿ ಗೆಲ್ಲಲಾಗಲಿಲ್ಲ; ಬದಲು ಅದರಲ್ಲೇ ಲೀನವಾಯಿತು.

ಭೋಜಯ್ಯ ಮಗ್ಗಲು ಬದಲಿಸಿ, ಹೊದ್ದ ಕಂಬಳಿಯಿಂದ ಹೊರತೂರಿದ ಪಾದಗಳನ್ನು ಕಂಬಳಿಯೊಳಗೆಳೆದುಕೊಂಡು ಗಟ್ಟಿಯಾಗಿ ಮುದುರಿಕೊಂಡರು. ಮನೆಯ ಗೋಡೆಗಳೆಲ್ಲ ಒದ್ದೆಯಾಗಿ, ಆ ತೇವ ನೆಲಕ್ಕೂ ಇಳಿದು ಎಲ್ಲೆಡೆ ತಂಡಿ ಪಸರಿಸಿತ್ತು. ಕಪ್ಪೆಗಳು ನಿರ್ಭಯವಾಗಿ ಅವರ ಮೇಲೇ ಅತ್ತಿಂದಿತ್ತ ಕುಪ್ಪಳಿಸುತ್ತಿದ್ದವು. 'ಥತ್ ಇದರ' ಎಂದು ಬೈದುಕೊಂಡಿದ್ದು ಹಲವಾರು ಬಾರಿ ಆದರೂ 'ಪಾಪ ಮೂಕ ಪ್ರಾಣಿ, ಅದಕ್ಕೇನು ತಿಳಿಯುತ್ತೆ' ಅಂತ ತಾವೇ ಸಮಾಧಾನಿಸಿಕೊಂಡಿದ್ದರು ಕೂಡ.

ಈ ಕಪ್ಪೆಗಳನ್ನರಸಿಕೊಂಡು ಹೈಸಾರ, ಒಳ್ಳೆ ಹಾವುಗಳು ಮನೆಯೊಳಗೇ ನುಗ್ಗಿಬಿಡುತ್ತವೆ. ಒಂದು ಬಾರಿಯಂತೂ ಹೈಸಾರವೊಂದು ಜಾಹ್ನವಿಯ ಮೈಮೇಲೇ ಹರಿದು, ಅವಳು ಕಿರುಚಿಕೊಂಡಿದ್ದು, ಮೂರುದಿನ ಜ್ವರದಿಂದ ನರಳಿದ್ದು ಭೋಜಯ್ಯನಿಗೆ ನೆನಪಾಯಿತು. 'ಇದೇನು ಮಹಾ' ಅವರು ತಾವೇ ಅಂದುಕೊಂಡರು. 'ನಮ್ಮಮ್ಮನ ಮೊಲೆಗೇ ಇಮ್ಮಂಡೆ (ಎರಡೂ ಕಡೆ ತಲೆ ಇರುವ) ಹಾವೊಂದು ಹಾಲಿನಾಸೆಗೆ ಬಾಯಿ ಹಾಕಿತ್ತಂತೆ. ಹೊಟ್ಟೆ ತುಂಬ ಹಾಲು ಕುಡಿದು ಕೊನೆಗೆ ತಾನೇ ಹೊರಟು ಹೋಗಿತ್ತಂತೆ.'

ಒಳಗಿನಿಂದ ಜಾಹ್ನವಿಯ ಕೆಮ್ಮು ಕೇಳಿಸಿತು. ಅವಳ ಆ ನಿರಂತರ ಕಾಡುವ ಕೆಮ್ಮಿನ ದನಿ ಮೊದಮೊದಲು ಭೋಜಯ್ಯನ ಕಿವಿಗೆ ಪ್ರಹಾರವೆನ್ನಿಸಿದರೂ ಆದೇ ಇಂಪೆನ್ನಿಸಿಬಿಟ್ಟಿತ್ತು. ದಿನವೆಲ್ಲ ಅವಳಿಗೆ ದುಡಿತ. ಹಸುವಿನ ಹಾಲು ಕರೆದು, ಕಾಫಿ ಮಾಡಿ, ಬೆಳಗಿನ

ತಿಂಡಿಗೇನಾದರೂ ಬೇಯಿಸಿ, ಸ್ನಾನಕ್ಕೆ ಕಡಾಯಿಗೆ ನೀರು ಬಾವಿಯಿಂದ ಸೇದಿ ತುಂಬಿ, ಒಲೆಗೆ ಬೆಂಕಿ ಅಂಟಿಸಿ, ಹಸುಗಳನ್ನು ಮೇಯಲು ಬಿಟ್ಟು ಹೀಗೇ ನಿರಂತರ ಅನೂಚಾನದಾಗಿ ನಡೆದುಬಂದ ಕೆಲಸ ಅವಳದು. ಅವಳ ಕೈಯಿಂದ ಇದು ಆಗುವುದಿಲ್ಲವೆಂದು ಭೋಜಯ್ಯನಿಗೆ ಗೊತ್ತು. ಆದರೂ ತಾನು ಸಹಾಯ ಮಾಡಲು ಅವಳು ಒಪ್ಪುವುದಿಲ್ಲ. ಮೊದಲಾದರೆ ತಿಂಗಳಿಗೆ ಮೂರು ದಿನ ರಜಾ ಅಂತ ಮೂಲೆ ಸೇರಿಬಿಡುತ್ತಿದ್ದಳು. ಈಗ್ಗೆ ಸುಮಾರು ಹತ್ತು ವರ್ಷಗಳಿಂದ ಹತ್ತೇ ಅಲ್ಲಲ್ಲ, ಹನ್ನೊಂದು ಅನ್ನಿಸುತ್ತದೆ. 'ಇನ್ನು ಮೇಲೆ ಹೊರಗಾಗೋಲ್ಲ' ಅಂತ ಆಕೆ ಹೇಳಿದ್ದು ಅವರಿಗಿನ್ನೂ ನೆನಪಿದೆ. ಅಂತೂ ಹತ್ತು ಹನ್ನೊಂದು ವರ್ಷಗಳಾದವು. ಅಂದಿನಿಂದ ಆ ವಿಶ್ರಾಂತಿಯ ದಿನಗಳೂ ಅವಳಿಗಿಲ್ಲ. ನಿನ್ನೆ ರಾತ್ರಿ ಶಾರದ ಹುರುಳಿ ಸಾರು ಮಾಡಿ ಸಂಡಿಗೆ ಹುರಿದಿದ್ದಳು. ಈ ಮಳೆಗಾಲದಲ್ಲಿ ತರಕಾರಿಗಳೂ ಸಿಗುವುದಿಲ್ಲ. ಸಾರೇ ರುಚಿ ಎನ್ನಿಸಿತ್ತು. ಉದ್ದಿನ ಸಂಡಿಗೆ ಬಾಯಲ್ಲಿ ಜೊಲ್ಲು ತರಿಸಿತ್ತು. ಬೇಡಬೇಡವೆಂದರೂ ಬಿಸಿಬಿಸಿ ಅನ್ನ ಸಾರನ್ನು ಹೆಚ್ಚೇ ಬಡಿಸಿದ್ದಳು. ಬಾಯಲ್ಲಿ ಈಗ ಸಾಕಷ್ಟು ಹಲ್ಲುಗಳಿಲ್ಲ. ಇರುವವೂ ಈಗಲೋ ಆಗಲೋ ಧರೆಸೇರಿ ವಿಶ್ರಾಂತಿ ಪಡೆಯುವ ಹಂಬಿಕೆ ಹಾಕಿವೆ. ಅವುಗಳ ಸಹಾಯದಿಂದ ಆಗಿದ ಶಾಸ್ತ್ರ ಮಾಡಿ ನುಂಗಿದ್ದು, ಅದರ ಪರಿಣಾಮ ಈಗ ಕಾಣಿಸುತ್ತಿದೆ. ಹೊಟ್ಟೆಯಲ್ಲಿ ಗಜಾನನ ಬಸ್ಸು ಓಡಾಡಿದ ಹಾಗೆ. ದೈಯದ ಪಾತ್ರಿ ಕೈಯಲ್ಲಿ ಸಿಂಗಾರ ಹಿಡಿದುಕೊಂಡು 'ಎಲೆಲವೋ ನರಕುನ್ನಿಗಳೇ' ಎಂದು ಆರ್ಭಟಿಸುತ್ತ ಕೋಲ ನೃತ್ಯ ಮಾಡಿದ ಹಾಗೆ, ಯುದ್ಧರಂಗದಲ್ಲಿ ಅರ್ಜುನ, ಭೀಷ್ಮರು ಮುಖಾಮುಖಿಯಾಗಿ ನಿಂತು ಚಂಡೆಯ ಸದ್ದಿಗೆ ಸರಿಯಾಗಿ 'ಧಿಮಿತಕ ಧಿಮಿತಕ' ಕುಣಿದ ಹಾಗೆ.

ಬಹಿರ್ದೇಶೆಗೆ ಹೋಗಿ ಬಂದರೇನೇ ಈ ಹಿಂಸೆಯಿಂದ ಮುಕ್ತಿ. ಹೊರಗೆ ಬೆಳಕು ಮೂಡುವ ಸೂಚನೆಗಳಿಲ್ಲ. ಕೋಳಿಯು ಮುಂಜಾನೆಯಲ್ಲಿ ಕೂಗುತ್ತ ಸೂರ್ಯನ ಆಗಮನಕ್ಕೆ ಬಹುಪರಾಕ್ ಹೇಳುವುದನ್ನೂ ನಿಲ್ಲಿಸಿಬಿಟ್ಟಿರಬೇಕು.

ಭೋಜಯ್ಯನವರಿಗೆ ಚಳಿಯನ್ನು ಸಹಿಸುವ ವಯಸ್ಸು ಎಂದೋ ಮುಗಿದು ಹೋಗಿದೆ. ಕಣ್ಣು ಸ್ಪಷ್ಟವಾಗಿ ಕಾಣಿಸುವುದಿಲ್ಲ. ನಡೆಯಲು ಊರುಗೋಲಿನ ಸಹಾಯ ಬೇಕೇಬೇಕು. ಬೆನ್ನೂ ನೆಟ್ಟಗೆ ನಿಲ್ಲುವುದಿಲ್ಲ. ಆದರೂ ನಾಲಿಗೆ ತನ್ನ ಚಪಲದಿಂದ ಮುಕ್ತವಾಗಿಲ್ಲ. ಹಾಗಾಗಿ ಬೆಳಿಗ್ಗೆ ಬೆಳಿಗ್ಗೆಯೇ ಹೊಟ್ಟೆ ತಲೆಹರಟೆ ಮಾಡಲು ಪ್ರಾರಂಭಿಸಿದ್ದು. ಅವರು ಎದ್ದು ಕುಳಿತು ತೆಂಗಿನ ಗರಿಯ ಮಡಲಿನ ಸಂದಿಯಲ್ಲಿ ಕಣ್ಣು ತೂರಿದರು. ಕತ್ತಲು ಅಷ್ಟೊಂದು ದಟ್ಟವಾಗಿಲ್ಲ, ನಿಧಾನವಾಗಿ ಹೊಳೆಯ ಕಡೆ ಬಹಿರ್ದೆಶೆಗೆ ಹೋಗಬಹುದು ಎಂದುಕೊಂಡರು. ಎದ್ದು ಕುಳಿತು 'ಶಂಕರಾ' ಎಂದೊಮ್ಮೆ ಗಟ್ಟಿಯಾಗಿ ಪ್ರಾರ್ಥಿಸಿ ಎರಡೂ ಹಸ್ತಗಳನ್ನು ಉಜ್ಜಿ ಕಣ್ಣಿಗೊತ್ತಿಕೊಂಡು 'ಕರಾಗ್ರೇ ವಸಂತೇ ಲಕ್ಷ್ಮೀ ಕರ ಮಧ್ಯೇ ಸರಸ್ವತಿ ಕರಮೂಲೇ...' ಎಂದು ಹೇಳತೊಡಗಿದರೂ, ಉಹೂಂ, ಈ ಹೊಟ್ಟೆ ಪೂರಾ ಮುಗಿಸುವಷ್ಟೂ ಪುರುಸೊತ್ತು ಕೊಡುವುದಿಲ್ಲವಲ್ಲ ಎಂದು ಬೈದುಕೊಂಡು ಎದ್ದು, ಪಕ್ಕದಲ್ಲೇ ಇದ್ದ ಊರುಗೋಲನ್ನು ಭದ್ರವಾಗಿ ಹಿಡಿದುಕೊಂಡು ಮೂಲೆಯಲ್ಲಿ ಮಲಗಿದ್ದ ಓಲಿ ಕೊಡೆಯನ್ನು ಎತ್ತಿಕೊಂಡು ಮನೆಯಿಂದ ಹೊರಗೆ ಕಾಲಿಟ್ಟಾಗ ಮೈನವಿರೇಳಿಸುವಷ್ಟು ತಣ್ಣನೆ ನೀರಿತ್ತು ನೆಲದಲ್ಲಿ. ಆದರೆ ಅದು ಅವರ ಮುಂಜಾನೆಯ ಕೈಂಕರ್ಯವನ್ನು ತಡೆಯುವಂತಿಲ್ಲ. ಎರಡು ಹೆಜ್ಜೆ ಇಡುತ್ತಲೇ ಕಾಲಿನ ಚರ್ಮ ಅದಕ್ಕೆ

ಹೊಂದಿಕೊಂಡಿತು.

ಮಾಡಿನಿಂದ ನೀರು ಸುರಿಯುತ್ತಲೇ ಇದ್ದರೂ ಹೊರಗೆ ಮಳೆ ಕಡಿಮೆಯಾಗಿತ್ತು. ಗದ್ದೆಯ ತುಂಬ ಹರಡಿದ ಕೆಂಪು ನೀರಿಗೆ ಗದ್ದೆಯ ಅಂಚುಗಳು ಕೊಚ್ಚಿ ಹೋಗಿದ್ದವು. ಇವರ ಆಗಮನವನ್ನು ಕಂಡ ಕಪ್ಪೆಗಳು ಪುಳುಕ್ ಪುಳುಕ್ ಸದ್ದು ಮಾಡುತ್ತ ನೀರಿಗೆ ಜಿಗಿದರೂ, ಸಾಯಲು ಸಿದ್ಧವಾಗೇ ಇರುವಂತೆ ನಕ್ಕುಳ ಹುಳುಗಳು ಅವರ ಕಾಲಿಗೆ ಸಿಕ್ಕಿ ಸಿಕ್ಕಿ ಅಪ್ಪಚ್ಚಿಯಾಗುತ್ತಿದ್ದವು. ಈ ದೇವನ ಲೀಲೆ ಎಷ್ಟೊಂದು ವಿಚಿತ್ರ. ಹುಟ್ಟುತ್ತಲೇ ಸಾವಿಗೆ ಸಿದ್ಧವಾಗುವ ಅಲ್ಲಲ್ಲ ಸಾಯಲಿಕ್ಕೆಂದೇ ಹುಟ್ಟುವ ಆ ಕ್ರಿಮಿಕೀಟಗಳ ಬದುಕು ಕೂಡ ಅವನ ಅಮೋಘ ಲೀಲೆಗಳಲ್ಲಿ ಒಂದು. ಆದರೆ ಆ ಪ್ರಾಣಿಗಳಿಗೆ ಸಾವಿನ ಪ್ರಜ್ಞೆ ಇದೆಯೇ?

ಸಾವು ಅನ್ನುತ್ತಲೇ ಅವರ ಮನಸ್ಸು ಅಧೀರವಾಗತೊಡಗಿತು. ಕಾಲರಾಯ ಯಾವತ್ತೂ ನನ್ನ ಮೇಲೆ ತನ್ನ ಪಾಶ ಬೀಸಬಹುದು. ಹೀಗೇ ಹೋಗುತ್ತಿದ್ದ ಹಾಗೇ ಕಾಲುಜಾರಿ ನೀರು ಕುಡಿದು ಯಮಲೋಕ ದರ್ಶನವಾದರೂ ಆಗಬಹುದು. ಆದರೆ ಜಾಹ್ನವಿ, ಅವಳ ಗತಿ?


ಮುಂಡಕನ ಹುಳುವಿನ ಹಿಂದೆ ಕಾಲೂರಲು ಗಟ್ಟಿಯಾದ ಜಾಗ ಇರುವೆಡೆ ನಿಂತು ಕೊಡೆಯನ್ನು ಪಕ್ಕಕ್ಕಿಟ್ಟು,ಕೋಲಿನ ಮೇಲಿನ ಆಧಾರವನ್ನು ಕಡಿಮೆ ಮಾಡದೆ ನಿಧಾನವಾಗಿ ಕುಳಿತುಕೊಳ್ಳತೊಡಗಿದರು ಭೋಜಯ್ಯ. ಕಾಲಿನ ಮಂಡಿಗಳು ತೊಂದರೆ ಕೊಡದೆ ಕುಳಿತುಕೊಳ್ಳಲು ಸಾಧ್ಯವಾದರೆ ಅದೇ ಪರಮಾನಂದ ಅವರಿಗೆ. ಕುಕ್ಕುರುಗಾಲಿನಲ್ಲಿ ಕುಳಿತು ಹೊಟ್ಟೆಗೆ ಒತ್ತಡ ಹೇರಬೇಕು ಎಂಬಷ್ಟರಲ್ಲಿ,

ಅದೇನು, ಏನದು? ಅವರ ನರನರಗಳೂ ಸೆಟೆದಂತಾಯಿತು. ರೋಮರೋಮಗಳು ನಿಮಿರಿ ನಿಂತವು. ಅಯ್ಯೋ ಎಂತಹ ದೃಶ್ಯ?

ಅವರಿಗೆ ಬಹಿರ್ದೆಶೆಗೆ ಹೋಗಲಾಗಲಿಲ್ಲ. ಮೊದಲಿದ್ದ ವಸ್ತ್ರದ ಸ್ಥಿತಿಯಲ್ಲೇ ಎದ್ದು ನಿಂತು ಕಣ್ಣು ಕಿರಿದು ಮಾಡಿ ನೋಡಿದರು. ಹೌದು, ಅದು ಮಾನವನ ಶವ. ನೀರು ತುಂಬಿದ ದೇಹ ಊದಿಕೊಂಡಿದೆ. ಕಣ್ಣುಗಳು ಮೀನುಗಳಿಗೆ ಆಹಾರವಾಗಿವೆ. ಮೈಮೇಲೆ ತುಣುಕು ಬಟ್ಟೆಯೂ ಇಲ್ಲದೆ ನಿರ್ವಾಣವಾಗಿದೆ. ಮುಂಡಕ ಗಿಡದ ಸಂದಿಗೆ ಸಿಕ್ಕಿಕೊಂಡು ನೀರಿನ ಪ್ರವಾಹಕ್ಕೆ ಕೆಳಗೆ ಮೇಲೆ ಉಯ್ಯಾಲೆಯಂತೆ ಚಲಿಸುತ್ತಿದ್ದ ಅದರ ಊದಿದ ರೋಮಭರಿತ ಎದೆಯ ಮೇಲೆ ಕೇರೆ ಹಾವೊಂದು ತಣ್ಣಗೆ ಮಲಗಿ ವಿಶ್ರಾಂತಿ ಪಡೆಯುತ್ತಿದೆ.

"ಹೌದು, ಇದು ರುದ್ರಪ್ಪನ ಶವ; ಅನಾಥ ಶವ.'' ಅವರು ಒಮ್ಮೆಗೇ ಚೀರಿಕೊಂಡರು. ಕೊಡೆ, ಊರುಗೋಲುಗಳ ಪರಿವೆಯೇ ಇಲ್ಲದೆ ಬೊಬ್ಬರ್ಯನ ಪಾದ್ರಿ ಜೀವದ ಪರಿವೆಯಿಲ್ಲದೆ ಓಡುವಂತೆ ಒಂದೇ ಓಟಕ್ಕೆ ಮನೆ ಸೇರಿದರು. "ಇವಳೇ ಜಾನೀ, ರುದ್ರಪ್ಪ ಸತ್ತುಹೋದ ಕಣೇ.'' ಇಷ್ಟು ಹೇಳಿದವರೇ ಏದುಸಿರು ಬಿಡುತ್ತ ಕಂಬಕ್ಕೊರಗಿ ಕುಳಿತರು. ಅವರ ಮೈಯಿಂದ ಧಾರಾಕಾರವಾಗಿ ಬೆವರು ಸುರಿಯುತ್ತಿತ್ತು.

ರಾತ್ರಿ ಅಡುಗೆ ಮನೆಯಲ್ಲೆಲ್ಲ ಸೋರಿ ನಿಂತಿದ್ದ ನೀರನ್ನು ಬಟ್ಟೆಯಲ್ಲಿ ಒರೆಸುತ್ತಿದ್ದ, ಒದ್ದೆ ಬಟ್ಟೆಯನ್ನು ನೀರಿನ ಪಾತ್ರೆಗೆ ಹಿಂಡುತ್ತಿದ್ದ ಜಾಹ್ನವಿಗೆ ಭೋಜಯ್ಯನ ಕೂಗು ಕೇಳದೇ ಮೂರುದಿನದಿಂದ ಕೊರಳಿಗೆ ಕುಣಿಕೆ ಬಿಗಿದುಕೊಂಡೇ ಇದ್ದ ದನಗಳಿಗೆ ಏನು ಮೇವು ಹಾಕುವುದೆಂದು ಚಿಂತಿಸುತ್ತಿದ್ದ ಅವಳಿಗೆ ಪಕ್ಕನೆ ಏದುಸಿರು ಬಿಡುತ್ತಿರುವ ಸದ್ದು ಕೇಳಿ



ಗಾಬರಿಯಾಗಿ ಹೊರಗೋಡಿ ಬಂದರು. ಒದ್ದೆ ಕೈಯನ್ನು ಸೆರಗಿಗೆ ಒರೆಸಿಕೊಳ್ಳುತ್ತ ಹೊಸಿಲು ದಾಟಿ ಹೊರಬಂದರೆ ಇಹದ ಇರವನ್ನೇ ಮರೆತವರಂತೆ ಸೂರು ನೋಡುತ್ತ ಸಶಬ್ದವಾಗಿ ದೀರ್ಘ ಶ್ವಾಸೋಚ್ವ್ವಾಸ ಬಿಡುತ್ತಿರುವ, ಪ್ರತಿ ಉಸಿರಿಗೂ ಎದೆ ಉಬ್ಬಿ ಉಬ್ಬಿ ಇಳಿಯುವ ಸೊಣಕಲು ದೇಹದ ಗಂಡನನ್ನು ಕಂಡು ಭಯವಾಗಿ ಕಣ್ಣಲ್ಲಿ ಅಶ್ರುಹುಟ್ಟಿ ಕೈಕಾಲು ಕಂಪಿಸಿತು. ಏನಾಯ್ತ್ರೀ ಎನ್ನುತ್ತ ಹತ್ತಿರ ಬಂದು ಆ ಕಡ್ಡಿದೇಹವನ್ನು ಮಗುವನ್ನು ಅವುಚಿಕೊಂಡಂತೆ ತನ್ನ ದೇಹಕ್ಕೆ ಆನಿಸಿಕೊಂಡು ನಿಧಾನವಾಗಿ ಅವರ ಎದೆಯನ್ನು ಕೆಲವು ನಿಮಿಷ ಸವರಿದರು. ಕೊಟ್ಟಿಗೆಯಲ್ಲಿ ಹಸುವೊಂದು ಅಂಬಾ ಎಂದು ಕೂಗಿದ್ದೂ ಕೇಳಿಸದೆ 'ಇವರಿಗೇನಾದರೂ ಆದರೆ ಏನಪ್ಪಾ ಗತಿ' ಎಂದು ಭಯವಾಗಿ ಅವರ ಜೀವ ಉಳಿಸಪ್ಪಾ ಎಂದು ನೆನಪಿಗೆ ಬಂದ ದೇವರಿಗೆಲ್ಲ ಆಕೆ ಹರಸಿಕೊಂಡಿದುದರ ಫಲವೋ ಏನೋ ಭೋಜಯ್ಯನ ಉಸಿರು ಮಾಮೂಲಿನ ಸ್ಥಿತಿಗೆ ಬಂತು. 'ಯಾಕ್ರೀ ಏನಾಯ್ತ್ರೀ' ಎಂದು ಕೇಳಬೇಕೆನ್ನುವಷ್ಟರಲ್ಲೇ ಆಕೆಗೆ ಉಸಿರುಗಟ್ಟಿದಂತಾಗಿ, ಗಂಟಲಲ್ಲಿ ಏನೋ ಕೆರೆದಂತಾಗಿ ದೀರ್ಘವಾಗಿ ಕೆಮ್ಮತೊಡಗಿದಳು. ಆ ಕೆಮ್ಮು ತಹಬಂದಿಗೆ ಬರುವಷ್ಟು ಹೊತ್ತು ಕಾದು, ಆಗಲೇ ಚೇತರಿಸಿಕೊಂಡಿದ್ದ ಭೋಜಯ್ಯ "ನಾನು ಬದುಕೋದಿಲ್ಲ ಜಾನಿ, ನನ್ನ ಕಾಲ ಮುಗೀತು. ಅಲ್ಲಿ ನೋಡು ನೋಡಲ್ಲಿ'' ಅವರು ಕೈ ತೋರಿಸಿದರು.

"ಏನಾಯ್ತ್ರೀ ಯಾಕೆ ಹಿಂಗೆಲ್ಲ ಆಡ್ತಿ'' ಜಾಹ್ನವಿಯ ಸ್ವರ ಕಂಪಿಸುತ್ತಿತ್ತು.

"ನೋಡೇ ನೋಡೇ ಅಲ್ಲಿ ರುದ್ರಪ್ಪನ ಪ್ರೇತ. ನನ್ನನ್ನೂ ಬಾ ಅಂತಿದೆ ಜಾಹ್ನವಿ. ನಾನು ಸಾಯುದಿಲ್ಲೆ ಕಣೇ ರುದ್ರಪ್ಪನಿಗೆ ಹೇಳು ನೀನು ಹೊರಟು ಹೋಗೂಂತ.'' ಭಯವಿಹ್ವಲ ಮಗುವು ತಾಯಿಯನ್ನು ಹಿಡಿದುಕೊಳ್ಳುವಂತೆ ಅವರು ಜಾಹ್ನವಿಯನ್ನು ತಬ್ಬಿ ಹಿಡಿದುಕೊಂಡರು.

"ಅವನ್ಯಾಕ್ರೀ ಸತ್ತುಹೋಗ್ತಾನೆ. ಯಾವುದೋ ಜಗಲೀಲಿ ಮಲಗಿರ್ತ ನೀವು ಸುಧಾರಿಸಿಕೊಳ್ಳಿ.'' ಜಾಹ್ನವಿ ಹೇಳಿದಳು.

"ಇಲ್ಲ ಅವನು ಸತ್ತುಹೋಗಿದ್ದ. ಹೊಳೇಲಿ ಅವನ ಹೆಣ ತೇಲ್ತಿದ್ದು ನಾನು ಕಣ್ಣಾರೆ ಕಂಡೆ.'' ಅವರ ಕಣ್ಣೆದುರು ಆ ದೃಶ್ಯ ಮತ್ತೆ ಪ್ರತ್ಯಕ್ಷವಾಯಿತು. ಅವರು ನೋಡುತ್ತಿದ್ದಂತೇ ಆ ಶವ ಎದ್ದುನಿಂತು ನೆಲಕ್ಕಿಂತ ಒಂದೆರಡಡಿ ಮೇಲೆ ನಗ್ನವಾಗಿಯೇ ತೇಲುತ್ತ ವಿಕಾರವಾಗಿ ನಕ್ಕಂತನ್ನಿಸಿತು ಅವರಿಗೆ. ಅವರು ಮತ್ತೆ ಕಣ್ಣು ಮುಚ್ಚಿದರೂ ಆ ದೃಶ್ಯ ಮರೆಯಾಗಲಿಲ್ಲ.

ಭೋಜಯ್ಯನ ಹಿಂದೆಯೇ ಅಲ್ಲಿತನಕ ಬಂದ ರುದ್ರಯ್ಯನ ಪ್ರೇತ ಮನೆಯೆದುರಿಗಿನ ಮಾವಿನ ಮರದ ರೆಂಬೆಯಲ್ಲಿ ತೇಲಾಡುತ್ತ ವಿಕಟಾಟ್ಟಹಾಸ ಮಾಡಿತು. 'ಲೋ ಬಿರಾಮ' ಆ ಪ್ರೇತ ಸಾಧ್ಯವಾದಷ್ಟೂ ಗಟ್ಟಿಯಾಗಿ ಹೇಳಿತು.

"ನಿಂಗೆ ಕತೆ ಹೇಳ್ತೀನಿ ಕತೆ. ಗಬ್ಬೂರಿನ ಬ್ರಾಹ್ಮಣ ದಂಪತಿಗಳ ಕತೆ, ಹಾದರದ ಕತೆ. ಮನೆ ಉತ್ಥಾನ, ಅಭ್ಯುದಯ ಅವನತಿಗಳ ಕತೆ. ಕೇಳು ಕೇಳು.''

'ಕೇಳು ಕೇಳು' ಆ ದನಿ ಗಬ್ಬೂರಿನ ಮೂಲೆ ಮೂಲೆಯನ್ನು ಸೇರಿತು. ಊರಿನ ಬೆಟ್ಟಗುಡ್ಡಗಳು ಆ ದನಿಯನ್ನು ಪ್ರತಿಧ್ವನಿಸಿದವು. ಮರಗಳು ತಲೆದೂಗಿ ಹೌದೆಂದವು. ಕುತೂಹಲಿ ಸೂರ್ಯ ಮೋಡಗಳ ನಡುವಿನಿಂದ ಕಣ್ಣು ತೂರಿದ. ಹಕ್ಕಿಗಳು ಚಿವ ಚಿವ್ ಎಂದವು.

ಗಬ್ಬೂರಿನ ಕಿವಿಗಳು ತೆರೆದವು. ಗವಿಗಳು ಬಿರಿದವು. ಕವಿಗಳು ಬರೆದರು ಗಬ್ಬೂರಿನ ಕಥೆಯ. ಪ್ರೇತ ಹೇಳಿದ ಕಥೆಯ, ಭೋಜಯ್ಯ, ಜಾಹ್ನವಿ ದಂಪತಿಗಳ ಗುಟ್ಟಿನ ಕತೆಯ.

ಸಂಗೀತ

ಈ ಸಪ್ಪೆ ಕವನವ ಓದಿ
ಬೆಪ್ಪಾಗಿ ನಿಲಬೇಡ
ಕಪ್ಪು ಕೂದಲಿನ ಅಪ್ಪಟ ಪ್ರೇಮಿ
ನಿನ್ನ ಕೂದಲೆಳೆಯೊಂದ ತೆಗೆದು
ತಂತಿ ಮಾಡಿ ಹಾಡಿಯೇನು
ಸಂಗೀತ.

— ಅಶೋಕ ಎಚ್. ನಾಯ್ಕ



ಮಳೆರಾಯ ಮೂಲೆಯಲ್ಲೆಲ್ಲೋ ಅವಿತುಕೊಂಡ.

* * * * *

ಪ್ರತಿ ಶನಿವಾರ ಸಂತೆ ನಡೆಯುವ ಪಶ್ಚಿಮ ಕಡಲ ತೀರದ ತಾಲ್ಲೂಕು ಕೇಂದ್ರದಿಂದ ಸುಮಾರು ಮೂವತ್ತು ಮೂವತ್ತೈದು ಕಿಲೋಮೀಟರ್ ಪೂರ್ವಕ್ಕೆ ಸಾಗಿದರೆ ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ಗಬ್ಬೂರೆಂಬ ಒಂದು ಊರು ಸಿಗುತ್ತದೆ. ಇತ್ತ ಹಳ್ಳಿಯೂ ಅಲ್ಲದ ಅತ್ತ ನಗರವೂ ಅಲ್ಲದ ಗಬ್ಬೂರಿನ ಹೆಸರಿನ ಮೋಜಿನ ಬಗ್ಗೆ ತಲೆಕೆಡಿಸಿಕೊಂಡು ಸಮಯ ವ್ಯರ್ಥ ಮಾಡುವುದರಲ್ಲಿ ಆಸಕ್ತಿಯಿಲ್ಲ ಆ ಊರ ಮಂದಿಗೆ. ಕೃಷಿಯೇ ಮುಖ್ಯ ಉದ್ಯೋಗ. ಮುಖ್ಯ ಬೆಳೆ ಬತ್ತ ಜೊತೆಗೆ ತೆಂಗು, ಕಬ್ಬು, ಅಡಿಕೆ ಮುಂತಾದ ವಾಣಿಜ್ಯ ಬೆಳೆಗಳೂ ಇವರ ಕೃಷಿಯಲ್ಲಿ ಸೇರಿವೆ. ಎರಡು ಸಾವಿರಕ್ಕೂ ಕಡಿಮೆ ಜನರಿರುವ ಊರಿನ ಬಹುತೇಕ ಜನ ಅಕ್ಷರಜ್ಞಾನವಿಲ್ಲದವರು. ಅಂಚೆಯನ್ನು ಪೋಸ್ಟ್‌ಮ್ಯಾನ್ ದ್ಯಾವಯ್ಯ ತಂದುಕೊಡಬೇಕು ಮಾತ್ರವಲ್ಲದೆ ಅದನ್ನು ಓದಿಯೂ ಹೇಳಬೇಕು.

ಗಬ್ಬೂರಿನ ಸೂರ್ಯ ಬಲು ಸೋಮಾರಿ. ಅವನ ಏಳುವುದೇ ತುಂಬ ತಡ, ಎದ್ದರೂ ಘಟ್ಟಗಳ ಶಿಖರಗಳ ಹಿಂದಿನಿಂದ ಕಣ್ಣುಮುಚ್ಚಾಲೆಯಾಡುತ್ತ, ಬಾನೆತ್ತರಕ್ಕೆ ಬೆಳೆದು ನಿಂತ ವೃಕ್ಷಗಳ ನೆರಳಿನಲ್ಲಿ ಚಿತ್ತಾರ ಬಿಡಿಸುತ್ತ ಬಾನಿಗೇರಿದವನೇ ಒಂದೇ ಬಾರಿಗೆ ಬೆಂಕಿಯನ್ನುಗುಳಲು ಪ್ರಾರಂಭಿಸುತ್ತಾನೆ. ಕೊನೆಗೆ ತನ್ನ ಉರಿಯಿಂದ ತಾನೇ ಬೆಂದು ಪಡುವಣ ನೀರಿನಲ್ಲಿ ಮುಳುಗಿ ತಣ್ಣಗಾಗುತ್ತಾನೆ.

ಊರಲ್ಲಿ ಒಂದು ಪ್ರಾಥಮಿಕ ಶಾಲೆ, ಒಂದು ಚಾದಂಗಡಿ, ಒಂದು ದಿನಸಿ ಅಂಗಡಿ, ಅದರ ಮಾಲೀಕ ಪುಂಡಲೀಕ ಪ್ರಭು, ಒಂದು ದೇವಸ್ಥಾನ, ಮಹಾಲಿಂಗೇಶ್ವರನದು ಇವೆ. ಊರ ಹಿರಿಯ ಶ್ರೀಮಂತ ದಾಸಯ್ಯ ಹೆಗ್ಗಡೆ, ಊರಿನ ದೈವ ಮಹಾಲಿಂಗೇಶ್ವರ ಇವುಗಳ ಕೈಯಲ್ಲಿ ಇಡೀ ಊರಿನ ಸೂತ್ರ ಇದೆ. ಕಲ್ಲಾಗಿ, ನಿರ್ವಿಣ್ಣನಾಗಿ ಕುಳಿತ ಮಹಾಲಿಂಗೇಶ್ವರ ಭೋಜಯ್ಯನವರನ್ನು ತನ್ನ ಬಾಯಿಯನ್ನಾಗಿ ಮಾಡಿಕೊಂಡಿದ್ದಾನೆ.

ಈ ಇಬ್ಬರ ಅಧಿಪತ್ಯವನ್ನು ಧಿಕ್ಕರಿಸುವ ಕೆಚ್ಚು ರೊಚ್ಚಿದ್ದವರನ್ನು ಬಗ್ಗುಬಡೆಯಲು ಧರ್ಮಸ್ಥಳದ ಮಂಜುನಾಥೇಶ್ವರನಿದ್ದಾನೆ. ಅವನಿಂದ ಮೇಲಕ್ಕೆ ಅಪೀಲೇ ಇಲ್ಲ. ಅವನು

ಹೇಳಿದರೆ ಹಾರುವ ಹಕ್ಕಿಯೂ ಚಲನೆಯನ್ನು ನಿಲ್ಲಿಸಬೇಕು; ಹರಿವ ಹಾವೂ ಮರದ ಕೊರಡಾಗಬೇಕು.

ಭೋಜಯ್ಯನವರು ಜಾಹ್ನವಿ ಹತ್ತು ಬಾರಿ ಹೇಳಿದ ಮೇಲೆಯೇ ಅಂತೂ ಇಂತೂ ಸ್ನಾನದ ಮನೆಯತ್ತ ಹೆಜ್ಜೆ ಹಾಕಿದ್ದು. ಏನೋ ಧ್ಯಾನ ಮಾಡುತ್ತ ಹಂಡೆಯ ಬಿಸಿ ನೀರಿಗೆ ಕೈ ಅದ್ದಿ ಅದು ಉರಿಯತೊಡಗಿದಾಗ 'ಈ ಉರಿಗೇ ಹೆದರಿದರೆ ಹೇಗೆ, ನಾಳೆ ಮಾವಿನ ಕೊಳ್ಳಿಯ ಮೇಲೆ ಬೆಂಕಿಯ ಕೆನ್ನಾಲಿಗೆಯಿಂದ ಸುಡಿಸಿಕೊಳ್ಳುವಾಗ ಈ ದೇಹ ಹೇಗೆ ಪ್ರತಿಕ್ರಿಯಿಸಬಹುದು? ಇಲ್ಲ ನೋವಿಗೆ ಹೆದರಬಾರದು' ಎಂದು ಗಟ್ಟಿ ತೀರ್ಮಾನ ಮಾಡಿಕೊಂಡವರು ಬೇಕೂಂತಲೇ ಮುಂಗೈತನಕ ಆ ಸುಡು ನೀರಿನಲ್ಲಿ ಕೈ ಮುಳುಗಿಸಿಕೊಂಡರು. ನೋವು ಹೆಚ್ಚುತ್ತ ಹೆಚ್ಚುತ್ತ ಹಂತ ಹಂತವಾಗಿ ಅದರ ಅರಿವನ್ನೇ ಮರೆತವರಂತೆ ಭಗವದ್ಗೀತೆಯಲ್ಲಿ ಏನು ಹೇಳಿದ್ದು ಶ್ರೀ ಕೃಷ್ಣ? ವಾಸಾಂಸಿ ಜೀರ್ಣಾನಿ ಯಥೋ ವಿಹಾಯ. ಈ ಸಾವೆಂದರೆ ಆತ್ಮ ಹಳೆಯ ಬಟ್ಟೆಯನ್ನು ಕಳಚಿ ಹೊಸದನ್ನು ಧರಿಸುವಂತೆ. ಆದ್ದರಿಂದಲೇ ಹೇಳಿರಬೇಕು 'ಮುಪ್ಪಿನ ಸಾವು ಮದುವೆಗೆ ಸಮಾನ' ಎಂದು. ಆದರೆ ಮುದಿತನ ಎಂದಿನಿಂದ ಪ್ರಾರಂಭವಾಗುತ್ತದೆ ಆ ಪದದ ಅರ್ಥವ್ಯಾಪ್ತಿಯೇನು? ಐವತ್ತು, ಅರವತ್ತು ಅಥವಾ ಎಪ್ಪತ್ತು ವರ್ಷಗಳು, ರುದ್ರಪ್ಪನ ವಯಸ್ಸೆಷ್ಟು, ಯಾರಿಗೆ ಯಾರಿಗೆ ಗೊತ್ತು? ಅದು ಅವನಿಗೇ ಗೊತ್ತಿಲ್ಲ. ಇನ್ನು ನಮಗೇನು ಗೊತ್ತು? ಅವನನ್ನು ನೋಡಿದ್ದು ಯಾವತ್ತು.

ಬಚ್ಚಲಿನಿಂದ ಸ್ನಾನದ ಸದ್ದು ಕೇಳಿಸುತ್ತಿಲ್ಲ. ಜಾಹ್ನವಿಗೆ ಆಶ್ಚರ್ಯವಾಯಿತು. ಅವರಿಗೆ ಬೆಳ್ಳಂಬೆಳಗ್ಗೆ ಶವದರ್ಶನವಾಗಿದೆ ಅನಿಷ್ಟ. ಆವಾಗಿನಿಂದ ಭೂತ ಬಡಿದವರಂತೆ ವಿಚಿತ್ರ ವಿಚಿತ್ರವಾಗಿ ಆಡುತ್ತಿದ್ದಾರೆ. ಇದೇನು ಗ್ರಹಚಾರ ಎಂದುಕೊಂಡು ಸ್ನಾನದ ಮನೆಗೆ ಬಂದು ಇಣುಕಿದರೆ ಭೋಜಯ್ಯ ನೀರಲ್ಲಿ ಕೈ ಇಳಿಬಿಟ್ಟು ಬಾಯಲ್ಲಿ ಅಸ್ಪಷ್ಟವಾಗಿ ಅದೇನೋ ಮಣಮಣ ಅನ್ನುತ್ತಿದ್ದಾರೆ.


"ಏನ್ರೀ ಅದು, ಮೀಯುಕಾಗದಾ?'' ಜಾಹ್ನವಿಯ ಮಾತು ಕಿವಿಗೆ ಬೀಳದವರಂತೆ ಪಿಳಪಿಳಿ ಕಣ್ಣು ಬಿಟ್ಟುಕೊಂಡು ಅವಳನ್ನೇ ನೋಡುತ್ತ ಹೇಳಿದರು ಭೋಜಯ್ಯ. "ನಿಂಗೆ ಗೊತ್ತಾ ಜಾನಿ, ನಮ್ಮ ಮನೆಗೆ ರುದ್ರ ಬಂದ ಕತೆ. ಸುಮಾರು ಐವತ್ತೈದು ವರ್ಷಗಳ ಹಿಂದೆ, ಹೀಗೇ ಮಳೆ ಭೋರ್ಗರೆಯುತ್ತಿದ್ದ ಕಾಲ. ಮಹಾಲಿಂಗೇಶ್ವರನ ದೇವಸ್ಥಾನದ ಜಗಲಿಯ ಮೇಲೆ...''

"ಹೇಳೋ ಭೋಜಯ್ಯ ಹೇಳು. ಸಾವಿರ ಸಲ ಇದನ್ನು ನಿನ್ನ ಹೆಂಡತಿಗೆ ಹೇಳಿದ್ದಿ, ಈಗಲೂ ಹೇಳು. ಆದರೆ ಆ ಪ್ರತಿಯೊಂದು ದೃಶ್ಯವನ್ನು ನಿನ್ನ ಕಣ್ಣೆದುರು ಯಥಾವತ್ ಮಂಡಿಸುತ್ತೇನೆ. ಹೇಳು ಅದರ ಇಂಚಿಂಚನ್ನೂ ವಿವರಿಸು.'' ರುದ್ರಪ್ಪನ ಪ್ರೇತ ಹುಣಿಸೆ ಮರದಿಂದ ಕೂಗಿತು.

ನೀರಿನಿಂದ ಕೈಯನ್ನು ಹೊರತೆಗೆದ ಭೋಜಯ್ಯ ಹೆಂಡತಿಯನ್ನು ಕೇಳಿದರು. "ಏನಂದೆ ಜಾಹ್ನವಿ ಏನಂದೆ, ಸರಿಯಾಗಿ ಹೇಳು.''

ಜಾಹ್ನವಿ ಅವರ ಮಾತಿಗೆ ಉತ್ತರಿಸಲಿಲ್ಲ. ಸುಟ್ಟ ಚರ್ಮದ ಮೇಣದಂತಾದ ಅವರ ಕೈಯನ್ನು ಕಂಡು ಒಂದು ಬಾರಿ ಚೀರಿದರು. "ನಿಮಗೇನಾಗಿದೆ ಇವತ್ತು? ಅಯ್ಯೋ ಮಹಾಲಿಂಗೇಶ್ವರಾ'' ಗಂಡನನ್ನು ಹೊತ್ತುಕೊಂಡೇ ಮನೆಯೊಳಗೆ ಕರೆತಂದರು ಜಾಹ್ನವಿ.

ಸಾವಿರ ಶರೀರಗಳ ಆತ್ಮ ಸ್ವರೂಪವೇ ಒಂದು ಪುಸ್ತಕ. –ಆರ್ಥರ್ ಬೋಸ್ವೆನ್
ಸುಖವನ್ನು ಸಂಗ್ರಹಿಸಬೇಕಾದರೆ ಪುಸ್ತಕಗಳನ್ನು ಸಂಗ್ರಹಿಸು. –ವಿ. ಸ್ಟಾರೆಟ್
ಪುಸ್ತಕ ಪ್ರೇಮವಿಲ್ಲದವನು ಹಣವಂತನಾದರೂ ದರಿದ್ರನೇ. – ಲಾಂಗ್‌ಫೋರ್ಡ್
ಒಳ್ಳೆಯ ಪುಸ್ತಕಗಳ ಸಂಗ್ರಹವೇ ಒಂದು ವಿಶ್ವವಿದ್ಯಾನಿಲಯ. – ಕಾರ್ಲೈಲ್
ಸಂಗ್ರಹ : ನಾರಾಯಣ ರೈ ಕುಕ್ಕುವಳ್ಳಿ



ಜೇನುತುಪ್ಪ ತಂದು ಸುಟ್ಟ ಜಾಗಕ್ಕೆಲ್ಲ ಅದನ್ನು ಲೇಪಿಸತೊಡಗಿದಳು. ಇನಿತೂ ನೋವನ್ನು ಹೊಂದದ ಭೋಜಯ್ಯ, ರುದ್ರಯ್ಯನ ಕತೆಯನ್ನು ಹೇಳತೊಡಗಿದರು. ಅದು ರುದ್ರ, ರುದ್ರಪ್ಪನಾದ ಕತೆಯೂ ಹೌದು.

* * * * *

ಸಹಸ್ರ ಶೀರ್ಷಾಃ ಪುರುಷ.

'ಸಹಸ್ರ ಶೀರ್ಸಾ ಪುರುಷಃ ಸಹಸ್ರ ಸೀರ್ಸಾ ಪುರುಷ. ಸಹಸ್ರ ಶೀರ್ಸಾ ಪುರುಷಃ' ಶಂಕರಯ್ಯ ಹೇಳಿದುದನ್ನು ಮೂರು ಬಾರಿ ಹೇಳಿ ಬಾಯಿಪಾಠ ಮಾಡುತ್ತಿತ್ತು ಇನ್ನೂ ಸ್ವರದಲ್ಲಿ ಒಡಕು ಮೂಡಿರದ ಎಳೆಯ ಜೀವವೊಂದು. ಆ ಹುಡುಗನ ಮೀಸೆಯಿನ್ನೂ ಕಪ್ಪಾಗಿರಲಿಲ್ಲ. ನಡವಳಿಕೆಯಲ್ಲಿ ತುಂಟತನ, ಕಣ್ಣುಗಳಲ್ಲಿ ಕುತೂಹಲ ಕಾಣುತ್ತಿತ್ತು.

"ಶೀರ್ಸಾ ಅಲ್ಲ ಭೋಜ, ಶೀರ್ಷಾ. ಹಾಗೆಂದರೆ ತಲೆ ಎಂದು ಅರ್ಥ. ಹೇಳೀಗ ಶೀರ್ಷಾ'' ಗದ್ದೆ ಅಂಚಿನಲ್ಲಿ ನಿಧಾನವಾಗಿ ಹೆಜ್ಜೆ ಹಾಕುತ್ತ ಶಂಕರಯ್ಯ ಮಗನನ್ನು ತಿದ್ದಿದರು. ಅವರ ಬಲಗೈಯಲ್ಲಿ ನೀರು ತುಂಬಿದ ಚೆಂಬೊಂದು ಜೋಲಾಡುತ್ತಿತ್ತು. ಭುಜದಿಂದ ಮೇಲೆತ್ತಿ ಹಿಡಿದ ಎಡಗೈಯಲ್ಲಿರುವ ತಾಮ್ರದ ಹರಿವಾಣದಲ್ಲಿ ಊದುಬತ್ತಿಯ ಪೊಟ್ಟಣವೊಂದು, ಒಂದೆರಡು ಕರ್ಪೂರದ ತುಂಡುಗಳು, ಎಣ್ಣೆ ತುಂಬಿದ ಸಣ್ಣದೊಂದು ಮಿಳ್ಳೆ. ಹೂಗಳು ಮಹಾಲಿಂಗೇಶ್ವರ ಗುಡಿಯ ಪ್ರಾಂಗಣದಲ್ಲೇ ಬಿಡುತ್ತವೆ.

"ಶೀರ್ಷಾ'' ಭೋಜ ವಾಲದಂತೆ ತನ್ನ ದೇಹವನ್ನು ನಿಯಂತ್ರಿಸುತ್ತ ಹತ್ತು ಬಾರಿ ಹೇಳಿದ. ಅವನು ಹಣೆಗೆ ಡಾಳಾಗಿ ಬಳಿದುಕೊಂಡ ವಿಭೂತಿ ಮೈಲು ದೂರ ಕಾಣಿಸುವಂತಿತ್ತು.

"ಸಹಸ್ರಾಕ್ಷಃ ಸಹಪ್ರಸಾದ್ ಅಂದರೆ ಸಾವಿರ ಕಣ್ಣು, ಸಾವಿರ ಪಾದಗಳು'' ಎಂದು ಶಂಕರಯ್ಯ ಸಂಸ್ಕೃತ ಶ್ಲೋಕ, ಮಂತ್ರಗಳ ಪ್ರತಿಯೊಂದು ಪದದ ಅರ್ಥವನ್ನೂ ಮಗನಿಗೆ ತಿಳಿಯುವಂತೆ ವಿವರಿಸುತ್ತಿದ್ದರು. ಮಗನಿಗೆ ಎಂಟಕ್ಕೇ ಉಪನಯನ ಮಾಡಿ, ತಲೆಬೋಳಿಸಿ ಶಿಖೆಜುಟ್ಟು ಉಳಿಸಿದ್ದರು. ಅದಾಗಲೇ ಭೋಜ, ರುದ್ರ, ಚಮೆ, ಪವಮಾನಗಳನ್ನು ಬಾಯಿಪಾಠ ಮಾಡಿಕೊಂಡಿದ್ದ. ಶೂದ್ರರು ಬಂದು ಕೇಳಿಕೊಂಡಾಗ ಕಚ್ಚೆ ಒದ್ದೆ ಮಾಡಿಕೊಂಡು

ಅಶ್ವತ್ಥ, ನಾಗ ಮುಂತಾದ ದೇವರುಗಳಿಗೆ ನೈವೇದ್ಯ, ಶಾಂತಿ ಮಾಡಿ [illegible] ದಕ್ಷಿಣೆಯಾಗಿ ಗಳಿಸುವ ಶಕ್ತಿ ಗಳಿಸಿದ್ದ. 'ಅವನ ಮುಖ ಕಾಣಿಯೆ, ಬಿರಾಂಬ್ರ ಮಾಣಿ ಅಂದ್ರೆ ಹಾಂಗಿರ್ಕ್' ಎಂದು ಊರಮಂದಿ ಪ್ರಶಂಸಿಸುವಷ್ಟು ಕಳೆಯಿತ್ತು ಅವನ ಮುಖದಲ್ಲಿ.

ಬೆಳಿಗ್ಗೆ ಕೋಳಿ ಕೂಗುವ ಮೊದಲೇ ಏಳಿಸಿ ಚಾಪೆಯ ಮೇಲೇ ಕುಳ್ಳಿರಿಸಿ, ಹೊದಿಕೆ ವಸ್ತ್ರವನ್ನು ದೇಹಕ್ಕೆ ಸುತ್ತಿ 'ಯಸ್ಯ ಜ್ಞಾನ ದಯಾಸಿಂಧೋ' ಎಂದು ಅಮರಕೋಶವನ್ನು ಬಾಯಿಪಾಠ ಮಾಡಿಸುತ್ತಿದ್ದ ತನ್ನ ತಂದೆಯ ಮೇಲಿನ ಭೋಜಯ್ಯನ ಕೋಪ ಊರವರ ಈ ಪ್ರಶಂಸೆಯಿಂದ ಮಾಯವಾಗುತ್ತಿತ್ತು.

"ಯೇತಾದಾನಸ್ಯ ಮಹಿಮಾ ಅಥೋ ಜಾಯಾಂಕ್ಷ ಪೂರುಷಃ'' ಶಂಕರಯ್ಯ ಹೇಳಿಕೊಡುವುದನ್ನು ನಿಲ್ಲಿಸಿದರು. ಹಿಂದಿನಿಂದ ಅವರನ್ನು ಅನುಸರಿಸುವ ಸ್ವರ ಬಂದಿಲ್ಲ, ಅವರು ತಿರುಗಿ ನೋಡಿದರು. ಭೋಜ ಅವರಿಂದ ಹತ್ತುಮಾರು ದೂರವಾಗಿಯೇ ಉಳಿದು ಆಗ ಬೆಳೆದಿರುವ ಗದ್ದೆಯನ್ನೇ ಎಪೆಯಿಕ್ಕದೆ ದಿಟ್ಟಿಸಿ ನೋಡುತ್ತಿದ್ದ. ಶಂಕರಯ್ಯ ಅಲ್ಲಿಂದಲೇ ಕೂಗಿದರು "ಯಂತ ಮಾಡ್ತಿಯಾ ಅಲ್ಲಿ?''

"ಅಪ್ಪಯ್ಯಾ ಹಾವು!'' ಭೋಜನದು ಕುತೂಹಲದ ದನಿ.

"ಹಾವೆಂತ ಕಾಂಬುದು, ಬಾ ಬೇಗ.'' ಹಾವುಗಳ ಬಗ್ಗೆ ಅತಿಯಾದ ಆಸಕ್ತಿ ಇರುವುದಿಲ್ಲ ಅಲ್ಲಿ. ದಿನಂಪ್ರತಿ ನೂರಾರು ರೀತಿಯ ನೂರಾರು ಹಾವುಗಳ ದರ್ಶನವಾಗುತ್ತದೆ ಅವರಿಗೆ. ಹುಲಿ, ಚಿರತೆ, ಆನೆ, ಕಡಗಳೊಂದಿಗೆ ಹಾವೂ ಕೂಡ ಮನುಷ್ಯನ ಸಹಜೀವಿಗಳು.

"ಒಂದ್ ಹಾವು ಅಲ್ಲ ಅಪ್ಪಯ್ಯ ಎರಡು. ಒಂದರ ಮ್ಯಾಲೆ ಮತ್ತೊಂದು ಮಲ್ಕಂಡಿತ್ತು.'' ಅದರಲ್ಲೇನೋ ವಿಶೇಷವೆಂಬಂತೆ ಹೇಳಿದ ಭೋಜ. ಸರ್ಪ ಕೂಟ ವೀಕ್ಷಿಸಲಾರದ್ದು, ಅನಿಷ್ಟ ಎಂಬುದು ಆ ಊರಿನವರ ನಂಬಿಕೆ. ಹಾಗಾದರೆ ಏನೋ ಕೇಡು ಸಂಭವಿಸುತ್ತದೆ ಎಂದಿತು ಅವರ ಮನಸ್ಸು "ಅದು ಕಾಣಬಾರದ್ದು. ಬೇಗ ಬಾ'' ಅಲ್ಲಿಂದಲೇ ಗದರಿದರು ಶಂಕರಯ್ಯ. ಭೋಜ ಒಂದೇ ಓಟಕ್ಕೆ ತಂದೆಯ ಬಳಿ ಬಂದ. "ಅಪ್ಪಯ್ಯ ಹೈಸಾರ ಹಾವು ಒಂದರ ಮೇಲೊಂದು ಮಲಕ್ಕಂಡಿತ್ತು. ಎಂತಕೆ ಅಪ್ಪಯ್ಯಾ?''

ಮಗನ ಕುತೂಹಲದ ಪ್ರಶ್ನೆಗೆ ಏನು ಉತ್ತರಿಸಬೇಕೆಂದು ಅವರಿಗೆ ಹೊಳೆಯಲಿಲ್ಲ. ಇದು ಕುತೂಹಲ ಹುಟ್ಟುವ ವಯಸ್ಸು. ಮುಂದಿನ ಧನುರ್ಮಾಸಕ್ಕೆ ಅವನಿಗೆ ಹದಿನಾರು ತುಂಬುತ್ತದೆ. ದೇಹದಲ್ಲಿ ಕಾಮನೆಗಳು ಚಿಗುರುವ ವಯಸ್ಸು.


"ಅದೆಲ್ಲ ಕೇಳುಕಾಗ, ಸುಮ್ನೆ ಬಾ'' ಎಂದವರೇ ಮತ್ತೆ ಸೂತ್ರವನ್ನು ಹೇಳಿಕೊಡತೊಡಗಿದರು. ಬಾಯಲ್ಲಿ ತಂದೆ ಹೇಳಿಕೊಟ್ಟದ್ದನ್ನು ಹೇಳುತ್ತಲೇ ಇದ್ದರೂ ಆ ಹಾವುಗಳ ಗಾತ್ರ, ಅದರ ಮೈಬಣ್ಣ ಭೋಜನನ್ನು ಕಾಡಿಸದೇ ಇರಲಿಲ್ಲ. ಅಷ್ಟರಲ್ಲಿ ಅವರಿಬ್ಬರೂ ದೇವಾಲಯದ ಪ್ರಾಂಗಣ ತಲುಪಿದ್ದರು.

ಅಲ್ಲಿ ಹುಲುಸಾಗಿ ಬೆಳೆದಿದ್ದ ದಾಸವಾಳ, ಕರವೀರ, ಸೂರಲಿ ಹೂವುಗಳನ್ನು ಕುಯಿದು ತರುವುದು, ಅದನ್ನು ಮಹಾಲಿಂಗೇಶ್ವರ ಮೂರ್ತಿಗೆ ಏರಿಸಿ ಶೃಂಗರಿಸುವುದು, ಪೂಜೆಗೆ ಗಂಧ ತೇಯ್ದು ಕೊಡುವುದು, ತಂದೆ ಆರತಿ ಎತ್ತುವಾಗ ಜಾಗಟೆ ಬಾರಿಸುವುದು ಇವೆಲ್ಲ ಭೋಜನ ಕೆಲಸ. ಇದಕ್ಕೆ ಯಾವ ರಜಾಗಳೂ ಇಲ್ಲ. ಇಂದು ಕರವೀರ ಮರ ಹತ್ತಿ ಅದರ ಹಳದಿ

"ಹಗಲು ರಾತ್ರಿಗಳು ಹೇಗುಂಟಾಗುತ್ತದೆ ಹೇಳೋ ಗುಂಡ?"

"ಕೋಳಿ ಕೂಗಿದಾಗ ಹಗಲು, ಬೀದಿ ದೀಪಗಳು ಹತ್ತಿದಾಗ ರಾತ್ರಿಯೂ ಆಗುತ್ತದೆ ಸಾರ್."

— ವೆಂಕಟೇಶ ಮೂರ್ತಿ



ಹೂಗಳನ್ನು ಕುಯ್ಯುತ್ತಿರುವಾಗ ತಂದೆ ಕೂಗಿದ್ದು ಕೇಳಿಸಿತು "ಭೋಜ ಬಾ ಇಲ್ಲಿ."

ಕರವೀರ ಮರದ ಕಡ್ಡಿಕಡ್ಡಿಯಂತಹ ಎಲೆಗಳ ಗುಂಪಿನ ನಡುವೆ ಕಣ್ಣು ತೂರಿಸಿ, ಶಂಕರಯ್ಯನ ಕುರುಚಲು ಬಿಳಿಗಡ್ಡಗಳ ಮೇಲೆ ದೃಷ್ಟಿ ನೆಟ್ಟು ಭೋಜ ಉತ್ತರಿಸಿದ "ಬಂದೆ."

ಒಂದೇ ಬಾರಿಗೆ ಮರದಿಂದ ಕೆಳಗೆ ಜಿಗಿದ. ಕಾಲುಜಾರಿ ಅಂಡು ನೆಲಕ್ಕೂರಿ ಉಟ್ಟ ಪಾಣಿ ಪಂಚೆ ಕೆಸರಾಯಿತು. ಅದನ್ನು ನಿರ್ಲಕ್ಷಿಸಿ, ತನ್ನ ಕಡ್ಡಿ ಕಾಲುಗಳನ್ನು ಸೊಟ್ಟಸೊಟ್ಟವಾಗಿ ಹಾಕುತ್ತ ದೇವಾಲಯದ ಹೊರ ಜಗಲಿಯ ಹತ್ತಿರ ಬಂದ.

ಅಲ್ಲೊಬ್ಬ ಬಾಲಕ ನುಣ್ಣನೆಯ ಕಲ್ಲಿನ ಮೇಲೆ ಮಲಗಿದ್ದ. ಸೊಂಟಕ್ಕೆ ಕೆಂಪು ಬಣ್ಣದ ತುಂಡೊಂದು ಸುತ್ತಿತ್ತು. ಬಲಿಷ್ಠವಾದ ದೇಹದ ಅವನು ದೀರ್ಘ ಉಸಿರು ಬಿಡುವಾಗ ಅವನ ಎದೆ ಒಮ್ಮೆ ತಿದಿಯಂತೆ ಊದಿ ಇನ್ನೊಮ್ಮೆ ಸಣ್ಣದಾಗುತ್ತಿತ್ತು. ಮೂರು ನಾಲ್ಕು ದಿನದಿಂದ ಆತ ಉಂಡಂತಿರಲಿಲ್ಲ. ಕಣ್ಣುಗಳು ಒಳಸೇರಿದ್ದವು. ಮೈಮೇಲೆ ಜನಿವಾರವಿರಲಿಲ್ಲ. ಅಂದಮೇಲೆ 'ಆತ ಬ್ರಾಹ್ಮಣನಿರಲಿಕ್ಕಿಲ್ಲ' ಭೋಜ ತೀರ್ಮಾನಿಸಿದ. ಅವನ ಪಕ್ಕದಲ್ಲೊಂದು ಬಟ್ಟೆಯ ಗಂಟಿತ್ತು.

"ಒಂದಿಷ್ಟು ವಿಭೂತಿ ತಗೊಂಡ್ಬಾ ಓಡು." ತಂದೆ ಮಗನಿಗೆ ಆಜ್ಞಾಪಿಸಿದರು. ಇವನು ಯಾರು, ಯಾಕೆ ಇಲ್ಲಿಗೆ ಬಂದ, ಯಾಕೆ ಹೀಗೆ ಮಲಗಿದ್ದಾನೆ ಅನಾಥನಂತೆ ಎಂಬೆಲ್ಲ ಉತ್ತರವಿಲ್ಲದ ಪ್ರಶ್ನೆಗಳನ್ನು ತಲೆಯಲ್ಲಿ ತುಂಬಿಕೊಂಡೇ ಗರ್ಭಗುಡಿಯ ಸಮೀಪ ಬಂದು ತಾಮ್ರದ ಚೊಂಬಿನಲ್ಲಿ ತುಂಬಿಟ್ಟದ್ದ ವಿಭೂತಿಯನ್ನು ಹಿಡಿಯಷ್ಟು ತೆಗೆದುಕೊಂಡ ಭೋಜ. ಪ್ರಾಂಗಣದ ಕಲ್ಲುಗಳು ನಿರಂತರ ಮಳೆಯಿಂದಾಗಿ ಪಾಚಿಗಟ್ಟಿದ್ದವು. ಸ್ವಲ್ಪ ಎಚ್ಚರ ತಪ್ಪಿದರೂ ಕಾಲು ಜಾರಿ ಬೀಳುವುದು ನಿಶ್ಚಿತ. ಹಾಗಾಗಿ ಎಚ್ಚರದಿಂದಲೇ ಹೆಜ್ಜೆ ಹಾಕುತ್ತ ತಂದೆಯನ್ನು ಸಮೀಪಿಸಿದ.

ಪೂಜೆಗೆ ಬೇಕಾದ ಪರಿಕರಗಳನ್ನು ಗೋಡೆಯ ಪಕ್ಕ ಇರಿಸಿದ್ದ ಶಂಕರಯ್ಯ ಹೆಗಲ ಮೇಲಿದ್ದ ಟವೆಲನ್ನು ಜಗುಲಿಯ ಮೇಲೆ ಹಾಸಿ ಅದರ ಮೇಲೆ ಆ ವ್ಯಕ್ತಿಯ ಕೈಕಾಲು ಪಾದಗಳಿಗೆ ಹಾಕಿ ಚೆನ್ನಾಗಿ ತಿಕ್ಕಿದರು. ಹಸ್ತಗಳನ್ನು ಪರಸ್ಪರ ತಿಕ್ಕಿಕೊಂಡು ಶಾಖ ಹುಟ್ಟಿಸಿ, ಅವನ ಎದೆ ಬೆನ್ನುಗಳ ಮೇಲಿಟ್ಟು ಅದನ್ನು ಬೆಚ್ಚಗೆ ಮಾಡಿದರು. ಆಕಾಶದಲ್ಲಿ ಮೋಡ ಮುಸುಕಿಯೇ ಇತ್ತು. ಆಗಷ್ಟೇ ಅರಳಿದ ಹೂಗಳ ಸುಗಂಧಭರಿತ ಗಾಳಿ ನಿಧಾನವಾಗಿ ಬೀಸುತ್ತಿತ್ತು.

"ಅಪ್ಪಯ್ಯ ಅವನನ್ನು ಮುಟ್ಟುದಾ? ಯಾವ ಜಾತಿಯೋ ಏನೋ." ಭೋಜ ಅಸಮಾಧಾನದಿಂದ ಅಂದ. ಬೆನ್ನು ತುರಿಸಿದ್ದರಿಂದ ಆ ಜಾಗವನ್ನು ಜನಿವಾರದಿಂದ ಕೆರೆದುಕೊಂಡ.

"ಜಾತಿ ನಾವು ನಾವೇ ಮಾಡಿಕೊಂಡ ರಾಡಿಯದು. ಹುಟ್ಟಿನಿಂದ ಜಾತಿಯಲ್ಲ ಪ್ರವೃತ್ತಿಯಿಂದ ಅದರ ನಿಷ್ಕರ್ಶೆಯಾಗುತ್ತದೆ. ಮನುಷ್ಯನೂ ಒಂದು ಪ್ರಾಣಿ. ಹೀಗೆ ಸರ್ವತ್ರವೂ ದೈವಸೃಷ್ಟಿ ಸರ್ವತ್ವಂ ದೈವ ಭೂತೇಶು ಯಕಶ್ಚಿತ ಸಪಂಡಿತಃ ಎಂದು ಹೇಳಿದ್ದಾರೆ. ಅಂದಮೇಲೆ..." ಅವರು ಮಾತು ಮುಗಿಸುವ ಮುನ್ನವೇ ಭೋಜ ಕೇಳಿದ "ಪೂಜೆಗೆ ಮೈಲಿಗೆ ಆತಿಲ್ಯಾ ಅಪ್ಪಯ್ಯ?"

"ಜನಸೇವೆಯೇ ಜನಾರ್ದನ ಸೇವೆ ಎಂದಿದ್ದಾರೆ ಹಿರಿಯರು. ವ್ಯಕ್ತಿಯೊಬ್ಬನ ಪ್ರಾಣ ರಕ್ಷಣೆಗಿಂತ ಮಿಗಿಲಾದ ದೈವಪೂಜೆಯಿದೆಯೇ? ಈಗೊಂದು ಕೆಲಸ ಮಾಡು ನೀನು. ದೇವರ ಮೈತೊಳೆದು ಅಭಿಷೇಕ ಮಾಡಿ, ನೈವೇದ್ಯ ಆರತಿ ಮುಗಿಸಿ ಮನೆಗೆ ಬಾ. ನಾನು ಇವನನ್ನು ಮನೆಗೆ ಕರ್ಕೊಂಡು ಹೋಗ್ತೇನೆ" ಎಂದವರೇ ಶಂಕರಯ್ಯ ಅವನನ್ನು ಭುಜದ ಮೇಲೆ ಹೊತ್ತುಕೊಂಡು ಮನೆಯೆಡೆಗೆ ಹೊರಟರು. ಅವನು ಕ್ಷೀಣವಾಗಿ ನರಳುತ್ತಿರುವುದು ಅವರಿಗೆ ಕೇಳಿಸುತ್ತಿತ್ತು. ಕೂಲಿಯಾಳುಗಳಿಂದ ಗದ್ದೆಯ ಕೆಲಸ ಮಾಡಿಸುತ್ತಿದ್ದ ದೇವಯ್ಯ ಹೆಗ್ಗಡೆಯವರಿಗೆ ಶಂಕರಯ್ಯ ಯಾರನ್ನೋ ಹೊತ್ತುಕೊಂಡು ಹೋಗುತ್ತಿರುವ ದೃಶ್ಯ ಅಸ್ಪಷ್ಟವಾಗಿ ಕಾಣಿಸಿ ಕುತೂಹಲವುಂಟಾಯಿತು. "ಓಯ್ ಶಂಕರಯ್ಯ" ಎಂದು ಅವರು ಕೂಗಿದ್ದು ಶಂಕರಯ್ಯನ ಕಿವಿಗೆ ಬೀಳಲಿಲ್ಲ. ಇದರಿಂದ ಇನ್ನಷ್ಟು ಕುತೂಹಲಿಗಳಾದ ಅವರು ಶಂಕರಯ್ಯನ ಮನೆಯತ್ತ ಹೊರಟರು. ದೇವಸ್ಥಾನದಿಂದ ಶಂಕರಯ್ಯನ ಮನೆಗೆ ಹದಿನೈದು ನಿಮಿಷಗಳ ದಾರಿ.

ಸಂಕ ದಾಟಿ, ತೊಡಮೆಯ ಗಳ ಸರಿಸಿ ಮನೆಯ ಅಂಗಳಕ್ಕೆ ಅವರು ಕಾಲಿಡುವಾಗ ಸುಸ್ತಾಗಿ ಏದುಸಿರು ಬಿಡುತ್ತಿದ್ದರು. ಈ ಹುಡುಗ ತುಂಬ ಭಾರವಾಗಿದ್ದಾನೆ. ಚೆನ್ನಾಗಿ ತಿಂದುಂಡ ವಂಶದವನಿರಬೇಕು ಎಂದುಕೊಂಡರು. ಮನೆಯ ಜಗಲಿಯ ಮೇಲೆ ... ಕಂಬಕ್ಕಾನಿಸಿ ಕುಳ್ಳಿರಿಸಿ "ಮೂಕಾ ಲೇ ಮೂಕಾ" ಎಂದು ಕೂಗಿದರು.

ಮೂಕಾ ಎಂದರೆ ಅವರ ಪತ್ನಿ ಮೂಕಾಂಬಿಕಾ ಎಂಬುದು ಅವರ ಸಂಪೂರ್ಣ ನಾಮಧೇಯ.

ಹೊರಬಂದ ಮೂಕಳಿಗೆ ಹೇಳಿದಳು ಶಂಕರಯ್ಯ "ಎರಡು ಲೋಟ ಶುಂಠಿ ಕಷಾಯ ಮಾಡು." ದೂರದಲ್ಲೆಲ್ಲೋ ಹುಲಿಯ ಗರ್ಜನೆ ಕೇಳಿಸಿತು.

ಸೂರ್ಯ ಕೂಡ ಇಣುಕಲು ಹೆದರುವ ಮಲೆಯ ತಪ್ಪಲಿನಲ್ಲಿ ಕಾಲಿಡಲು ಕೂಡ ಜನರು ಹೆದರುತ್ತಿದ್ದ ಕಾಲವೊಂದಿತ್ತು. ದಟ್ಟವಾದ ಅರಣ್ಯದಲ್ಲಿ ಅಸಂಖ್ಯಾತ ಹಿಂಸ್ರ ಪಶುಗಳು, ನಿರಂತರವಾಗಿ ಕಾಡುವ ಮಲೇರಿಯಾ, ವಿಷಮಶೀತ ಜ್ವರಗಳು, ಇವೆಲ್ಲದರ ಅರಿವಿದ್ದೂ ಕೆಲಸಾಹಸಿಗಳು ದುರ್ಗಮವಾದ ಅರಣ್ಯವನ್ನು ಪ್ರವೇಶಿಸಿ, ಸಪಾಟಾಗಿರುವ ಸ್ಥಳ ಅರಸಿ, ಅಲ್ಲೊಂದು ಮನೆ ಕಟ್ಟಿಕೊಂಡು, ಕೆಲವು ಭೂಮಿಯನ್ನು ಬೇಸಾಯದ ಹೊಲವನ್ನಾಗಿ ಪರಿವರ್ತಿಸಿಕೊಂಡು ಜೀವನ ಸಾಗಿಸತೊಡಗಿದ್ದರು. ಅಲ್ಲಿ ಅವರು ಬೆಳೆದದ್ದೇ ಬೆಳೆ, ನಡೆದುದೇ ಹಾದಿ, ಮಾಡಿದ್ದೇ ಕಾನೂನು. ಯಾವ ಸರ್ಕಾರದ ಅಂಕೆಗಳೂ ಅವರಿಗೆ ಅನ್ವಯವಾಗುತ್ತಿರಲಿಲ್ಲ.

'ರಾಗಸಂಗಮ'

ಲಾಟರಿ ಡ್ರಾ - ೧೪೨ರ ವಿಜೇತರು



ಟಿ. ರವೀಂದ್ರ ಪ್ರಭು
ಮಾಸ್ತಿಕಟ್ಟೆ
ಶಿವಮೊಗ್ಗ ಜಿಲ್ಲೆ.

ಇದೆಲ್ಲ ಭಾರತಕ್ಕೆ ಸ್ವಾತಂತ್ರ್ಯ ಬರುವ ಹಲವಾರು ದಶಕಗಳ ಹಿಂದೆಯೇ ನಡೆದುಹೋದ ವಿಷಯ.

ಅಂತಹ ಅನೇಕ ಊರುಗಳಲ್ಲಿ ಗಬ್ಬೂರೂ ಒಂದು.

ಭೋಜಯ್ಯನ ತಾತನೋ, ಮುತ್ತಾತನೋ ಗಬ್ಬೂರನ್ನು ಪ್ರವೇಶಿಸಿದ್ದರು. ಜೊತೆಗೆ ಕೆಲ ಕೆಲಸದಾಳನ್ನೂ ಕರೆತಂದಿದ್ದರು. ಗಬ್ಬೂರಿನಲ್ಲಿ ಅವರದೇ ಒಂದು ಪ್ರತ್ಯೇಕ ರಾಜ್ಯ, ಬೇರೆಯೇ ಸಾಮ್ರಾಜ್ಯ. ತಮ್ಮ ಇಷ್ಟಾನಿಷ್ಟಗಳನ್ನು ಪೂರೈಸಲು ತಮ್ಮ ದುಷ್ಕೃತ್ಯಗಳನ್ನು ನಿಯಂತ್ರಿಸಲು ಮಹಾಲಿಂಗೇಶ್ವರನನ್ನು ಅಲ್ಲಿ ಪ್ರತಿಷ್ಠಾಪಿಸಿದರು, ಸಂತೃಪ್ತ ಜೀವನವನ್ನು ನಡೆಸಲು ಪ್ರಾರಂಭಿಸಿದರು.

ಮೋಸ, ವಂಚನೆ, ದಗಾಗಳು ಅಲ್ಲಿಗೆ ಪ್ರವೇಶಿಸಲಿಲ್ಲ. ನಾಗರಿಕ ಜೀವನದ ಕರಿನೆರಳು ಅಲ್ಲಿಗೆ ಕಾಲಿಕ್ಕಲಿಲ್ಲ. ತಮಗೆ ಬೇಕಾದುದನ್ನೆಲ್ಲ ತಾವೇ ಉತ್ಪಾದಿಸಿದುದರಿಂದ ಹೊರಜಗತ್ತಿನ ಸಂಪರ್ಕದ ಅವಶ್ಯಕತೆಯೇ ಅವರಿಗಾಗಲಿಲ್ಲ.

"ಯಾರು ಇವ?'' ದೇವಯ್ಯ ಹೆಗ್ಗಡೆ ಪ್ರಶ್ನಿಸಿದರು. ಅವನ ಉಬ್ಬಿದ ಸ್ನಾಯುಗಳು, ಬಲಿಷ್ಠ ತೊಡೆ, ಉಸಿರಾಡುವಾಗ ತಿದಿಯಂತೆ ಏರಿಳಿಯುವ ಎದೆಯ ಮೇಲೆ ಕುತೂಹಲದಿಂದ ಕಣ್ಣಾಡಿಸಿದರು ಅವರು. ಉಟ್ಟ ಪಂಚೆಯನ್ನು ಮೇಲೆತ್ತಿ ಕಟ್ಟಿಕೊಂಡು, ಎಳೆಯ ಸೂರ್ಯಕಿರಣಗಳು ರೋಮ ತುಂಬಿದ ತೊಡೆಯ ಮೇಲೆ ಆಡುತ್ತಿದ್ದ ಚೆಲ್ಲಾಟವನ್ನು ಸುಖಿಸುತ್ತ ಎರಡೂ ಕೈಗಳನ್ನು ಬೆನ್ನ ಹಿಂದೆ ಗಂಟು ಹಾಕಿಕೊಂಡು ಅಸಮಾಧಾನದ ನುಡಿ ನುಡಿದರು "ಯಾವುದೋ ಜಾತಿ?''

ಶಂಕರಯ್ಯ ಉತ್ತರಿಸದೇ ಮೂಕ ತಂದುಕೊಟ್ಟ ಕಷಾಯವನ್ನು ಆ ವ್ಯಕ್ತಿಗೆ ನಿಧಾನವಾಗಿ ಕುಡಿಸುತ್ತ ಅಂದರು "ದೇವಯ್ಯ, ಗಂಗೋದಕ?''

"ಬ್ಯಾಡ ಈಗಷ್ಟೇ ಕುಡ್ಕಂಡ್ ಬಂದವ. ನಟ್ಟಿ ಮಾಡಿಸಿದ್ದೆ. ನಿಮ್ಮನ್ ಕಂಡ್ ಓಡಿ ಬಂದೆ.'' ದೇವಯ್ಯ ಉತ್ತರಿಸಿದರು.

"ಕೂತ್ಕೊಳ್ಳಿ" ಶಂಕರಯ್ಯ ಹೇಳುತ್ತಿರುವಾಗ ಆ ಹುಡುಗ ಪಿಳಿಪಿಳಿ ಕಣ್ಣುಬಿಟ್ಟ
ದಂಪತಿಗಳಿಗೆ ಆನಂದವಾಯಿತು. ಈತನ ಹಿಂದೆ ಏನೇನು ಕತೆಗಳಿವೆಯೋ ಎಂದು ಯೋಚಿಸತೊಡಗಿದರು.

ಅದು ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ಪರಾಕಷ್ಠೆಯಲ್ಲಿದ್ದ ಕಾಲ. ಗಬ್ಬೂರಿಗೆ ಪತ್ರಿಕೆಗಳು ಬಾರದಿದ್ದರೂ ಊರಲ್ಲಿ ಒಂದೇ ಒಂದು ರೇಡಿಯೋವೂ ಇರದಿದ್ದರೂ ಹಾಗಾಯ್ತಂತೆ, ಹೀಗಾಯ್ತಂತೆ ಎಂಬ ಸುದ್ದಿಗಳು ಬಂದು ಹೋಗುವವರಿಂದ ಅಲ್ಲಿನವರನ್ನು ತಲುಪುತ್ತಿದ್ದವು. ಜೊತೆಗೆ ಎರಡನೆಯ ಮಹಾಯುದ್ಧ ಪ್ರಾರಂಭವಾಗಿ ಆಕಾಶದಲ್ಲಿ ಝುಯ್ಯೆಂದು ಸದ್ದು ಮಾಡುತ್ತ ಸಾಗುವ ವಿಮಾನಗಳು, ಪೇಟೆಯಲ್ಲಿ ಸಾಮಗ್ರಿಗಳು ಕಣ್ಮರೆಯಾಗುತ್ತಿರುವುದು ಇವೂ ಕೂಡ ಚರ್ಚೆಯ ವಿಷಯವಾಗುತ್ತಿದ್ದವು. ಯುದ್ಧದ ಬಿಸಿ ಗಬ್ಬೂರನ್ನು ಅಷ್ಟೇನೂ ಬಾಧಿಸದಿದ್ದರೂ ಅದರ ದುಷ್ಪರಿಣಾಮಗಳ ಬಗ್ಗೆ ಗೊತ್ತಿಲ್ಲದಿದ್ದರೂ ಅನುಭವಿಸದಿದ್ದರೂ ಎಲ್ಲ ತಿಳಿದವರಂತೆ ಜನ ಆಡುವುದು ಮಾತ್ರ ಕಡಿಮೆ ಮಾಡಲಿಲ್ಲ.

ಬ್ರಿಟಿಷರ ಪರವಾಗಿ ಯುದ್ಧ ಮಾಡಲು ಸೈನಿಕರ ಅವಶ್ಯಕತೆಯಿತ್ತು. ಸರಕಾರಿ ಅಧಿಕಾರಿಗಳು ಹಳ್ಳಿ ಹಳ್ಳಿ ಸುತ್ತಿ ಯುವಕರನ್ನು ಬಲವಂತವಾಗಿ ಕರೆದೊಯ್ಯುತ್ತಿದ್ದರು. ಅದಕ್ಕೆ ಹೆದರಿದವರು ಊರಿಗೆ ಯಾವ ಅಪರಿಚಿತರು ಬಂದರೂ ಅವರನ್ನು ಸಂಶಯದ ದೃಷ್ಟಿಯಿಂದಲೇ ನೋಡುತ್ತಿದ್ದರು. ವಯೋವೃದ್ಧರನ್ನು ಬಿಟ್ಟು ಉಳಿದವರೆಲ್ಲ ಕಾಡಿನೊಳಗೋ ಕಬ್ಬಿನ ತೋಟದೊಳಗೋ ಸೇರಿಕೊಂಡು ಬಂದವರು ನಿರಾಶರಾಗಿ ಹಿಂದಿರುಗಬೇಕಾಗುತ್ತಿತ್ತು.

ಸೈನ್ಯ ಸೇರಿದ ಮೇಲೆ ಶ್ರಮ ಪಡಲಾರದೆ ತಪ್ಪಿಸಿಕೊಂಡು ಬರುವುದು ಸುಲಭದ ಮಾತಾಗಿರಲಿಲ್ಲ. ಸೈನ್ಯವೊಂದು ನರಕ, ಅಲ್ಲಿಂದ ಪಾರಾಗುವುದು ಅಸಾಧ್ಯ ಎಂಬುದೇ ಎಲ್ಲೆಡೆ ಹರಡಿದ್ದ ನಂಬಿಕೆ.

ಅಂತಹ ಯಾವುದೋ ವಿಪತ್ತಿನಿಂದ ಪಾರಾಗಿ ಬಂದ ವ್ಯಕ್ತಿ ಇವನಿರಬಹುದು ಎಂಬುದು ದೇವಯ್ಯ ಹೆಗ್ಗಡೆಯವರ, ಶಂಕರಯ್ಯನವರ ಊಹೆಯಾಗಿತ್ತು.

"ಏನು ನಿನ್ನ ಹೆಸರು?" ಕಕ್ಕುಲತೆಯಿಂದಲೇ ಕೇಳಿದರು ಶಂಕರಯ್ಯ.

"ರುದ್ರ." ಅವನ ನುಡಿಯಲ್ಲಿ ಸ್ಪಷ್ಟತೆಯಿರಲಿಲ್ಲ.

ಮೂಕಾಂಬಿಕಾ ರುದ್ರನನ್ನು ದಿಟ್ಟಿಸಿ ನೋಡಿದರು. ತಮ್ಮ ಹಿರಿಯ ಮಗ ಬದುಕಿದ್ದರೆ ಹೀಗೇ ಇರುತ್ತಿದ್ದನೋ ಏನೋ. ಏಳೆಂಟು ವರ್ಷಗಳ ಹಿಂದೆ ಅವನಿಗೆ ಜ್ವರ ಬಂದು ಎರಡೇ ದಿನಗಳಲ್ಲಿ ಗತಪ್ರಾಣನಾಗಿದ್ದ ಅವನು. ಆ ನೆನಪಿನಿಂದ ಅವರ ಕಣ್ಣುಗಳಲ್ಲಿ ನೀರೂರಿತು. ಅವರ ಮಾತೃ ಹೃದಯ ಮಗನನ್ನೇ ಕಂಡಂತೆ ಕುಣಿದಾಡಿತು.

"ನಿಂದು ಯಾವೂರು?" ದೇವಯ್ಯನ ಪ್ರಶ್ನೆಗೆ ರುದ್ರ ಉತ್ತರಿಸಲಿಲ್ಲ. ಬಿಟ್ಟ ಕಣ್ಣುಗಳಿಂದ ಅವರತ್ತ ನೋಡಿದ. ಅದರ ಹಿಂದಿನ ಭಾವವೇನಿತ್ತೋ, ಆದರೆ ತನ್ನ ಪ್ರಶ್ನೆಯನ್ನು ಅಸಡ್ಡೆ ಮಾಡುವುದರ ಮೂಲಕ ತನಗೆ ಅಗೌರವ ಸೂಚಿಸುತ್ತಿದ್ದಾನೆಂದು ದೇವಯ್ಯ ಭಾವಿಸಿಕೊಂಡರು.

ಅವರ ಮುಖಭಾವವನ್ನು ಅರ್ಥ ಮಾಡಿಕೊಂಡರು ಶಂಕರಯ್ಯ, "ಹೋಗಲಿ ಬಿಡಿ ಹೆಗ್ಗಡೆಯವರೇ, ಅವನಿಗೆ ಹೇಳಕ್ಕು ಅನ್ನಿಸಿದರೆ ಹೇಳಲಿ, ಇಲ್ದಿದ್ರೆ ನಮ್ಗೆ ನಷ್ಟ ಏನೂ ಆತ್ತಿಲ್ಲ ಅಲ್ದಾ? ಸುಳ್ಳಂಬಳ್ಳ ಹೇಳಬಹುದು, ಅದಕ್ಕಿಂತ ನಿರುತ್ತರವೇ ಹೆಚ್ಚು ಸೂಕ್ತ."



ಹೆಗ್ಗಡೆಯವರು ಸೊಂಟಕ್ಕೆ ಸುತ್ತಿದ್ದ ಮುಂಡನ್ನು ಇನ್ನಷ್ಟು ಬಿಗಿಯಾಗಿ ಕಟ್ಟಿಕೊಂಡರು. ಹಾಗೆ ಬಿಗಿದು ಬಿಗಿದು ಅವರ ಡೊಳ್ಳುಹೊಟ್ಟೆಯ ನಡುವಿನಲ್ಲಿ ಕಣಿವೆಯೊಂದು ಏರ್ಪಟ್ಟು ಹೊಟ್ಟೆ ಎರಡು ಭಾಗವಾಗಿತ್ತು. ಭೋಜಯ್ಯನಿಗೆ ಅದನ್ನು ನೋಡುವುದೆಂದರೆ ಎಲ್ಲಿಲ್ಲದ ಆನಂದ.

ದೇವಯ್ಯ ರೋಮಭರಿತ ಎದೆಯನ್ನೊಮ್ಮೆ ಬಲಗೈಯಿಂದ ಕರಕರ ಕೆರೆದುಕೊಂಡು ಆಕಾಶ ನೋಡಿದರು. ಮತ್ತೆ ಬಾನು ಮೋಡಗಳಿಂದ ಆವೃತವಾಗುತ್ತಿದೆ. ಅವರಿಗೆ ಕೂಡಲೇ ನಟ್ಟಿ ನಡೆಯುತ್ತಿರುವ ಜಾಗದ ನೆನಪಾಯಿತು. "ಬತ್ತೆ'' ಅಂದವರೇ ಅಲ್ಲಿಂದ ಬಿರಬಿರನೆ ಹೊರಟರು. ಅವರು ತೋಡಮ ದಾಟಿ, ಅದರ ಗಳವನ್ನು ಸರಿಸಿ ಸಂಕ ದಾಟುವತನಕ ಶಂಕರಯ್ಯ ಅವರ ವೇಗದ ನಡಿಗೆಯನ್ನು ನೋಡುತ್ತಿದ್ದರು. ಬೆಟ್ಟದ ಕಡೆಯಿಂದ ತಂಪುಗಾಳಿ ಬೀಸಿ ಸಣ್ಣಗೆ ನಡುಗಿದರು. ದೂರದಿಂದ ಮತ್ತೊಮ್ಮೆ ಹುಲಿಯ ಗರ್ಜನೆ.

ಮೂಕಾಂಬಿಕೆ ಗಂಡನಿಗೆಂದಳು. "ಹಟ್ಟಿ ಗೋಡೆ ಕುಸಿದಿದೆ. ತಟ್ಟೀನಾದ್ರೂ ಹಾಕುಕು. ಇಲ್ದಿದ್ರೆ ಹುಲಿಗಿಲಿ ಬಂದು ಗಂಟಿ ತಿಂದ್ರೆ?'' ಶಂಕರಯ್ಯನ ಕೈಲಿ ಈಗೆಲ್ಲ ಕೆಲಸ ಮಾಡುವ ಸಾಮರ್ಥ್ಯವಿಲ್ಲ. ಆದರೆ ಇದು ನಾಟಿಯ ಸಮಯ. ಆಳುಗಳೂ ಸಿಗುವುದಿಲ್ಲ. ಸಿಕ್ಕರೂ ಕೂಲಿ ದುಬಾರಿ. ಆಷಾಢದಲ್ಲಿ ಶುಭಕಾರ್ಯಗಳು ನಡೆಯುವುದಿಲ್ಲವಾದ ಕಾರಣ ದಕ್ಷಿಣೆಯೂ ಇಲ್ಲ. ದೇವಸ್ಥಾನದ ಆರತಿ ತಟ್ಟೆಗೆ ಕಾಸು ಹಾಕುವವರೂ ಇಲ್ಲ. ಹೇಗಾದರೂ ಮಾಡಿ ತಾತ್ಕಾಲಿಕವಾಗಿಯಾದರೂ ಗೋಡೆಗೆ ತೆಂಗಿನ ಗರಿಗಳ ತಟ್ಟಿ ಏರಿಸದಿದ್ದರೆ ರಾತ್ರಿ ಹುಲಿಯೋ ಚಿರತೆಯೋ ಬಂದು ಗಂಟಿ(ಹಸು ಕೋಣಗಳೆಲ್ಲ ಸೇರಿ)ಗಳನ್ನು ಎಳೆದುಕೊಂಡು ಹೋಗುವುದು ನಿಸ್ಸಂಶಯ.

ಮೈಯ ಅರಿವಿಲ್ಲದವನಂತೆ ಅಲ್ಲಿ ಮಲಗಿದ್ದ ರುದ್ರನನ್ನು ನೋಡಿದರು. ತನ್ನ ಹಿರಿಯ ಮಗ ಇದ್ದಿದ್ದರೆ ಅವನೂ ಹೀಗಿರುತ್ತಿದ್ದನೋ ಏನೋ. ಆಗ ಮನೆಕೆಲಸ ಸುಸೂತ್ರವಾಗಿ ಸಾಗುತ್ತಿತ್ತೋ ಏನೋ.

ಮಹಾಲಿಂಗೇಶ್ವರನ ಲೀಲೆ ಹೇಗಿದೆಯೋ ಏನೋ, ಅವನಿಗೇ ಗೊತ್ತು. ಇತ್ತ ಮಹಾಲಿಂಗೇಶ್ವರನ ತಲೆಗೆ ಹೂ ಏರಿಸುವಾಗ ಕೆಂಡಕ್ಕೆ ಗಂಧದ ಪುಡಿ ಉದುರಿಸಿ ದೂಪ ಬೆಳಗುವಾಗ, ಕಾಯಿ ಒಡೆದು ನೈವೇದ್ಯ ಮಾಡುವಾಗ, ಆರತಿ ಎತ್ತುವಾಗ, 'ಯೂನಿಕಾನಿಚ ಪಾಪಾನಿ ಜನ್ಮಾಂತರ ಕೃತಾನಿಚ' ಎನ್ನುತ್ತ ಪ್ರದಕ್ಷಿಣೆ ಹಾಕುವಾಗ ಭೋಜನ ತಲೆಯಲ್ಲೆಲ್ಲ ಆ ಹಾವುಗಳದೇ ಯೋಚನೆ. ಆ ಹಾವುಗಳು ತನ್ನನ್ನು ಅಟ್ಟಿಸಿಕೊಂಡು ಬಂದು ಕಡಿದುಬಿಟ್ಟರೆ ಎಂದೆನ್ನಿಸಿ. ಭಯವಾಗುವುದಕ್ಕೂ, ಸೊಂಟದ ಸುತ್ತ ಸುತ್ತಿದ ಪಾಣಿಪಂಚೆಯ ಮಧ್ಯದಿಂದಲೇ ರಕ್ತದ ಕಲೆ ಕಾಣಿಸಿಕೊಳ್ಳುವುದಕ್ಕೂ ಸರಿ ಹೋಯಿತು. ಸಣ್ಣಗೆ ಕಿರುಚಿ, ಉಟ್ಟ ಮುಂಡನ್ನು ಬಿಚ್ಚಿ ನಗ್ನವಾಗಿಯೇ ಮೂರ್ತಿಯ ಸಮ್ಮುಖದಲ್ಲಿ ನಿಂತು ತೊಡೆಯ ಸಂದಿಯನ್ನು ನೋಡಿಕೊಂಡ. ಇಂಚು ಉದ್ದದ್ದ ಜಿಗಣೆ ಹೊಕ್ಕಳಿನಿಂದ ಸರಿಯಾಗಿ ಮೂರಿಂಚು ಕೆಳಕ್ಕೆ ಕಚ್ಚಿ ಹೊಟ್ಟೆ ತುಂಬ ರಕ್ತ ಹೀರಿ ಊದಿಕೊಂಡು ಇನ್ನೂ ಜೋಲಾಡುತ್ತಿತ್ತು. ಆ ಜಾಗವೆಲ್ಲ ನೆತ್ತರಿನಿಂದ ತುಂಬಿ ಅಸಹ್ಯವಾಗಿತ್ತು. ಅವನಿಗದು ಭಯಂಕರವಾಗಿ ಕಂಡಿತ್ತು. ಒಂದು ಸಲ ತಕಥೈ ಕುಣಿದ. ಜಿಗಣೆ ಬಿಡಲಿಲ್ಲ. ಕೈ ಉಗುರು ಹಾಕಿ ಬಿಡಿಸಲು ಯತ್ನಿಸಿದ. ಅದು ನುಣ್ಣಗೆ ಜಾರಿತು.

ವಿಪರ್ಯಾಸ

ನನ್ನ ಹೃದಯ
ಮೀಂಟುವ ವೈಣಿಕ
ಎಂದರೆ ಆಗಿರುವಿಯಲ್ಲ
ನನ್ನಾಸೆಗಳ ಕೊಲ್ಲುವ ಸೈನಿಕ.

– ಎಚ್. ವಿಶಾಲಾಕ್ಷಿ



ಗಟ್ಟದ ಜನ ನಸ್ಯಪುಡಿಯನ್ನೋ ತಂಬಾಕು ಸುಣ್ಣಗಳನ್ನೋ ಸದಾ ಜೊತೆಯಲ್ಲಿಟ್ಟುಕೊಂಡಿರುತ್ತಾರೆ. ಜಿಗಣೆಯ ಹಿಡಿತದಿಂದ ತಪ್ಪಿಸಿಕೊಳ್ಳಲು ಅದು ಸಹಾಯಕಾರಿ. ಆದರೆ ಈಗ ಅದಾವುವೂ ಭೋಜನ ಜೊತೆಯಲ್ಲಿಲ್ಲ.

ಅವನಿಗೆ ನೆನಪಿಗೆ ಬಂದುದು ವಿಭೂತಿ. ಹಿಡಿದಷ್ಟು ವಿಭೂತಿಯನ್ನು ಎತ್ತಿಕೊಂಡು ಜಿಗಣೆ ಕಚ್ಚಿರುವ ಸ್ಥಳಕ್ಕೆ ಸವರಿದ. ಅದು ಕಳಬಿತ್ತು. ದರಿದ್ರದ್ದು ಎಂದು ಬೈದುಕೊಂಡು ಹಿಸುಕಬೇಕೆಂದು ಕಾಲೆತ್ತಿದವನಿಗೆ ಇದು ದೇವರ ಗರ್ಭಗುಡಿಯೆಂದು ನೆನಪಾಗಿ, ಕೊಲೆ ಸರಿಯಲ್ಲವೆನ್ನಿಸಿ ಸುಮ್ಮನಾದ.

ಅವನ ಗಮನ ತನ್ನ ಸೊಂಟದತ್ತ ಹರಿಯಿತು. ಅಲ್ಲೇನೋ ವಿಶೇಷವಿದೆ ಅನ್ನಿಸಿ ಆ ಜಾಗವನ್ನೇ ಪುನಾ ಪುನಾ ನೋಡಿಕೊಂಡ. ಒಮ್ಮೆ ಮುಟ್ಟಿ ನೋಡಿಕೊಳ್ಳಬೇಕೆನ್ನಿಸಿತು. ಸ್ಪರ್ಶ ತಪ್ಪೆನ್ನಿಸಿದರೂ ಆದಮ್ಯ ಆಸೆಯನ್ನು ಹತ್ತಿಕ್ಕಲಾಗಲಿಲ್ಲ. ಅಷ್ಟು ಹೊತ್ತಿಗೆ ಆ ಜಾಗದಲ್ಲಿ ಹಲವಾರು ಬದಲಾವಣೆಗಳಾಗಿ, ಈ ಅದ್ಭುತಗಳನ್ನು ಕಂಡು ಸೋಜಿಗವಾಗಿ ಮೈಯಲ್ಲಿ ಹೊಸಭಾವವೊಂದು ಸಂಚರಿಸಿದಂತಾಗಿ ಭೋಜನಿಗೆ ಈ ಲೋಕವೇ ಮರೆತು ಹೋಯಿತು.

ಹುಡುಗಿಯೊಬ್ಬಳ ಕಿಲಕಿಲ ನಗು ಕೇಳಿದಾಗಲೇ ಅವನಿಗೆ ಇಹಲೋಕದ ಅರಿವು ಉಂಟಾಗಿದ್ದು. ನಾಚಿಕೆ ಹುಟ್ಟಿ ಪಾಣಿಪಂಚೆಯನ್ನು ಸೊಂಟಕ್ಕೆ ಸುತ್ತಿಕೊಂಡು ಬಾಗಿಲ ಸಂದಿಯಿಂದ ಇಣುಕಿ ನೋಡಿದ. ಮಾದನ ಹತ್ತು ವರ್ಷದ ಮಗಳು ಲಚ್ಚಿ ಅಲ್ಲಿ ನಿಂತು ಏನೋ ವಿಶೇಷವೆಂಬಂತೆ ಅವನ ಸೊಂಟದತ್ತಲೇ ದೃಷ್ಟಿ ನೆಟ್ಟಿದ್ದಳು.

ಮಹಾಲಿಂಗೇಶ್ವರನ ಪೂಜೆ ದಿನಂಪ್ರತಿ ನಡೆಯುವ ಕೈಂಕರ್ಯ. ಒಂದಿಷ್ಟು ನನೆಸಿದ ಕಡಲೆಕಾಳು, ಒಂದು ತೆಂಗಿನಕಾಯಿ, ಸಿಕ್ಕರೆ ಬಾಳೆಹಣ್ಣು. ಇವಿಷ್ಟು ದಿನಂಪ್ರತಿ ಅವನಿಗೆ ಸಿಗುವ ನೈವೇದ್ಯ. ದೇವಸ್ಥಾನದಲ್ಲಿ ಮಂಗಳಾರತಿಯ ಗಂಟೆಯ ಶಬ್ದ ಕೇಳುತ್ತಲೇ ಹತ್ತಿರದಲ್ಲಿ ಹೊಲದ ಕೆಲಸಗಳಲ್ಲಿ ನಿರತರಾಗಿದ್ದ ಕೆಲವು ಕೃಷಿಕರು ಬಂದು ಕೈಮುಗಿದು ನಿಂತುಕೊಳ್ಳುವುದು. ಕಡಲೆಕಾಳೋ, ಬಾಳೆಹಣ್ಣಿನ ಚೂರೋ ಪ್ರಸಾದವಾಗಿ ಸಿಕ್ಕರೆ ಭಕ್ತಿಯಿಂದ ಸ್ವೀಕರಿಸಿ ಹೋಗುವುದು ಅಲ್ಲಿನ ಸಂಪ್ರದಾಯ. ಆ ಕಡಲೆಕಾಳಿನ ಆಸೆಯಿಂದಲೇ ಲಚ್ಚಿ ಅಲ್ಲಿಗೆ ಬಂದದ್ದು. ಆದರೆ ಅವಳು ಕಂಡ ದೃಶ್ಯ ಅವಳಿಗೆ ಹೊಸದು.

ಭೋಜನಿಗೆ ನಾಚಿಕೆಯಾಯಿತು. ದಡಾರನೆ ಬಾಗಿಲನ್ನೆಳೆದುಕೊಂಡು ಹೊರಬಂದ. ಲಚ್ಚಿಯ ಮುಖವನ್ನು ನೇರವಾಗಿ ದಿಟ್ಟಿಸದೆ ತನ್ನ ಮನೆಯತ್ತ ಹೆಜ್ಜೆ ಹಾಕಿದ. ಆದರೆ ಲಚ್ಚಿಯ

ನಗುವಿನ ಗುಂಗು ಆತನನ್ನು ಬಿಡಲಿಲ್ಲ. ಎಷ್ಟು ಚೆನ್ನಾಗಿ ನಗುತ್ತಾಳೆ, ಮಲ್ಲಿಗೆ ಹೂಗಳು ಬಿರಿದಂತೆ, ಕೋಗಿಲೆಯ ದನಿಯಂತೆ, ವಸಂತಕಾಲದ ತಂಗಾಳಿ ಬೀಸಿದಂತೆ. ಬೆಳಿಗ್ಗೆ ಹಾವು ಜೋಡಿ ಕಂಡುಬಂದಿದ್ದ ಸ್ಥಳದತ್ತ ಅವನ ದೃಷ್ಟಿ ಅನಾಯಾಚಿತವಾಗಿ ಸಾಗಿತು. ಹಾವುಗಳು ಅಲ್ಲಿ ಇರಲಿಲ್ಲವಾದ ಕಾರಣ ಆ ದೃಶ್ಯ ಆತನ ಮನಪಟಲದಿಂದ ಮರೆಯಾಗಿ ದೇವಸ್ಥಾನದ ಜಗಲಿಯ ಮೇಲೆ ಮಲಗಿದ್ದ ಆ ಹುಡುಗನು ಅವನ ನೆನಪನ್ನು ತುಂಬಿಕೊಂಡು ನಡಿಗೆಯ ವೇಗವನ್ನು ತೀವ್ರಗೊಳಿಸಿದ.

ಬಾನಿನಲ್ಲಿ ಗುಡುಗಿನ ಸದ್ದು ಕೇಳಿಸಿತು.

ಭೋಜನ ಮೈಯಲ್ಲಿ ನವಿರೆದ್ದಿತು. ವಿದ್ಯುತ್ ಹರಿದಂತಾಗಿ ಆಹ್ಲಾದಕರವೆನ್ನಿಸಿ ಕುಣಿಯಬೇಕೆನ್ನಿಸಿತು. ಮೋಡಗಳೊಡನೆ ಆಟವಾಡುತ್ತಿರುವ ಬೆಟ್ಟಗಳು, ಗಾಳಿಗೆ ತಲೆದೂಗುವ ದೊಡ್ಡ ದೊಡ್ಡ ಮರಗಳು ಕೂಡ ಸುಂದರವೆನ್ನಿಸಿದವು. ತೋಡಿನಲ್ಲಿ ಹರಿಯುವ ನೀರಿನ ಜುಳುಜುಳು, ಬಿದಿರಿನ ಸಂದಿಯಿಂದ ನುಸುಳುವ ಗಾಳಿಯ ಸರಪರ ದನಿ ಎಲ್ಲವೂ ಲಾವಣ್ಯಮಯ ಎನ್ನಿಸಿ, ಈ ಜಗತ್ತೇ ಹೊಚ್ಚ ಹೊಸದೆನ್ನಿಸಿತು. ಇದರ ಜೊತೆಗೇ ಲಚ್ಚಿಯ ಕಿಲಕಿಲ ನಗು ಮೂಲೆಮೂಲೆಯಿಂದ ಕೇಳಿಬಂದು ಎಲ್ಲೆಡೆ ಸೌಂದರ್ಯ ಮೂಡಿದೆಯೆಂದು ಕಲ್ಪಿಸಿಕೊಂಡ.

ಆ ಅಮಲಿನಲ್ಲಿಯೇ ಅವನ ಹೆಜ್ಜೆಗಳು ತನ್ನ ಮನೆಯ ಅಂಗಳವನ್ನು ಸೇರಿದ್ದವು.

ಗಬ್ಬೂರಿನಲ್ಲಿ ದೇವಯ್ಯ ಹೆಗ್ಗಡೆಯವರ ಮನೆಯನ್ನು ಬಿಟ್ಟರೆ ಶಂಕರಯ್ಯನವರದೇ ದೊಡ್ಡ ಮನೆ. ಮಹಡಿಯದು ಹದಿನಾಲ್ಕು ಚದರದ ಮೂವತ್ತಾರು ಬಾಗಿಲುಗಳಿರುವ ಸೌಧ. ಹಳ್ಳಿಯಲ್ಲಿ ಮಾಡಿದ್ದ ಸೀಳು ಹೆಂಚುಗಳಿಂದ ಅರ್ಧ ಮೈಲು ದೂರ ಭವ್ಯವಾಗಿ ಕಾಣುತ್ತದೆ.

ಅಂಗಳಕ್ಕೆ ತಾಗಿಕೊಂಡಂತೆ ಮನೆಯ ಉದ್ದಕ್ಕೂ ಇದೆ ಜಗಲಿ, ಮೂರು ಮೆಟ್ಟಿಲುಗಳ ಎತ್ತರಕ್ಕೆ. ಇತರ ಜಾತಿಯವರು ಬಂದರೆ ಅದಕ್ಕಿಂತ ಮೇಲಕ್ಕೆ ಅವರಿಗೆ ಪ್ರವೇಶವಿಲ್ಲ. ಅಲ್ಲಿಂದ ಅರ್ಧ ಅಡಿ ಎತ್ತರಕ್ಕೆ ಚಾವಡಿ. ಅದರ ಬಲಮೂಲೆಯಲ್ಲೊಂದು ಪತ್ತಾಸು ಅಕ್ಕಿ ತುಂಬಿಡಲು, ಎಡಮೂಲೆಯಲ್ಲೊಂದು ತಿರಿ. ತಿರಿಯೆಂದರೆ ಬತ್ತ ತುಂಬಿಡಲು ಬತ್ತದ ಹುಲ್ಲಿನಿಂದಲೇ ಚಿಕ್ಕ ಗುಡಿಸಿಲಿನಂತೆ ಕಟ್ಟಿದ ಶೇಖರಾಗಾರ. ಆ ಚಾವಡಿಯಲ್ಲಿ ಕುಳಿತೇ ಶಂಕರಯ್ಯ ಕವಡೆ, ಪಂಚಾಂಗ, ಸ್ಲೇಟುಗಳ ಸಹಾಯದಿಂದ ನಿಮಿತ್ತ ಹೇಳುವುದು. ಇದರಿಂದ ಅವರಿಗೆ ಸಿಗುವುದು ಒಂದೋ ಎರಡೋ ತೆಂಗಿನಕಾಯಿ, ಚಿಪ್ಪು ಬಾಳೆಹಣ್ಣು ಅಥವಾ ಒಂದು ಒಟ್ಟೆ ಪಾವಾಣೆ. ಇದೂ ಕೂಲಿಯಲ್ಲ. ಊರ ಪುರೋಹಿತರಿಗೆ ಗ್ರಹ ಕೂಟದ ಕೆಟ್ಟ ದೃಷ್ಟಿಯಿಂದ ತಮಗುಂಟಾಗುತ್ತಿರುವ ತೊಂದರೆಗೆ ಕಾರಣ, ಪರಿಹಾರ ಕೇಳಲು, ಬಿರಾಮರು ನಿಮಿತ್ತ ಹೇಳಿದ್ದಕ್ಕಾಗಿ ಕೊಡುವ ಗೌರವ ಧನ.

ಗಬ್ಬೂರಿನಲ್ಲಿ ಸಮೃದ್ಧತೆಗೇನೂ ಬರವಿಲ್ಲ. ಭೂತಾಯಿ ಸಂಕೋಚವಿಲ್ಲದೆ ಸಾಕಷ್ಟು ಬೆಳೆಗಳನ್ನು ಕೊಡುತ್ತಾಳೆ. ಊರ ಜನ ನಿರ್ವಂಚನೆಯಿಂದ ಶ್ರದ್ಧೆಯಿಂದ ಅವಳ ಸೇವೆ ಮಾಡುತ್ತಾರೆ.


ಜಗಲಿಯಲ್ಲಿ ಹತ್ತು ಹೆಜ್ಜೆಯಿಟ್ಟರೆ ಪಡಸಾಲೆಗೆ ಪ್ರವೇಶ. ಸಾಕಷ್ಟು ಕುಸುರಿ ಕೆಲಸ ಮಾಡಿದ ತೇಗದ ಸದೃಡ ಪ್ರವೇಶದ್ವಾರ. ಕೇವಲ ಐದೂವರೆ ಅಡಿಯಷ್ಟು ಎತ್ತರ,

ಸಾಮರ್ಥ್ಯವಿಲ್ಲದೇ ಒಬ್ಬನು ಪ್ರಸಿದ್ಧನಾಗಲು ಸಾಧ್ಯವಾದ ದಾರಿಯೆಂದರೆ ಹುತಾತ್ಮನಾಗುವುದು. —ಬರ್ನಾಡ್ ಶಾ

ರಾಷ್ಟ್ರಗಳು ವ್ಯಕ್ತಿಗಳಂತೆ ಬದುಕುತ್ತವೆ ಮತ್ತು ಸಾಯುತ್ತವೆ. ಆದರೆ ನಾಗರಿಕತೆ ಸಾಯುವುದಿಲ್ಲ. —ಮೆಝಿನಿ

ನಿನ್ನ ವಿಷಯವಾಗಿ ಆಡಿದ ಕೆಡುಕು ನಿಜವಿದ್ದರೆ ತಿದ್ದಿಕೋ. ಇಲ್ಲದಿದ್ದರೆ ನಕ್ಕು ಬಿಡು. —ಶೇಕ್ಸ್‌ಪಿಯರ್

ಸಂಗ್ರಹ : ಶ್ರೀಕೃಷ್ಣ ಹೆಗಡೆ



ಒಳಸೇರಬೇಕಾದರೆ ತಲೆತಗ್ಗಿಸಿಕೊಂಡೇ ಹೋಗಬೇಕು. ಬಿಸಿಲಿನಿಂದ ಬಂದರಿಗೆ ಗವ್ವೆನ್ನುವ ಕತ್ತಲೆಯಲ್ಲಿ ಹೆಜ್ಜೆಯಿಟ್ಟಾಗ ಏನಾದರೂ ತುಳಿದು ಅನಾಹುತವಾಗದಿರಲೆಂಬಂತೆ, ಅವರು ತಲೆಬಗ್ಗಿಸಿ ಹೋಗಲಿಕ್ಕೋಸ್ಕರವೇ ಹಿರಿಯರು ಮುಖ್ಯ ದ್ವಾರವನ್ನು ಕಡಿಮೆ ಎತ್ತರಕ್ಕೇ ನಿಗದಿಗೊಳಿಸಿರಬಹುದು.

ಭೋಜ ಮನೆಗೆ ಬರುವಾಗ ಜಗಲಿಯ ಬಲಮೂಲೆಯಲ್ಲಿ ಗಾಢವಾಗಿ ನಿದ್ರಿಸಿದ್ದ ಆ ಆಗಂತುಕ. ಅವನ ಸುದೃಢ ರೋಮಭರಿತ ದೇಹವನ್ನು ಕಂಡಾಗ ಭೋಜ ಅವನದಕ್ಕೆ ತನ್ನದನ್ನು ಹೋಲಿಸಿಕೊಂಡ. ಆನೆಯ ಮುಂದೆ ನಿಂತ ಆಡು ತಾನೆನ್ನಿಸಿ ನಾಚಿಕೆಯಾಯಿತು. ಪುರುಷನಾಗಬೇಕು, ದೃಢಕಾಯನಾಗಬೇಕು ಆಗಲಾದರೂ ಜನ ತನ್ನನ್ನು ಹೆಣ್ಣಿಗನೆಂದು ಲೇವಡಿ ಮಾಡುವುದನ್ನು ನಿಲ್ಲಿಸಿಯಾರು.

ರುದ್ರ ಊಟದಲ್ಲೇನೂ ಸಂಕೋಚ ಮಾಡಲಿಲ್ಲ. ಆ ಮಧ್ಯಾಹ್ನ ಶಂಕರಯ್ಯನವರ ಪತ್ನಿ ಸುಟ್ಟಗುಳ್ಳದ ಹುಳಿಗೊಜ್ಜು, ಕಡಿಗೆ ಪಲ್ಯ, ಹುರುಳಿ ಸಾರು ಮಾಡಿದ್ದರು. ಆಸಾಡಿ(ಆಷಾಡ)ಯ ಜಡ್ಡರು ಮಳೆಯಲ್ಲಿ ತರಕಾರಿ ಬೆಳೆಯುವುದಿಲ್ಲ. ಬೇಸಗೆಯಲ್ಲಿ ಬೆಳೆದು ಶೇಕರಿಸಿದ್ದ ಬೂದುಗುಂಬಳ, ರಾಮಗುಂಬಳ, ಕೆಂಪು ಸೌತೇಕಾಯಿಗಳಲ್ಲೇ ಮಳೆಗಾಲ ಕಳೆಯಬೇಕು, ಬೇಯಿಸಿದ ಹುರುಳಿ ಕೆಸರುಗದ್ದೆಯಲ್ಲಿ ನೇಗಿಲೆಳೆಯುವ, ನೊಗಕ್ಕೆ ಭುಜ ಕೊಡುವ ಹೋರಿ ಎತ್ತುಗಳ ಕಾಲುಗಳಿಗೆ ಕಸುವು ಕೊಡುವುದರಿಂದ ಹುರುಳಿ ಸಾರೊಂದು ಕಾಯಂ ಅಡುಗೆ ಮಳೆಗಾಲದಲ್ಲಿ.

ರುದ್ರ ಸೇರಕ್ಕಿ ಅನ್ನ ಇಳಿಸಿದ. ಉಟದನಂತರ ಎಲೆಯೆತ್ತಿ, ಅದನ್ನು ಎಸೆಯದೆ ಹೋರಿಯ ಬಾಯಿಗೆ ತಿನ್ನಿಸಿದ. ಉಂಡ ಜಾಗಕ್ಕೆ ಗೋಮಯ (ಸಗಣಿ) ಹಾಕಿ ಶುದ್ಧಗೊಳಿಸಿದ. ಅವನ ಮುಖದಲ್ಲಿ ಕೃತಜ್ಞತೆಯನ್ನು ಕಂಡರು ದಂಪತಿಗಳು.

ಆಷಾಡದಲ್ಲಿ ಶುಭಕಾರ್ಯಗಳು ನಿಷೇಧ. ಬೆಳೆ ಬೆಳೆಸುವ ಕಾಲದಲ್ಲಿ ಕಾರ್ಯಕ್ರಮಗಳನ್ನು ಇಟ್ಟುಕೊಂಡರೆ ಕೃಷಿಕಾರ್ಯಕ್ಕೆ ತಡೆ ಉಂಟಾಗುತ್ತದೆ ಎಂದೇ ಈ ನಿಷೇಧ ಹೇರಿರಬೇಕು.

ನವವಿವಾಹಿತ ಬ್ರಾಹ್ಮಣೇತರರು ಈ ಮಾಸದಲ್ಲಿ ಜೊತೆಗಿರುವುದನ್ನೂ ಒಪ್ಪುವುದಿಲ್ಲ ಹಿರಿಯರು.

ಹಾಗಾಗಿ ಶಂಕರಯ್ಯನವರಿಗೆ ಪೌರೋಹಿತ್ಯದಿಂದ ಈ ಮಾಸದಲ್ಲಿ ವಿಶ್ರಾಂತಿ. ಚಿ ಪುಟ್ಟ ಹರಕೆಗಳು, ದರ್ಶನ ನಡೆದರೂ ಅವು ಕೇವಲ ಬೆರಳೆಣಿಕೆಯಷ್ಟು. ಭೋಜನಾನಂತ ಒಂದು ಗಂಟೆ ಕಾಲ ನಿದ್ರಿಸುತ್ತಾರೆ ಅವರು.

ಮೂಕಾಂಬಿಕೆಗೆ ಮಧ್ಯಾಹ್ನ ನಿದ್ರಿಸಲಾಗುವುದಿಲ್ಲ. ಗೋಡೆಗೊರಗಿಕೊಂಡು ಗೊರ ಎಂದು ಗೊರಕೆ ಹೊಡೆಯುತ್ತ ಮಲಗಿದ ಪತಿದೇವರ ಬಿಳುಪು ನುಣುಪಾದ ಎದೆಯನ್ನ ದಿಟ್ಟಿಸುತ್ತಿದ್ದವರಿಗೆ ಮನೆಯ ಹಿಂದೆ ನೆಲ ಅಗೆಯುವ ಶಬ್ದ ಕೇಳಿ ಅಚ್ಚರಿಯಾಯಿತು. ಭೋ ಮೇಲಿನ ಕೋಣೆಯಲ್ಲಿ ಅಮರಕೋಶವನ್ನು ಗಟ್ಟಿ ದನಿಯಲ್ಲಿ ಹೇಳುತ್ತಿದ್ದ. ಅಂದಮೇ ಅವನದಲ್ಲ ಈ ಕೆಲಸ. ಕುತೂಹಲದಿಂದ ಆಕೆ ಎದ್ದು ಬಂದರು. ದನಿಯನ್ನರಸಿ ಹಟ್ಟಿಯ ಹಿಂಭಾಗಕ್ಕೆ ಬಂದರೆ ಅಲ್ಲಿ ಆಳೆತ್ತರದ ಸೈಂಗೋಲಿನಿಂದ ರುದ್ರ ಭೂಮಿಯಲ್ಲಿ ಗು ತೋಡುತ್ತಿದ್ದಾನೆ. ಅವರು ಮೌನವಾಗಿ ಅವನ ಕೆಲಸವನ್ನೇ ನೋಡುತ್ತ ನಿಂತರು. ರುದ್ರ ಅಲ್ ಗಳುವನ್ನು ನೆಟ್ಟು, ಅದಕ್ಕೆ ರೀಪು ಕಟ್ಟಿ, ಮಡಲು (ತೆಂಗಿನ ಗರಿ) ಸೇರಿಸಿ ಹಟ್ಟಿಯ ಬಿದ್ದುಹೋದ ಗೋಡೆಗೆ ತಾತ್ಕಾಲಿಕ ತಡೆ ಮಾಡಿಯೇಬಿಟ್ಟ.

ಬೆಳಿಗ್ಗೆ ತಾನು ಹಟ್ಟಿಯ ಬಿದ್ದುಹೋದ ಗೋಡೆಯ ಬಗ್ಗೆ ತನ್ನ ಗಂಡನಿಗೆ ಹೇಳಿದ್ದು ಅವರಿಗೆ ನೆನಪಾಯಿತು.

ಹೀಗೆ ರುದ್ರ ಆ ಸಂಸಾರದಲ್ಲಿ ಇನ್ನೊಬ್ಬ ಸದಸ್ಯನಾಗಿ ಸೇರಿಕೊಂಡಿದ್ದು, ಶಂಕರಯ್ಯನವರಿ ಒಂದಿಷ್ಟು ಜಂಬ್ರ ಬಂದಿದ್ದೂ,ಈ ರುದ್ರನ ಶ್ರಮದಿಂದಲೇ ಆ ಮನೆ ಇನ್ನಷ್ಟು ವಿಸ್ತಾರವಾಯಿತು ಹೊಲಗಳಲ್ಲಿ ಮೂರು ಮೂರು ಬೆಳೆ ಬೆಳೆಯತೊಡಗಿತು. ತೆಂಗು, ಅಡಿಕೆ ತೋಟಗಳಲ್ಲಿ ಫಸಲು ಹೆಚ್ಚಿತು. ಹಾಲು ವಿಪುಲವಾಯಿತು.

ಇವೆಲ್ಲವೂ ರುದ್ರನ ನಿಷ್ಕಳಂಕ ಶ್ರಮದಿಂದ. ಆತ ತನಗಾಗಿ ಏನೂ ಬೇಡಲಿಲ್ಲ. ಆದರೂ ತನ್ನದೇ ಮನೆಯೆಂಬಂತೆ ದುಡಿದ ದಂಪತಿಗಳು ಕೊಟ್ಟಿದ್ದನ್ನು ವಿಶ್ವಾಸದಿಂದ ತೆಗೆದುಕೊಂಡ

ಅವನು ತೊದಲುತ್ತಿದ್ದನಾದ ಕಾರಣ ಆತ ಹೆಚ್ಚಿನ ಕಾಲ ಮೌನವಾಗಿಯೇ ಇರುತ್ತಿದ್ದ ಮಾತಿಗಿಂತ ಕೃತಿ ಹೆಚ್ಚು ಶ್ರೇಷ್ಠ ಎಂಬ ನಂಬಿಕೆ ಅವನದಾಗಿತ್ತು.

ಕಾಲ ನಿರಂತರವಾಗಿ ಮುಂದೆ ಸರಿಯುತ್ತದೆ. ಎಲ್ಲವೂ ಮೊನ್ನೆ ಮನ್ನೆಯೇ ನಡೆದಂತಿದೆ ಒಂದೊಂದು ಘಟನೆಗಳೂ ಸ್ಪಷ್ಟ, ಸುಸ್ಪಷ್ಟ. ಗಬ್ಬೂರಿನ ಪುರೋಹಿತ ಶಂಕರಯ್ಯನವರು ಹಾವು ಕಚ್ಚಿ ಅಸು ನೀಗಿದರು. ಪತ್ನಿ ಮೂಕಾಂಬಿಕೆ ಪತಿ ಅಸು ನೀಗಿದ ಕೆಲವೇ ತಿಂಗಳಲ್ಲಿ ಪರದಲ್ಲಿ ಪತಿಯನ್ನು ಸೇರಿಕೊಂಡರು. ಮೊಮ್ಮಗನನ್ನು ಎತ್ತಿ ಆಡಿಸಬೇಕೆಂಬ ಅವರ ಆಸ ಆಸೆಯಾಗಿಯೇ ಉಳಿಯಿತು. ಭೋಜ ಭೋಜಯ್ಯನಾದರು. ರಾಮಚಂದ್ರನ ಸೇವೆ ಹನುಮಂತನಿದ್ದಂತೆ ರುದ್ರ ಮನೆಯ ಆಳಾದ. ಅವನಿಗೂ ಭೋಜಯ್ಯನವರೇ ಮದುವ ಮಾಡಿಸಿದ್ದು, ಅದೊಂದು ಪ್ರಮುಖ ಕತೆ.

ಆಣೆ ಪೈ ಪಾವಾಣೆಗಳ ಸ್ಥಾನವನ್ನು ನಯಾಪೈಸೆ ತುಂಬಿತು. ಮೈಲಿಗಳು ಕಾಣೆಯಾ ಕಿಲೋಮೀಟರ್ ಬಂತು. ಸೇರು, ಪಾವು, ಕಳಸಿಗೆ ಹೋಗಿ ಕಿಲೋಗ್ರಾಂ ತೂಕದ

“ಸ್ವರ್ಗಕ್ಕೆ ಹೋಗುವುದು ಯಾರಿಗೆ ಇಷ್ಟ ಇದೆ ಅವರು ಕೈ ಮೇಲೆತ್ತಿ.”

“ನನಗೆ ಸ್ವರ್ಗಕ್ಕೆ ಹೋಗುವುದು ಇಷ್ಟ ಇದೆ ಸರ್. ಆದರೆ ಶಾಲೆ ಬಿಟ್ಟ ಕೂಡಲೇ ಅಮ್ಮಾ ಮನೆಗೆ ಲಗೂ ಬಾ ಅಂದಿದ್ದಾಳೆ. ಆದಕ್ಕೆ ನಾನು ಕೈ ಮೇಲೆ ಎತ್ತುವುದಿಲ್ಲ ಸರ್.”

– ಸಿದ್ದಮ್ಮ ಸಜ್ಜನಶೆಟ್ಟಿ



ಮಾಪನವಾಯಿತು. ಸೇರು ಸೊಲಿಗೆಗಳು ಲೀಟರುಗಳಾಗಿ ಪರಿವರ್ತನೆ ಹೊಂದಿದವು.

ಎರಡನೆ ಮಹಾಯುದ್ಧ ಮುಗಿಯಿತು. ದೇಶಕ್ಕೆ ಸ್ವಾತಂತ್ರ್ಯ ಬಂತು. ಗಾಂಧೀಜಿಯವರ ಕೊಲೆಯಾಯಿತು.

* * * * *

“ತಮಾಷೆ ಗೊತ್ತಿತ್ತಾ ಜಾನೀ.” ಭೋಜಯ್ಯ ಆ ನೆನಪಿಂದ ಹರುಷಿತರಾದವರಂತೆ ಹೇಳತೊಡಗಿದರು. “ಆಟದ (ಯಕ್ಷಗಾನದ) ಗುಂಗಿನಲ್ಲಿದ್ದ ನಮ್ಮವರಿಗೆ ಸ್ವಾತಂತ್ರ್ಯ ಅಂದರೆ ಎಂತ ಅಂದೇ ಗೊತ್ತಿರ್ಲಿಲ್ಲೆ. ಯುದ್ಧ ಅಂದ್ರೆ ರಾಮ ರಾವಣರದ್ದಾ, ಪಾಂಡವ ಕೌರವರದ್ದಾ ಅಂತ ಕೇಳಿದ್ರು.” ಭೋಜಯ್ಯ ಗಟ್ಟಿಯಾಗಿ ನಕ್ಕರು. ಜಾಹ್ನವಿಗೆ ಗಂಡನ ಸಂತೋಷ ಕಂಡು ಸಮಾಧಾನವಾದುದರಿಂದ ಆ ಹಳಸಲು ಕತೆಯಲ್ಲೂ ಆಸಕ್ತಿ ತೋರಿಸುವಂತೆ ನಟಿಸಬೇಕಾಯಿತು.

“ಹಿರೋಶಿಮಾ, ನಾಗಸಾಕಿ ಅಂದ್ರೆ ಎಂತ ಅಂತ ಗೊತ್ತಿರ್ಲಿಲ್ಲೆ, ಬಾಂಬಂದ್ರೆ ಆಗ್ನೇಯಾಸ್ತ್ರದ ಕಣಗೆ ಒಂದು ಅಸ್ತ್ರ ಅಂತಿದ್ರು. ಅಂತೂ ಗಮ್ಮತ್ತಿತ್ತು.”

ಗಬ್ಬೂರಿಗೆ ರಸ್ತೆ ಬಂದಿದ್ದು ಇತ್ತೀಚೆಗೆ. ಭೋಜಯ್ಯ ಮನಸಿನಲ್ಲೇ ಎಣಿಸಿದರು. ಸರಿಯಾಗಿ ಲೆಕ್ಕ ಸಿಗಲಿಲ್ಲ. ಹದಿನೈದು ವರ್ಷ, ಇಪ್ಪತ್ತು ವರ್ಷ, ಅಂತೂ ಆದಕ್ಕಿಂತ ಜಾಸ್ತಿಯಲ್ಲ. ಆ ಮಣ್ಣು ರಸ್ತೆಯಲ್ಲಿ ಕಾಸಗಿ ಬಸ್ಸೊಂದು ದೂಳು ಹಾರಿಸುತ್ತ ಬರುವುದನ್ನು ನೋಡುವುದರಲ್ಲಿ, ನಿಂತ ಅದನ್ನು ಮುಟ್ಟುವುದರಲ್ಲಿ ಎಂತಹ ಆನಂದವಿತ್ತು. ಅದು ಹಾರನ್ ಮಾಡಿದಾಗ ಮೈಯಲ್ಲಿ ವಿದ್ಯುತ್ ಹರಿದ ಅನುಭವವಾಗುತ್ತಿತ್ತು. ಅದೇ ಮೊದಲ ಬಾರಿಗೆ ಅಪ್ಪಯ್ಯ ಅರ್ಧಾಣೆಯೋ ಒಂದಾಣೆಯೋ ಕೊಟ್ಟು ಕೋಟೇಶ್ವರದ ಕೊಡಿ ಹಬ್ಬಕ್ಕೆ ತನ್ನನ್ನು ಕರೆದುಕೊಂಡು ಹೋಗಿದ್ದು. ಕೇಳ್ತಿದ್ದೀಯಾ ಜಾನಿ?

ಜಾಹ್ನವಿ ತನ್ನ ನೆನಪಲ್ಲೇ ಮುಳುಗಿದ್ದಳು. ತಾನೂ ಒಂದುದಿನ ಗಂಡನೊಡನೆ ಕೊಡಿ ಹಬ್ಬಕ್ಕೆ ಹೋಗಿದ್ದುಂಟು. ಇಡೀ ಕುಂದಾಪುರ ತಾಲೂಕಿಗೇ ಹೆಸರಾದ ಜಾತ್ರೆಯದು. ಮುಗಿಲಿನೆತ್ತರಕ್ಕೆ ನಿಂತ ತೇರು, ಅದಕ್ಕೆ ಕಟ್ಟಿದ ಬಣ್ಣಬಣ್ಣದ ಕಾಗದಗಳು, ಅದನ್ನು ಎಳೆಯುವ ಭಕ್ತ ಸಮೂಹದ ಉತ್ಸಾಹದ ಕೂಗಾಟ ಇವನ್ನು ಶಬ್ದಗಳಲ್ಲಿ ಬಣ್ಣಿಸಲು ಸಾಧ್ಯವಿಲ್ಲ. ಅದು ತನ್ನ ಮದುವೆಯಾದ ಹೊಸದರಲ್ಲೇ ಇರಬೇಕು. ಹಸಿರು ಸೀರೆಯುಟ್ಟು ರೂಪಾಯಿಯಗಲದ ಕುಂಕುಮವಿಟ್ಟು ನೀಳ ಜಡೆಯುದ್ದಕ್ಕೂ ಮಲ್ಲಿಗೆ ಮೊಗ್ಗಿನ ಮಾಲೆ ಮುಡಿದು ಉತ್ಸಾಹದಿಂದಲೇ

ಪತಿರಾಯನ ಜೊತೆಗೆ ಆಕೆ ಹೊರಟದ್ದು. ಅವರು ಕಾಲು ಬೀಸುತ್ತ ಹೋಗುತ್ತಿದ್ದಾಗ ಅವರ ಸಮಕ್ಕೆ ನಡೆಯಲಾಗದೇ ತಾನು ಪರದಾಡಿದ್ದು, ದಾರಿಯಲ್ಲಿ ಗದ್ದೆಯಂಚಿನಲ್ಲಿ ತಾನು ಕಾಲುಜಾರಿ ಕೆಸರುಗದ್ದೆಗೆ ಬಿದ್ದಿದ್ದು, ಅಲ್ಲಿಂದ ಎದ್ದು ನಿಲ್ಲುವಷ್ಟರಲ್ಲಿ ಅವರು ದೃಷ್ಟಿಗೂ ದೂರ ಸಾಗಿಯಾಗಿದ್ದು ಇವೆಲ್ಲ ಜಾಹ್ನವಿಯ ನೆನಪಲ್ಲಿ ಹಸಿರಾಗಿವೆ. ಕೋಟೇಶ್ವರ ಜಾತ್ರೆಯಲ್ಲಿ ಮುಂಡಕ್ಕಿ, ಕಲ್ಲಂಗಡಿ ಹಣ್ಣು ಇವನ್ನೆಲ್ಲ ತಿನ್ನಬೇಕೆಂಬ ಆಸೆ ತನ್ನದಾಗಿತ್ತು. ನಡೆದು ನಡೆದು ಸುಸ್ತಾದವಳನ್ನು ತೆಂಗಿನ ಮರದ ನೆರಳಿನಲ್ಲಿ ಕುಳ್ಳಿರಿಸಿ, ದೇವಸ್ಥಾನಕ್ಕೆ ಹೋದ ಅವರು ಕಾಯಿ ಒಡೆಸಿಕೊಂಡು ಬಂದು "ನಡಿ ಹೋಪೋ'' ಎಂದಾಗ ಅವರ ಮೇಲೆ ಎಲ್ಲಿಲ್ಲದ ಕೋಪ ಬಂದಿತ್ತು. ಕಣ್ಣಲ್ಲಿ ಗಂಗೆ ಹರಿದಿದ್ದಳು. ಏನೂ ಮಾಡುವಂತಿಲ್ಲ. ಜೀವನದಲ್ಲಿ ನನಗೆ ಇವರಿಂದ ಸುಖವೆಂಬುದೇ ಸಿಗಲಿಲ್ಲ.

"ಇವಳೇ ಜಾನಿ.'' ಭೋಜಯ್ಯ ಮೈ ಅಲುಗಿಸಿದಾಗಲೇ ಅವರು ಇಹಲೋಕಕ್ಕೆ ಬಂದಿದ್ದು. ಆಂ ಎಂದು ಪ್ರತಿಕ್ರಿಯಿಸುವಷ್ಟರಲ್ಲೇ ಭೋಜಯ್ಯ ಕೆಂಡಾಮಂಡಲವಾಗಿದ್ದರು. "ಗಂಡ ಹೇಳಿದ್ದು ಕಿಮಿ(ಕಿವಿ)ಗೆ ಹೋತ್ತಿಲ್ಲೆ ಅಲ್ದಾ, ನಾನು ಮುದುಕ, ಪ್ರಾಯ ಆದವ್ನು ಆದಕ್ಕೇ ಅವನು ಎಂತ ಮಾಡ್ತ, ಬುರ್ನಾಸು ಅಂತ ನಿರ್ಲಕ್ಷ್ಯ. ನರಕದಲ್ಲಿ ಯಮದೂತರು ಗರಗಸ ತಗೊಂಡು ಗಸಗಸ ಕೊಯ್ದಾಗಲೇ ಬುದ್ಧಿ ಬಪ್ಪುದು. ನಾನು ಸತ್ತಮೇಲೇ ನಿಂಗೆ ಗಂಡ ಸಾಯುಕಾಗ್ದಿತ್ತು ಅಂತ ಅನ್ಸುದು, ಹ್ಞೂಂ.''

ಮರದ ಮೇಲೆ ಕುಳಿತಿದ್ದ ರುದ್ರಯ್ಯನ ಶವ ಆ ಮಾತಿಗೆ ಗಹಗಹಿಸಿ ನಕ್ಕಿತು. ಆ ನಗು ಪ್ರೇತದ ಕೇಕೆಯಂತೆ ಭೋಜಯ್ಯನವರಿಗೆ ಕೇಳಿಸಿ ಅವರ ಎದೆ ಭಯದಿಂದ ನಗಾರಿಯಂತೆ ಹೊಡೆದುಕೊಳ್ಳತೊಡಗಿತು. ಮೈಯಿಂದ ಚೆಲ್ಲನೆ ಬೆವರು ಬಂತು.

ಭೋಜಯ್ಯ ನಿಧಾನವಾಗಿ ಎದ್ದರು. ಅವರ ಕಾಲುಗಳು ಅವರ ಭಾರವನ್ನು ಹೊರಲು ಪ್ರತಿಭಟಿಸಿದವು. ದೇಹ ತೂರಾಡುತ್ತಿದೆಯೆನ್ನಿಸಿ ಗೋಡೆಗೆ ಆತುಕೊಂಡು ನಿಂತುಕೊಂಡರು. ಉಟ್ಟ ಪಂಚೆ ಜಾರಿ ಬರೀ ಲಂಗೋಟಿ ಮಾತ್ರ ಉಳಿಯಿತು. ಸೊಣಕಲ ಬಿಳುಚಿಕೊಂಡ ಕಾಲುಗಳಿಗೆ ತಣ್ಣನೆಯ ಗಾಳಿ ಕಚಗುಳಿಯಿಟ್ಟಿತು.

ಅವರ ಕಣ್ಣೆದುರು ರುದ್ರನ ಶವ ಮತ್ತೆ ದುತ್ತೆಂದು ಪ್ರತ್ಯಕ್ಷವಾಯಿತು. ಮುಂಡಕನ ಹಳುವಿನ ಬದಿಯಿಂದ ಹಾಗೇ ಎದ್ದು ನಿಂತು ತನ್ನತ್ತಲೇ ದಿಟ್ಟಿಸಿ ನೋಡಿದಂತೆನ್ನಿಸಿ ಕಿರುಚಿಕೊಂಡರು. ಮತ್ತೆ ತಾನೂ ಹಾಗೇ ಸತ್ತುಹೋದರೆ ಜಾಹ್ನವಿ ಏನೆನ್ನಬಹುದೆಂದು ತಿಳಿಯುವ ವಿಚಿತ್ರ ಕುತೂಹಲ ಹುಟ್ಟಿ "ಇವಳೇ ನಾನು ಸತ್ತುಹೋದ್ರೆ ನಿಂಗೆ ಖುಶಿಯಾಗುತ್ತ, ಬೇಜಾರಾಗುತ್ತ?''ಎಂದು ಜಾಹ್ನವಿಯನ್ನೇ ದಿಟ್ಟಿಸಿ ನೋಡಿದರು.


ಮನಸ್ಸಿನಲ್ಲಿದ್ದುದನ್ನು ಹೇಳಬೇಕೆನ್ನಿಸಿದರೂ ಅದು ಈಗಷ್ಟು ಸಂಗತವಲ್ಲ ಎಂದುಕೊಂಡು ಏನೂ ಹೇಳದೆ ಅವರನ್ನು ಬಚ್ಚಲಿಗೆ ಕರೆದೊಯ್ದು ನೀರು ಹದ ಮಾಡಿದರು. ಮೀಯಿರಿ(ಸ್ನಾನ ಮಾಡಿ) ಎಂದು ಹೇಳಿ ತಿನ್ನಲಿಕ್ಕೇನಾದರೂ ಮಾಡಬೇಕಲ್ಲ ಎಂದುಕೊಂಡು ಅಡುಗೆ ಮನೆಯತ್ತ ಹೆಜ್ಜೆ ಹಾಕಿದರು. ಉಪ್ಪಿಟ್ಟು ಮಾಡುವುದೇ ಸರಿಯೆಂದುಕೊಂಡು ಒಲೆಯ ಮೇಲೆ ನೀರಿಟ್ಟು ಉರಿ ಜಾಸ್ತಿ ಮಾಡಿದರು.

ರುದ್ರ ಹೆಣವಾಗಿ ಬಿದ್ದಿದ್ದ ಸುದ್ದಿ ಊರವರೆಲ್ಲರಿಗೂ ತಿಳಿಯಲು ತಡವೇನೂ ಆಗಲಿಲ್ಲ.

ಮುತ್ತು

ಮದುವೆಗೆ ಮೊದಲು
ತುಟಿ ಮುತ್ತಿಗಾಗಿ
ಹಂಬಲಿಸುತ್ತಿದ್ದ
ನನ್ನ ನಲ್ಲೆ
ಮದುವೆಯ ನಂತರ
ಮುತ್ತಿನ ಸರಕ್ಕಾಗಿ
ಪೀಡಿಸುತ್ತಿದ್ದಾಳಲ್ಲ!

— ದಿನೇಶ್ ಸಾರಂಗ್



"ಹೌದಾ, ಹಾಯಾ?'' ಎಂಬ ಉದ್ಗಾರಗಳೊಡನೆ ಆ ಸುದ್ದಿ ದಾಸಯ್ಯ ಹೆಗ್ಗಡೆಯವರ ಕಿವಿಗೂ ಬೀಳುವುದು ತಡವಾಗಲಿಲ್ಲ. ಉತ್ಸುಕ ಜನ ಮತ್ತೊಮ್ಮೆ ಹೊಳೆಯತ್ತ ಸೇರುವಾಗ ಹೆಣ ಎಲ್ಲೋ ತೇಲಿ ಹೋಗಿತ್ತು.

ಅಂದಮೇಲೆ ಊರಿಗೆ ವಿನಾಶ ಕಾದಿದೆ.

ಊರಲ್ಲೆಲ್ಲ ಅದೇ ಸುದ್ದಿ. ಗಂಜಿಯ ತುತ್ತು ಬಾಯಿಗಿಡುವ ಮುನ್ನ ಅಂ ಎಂದು ಅಚ್ಚರಿ ಪಡುವ ಸುದ್ದಿ. ಹೋರಿಗೆ ಅಕ್ಕಚ್ಚು ಹಾಕುವ ಮೊದಲು ಹೌದೇ ಎನ್ನುವ ಸುದ್ದಿ. ಹಣ್ಣು ಕುಯ್ಯಲು ಜಾರುತ್ತಿರುವ ಹಲಸಿನ ಮರ ಹತ್ತುವವನೂ ಜಾಗ್ರತೆ ಕಳೆದುಕೊಳ್ಳುವ ಸುದ್ದಿ.

ಪೀಡೆ ಹೋಯಿತು ಎನ್ನುವವರು ಕೆಲವರಾದರೆ, ಛೇ ಹೀಗಾಗಬಾರದಿತ್ತು ಎಂದರು ಕೆಲವರು. ಹೆಗ್ಗಡೆಯವರಿಗೆ ಕೂಡಲೇ ನೆನಪಾದದ್ದು ಆ ಮನೆ. ರುದ್ರ ವಾಸಿಸುತ್ತಿದ್ದ, ಈಗ ಜರ್ಜರಿತವಾಗಿರುವ ಮನೆ. ಅದನ್ನು ಸರಿ ಮಾಡಿಸಿದರೆ ಯಾವುದಾದರೂ ಒಕ್ಕಲಿಗೆ ಕೊಡಬಹುದು. ಆದರೆ ಈ ನಿರಂತರ ಮಳೆಯಲ್ಲಿ ಅದು ಹೇಗಾಗಿರಬಹುದು.

ಸ್ನಾನದ ಶಾಸ್ತ್ರ ಮುಗಿಸಿದ ಭೋಜಯ್ಯ ಅಡುಗೆಯ ಮನೆ ದಾಟಿ, ಪಡಸಾಲೆಗೆ ಕಾಲಿಡುವ ಮೊದಲು ಕಟ್ಟಿಗೆಯ ಕೋಡೊಲೆಯಲ್ಲಿ ಸಣ್ಣ ಕಾವಲ್ಲಿ ಬೇಯುತ್ತಿರುವ ಉಪ್ಪಿಟ್ಟು ದೊಡ್ಡೊಲೆಯಲ್ಲಿ ಕೊತ ಕೊತ ಕುದಿಯುತ್ತಿರುವ ಕುಸುಬಲಕ್ಕಿ ಎಸರು ಕಂಡು ಏನೋ ಹೊಳೆದವರಂತೆ, ಒಲೆಯ ಹತ್ತಿರಕ್ಕೆ ಹೋಗಿ ಜಾಡಿಯಿಂದ ಬೊಗಸೆ ಉಪ್ಪೆತ್ತಿ ಉಪ್ಪಿಟ್ಟಿಗೆ ಹಾಕಿ ಕಲಕಿದರು. ಜಾಹ್ನವಿ ಹೊರಗಿನಿಂದ ಬರುವಷ್ಟರಲ್ಲಿ ಏನೂ ತಿಳಿಯದವರಂತೆ ಮೆಲ್ಲಗೆ ದೇವರ ಗೂಡಿನೆದುರು ಮಣೆಯ ಮೇಲೆ ಕುಳಿತು ಒರಲೆ ಹಿಡಿದ ಜಂತಿಯನ್ನೇ ನೋಡುತ್ತ, ಇದೀಗಲೇ ತನ್ನ ತಲೆಯ ಮೇಲೆಯೇ ಕುಸಿದುಬಿದ್ದರೆ ತನ್ನ ಗತಿಯೇನಾಗಬಹುದೆಂದು ಯೋಚಿಸುತ್ತ, ಅಭ್ಯಾಸಬಲದಿಂದ ಮಂತ್ರವನ್ನು ಮಣಮಣ ಹೇಳತೊಡಗಿದರು.

ಕೋಡೊಲೆಯಿಂದ ಉಪ್ಪಿಟ್ಟನ್ನು ಎತ್ತಿ, ಅಲ್ಲಿ ಕಷಾಯಕ್ಕೆಂದು ಒಂದು ಲೋಟ ಹಾಲು

ಮತ್ತು ಅಷ್ಟೇ ನೀರನ್ನು ಸರಿಸಿ ಇಟ್ಟು, ಬೆಂಕಿಯ ಜ್ವಾಲೆಗೆ ಸುಟ್ಟ ತನ್ನ ಬಲಗೈ ಹೆಬ್ಬೆರಳನ್ನು ಉಫ್ ಎಂದು ಊದಿಕೊಳ್ಳುತ್ತ ಗೋಡೆಗೊರಗಿ ಕುಳಿತರು ಜಾಹ್ನವಿ ಅವರ ನೆನಪಿನ ಪುಟಗಳು ತೆರೆದುಕೊಳ್ಳತೊಡಗಿದವು.

* * * * *

ಕೆಲ್ಮರ್ಗಿಯ ಚಪ್ಪಲಿಯನ್ನು ಅಂಗಳದಲ್ಲೇ ಬಿಟ್ಟು, ಬಾವಿಕಟ್ಟೆಯ ಹತ್ತಿರ ಹೋಗಿ ಅಲ್ಯುಮಿನಿಯಂ ಚೊಂಬಿನಿಂದ ಕಾಲಿಗಿಷ್ಟು ನೀರು ಸುರಿದುಕೊಂಡು, ಮುಖಕ್ಕಿಷ್ಟು ಚಿಮುಕಿಸಿಕೊಂಡು ಹೆಗಲ ಮೇಲಿನ ಟವಲಿನಿಂದಲೇ ಮುಖ ಕತ್ತನ್ನು ಒರೆಸಿಕೊಂಡು ಮನೆಯೊಳಗೆ ಕಾಲಿಟ್ಟು "ಲೇ ಇವಳೇ" ಎಂದು ಹೆಂಡತಿಯನ್ನು ಕರೆಯುತ್ತ ತನ್ನ ಉದ್ದ ಬಿಳಿ ಖಾದಿ ಜುಬ್ಬವನ್ನು ಕಳಚಿ ಗೋಡೆಯ ಮೊಳೆಗೆ ಸಿಕ್ಕಿಸುತ್ತ 'ಗಂಗೋದಕ ತಗಂಬಾ' ಅಂದರು ಪದ್ಮನಾಭಯ್ಯ.

ಹೆಂಡತಿ ತಂದುಕೊಟ್ಟ ನೀರನ್ನು ಗಟಗಟ ಗಂಟಲಿಗೆ ಸುರಿದುಕೊಂಡು "ಜಾನಿಗೊಂದು ಗಂಡು ಕಂಡ್ಕಂಡ್ ಬಂದೆ. ಜಾತ್ಕ ಸಮಾ ಕೂಡತ್ತು" ಎಂದು ಹೇಳಿ ಹೆಂಡತಿ ಸೀತಾಲಕ್ಷ್ಮಿಯ ಹುಬ್ಬೇರುವಂತೆ ಮಾಡಿದರು.

ಜಾಹ್ನವಿಗೆ ಆದಾಗಲೇ ಎಂಟು ತುಂಬುತ್ತಿದೆ. 'ಅಷ್ಟವರ್ಷಾದ್ ಭವೇತ್ ಕನ್ಯಾ' ಎಂದು ಹೇಳಿದಂತೆ ಎಂಟಕ್ಕೇ ತಾಳಿ ಬಿದ್ದುಬಿಡಬೇಕು ಸಂಪ್ರದಾಯಸ್ಥ ಹೆಣ್ಣಿನ ಕತ್ತಿಗೆ.

"ಹುಡುಗ ಹ್ಯಾಂಗಿದ್ದ, ಮನೆತನ ಹ್ಯಾಂಗಿತ್ತು?" ನಡೆನಡೆದು ಸುಸ್ತಾಗಿ ಕಾಲುಚಾಚಿ ಗೋಡೆಗೊರಗಿಕೊಂಡು ಕುಳಿತು, ಓಲಿಬೀಸಣಿಗೆಯಿಂದ ಗಾಳಿ ಹಾಕಿಕೊಳ್ಳುತ್ತಿದ್ದ ಗಂಡನ ಕುರುಚಲು ಬಿಳಿಗಡ್ಡ, ಕೆದರಿದ ಕೂದಲು, ಸದಾ ಬೀಡ ಜಗಿದು ಹಳದಿ ಬಣ್ಣಕ್ಕೆ ತಿರುಗಿದ ಹಲ್ಲುಗಳನ್ನೇ ನೋಡುತ್ತ ಗಂಡನನ್ನು ಕೇಳಿದರು ಸೀತಾಲಕ್ಷ್ಮಿ. ಅವರ ಮಾತುಗಳು ಒಳಗೆ ಸ್ನೇಹಿತೆಯೊಡನೆ ಚನ್ನಮಣೆಯಾಡುತ್ತಿದ್ದ ಜಾಹ್ನವಿಯ ಕಿವಿಗೆ ಬೀಳದಿರಲಿಲ್ಲ.

"ದೇವಸ್ಥಾನದ ಆಸ್ತಿ ಭರ್ತಿ ಇತ್ತು. ಅಪ್ಪನ ಹೆಸರು ಶಂಕರಯ್ಯ, ಅಮ್ಮ ಮೂಕಾಂಬಿಕೆ. ಪೌರೋಹಿತ್ಯ, ದೇವಾಲಯದ ಅರ್ಚನೆ ವೃತ್ತಿ ಅಪ್ಪಂಗೆ ಇದ್ರು ಗಬ್ಬೂರಿನಲ್ಲಿ ಸುಮಾರಿಗೆ ಅಡ್ಡಿಲ್ಲೆ ಅಂಬ ಕುಳ." ಪದ್ಮನಾಭಯ್ಯ ಹೇಳಿದರು.

"ಹುಡುಗನ್ನ ಕಂಡ್ರ್ಯಾ?"

"ಹುಂ, ಕಂಡೆ. ಬೈಳ್ಳಗೆ ಉದ್ದಕ್ಕಿದ್ದ. ಹದ್ನೇಳು ವರ್ಷ. ಮುಂದಿನ ಎರಡ್ ಹಲ್ ಬಿದ್ಹೋಯಿತ್ತು. ರುದ್ರ, ಚಮೆ, ಪವಮಾನ ಎಲ್ಲ ಬತ್ತು. ಅಮರಕೋಶ ಸತೇ ಕಲ್ತಿದ್ದ ಅಂಬ್ರು." ಪದ್ಮನಾಭಯ್ಯ ವಿವರಿಸಿದರು.

ಮನೆಯ ಏಕೈಕ ಸಂತಾನವಾಗಿದ್ದ ಜಾಹ್ನವಿಗೆ ಮದುವೆ ಎಂದರೇನು ಎಂಬುದು ಸರಿಯಾಗಿ ತಿಳಿದಿಲ್ಲ. ಅದೊಂದು ಗದ್ದಲ, ಗೌಜಿ, ವಾದ್ಯದ, ಸಿಹಿತಿಂಡಿಗಳ ಸಂಭ್ರಮ ಎಂದು ಗೊತ್ತಷ್ಟೇ. ಈಗ ತನಗೂ ಮದುವೆ.

ತನ್ನ ಮಗಳಿಗೆ ವರಾನ್ವೇಷಣೆಯೊಂದು ಶ್ರಮವಾಗದಂತೆ ನೋಡಿಕೊಳ್ಳಲು ಆರಂಭದಿಂದಲೇ ಬೇಕಾದ ಎಲ್ಲ ಶ್ರಮವನ್ನು ತೆಗೆದುಕೊಂಡಿದ್ದರು ಸೀತಾಲಕ್ಷ್ಮಿ. ಹಾಡು, ಹಸೆ ರಂಗೋಲಿಗಳನ್ನೆಲ್ಲ ಮಗಳಿಗೆ ಕಲಿಸಿದ್ದರು. ಮಡಿ, ಮೈಲಿಗೆ ಬಳಸುವ ಕ್ರಮ, ಪೂಜೆಗೆ ಅಣಿಮಾಡುವ ರೀತಿ

ಮೃದು ಚುಂಬನ

ಮುಂಜಾವಿನಲ್ಲಿ ಗರಿಕೆಯ
ಮೇಲೆ ಪವಡಿಸಿರುವ
ಮಂಜು ಮುತ್ತುಗಳಂತೆ
ಗೆಳೆಯ
ನಿನ್ನ ಚುಂಬನದಲ್ಲಿದೆ
ನಯುಗಾರಿಕೆಯ
ಕುಸುರಿ ಕಲೆ.

— ಕಾಪು



ಇವೆಲ್ಲವುದರಲ್ಲೂ ಜಾಹ್ನವಿ ಜಾಣೆ.

ಊಟಕ್ಕೆ ಉಪ್ಪು ಬಡಿಸಲು ಹೇಳಿಯೋ, ವೀಳ್ಯಕ್ಕೆ ಸುಣ್ಣ ತರಲು ಹೇಳಿಯೋ ಕನ್ಯೆ ಎಷ್ಟು ಮಟ್ಟಿಗೆ ಮಿತಜೀವನ ನಡೆಸಿಯಾಳು ಎಂದು ಪರೀಕ್ಷಿಸುವುದು ಅಲ್ಲಿನ ಕ್ರಮ. ಬೇಕಾದ್ದಕ್ಕಿಂತ ಹೆಚ್ಚು ಉಪ್ಪು ಬಡಿಸಿದ್ದರೆ ಅಥವಾ ಸುಣ್ಣ ತಂದರೆ ಅವಳು ದುಂದುಗಾರಿಕೆ ಮಾಡುವವಳು ಎಂದು ನಿರ್ಣಯಿಸುತ್ತಿದ್ದರು.

ಅಡಿಕೆ ಹೋಳನ್ನು ಬಾಯಿಗೆ ಹಾಕಿಕೊಂಡು, ವೀಳ್ಯದೆಲೆಯ ತೊಟ್ಟು ತೆಗೆದು ಕೆನ್ನೆಗಂಟಿಸಿಕೊಂಡು ಪದ್ಮನಾಭಯ್ಯ ಹೆಂಡತಿಗೆಂದರು. "ನಾಡಿದು ಶನಿವಾರ ಬತ್ತರು." ಬಾಯಲ್ಲಿದ್ದ ಅಡಿಕೆ ನಾಲಿಗೆಯ ಚಲನೆಗೆ ಅಡ್ಡಿಯನ್ನುಂಟುಮಾಡುತ್ತಿತ್ತು.

ತನ್ನ ಮಗಳಿಗೆ ಕಂಕಣಬಲ ಕೂಡಿಬಂದರೆ ಎಷ್ಟೋ ಹಗುರಾಗುತ್ತದೆ ಎಂದುಕೊಂಡರು ಸೀತಾಲಕ್ಷ್ಮಮ್ಮ. ಅವರು ಅಂದರೆ ಗಂಡಿನ ಕಡೆಯವರು ಬರುವಾಗ ಮನೆಯೊಂದಿಷ್ಟು ಲಕ್ಷಣವಾಗಿರಬೇಕು. ಕೂಡಲೇ ಅವರಿಗೆ ಮನೆಯ ಪಡಸಾಲೆಯಲ್ಲಿ ಗಲೀಜು ಕಾಣಿಸಿಕೊಂಡಿತು.

ಜೊತೆಗೆ ನಾಳೆ ಮದಿಯಾಗಿ ಸಂಸಾರ ನಡೆಸಬೇಕಾದ ಮಗಳು ಬೇಜವಾಬ್ದಾರಿಯಿಂದ ಚೆನ್ನಮಣೆಯಾಡುವುದು ಸಮಂಜಸವಲ್ಲವೆನ್ನಿಸಿ, ಅರ್ಧ ಪ್ರೀತಿ ಅರ್ಧ ಆಜ್ಞೆಯ ದನಿಯಲ್ಲಿ ಕೂಗಿದರು. "ಜಾನಿ ಎಂತ ಆಡುದು, ಬಾ ಇಲ್ಲಿ."

ಕಾಲಿನ ಗೆಜ್ಜೆಯ ಸದ್ದು ಮಾಡುತ್ತ, ಜಾನಿ ಜಿಂಕೆಯಂತೆ ಕುಣಿಯುತ್ತ ಬಂದಳು. ಮನ್ನೆ ಮೊನ್ನೆ ಗೇಣುದ್ದ ಇದ್ದ ಇವಳು ಎಷ್ಟು ಬೇಗ ಬೆಳೆದುಬಿಟ್ಟಿದ್ದಾಳೆ. ನಾಳೆ ಮದುವೆಯಾಗಿ ಗಂಡನ ಮನೆ ಸೇರಿದರೆ ವರ್ಷದಲ್ಲೇ ಕೈಗೊಂದು ಕೂಸು ಬರುತ್ತದೆ. ಎಷ್ಟು ಬೇಗ ದಿನಗಳು ಮುಂದೆ ಸಾಗುತ್ತವೆ. ನಾನು ಅಜ್ಜಿಯಾಗಿ ಬಿಡುತ್ತೇನೆ. ಸೀತಾಲಕ್ಷ್ಮಮ್ಮ ಯೋಚಿಸುತ್ತಿದ್ದರು.

ಮದುವೆ ಎಂಬ ಶಬ್ದ ಕೇಳುತ್ತಲೇ ಎಲ್ಲಿಲ್ಲದ ನಾಚಿಕೆ ಜಾಹ್ನವಿಯ ಮೈ ತುಂಬಿ ಬಂದಿತು. ತಾಯಿಯ ಅಣತಿಯಂತೆ ಹಿಡಿಸೂಡಿ (ಪೊರಕೆ) ಹಿಡಿದುಕೊಂಡು ನೆಲ ಗುಡಿಸತೊಡಗಿದಳು.

ಬಾಯಿಯ ತಾಂಬೂಲವನ್ನು ಮನೆಯೆದುರಿನ ತೆಂಗಿನ ಮರದ ಬುಡಕ್ಕೆ ಸಿಂಚಿಸಿ ಪದ್ಮನಾಭಯ್ಯ ಹೇಳಿದರು. "ಇವತ್ತಿಂದ ಅವಳು ಆಟಗೀಟಕ್ಕೆ ಹೋಪುದು ಬ್ಯಾಡ. ಹಾಡು,

ಹಸೆ, ದೇವರನಾಮ ಕಲಿಸಿಕೊಡು. ಆದ್ರೆ ಈ ಬೇಸಿಗೇಲೇ ವಾದ್ಯ ಊದಿಸಿ ಮದ್ವೆ ಹುಡಿಹಾರಿಸಿ ಬಿಡುವ.''

ಜಾಹ್ನವಿ ತನ್ನ ಬಾಲ್ಯದ ಸ್ವಾತಂತ್ರ್ಯವನ್ನು ಅಂದಿನಿಂದಲೇ ಕಳೆದುಕೊಂಡಳು. ನಿಂತಲ್ಲಿ ಕುಂತಲ್ಲಿ ಗಂಡನೊಡನೆ, ಅವನ ಮನೆಯವರೊಡನೆ ಹೇಗೆ ನಡೆದುಕೊಳ್ಳಬೇಕು, ಹೇಗೆ ವರ್ತಿಸಬೇಕು, ಹೇಗೆ ಅವರ ಮನ ತೃಪ್ತಿಗೊಳಿಸಬೇಕು ಮುಂತಾದ ವಿಷಯಗಳ ಬಗ್ಗೆ ಜಾಹ್ನವಿಗೆ ಅವರ ತಾಯಿ ಉಪದೇಶ ನೀಡತೊಡಗಿದರು. ಪತಿಯೇ ಪ್ರತ್ಯಕ್ಷ ದೈವ, ನಮ್ಮ ಪುರಾಣದ ಮಹಾಸತಿಯರಾದ ಸಾವಿತ್ರಿ, ಅನಸೂಯ ಇವರೆಲ್ಲ ಏನೇನು ಮಾಡಿದರು. ಅವರನ್ನು ಭಾರತೀಯ ಸ್ತ್ರೀಯರು ಹೇಗೆ ಯಥಾವತ್ತಾಗಿ ಅನುಸರಿಸಬೇಕು ಎಂದೆಲ್ಲ ಸೀತಾಲಕ್ಷ್ಮಮ್ಮ ಹೇಳಿದ್ದು ಗ್ರಾಹ್ಯವೆನ್ನಿಸಲಿಲ್ಲ ಜಾಹ್ನವಿಗೆ. ಆದರೆ ಧಿಕ್ಕರಿಸುವ ಧೈರ್ಯ ಸಾಲದೆ ಸುಮ್ಮನೆ ಹೂಂ ಹೂಂ ಎಂದಳು.

ಶನಿವಾರವೂ ಬಂತು. ಸೀತಾಲಕ್ಷ್ಮಮ್ಮ ಮಗಳನ್ನು ಸಿಂಗರಿಸಿ, ಗಂಡಿನ ಕಡೆಯವರೆದುರು ಕುಳ್ಳಿರಿಸಿದರು. ಮುದುರಿಕೊಂಡೇ ಕುಳಿತುಕೊಂಡು ತನ್ನ ಕಾಲ ಹೆಬ್ಬೆರಳನ್ನೇ ನೋಡಿಕೊಳ್ಳುತ್ತ ದೇವರ ನಾಮವೊಂದನ್ನು ಹಾಡಿದಳು ಅವಳು.

ಅಂದೂ ಅವಳು ಗಂಡನ್ನು ತಲೆಯೆತ್ತಿ ನೋಡಲಿಲ್ಲ. ಮದುವೆಯ ದಿನವೂ ನೋಡಲಿಲ್ಲ. ಮದುವೆಯಾಗಿ ಆರು ವರ್ಷಗಳತನಕವೂ ನೋಡಲಿಲ್ಲ. ಹಾಗಾಗಿ ಅವಳ ಕಲ್ಪನೆಯ ಪತಿರಾಯನ ರೂಪ ಹಾಗೇ ಉಳಿಯಿತು.

ಮದುವೆಯೆನ್ನುತ್ತಲೇ ಕೆಲ ದೃಶ್ಯಗಳು ಅಸ್ಪಷ್ಟವಾಗಿ ಅವಳ ನೆನಪಲ್ಲಿ ಮೂಡುತ್ತವೆ.

ಜಗಜಗಿಸುವ ಬಣ್ಣದ ಬೇಗಡೆಯಿಂದ ಶೃಂಗರಿಸಲ್ಪಟ್ಟ ಚಪ್ಪರ, ಅದಕ್ಕೆ ಕಟ್ಟಿದ ಮಲ್ಲಿಗೆ ಮಾಲೆ, ಅದರಲ್ಲಿ ಸಾಕಷ್ಟು ಹೊಗೆ ಉಗುಳುವ ಅಗ್ನಿ, ಅದರ ಹೊಗೆಯಲ್ಲಿ ಮೂಗಲ್ಲಿ ನೀರು ಸುರಿಸುತ್ತ ಉರಿಯುವ ಕಣ್ಣನ್ನು ತಿಕ್ಕಿಕೊಳ್ಳುತ್ತ ಇದ್ದ ಜಾಹ್ನವಿಯ ಕತ್ತಿಗೆ ಭೋಜ ಮಾಣಿ ತಾಳಿ ಬಿಗಿದದ್ದು.

ಮದುವೆಗೆ ತಿಂಗಳಿರುವಾಗಲೇ ಹತ್ತಿರದ ಬಂಧುಗಳೆಲ್ಲ ಸೀತಮ್ಮನವರ ಮನೆಯಲ್ಲಿ ಠಿಕಾಣಿ ಹೂಡಿದ್ದರು. ದಿನಂಪ್ರತಿ ಜಾಹ್ನವಿಗೆ ಎಣ್ಣೆನೀರು ಸ್ನಾನ. ಮೈಗೆಲ್ಲ ಅರಿಶಿನ ಬಳಿಯುತ್ತಿದ್ದರು. ಸೀಗೆಪುಡಿ ನೋಳಿಗಳಿಂದ ಅವಳ ನೀಳಕೇಶಕ್ಕೆ ವಿಶೇಷ ಆರೈಕೆಯ ಅಭ್ಯಂಜನ. ಮತ್ತೆ ಮನೆಯಲ್ಲಿ ಗಡಿಬಿಡಿ. ಹಪ್ಪಳ ಸಂಡಿಗೆ ಮಾಡಿ ಬಿಸಿಲಿನಲ್ಲಿ ಒಣಗಿಸುವುದು, ಮನೆಗೆಲ್ಲ ಸುಣ್ಣಬಣ್ಣ ಬಳಿಯುವುದು, ನೆಲಕ್ಕೆ ಹೊಸ ಮಣ್ಣು ಬಳಿದು, ನುಣುಪಾದ ಕಲ್ಲುಗಳಿಂದ ಹೊಳಪು ಬರುವಂತೆ ತಿಕ್ಕುವುದು, ಎದುರಿನ ಅಂಗಳದಲ್ಲಿ ದೊಡ್ಡ ಚಪ್ಪರ ಏರಿಸುವುದು. ಒಂದೇ ಎರಡೇ ಎಲ್ಲರೂ ಒಂದು ವಿಧದ ಸಂಭ್ರಮದಿಂದ ದಣಿವಿನ ಪರಿವೆಯೇ ಇಲ್ಲದೆ ತನ್ನ ವಿವಾಹಕ್ಕಾಗಿ ಶ್ರಮಿಸುವುದನ್ನು ಕಂಡಾಗಲೆಲ್ಲ ಮದುವೆಯೆಂದರೆ ಅಪರಿಚಿತ ಗಂಡೊಬ್ಬನ ಮನೆಗೆ ಹೆಣ್ಣನ್ನು ಕಳುಹಿಸುವ ಕ್ರಿಯೆ ಮಾತ್ರವಲ್ಲ, ಇನ್ನೇನೋ ಇದೆ. ಇಲ್ಲವಾದರೆ ಹೆಣ್ಣಿಗೇ ಹೆಣ್ಣನ್ನು ಲಗ್ನ ಮಾಡಬಹುದಿತ್ತು ಎಂದೆಲ್ಲ ಜಾಹ್ನವಿ ಯೋಚಿಸಿದರೂ ಇರುವುದು 'ಇನ್ನೇನು' ಎಂಬ ಪ್ರಶ್ನೆಗೆ ಅವಳಿಗೆ ಉತ್ತರ ಸಿಗಲಿಲ್ಲ. ಗೋದೂಳಿಯ ಲಗ್ನ. ಜಗಜಗಿಸುವ ಪೆಟ್ರೋಮ್ಯಾಕ್ಸ್ ಬೆಳಕು ಇಡೀ ಚಪ್ಪರನ್ನು ತುಂಬಿತ್ತು. ನೆರದ ಬಂಧುಗಳ, ಇಷ್ಟರ

ಮನುಷ್ಯನ ಆಶೆಗಳಿಗೆ ಎಲ್ಲೆಯೇ ಇಲ್ಲ. ಹಾಗೆಯೇ ಆತನ ಸಾಧನೆಗಳಿಗೂ ಎಲ್ಲೆಯೆಂಬುದಿಲ್ಲ. —ಮ್ಯಾಕ್ಸಿಂ ಗೋರ್ಕಿ

ಒಳ್ಳೆಯ ಕಾರ್ಯಗಳಿಗೆ ತಕ್ಕ ಉತ್ತಮ ಫಲಗಳು ಕಾದಿರುತ್ತವೆ. ಅವು ಸ್ವಲ್ಪ ನಿಧಾನವಾಗಿ ಬರಬಹುದು. ಆದರೆ ಆ ಉತ್ತಮ ಫಲಗಳು ಬಂದೆ ಬರುತ್ತವೆಂಬುದಂತೂ ನಿಶ್ಚಿತ.

– ಕಾವೇರೀವ್

ಸಂಗ್ರಹ : **ಸಂಪಿಗೆ ಉಮಾಶಂಕರ್**



ಗಿಜಿಗಿಜಿ ಗುಜುಗುಜು, ಅವರಿಗೆಲ್ಲ ಪಾನಕ ಅದೂ ನಿಂಬೆಹಣ್ಣಿನದು.

ಕೆಲವೇ ದಶಕಗಳ ಹಿಂದೆ ಅತಿಥಿಗಳಿಗೆ ಲಿಂಬೆಹಣ್ಣಿನ ಪಾನಕ ಕೊಡುವುದು ದಕ್ಷಿಣ ಕನ್ನಡದ ಹಳ್ಳಿಗಳಲ್ಲಿ ಪ್ರತಿಷ್ಠೆಯ ಸಂಕೇತವಾಗಿತ್ತು. "ವಂಡಾರು ಕಂಬಳದಲ್ಲಿ ನಿಂಬೆಹಣ್ಣಿನ ಪಾನಕ ಕುಡಿದೆ'' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವವರೂ ಇದ್ದರು.

ಇನ್ನೂ ಗಂಡಿನವರ ದಿಬ್ಬಣ ಬಂದಿಲ್ಲ ಎಂದು ಕತ್ತು ಉದ್ದಮಾಡಿ ಕಾಯುತ್ತಿದ್ದವರನ್ನು ಗರ್ನಾಲಿನ ಶಬ್ದ ಎಚ್ಚರಿಸಿತು. ಹೊಳೆಯಾಚೆಯ ಗುಡ್ಡದ ಮೇಲೆ ಕಮಾನು ಕಟ್ಟಿದ ಎತ್ತಿನ ಗಾಡಿ ಬರುತ್ತಿರುವ ಅಸ್ಪಷ್ಟ ದೃಶ್ಯ ಸೂಡಿ(ದೊಂದಿ)ಯ ಬೆಳಕಿನಲ್ಲಿ ಕಾಣಿಸಿತಲ್ಲದೆ ಗಾಡಿಯನ್ನೆಳೆಯುವ ಎತ್ತಿನ ಗಂಟೆಯ ಗ್ಯೆಲ್‌ಗ್ಯೆಲ್ ಶಬ್ದವೂ ಕಿವಿಯನ್ನು ತಟ್ಟಿತು. ಎಲ್ಲರಲ್ಲೂ ವಿದ್ಯುತ್ ಸಂಚಾರವಾದಂತಾಯಿತು. ಬಂದವರನ್ನು ಅರಳು ಬೀರಿ ಸ್ವಾಗತಿಸಬೇಕು. ಕಾಲಿಗೆ ನೀರಿಟ್ಟು, ದಾಹಕ್ಕೆ ಪಾನಕ ಕೊಟ್ಟು ಉಪಚರಿಸಬೇಕು.

ವಾದ್ಯದವರು ತಯಾರಾಗಿ ನಿಂತರು. ಆದರೂ ದಿಬ್ಬಣ ಬಂದು ಸೇರುವುದು ಎರಡು ಗಳಿಗೆಗಳಷ್ಟು ತಡವಾಯಿತು. ಆಗ ಈಗಿನಂತೆ ಕಾರು ಬಸ್ಸುಗಳಿರಲಿಲ್ಲ ಎತ್ತಿನ ಗಾಡಿಯೇ ಸರ್ವಶ್ರೇಷ್ಠ ವಾಹನ.

ಒಂದಿಷ್ಟು ಗರ್ನಾಲುಗಳು ಹಾರಿದವು. ವಾದ್ಯದವರು ಉಸಿರುಗಟ್ಟಿ ಊದಿದರು. ದಿಬ್ಬಣದವರು ಮನೆಯ ಅಂಗಳದಲ್ಲಿ ಕಾಲಿಟ್ಟರು. ಎಲ್ಲೆಡೆ ಗಡಿಬಿಡಿ ದಾಂ ದೂಂ. ಜಾಹ್ನವಿ ಬಾಗಿಲ ಸಂದಿಯಿಂದ ಕಣ್ಣು ತೂರಿಸಿದಳು. ಅವಳ ದೃಷ್ಟಿಯನ್ನು ತಡೆಹಿಡಿದದ್ದು ಒಂದು ವಿಶಾಲವಾದ ಬೆನ್ನು. ತಾನು ಹೊತ್ತು ತಂದಿದ್ದ ಪೆಟ್ರೋಮ್ಯಾಕ್ಸ್ ದೀಪವನ್ನು ಗೋಡೆಯ ಪಕ್ಕ ಇರಿಸಿ, ಒಂದೈದು ನಿಮಿಷ ಪಂಪ್ ಹೊಡೆದು ಕೊನೆಗೆ ತನಗೆ ಇನ್ನೇನು ಕೆಲಸ ಎಂದು ಯೋಚಿಸುತ್ತ ರುದ್ರ ನಿಂತಿದ್ದ ಬಾಗಿಲ ಹತ್ತಿರ. ಅವನು ಆಗಾಗ ಅತ್ತ ಇತ್ತ ಸರಿದಾಗ ಅವನ ಮಾಂಸಲ ಕಾಲುಗಳು, ರೋಮಭರಿತ ಎದೆ, ಬಲಿಷ್ಠ ತೋಳ ಸ್ನಾಯುಗಳು ಜಾಹ್ನವಿಗೆ ಕಾಣಿಸುತ್ತಿದ್ದವೇ ಹೊರತು ಭೋಜನಲ್ಲ. ಮದುವೆ ಎಂಬ ಶಬ್ದ ಕೇಳಿದಾಗಲೆಲ್ಲ ಈ ದೃಶ್ಯಗಳೇ ಅವಳ ನೆನಪಿನಲ್ಲಿ ಪುನಾ ಪುನಾ ಮೂಡುತ್ತವೆ.

ಉಡಿಸಿದ ಹಸಿರು ರೇಶಿಮೆ ಸೀರೆ, ಬ್ಯಾಗಡೆ ಅಂಟಸಿದ ಬಿಗಿಯಾದ ಅದೇ ಬಣ್ಣದ ರವಿಕೆ, ಜಾಹ್ನವಿಗೆ ಕಿರಿಕಿರಿ ಉಂಟುಮಾಡುತ್ತಿದ್ದವು. ಸ್ವಚ್ಛಂಧವಾಗಿ ಹಾರಾಡುತ್ತಿದ್ದ ಹಕ್ಕಿಯನ್ನು ಹಿಡಿದು ಪಂಜರದಲ್ಲಿ ಕೂಡಿಹಾಕಿದ ಅನುಭವ. ಚೌರಿ ಹಾಕಿ ನೀಳ ಜಡೆಗೆ ಮಲ್ಲಿಗೆಯ ಮೊಗ್ಗನ್ನು ಸೀತಾಲಕ್ಷ್ಮಮ್ಮ ನಾಜೂಕಾಗಿ ಕಟ್ಟಿದ್ದರು. ಅದರ ಕೊನೆಗೆ ಕೆಂಪು ಬಣ್ಣದ ರಿಬ್ಬನನ್ನು ಅರಳಿದ ಕಮಲದಂತೆ ಮಡಚಿ ಕಟ್ಟಿದ್ದರು. ಮುಖಕ್ಕೆಲ್ಲ ಅರಶಿನ ಲೇಪಿಸಿ, ಕಣ್ಣಿಗೆ ಕಾಡಿಗೆ ಬಳಿದು, ಬಲಗೆನ್ನೆಯ ಮೇಲೆ ಅದೇ ಕಾಡಿಗೆಯಿಂದ ದೃಷ್ಟಿ ಬೊಟ್ಟಿಟ್ಟು, ಅವಳ ಮುಖವನ್ನು ನೀವಳಿಸಿ, ಲಟಿಕೆ ಮುರಿದು, ನಾಯಿ ಕಣ್ಣು, ಕಾಗೆ ಕಣ್ಣು ಯಾರದ್ದೂ ದೃಷ್ಟಿಯಾಗದಿರಲಿ ನನ್ನ ಮಗಳಿಗೆ ಎಂದು ಆಶಿಸಿದ್ದರು ಜಾಹ್ನವಿಯ ತಾಯಿ.

ಬಂದವರಿಗೆ ಶರಬತ್ತು, ಹಲಸಿನ ತೊಳೆ, ಪಂಚಕಜ್ಜಾಯಗಳ ವಿತರಣೆಯಾಯಿತು. ಮಹಿಳೆಯರಿಗೆ ಹೂಗಳನ್ನು ಹಂಚಲಾಯಿತು. ಅದಲ್ಲದೆ ಪಾಕಶಾಲೆಯಿಂದ ಕಾಯಿ ಹೋಳಿಗೆಯ ವಾಸನೆ ಅಲ್ಲೆಲ್ಲ ಹರಡಿದ್ದು, ಎಷ್ಟು ಹೊತ್ತಿಗೆ ಊಟ ಹಾಕಬಹುದು ಎಂದು ಜಾಹ್ನವಿ ಸೇರಿದಂತೆ ಪ್ರತಿಯೊಬ್ಬ ಮಗುವೂ ಕಾತರದಿಂದ ಕಾಯುತ್ತಿತ್ತು.

ವಿವಾಹ ವಿಧಿಗಳೆಲ್ಲ ಬರೇ ರಗಳೆ ಎನಿಸಿದ್ದವು ಎಂಟರ ಜಾಹ್ನವಿಗೆ. ಈ ಕಡೆ ಕೂತ್ಕೋ, ಆ ಕಡೆ ಹೋಗು, ಎದ್ದು ನಿಂತ್ಕೋ, ಕಾಲಿಗೆ ನಮಸ್ಕಾರ ಮಾಡು, ಗಂಡನ ಕೈ ಹಿಡ್ಕೋ, ಅದಕ್ಕೆ ಕವಳಿಗೆ ಸೌಟನಿಂದ ನೀರು ಹಾಕು, ಇತ್ಯಾದಿ ಇತ್ಯಾದಿಗಳನ್ನೆಲ್ಲ ಬೇರೆಯವರ ಮದುವೆಯಲ್ಲಿ ನೋಡಲಿಕ್ಕೆ ಮಾತ್ರ ಚೆಂದ ಅಂದುಕೊಂಡಳು. ಹೊಟ್ಟೆ ತಾಳ ಹಾಕತೊಡಗಿ "ಅಮ್ಮಾ ಹಸಿವೂ'' ಅಂತ ಮದುವೆ ಮಂಟಪದಲ್ಲೇ ಹೇಳಿ ತಾಯಿಯಿಂದ ಒಂದು ಏಟು ತಿಂದು ಅಲ್ಲೇ ಅತ್ತಳು.

ಅಂತೂ ಇಂತೂ ಮದುವೆ ಮುಗಿಯಿತು. ಆರೇಳು ಪಲ್ಯ, ಮೂರು ಹುಳಿ, ಕನಿಷ್ಠ ಎರಡು ಪಾಯಸ. ಎರಡು ವಿಧದ ಕೋಸಂಬರಿ, ಪಚ್ಚಡಿ, ಚಟ್ನಿ ಇವೆಲ್ಲ ದಕ್ಷಿಣ ಕನ್ನಡದ ಹಳ್ಳಿಗಳ ವಿಶೇಷಗಳಲ್ಲಿ ಕಾಯಂ. ಡಿಸೆಂಬರ್‌ನಿಂದ ಜೂನ್‌ತನಕದ ದಿನಗಳಲ್ಲಿ ಕಡಿಗೆ ಪಲ್ಯ, ಗುಳ್ಳಬದನೆಯ ಕಾರ, ಹುಳಿ ಕೆಂಪು ಸೌತೆಯ ಸಿಹಿ ಹುಳಿ ಕಾಯಂ. ಸಿಹಿ ಎಂದ ಮೇಲೆ ಹೋಳಿಗೆ ಬೇಕೇ ಬೇಕು. ಅದರಲ್ಲೂ ಎಷ್ಟೊಂದು ವೈವಿಧ್ಯ. ಕಾಯಿ ಹೋಳಿಗೆ, ರವೆ ಹೋಳಿಗೆ, ಬೇಳೆಗಳ ಹೋಳಿಗೆ, ಕಾಯಿ ಹಾಲೊಂದಿಗೆ ಮೆಲ್ಲುವ ಹಿಟ್ಟಿನ ಹೋಳಿಗೆ ಒಂದೊಂದೂ ಒಂದೊಂದು ವಿಶೇಷ ಅನುಭವವನ್ನು ತರುತ್ತವೆ.

ಜಾಹ್ನವಿಯ ದುರ್ದಿನಗಳು ಅಂದಿನಿಂದ ಪ್ರಾರಂಭವಾದವು. ಅವಳ ಮೇಲೆ ನಿರಂತರವಾಗಿ ಉಪದೇಶಗಳ ಪ್ರಹಾರ, ಮನೆಯವರಿಂದ, ನೆಂಟರಿಂದ, ಹಿತಚಿಂತಕರೆಂದು ಕರೆದುಕೊಳ್ಳುವವರಿಂದ. ಇದು ತಪ್ಪು, ಇದು ಸರಿಯಲ್ಲ, ಹೀಗಿರಬಾರದು, ಹಾಗೆ ಮಾಡುವುದು ಸದ್ಗೃಹಿಣಿಯ ಲಕ್ಷಣವಲ್ಲ ಇತ್ಯಾದಿ.

ಮತ್ತೆ ಐದು ವರ್ಷಗಳಾದ ಮೇಲೆ ಆಕೆಯ ಮೈನೆರೆದಳು. ಪತಿದೇವರ ಮನೆಗೆ ಟ್ರಂಕಿನೊಂದಿಗೆ ಸೇರಬೇಕಾಯಿತು.

ಅದೇ ಮೊದಲ ಬಾರಿಗೆ ಜಾಹ್ನವಿ ತನ್ನ ಗಂಡನ ಮುಖ ನೋಡಿದ್ದು, ಜಾಂಟಿಕಾಲು ಜಪ್ಪಣ್ಣ ಎನ್ನುವಂತೆ ಉದ್ದುದ್ದದ ನುಣುಪಾದ ಬಿಳಿಯ ಕೈ ಕಾಲುಗಳು. ಒಂದೇ ಒಂದು

"ಸುಂದರವಾದ ಈ ನಾಯಿಯ ಬೆಲೆ ಎಷ್ಟು?"

"ನೂರಿಪ್ಪತ್ತು ಸ್ವಾಮಿ. ಬಹಳ ಚುರುಕಾಗಿದೆ ಈ ನಾಯಿ."

"ಹೇಗ್ಹೇಳ್ತೀರಿ?"

"ನಾನು ಇದನ್ನು ಈಗಲೇ ಹತ್ತು ಸಲ ಮಾರಿದ್ದೇನೆ. ಪ್ರತಿಸಲವೂ ಐದಾರು ತಾಸುಗಳಲ್ಲಿ ಮರಳಿ ನನ್ನೆಡೆಗೇ ಬಂದಿದೆ."

– ಶಂಕರಗೌಡ ವ್ಹಿ. ಪಾಟೀಲ



ರೋಮವೂ ಇಲ್ಲದ ಎದೆ, ಚಪ್ಪಟೆ ಮೂಗು, ಹೆಂಗಸರಂತೆ ಹಿಂದಕ್ಕೆ ಬಾಚಿ ಕಟ್ಟಿದ ಶಿಖೆ, ಬಿದ್ದ ಎದುರಿನ ಮೇಲುಸಾಲಿನ ಹಲ್ಲುಗಳಲ್ಲಿ ಒಂದು ಮಾತ್ರ ಅರ್ಧದಷ್ಟು ಬೆಳೆದಿತ್ತು. ಇವನು ತನ್ನ ಪತಿಯೇ ಎಂದು ಒಂದು ಕ್ಷಣ ಮರುಗುವಂತಾಯಿತು ಆಕೆಗೆ. ಆದರೂ ತಾಯಿ ಹೇಳಿದ ಉಪದೇಶಗಳು ಕಿವಿಯಲ್ಲಿ ಧ್ವನಿಸಿ ಅವಳ ಅನಿಸಿಕೆಗಳ ಹುಚ್ಚು ಕುದುರೆಯನ್ನು ಕಡಿವಾಣ ಹಾಕಿ ನಿಲ್ಲಿಸಿದವು.

ತಾಯಿ ಸೀತಾಲಕ್ಷ್ಮಮ್ಮ ಮಗಳಿಗೆ ಅರ್ಥವಾಗುವಂತೆ ತಿಳಿ ಹೇಳಿದ್ದರು. ಇನ್ನು ನೀನು ನಮ್ಮವಳಲ್ಲ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂದು ಹೇಳಿದ್ದಾರೆ. ಇನ್ನು ನಿನ್ನ ಬದುಕು, ಅಭ್ಯುದಯ ಎಲ್ಲವೂ ಪತಿಗೃಹದಲ್ಲಿ. ಪತಿಯೇ ಪ್ರತ್ಯಕ್ಷ ದೈವ. ಅವನನ್ನು ಸದಾ ಖುಶಿಯಾಗಿಡು.

ಅವರು ಮೂರು ಸೂತ್ರಗಳನ್ನು ಹೇಳಿದ್ದರು. ಗಂಡನಿಗೆ ಸದಾ ಸವಿಯಾದ, ಅವನಿಗೆ ಇಷ್ಟವಾದ ಅಡುಗೆ ಮಾಡಿ ಉಣಿಸು. ಆಗ ಅವನ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸರಿಯಾಗಿರುತ್ತದೆ. ಮನುಷ್ಯನೇ ಏಕೆ? ಈ ಜಗತ್ತಿನ ಎಲ್ಲ ಜೀವಿಗಳ ಹೃದಯವನ್ನು ತಲುಪುವುದಕ್ಕೆ ಸುಲಭವಾದ ದಾರಿ ನಾಲಿಗೆ.

ಎರಡನೆಯದಾಗಿ ಅವನೊಡನೆ ಸದಾ ಹಸನ್ಮುಖಿಯಾಗಿ ವರ್ತಿಸು. ಎಲ್ಲೋ ಹೋಗಿ ಯಾವುದೋ ವಿಷಯಕ್ಕೆ ತಲೆಬಿಸಿ ಮಾಡಿಕೊಂಡು ಬಂದ ಗಂಡ, ಆ ಕೋಪ ಶಮನಕ್ಕೆ ಪತ್ನಿಯನ್ನೇ ಬಲಿಪಶುವಾಗಿಸುತ್ತಾನೆ. ಆಗಲೂ ಹೆಂಡತಿಯಾದವಳು ತಾಳ್ಮೆ ಕಳೆದುಕೊಳ್ಳದಿದ್ದರೆ ಅನಂತರ ತನ್ನ ತಪ್ಪಿನ ಅರಿವಾದಾಗ, ಪತಿ ಸಂಗಾತಿಯನ್ನು ಹೆಚ್ಚು ಪ್ರೀತಿಸುತ್ತಾನೆ.

ಮೂರನೆಯದಾಗಿ ಹಾಸಿಗೆಯಲ್ಲಿ ಗಂಡನ ಇಷ್ಟಾನಿಷ್ಟಗಳನ್ನು ನಿರ್ವಂಚನೆಯಿಂದ ಪೂರೈಸು. ಇದು ಅವನು ಹೊರಗೆಲ್ಲೋ ಮೇದು ಆರೋಗ್ಯ ಕೆಡಿಸಿಕೊಳ್ಳದಂತೆ, ಕುಸಂಪರ್ಕದಿಂದ ಹಾಳಾಗದಂತೆ ಮಾಡುವ ಸರಿಯಾದ ಮಾರ್ಗ.

ಪ್ರಥಮ ರಾತ್ರಿ. ಹಸಿದ ಹುಲಿಯಂತೆ ಪತ್ನಿಯ ಮೇಲೆ ಎರಗಿದ ಭೋಜ. ಅವನ ಏದೆಗೂಡುಗಳು ಅವಳನ್ನು ಚುಚ್ಚಿದರೂ, ಬಲಿಪಶುವಂತೆ ನಿಷ್ಕ್ರಿಯಳಾಗಿ ಮಲಗಿದ್ದಳು

ಜಾಹ್ನವಿ. ಈ ಕ್ರಿಯೆಗಳ ಬಗ್ಗೆ ಅನುಭವವಿಲ್ಲದ ವಯಸ್ಸದು.

ಆದರೆ ಬರೀ ಅರ್ಧ ನಿಮಿಷ, ಭೋಜನ ಇಡೀ ಮೈ ಬೆವರಿನಿಂದ ಒದ್ದೆಯಾಯಿತು. ಮರುಕ್ಷಣವೇ ಆತ ಏದುಸಿರು ಬಿಡುತ್ತ ಹೆಣದಂತೆ ಕೆಳಗೆ ಮಲಗಿದ. ಮರುಕ್ಷಣವೇ ದೊಡ್ಡದಾಗಿ ಗೊರಕೆ ಹೊಡೆಯುತ್ತ ಇಹವನ್ನೇ ಮರೆತು ಗಾಢ ನಿದ್ರೆಯಲ್ಲಿ ಸೇರಿಹೋದ.

ಅಲ್ಲಿ ಹಚ್ಚಿದ್ದ ತುಪ್ಪದ ದೀಪ ಆರುವತನಕ ಜಾಹ್ನವಿ ಸೂರು ನೋಡುತ್ತ ಮಲಗಿದ್ದಳು. ಅನಂತರ ಕತ್ತಲೆ ಪಸರಿಸಿತು. ಅವಳ ರಾತ್ರಿಗಳಲ್ಲಿ ಕಗ್ಗತ್ತಲೆ ತುಂಬಿತ್ತು, ಅರ್ಥಹೀನವಾಗಿತ್ತು.

ಆಕೆ ಪ್ರತೀ ಸಲ ಮುಟ್ಟಾದಾಗಲೂ ಅವಳ ಅತ್ತೆ ಮೂಕಾಂಬಿಕೆ ಗೊಣಗುತ್ತಿದ್ದರು. ತನ್ನ ವಂಶ ನಿರ್ವಂಶವಾಗುತ್ತದೆ, ಈಕೆ ಬಂಜೆ ಇತ್ಯಾದಿ ಇತ್ಯಾದಿ ಕಿವಿಗೆ ಕಾದ ಎಣ್ಣೆ ಸುರಿದಂತೆ ನೋವುಣ್ಣುತ್ತಿದ್ದಳು ಜಾಹ್ನವಿ. ಏನೂ ಹೇಳಲಾರದ ಸಂಕಟ.

ಗಂಡಸರು ಹೇಗಿರಬೇಕೆಂದು ಆಕೆ ಕನಸು ಕಾಣುವಾಗಲೆಲ್ಲ ಅವಳ ಮನಸ್ಸಿನಲ್ಲಿ ಕಾಣಿಸಿಕೊಳ್ಳುವವನು ರುದ್ರಯ್ಯ. ದೇಹ ಅಂದರೆ ಹಾಗಿರಬೇಕು. ಶಕ್ತಿ ಅಂದರೆ ಅದು. ಆತ ಹೊಲದಲ್ಲಿ ಹೊದ್ದು ಮಾಡುವಾಗ, ಗೊಬ್ಬರ ಹೊರುವಾಗ, ಮರ ಹತ್ತಿ ಸೊಪ್ಪು ಕಡಿಯುವಾಗ, ಮಾಡು ಹೊದೆಸುವಾಗ ಅವನನ್ನು ನೋಡುವುದೇ ಅವಳ ಕಣ್ಣಿಗೊಂದು ಹಬ್ಬ. ಆತ ಹೂಡುವಾಗ ಎತ್ತಿಗೆ ಸುಸ್ತಾಗಿದೆ ಸಾಕು ನಿಲ್ಲಿಸೋ ಎಂದು ಹೇಳುವತನಕ ಆತ ವಿಶ್ರಾಂತಿ ಪಡೆಯುವುದಿಲ್ಲ. ಆತ ಮಾತನಾಡುವುದಿಲ್ಲ. ಮಾತನ್ನು ಕ್ರಿಯೆಗಳಲ್ಲಿಯೇ ತೋರಿಸುತ್ತಾನೆ. ಅವನು ಹತ್ತಿರ ಬಂದಾಗ ಅವನ ಮೈಯ ಬೆವರಿನ ವಾಸನೆ ಅವಳ ಮೈ ನವಿರೇಳುವಂತೆ ಮಾಡುತ್ತದೆ. ಆದರೆ ಮನಮರ್ಕಟವನ್ನು ಶ್ರಮದಿಂದ ಆಕೆ ಬಂಧಿಸಿಡುತ್ತಾಳೆ. ಇದು ತಾನು ಪಡೆದ ಬಂದದ್ದು. ತನ್ನ ಸೌಭಾಗ್ಯ ಇಷ್ಟೇ. ಬಂದದ್ದನ್ನು ಅನುಭವಿಸಬೇಕು, ಹಣೆ ಬರಹ ಎಂದು ಆಗಾಗ್ಗೆ ತಾನೇ ಹೇಳಿಕೊಂಡರೂ ಮೈ ಮೌನವಾಗಿ ಪ್ರತಿಭಟನೆ ಸಲ್ಲಿಸುತ್ತದೆ.

ರುದ್ರನನ್ನೂ ತನ್ನ ಗಂಡನನ್ನೂ ಆಗಾಗ್ಗೆ ಹೋಲಿಸುತ್ತಾಳೆ ಜಾಹ್ನವಿ. ರುದ್ರನೆದುರು ಭೋಜ ಆನೆಯೆದುರಿನ ಆಡಿನ ಮರಿ. ಆತ ಮಿತಭಾಷಿಯಾದರೆ ಭೋಜ ಸಿಡುಕ. ತನ್ನ ದೈಹಿಕ ಅಸಹಾಯಕತೆಯನ್ನು ಮುಚ್ಚಿಡಲು ವಿನಾಕಾರಣ ಪತ್ನಿಯ ಮೇಲೆ ರೇಗುತ್ತಾನೆ. ಅವಳ ನಡೆನುಡಿ, ಅಡುಗೆ, ದಪ್ಪವಾಗಿ ಬೆಳೆದ ದೇಹ ಇವುಗಳನ್ನು ಆಡಿಕೊಳ್ಳುತ್ತಾನೆ. ಲೇವಡಿ ಮಾಡುತ್ತಾನೆ. ಆ ಕೀಟಲೆಯಿಂದ ತಾನೊಬ್ಬ ಜಾಣ ಎಂದು ತೋರಿಸಿಕೊಳ್ಳುವ ವಿಕೃತ ಮನಸ್ಸು ಭೋಜನದು.

ರುದ್ರ ಪರಿಶ್ರಮಿಯಾದರೆ ಭೋಜ ಸೋಮಾರಿ. ಅವನಿಗೆ ಕೆಲಸ ಮಾಡುವುದೆಂದರೆ ಹಿಂಸೆ. ಸದಾ ಮನೆಯಲ್ಲಿಯೇ ಮಲಗಿರುತ್ತಾನೆ ಅಥವಾ ಕುಣಿದುಕೊಳ್ಳುತ್ತ ಊರೂರಿನ ಪೌರೋಹಿತ್ಯಕ್ಕೆ, ಬ್ರಾಹ್ಮಣ್ಯಕ್ಕೆ ಹೋಗುತ್ತಾನೆ. ಅವನು ಮನೆಯಲ್ಲಿ ಇಲ್ಲದಾಗಲೇ ಜಾಹ್ನವಿಗೆ ನೆಮ್ಮದಿ.

ಕಾಲ ಒಂದೇ ರೀತಿ ಇರುವುದಿಲ್ಲ. ಉಳುವವನಿಗೇ ಭೂಮಿ ಎಂಬೊಂದು ಮಸೂದೆ ರಾಜ್ಯ ವಿಧಾನಸಭೆಯಲ್ಲಿ ಪಾಸಾಯಿತು. ಗಟ್ಟಿಕುಳಗಳು ತಮ್ಮ ಒಕ್ಕಲುಗಳನ್ನು ಓಡಿಸಿಬಿಟ್ಟರು ಅಥವಾ ಧರ್ಮಸ್ಥಳದ ದೇವರ ಹೆಸರಿನಲ್ಲಿ ತಾವಿರುವ ಭೂಮಿಗೆ ತಮ್ಮದೆಂದು ಘೋಷಿಸುವುದಿಲ್ಲ ಎಂದು ಪ್ರಮಾಣ ಮಾಡಿಸಿಕೊಂಡರು. ಆದರೆ ಶಂಕರಯ್ಯನಂಥ ಬಡ ಬ್ರಾಹ್ಮಣರು ಅಷ್ಟೊಂದು



ವ್ಯವಹಾರ ಚತುರರಲ್ಲ.

ಒಂದು ಕೆಟ್ಟ ಮುಂಜಾನೆ. ಶಂಕರಯ್ಯ ಕಣ್ಣುಜ್ಜುತ್ತ 'ಕರಾರವಿಂದೇನ ಮುಖಾರದಿಂದ ಮುಖಾರವಿಂದೇ' ಎನ್ನುತ್ತ ಹೊರಬರುವಾಗ ಮನೆಯ ಬಲಮೂಲೆಯ ಗದ್ದೆಯ 'ಲೊಳೊಳೋ' ಎಂಬ ಹೊಳಲಿನ ದನಿ ಕೇಳಿ ಅಚ್ಚರಿಯಾಗಿ ಅತ್ತ ಸಾಗಿದರೆ ಯಾವನೋ ಅವ ಭೂಮಿಯಲ್ಲಿ ಹೂಡು(ಉಳು)ತ್ತಿದ್ದಾನೆ. "ಓ ಯಾವನಾ ಅಪ್ಪು, ನಮ್ಮ ಗದ್ದೇಲಿ ನೇಲ ಕಟ್ಟಿದ್ದು" ಎನ್ನುತ್ತ ದಡಬಡ ಓಡಿದರು. ಆ ಹೂಟೆಗಾರ ಇವರ ದನಿಯೇ ಕಿವಿ ಬೀಳದವನಂತೆ ಮತ್ತಷ್ಟು-ಜೋರಾಗಿ 'ಮೊಳಾ' ಎನ್ನುತ್ತ ಎತ್ತನ್ನು ಬಲಕ್ಕೆ ತಿರುಗಿಸಿದಾ ಶಂಕರಯ್ಯನವರ ಕೈಕಾಲುಗಳು ಆತಂಕದಿಂದ ಕಂಪಿಸುತ್ತಿದ್ದವು. ಅವರು ಮತ್ತೊಮ್ಮೆ ಕೂಗ ಹಾಕಿದಾಗ "ನಂಗದ್ದೆ, ನಾನ ಹೂಡ್ತೆ. ನೀವ್ಯಾರು ಕೇಂಬ್ಕೆ" ಎಂಬ ಉದ್ಧಟತನದ ಉತ್ತ ಬಂತು.

"ಅದು ದೇವ್ರ ಗದ್ದೆ. ಅವ ನಿಂಗೆ ಶಾಪ ಕೊಡ್ತ" ಎಂಬ ಪ್ರಲಾಪ ಎಚ್ಚರಿ ವ್ಯರ್ಥವಾಯಿತು.

ಕಾಲ ಹಾಳಾಗಿ ಹೋಯಿತು. ದೈವಭಕ್ತಿಯಿಲ್ಲ, ಗುರುಹಿರಿಯರಲ್ಲಿ ವಿಧೇಯತೆಯಿಲ್ಲ ಕಪಟ, ವಂಚನೆಗಳಿಗೇ ಅಭ್ಯುದಯವಾಗುತ್ತಿದೆ ಅವರು ಮರುಗಿದರು.

ಅಂದಿನಿಂದ ಶಂಕರಯ್ಯನವರ ಅವನತಿ ಪ್ರಾರಂಭವಾಗಿತು. ಅರ್ಧ ಎಕರೆಯ ಒಂದ ತೋಟ, ಹಲವಾರು ತೆಂಗಿನ ಮರಗಳು ಮಾತ್ರ ಅವರಿಗೆ ಉಳಿದು ಮನೆಯಲ್ಲಿ ಕ ತಲೆಹಾಕಿದೆ.

ಇದೇ ಸಂದರ್ಭದಲ್ಲಿಯೇ ಒಂದು ದಿನ ಶಂಕರಯ್ಯ ಮನೆಯತ್ತ "ಇವಳೇ ಓ ಇವಳೇ ಎನ್ನುತ್ತ ಓಡೋಡಿ ಬಂದವರೇ ಅಂಗಳದಲ್ಲಿಯೇ ಕುಸಿದು ಬಿದ್ದದ್ದು, ಅವರ ಬಾಯಿಂದ ಬಿ ನೊರೆ ಬಂದು ನೋಡ ನೋಡುತ್ತಿರುವಂತೆ ಅವರ ದೇಹ ನಿಶ್ಚೇಷ್ಟಿತವಾಯಿತು.

ದರಿದ್ರ ಪೀಡೆ ಮನೆಗೆ ಬಂದು ಹೀಗಾಯ್ತು ಎಂಬ ಅಭಿಪ್ರಾಯವು ಮೂಕಾಂಬಿಕೆಯ ಬಾಯಿಂದ ಹೊರಬಂತು. ಜಾಹ್ನವಿ ಒಳಗೊಳಗೇ ಮರುಗಿದಳು. ತನ್ನದಲ್ಲದ ಅಪರಾಧ ತಾನು ಹೊಣೆಯಾಗಬೇಕಾಯಿತು.

ಪತಿಯ ಅಗಲಿಕೆಯನಂತರ ಹೆಚ್ಚುಕಾಲ ಮೂಕಾಂಬಿಕೆ ಬದುಕಲಿಲ್ಲ. ಒಂದು ಮಹತ್ವ ಘಟನೆ ಅವರಿರುವಾಗಲೇ ಜಾಹ್ನವಿಯ ಜೀವನದಲ್ಲಿ ನಡೆಯಿತು.

ಭೂಮಸೂದೆಯ ಕಾನೂನು ಬಂದಾಗ, ಅದರಿಂದ ಶಂಕರಯ್ಯ ತುಂಬ ನ ಅನುಭವಿಸಿದಾಗ ತಮ್ಮಲ್ಲೇ ದುಡಿದುಕೊಂಡಿರುವ ರುದ್ರನಿಗೆ ಏಕೆ ಒಂದಿಷ್ಟು ಭೂಮಿ ವಾಸಕ್ಕೊಂದು ಮನೆ ಮಾಡಿಕೊಡಬಾರದು ಎಂದು ಶಂಕರಯ್ಯ ಯೋಚಿಸಿ ಮನೆಯ ಹಿಂದಿ ಗುಡ್ಡದಲ್ಲಿ ಒಂದಿಷ್ಟು ನೆಲವನ್ನು ಸಮತಟ್ಟಾಗಿಸಿ, ಮಣ್ಣಿನ ಗೋಡೆ ಏರಿಸಿ, ಅಡಕೆ ಮ ತುಂಡರಿಸಿ, ರೀಪು ಮಾಡಿ, ಹುಲ್ಲು ಹೊದಿಸಿ ಮನೆಯೆಂಬುದೊಂದನ್ನು ಮಾಡಿದ್ದರು. ಅದ ರುದ್ರನಿಗೆಂದೇ ಮಾಡಿದ ಮನೆಯಾದರೂ ಒಂಟಿ ಜೀವ, ಶಂಕರಯ್ಯನ ಮನೆಯ ಚಾವಡಿಯ ಮೂಲೆಯಲ್ಲೇ ಮಲಗುತ್ತಿದ್ದ ಆತ.

ಒಂದು ದಿನ ಗಬ್ಬೂರಿನ ಪೇಟೆಯಲ್ಲಿ ಯಕ್ಷಗಾನ ಪ್ರಸಂಗ 'ವಾಲಿವಧೆ' ಹೆಸರಾಂ

'ರಾಗಸಂಗಮ'

ಲಾಟರಿ ಡ್ರಾ – ೧೩೨ರ ವಿಜೇತರು

ಎಸ್. ಪುಷ್ಪ
ಸುಬ್ರಮಣ್ಯಪುರ
ಬೆಂಗಳೂರು ಜಿಲ್ಲೆ.



ಕಲಾವಿದರು ಭಾಗವಹಿಸಿದ್ದರು. ಸಂಜೆ ಆರಕ್ಕೇ ಚಂಡೆಯ ಆರ್ಭಟ ಮೈ ನವಿರೇಳಿಸುವಂತೆ ಕೇಳಿಸುತ್ತಿತ್ತು.

ದಕ್ಷಿಣ ಕನ್ನಡದ ಕಲೆ ಯಕ್ಷಗಾನ ಇಡೀರಾತ್ರಿ ನಡೆಯುತ್ತದೆ. ಅಂದು ಭೋಜ, ಮೂಕಾಂಬಿಕಮ್ಮ ಯಕ್ಷಗಾನಕ್ಕೆ ಹೊರಟರು.

ಹಾಸಿಗೆಯಲ್ಲಿ ಮಲಗಿಕೊಂಡೇ ಇದ್ದರೂ, ಚಂಡೆ ಮದ್ದಲೆಗಳ ದನಿ, ಭಾಗವತರ ಹಾಡು, ಕಲಾವಿದರ ಸಂಭಾಷಣೆಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದವು ಜಾಹ್ನವಿಗೆ. ಚಾವಡಿಯಲ್ಲಿ ಮಲಗಿದ್ದ ರುದ್ರ ಮೈಮೇಲೆ ಧ್ಯಾನವಿಲ್ಲದವರಂತೆ ನಿದ್ರಿಸುತ್ತಿದ್ದ.

ಸೆಕೆಯಿಂದಾಗಿ ಜಾಹ್ನವಿಯ ಕಣ್ಣಿಗೆ ನಿದ್ರೆ ಹತ್ತಲಿಲ್ಲ. ತನ್ನ ಬಾಳು ಹೀಗೆ ಮೂರಾಬಟ್ಟೆಯಾದುದನ್ನು ನೆನೆಸಿಕೊಳ್ಳುತ್ತ ಒಬ್ಬಳೇ ದುಃಖಿಸಿದಳು. ತನಗೊಂದು ಮಗು ಹುಟ್ಟಿದರೆ ಅದರ ಅಳು, ನಗು, ಉಚ್ಚೆ, ಹೇಲುಗಳೇ ಮನೆಯಲ್ಲೊಂದಿಷ್ಟು ಉತ್ಸಾಹವನ್ನು ಹರಡಬಹುದು ಎಂದೆನಿಸಿತು. ಬರೀ ಆಕಳಿಸುವುದಕೋಸ್ಕರ ಜೀವಿಸಿರುವುದರಲ್ಲಿ ಅರ್ಥವಿಲ್ಲ ಎನ್ನಿಸಿ ಅತ್ತೆಯ ಹಂಗಿನಿಂದ ಹೊರಬರಲು ಒಂದೇ ದಾರಿ ಎಂದುಕೊಂಡಳು.

ಆಕೆ ಸೆರಗಿನಿಂದ ಗಾಳಿ ಬೀಸಿಕೊಳ್ಳುತ್ತ ಹೊರಬಂದರು. ಸೂರ್ಪನಖಿ ತನ್ನನ್ನು ಮದುವೆಯಾಗೆಂದು ಶ್ರೀರಾಮಚಂದ್ರನಿಗೆ ದುಂಬಾಲು ಬೀಳುತ್ತಿದ್ದಾಳೆ. ಜಾಹ್ನವಿ ರುದ್ರನನ್ನು ನೋಡಿದಳು. ತಿಂಗಳ ಬೆಳಕಿನಲ್ಲಿ ಏರಿಳಿಯುತ್ತಿದ್ದ ಅವನ ರೋಮಭರಿತ ಎದೆ ಕಂಡಾಗ ಮನಸ್ಸಿನಲ್ಲಿ ಹುಚ್ಚು ವಿಕಾರಗಳು ಮೂಡಿದವು. ರಾಮಚಂದ್ರ ಲಕ್ಷ್ಮಣನನ್ನು ತೋರಿಸುತ್ತಾನೆ ಸೂರ್ಪನಖಿಗೆ. ಜಾಹ್ನವಿ ಕಂಬಕ್ಕೊರಗಿ ಕೂತು ರುದ್ರನ ಬತ್ತಲೆ ತೊಡೆಯನ್ನೇ ನೋಡಿದಳು. ಹೊದೆಸಿದ ಮಡಲಿನ ಸಂದಿಯಿಂದ ಚಂದ್ರಕಿರಣ ತೂರಿಬಂದು ಅಂಗಳದಲ್ಲಿ ರಂಗೋಲಿ ಬಿಡಿಸಿತ್ತು. ಜಾಜಿ ಹೂಗಳು, ಅರೆಬಿರಿದು ತಮ್ಮ ಸುವಾಸನೆಯನ್ನು ಗಾಳಿಯಲ್ಲಿ ಬಿಡುತ್ತಿದ್ದವು.

ಶೂರ್ಪನಖಿ ತನ್ನನ್ನು ವರಿಸುವಂತೆ ಲಕ್ಷ್ಮಣನನ್ನು ಗೋಗರೆಯುತ್ತಾಳೆ. ಅವನು

ಅಸಾಧ್ಯವೆಂದಾಗ ನಿಜರೂಪ ತೋರಿ ವಿಕಟಾಟ್ಟಹಾಸ ಮಾಡುತ್ತಾಳೆ.

ಅದೇ ಸಮಯಕ್ಕೆ ತನ್ನ ಜಲಬಾಧೆ ತೀರಿಸಿಕೊಳ್ಳಲು ರುದ್ರ ಎದ್ದ. ಎದ್ದವನೇ ಹುಲ್ಲು ಕುತ್ತ (ಬಣವೆ)ಯ ಹಿಂದೆ ಹೋದ. ರಕ್ಕಸಿಯ ಆರ್ಭಟದ ದನಿ, ರೋಷದ ಹೆಜ್ಜೆ ಇವು ಸ್ಪಷ್ಟವಾಗಿ ಕೇಳುತ್ತಿದ್ದವು. ಜಾಹ್ನವಿಗೆ ತನ್ನ ಆಸೆಯನ್ನು ಹತ್ತಿಕ್ಕಲಾಗಲಿಲ್ಲ ಬಿರಬಿರನೆ ಹೋಗಿ ಮೂತ್ರವಿಸರ್ಜನೆಗೆ ತಯಾರಾಗುತ್ತಿದ್ದ ರುದ್ರನನ್ನು ಹಿಂದಿನಿಂದ ಅಪ್ಪಿಕೊಂಡಳು.

ಈ ದೃಶ್ಯವನ್ನು ನೋಡಲಾಗದೆ ಚಂದ್ರ ಮೋಡದ ಹಿಂದೆ ಮರೆಯಾದ. ಯಾವುದೋ ಕನಸಿನ ಲೋಕದಲ್ಲಿದ್ದ ರುದ್ರ ಭಯದಿಂದ ಅಯ್ಯಯ್ಯಬ್ಬೋ ಎಂದು ಕಿರುಚಿದಾಗಲೆ ಜಾಹ್ನವಿಗೆ ವಸ್ತುಸ್ಥಿತಿಯ ಅರಿವಾಗಿದ್ದು. ಅಲ್ಲೇ ಅವನನ್ನು ಬಿಟ್ಟು ಹಲ್ಲಿನ ಬಣವೆಯ ಹಿಂದೆ ಮರೆಯಾದಳು. ಲಕ್ಷ್ಮಣ ಶೂರ್ಪನಖಿಯ ಮೂಗನ್ನು ತುಂಡರಿಸುವಾಗ ಆಕೆ ರೋದಿಸುತ್ತಿರುವುದ ಕೇಳಿಸುತ್ತಿತ್ತು.

ಅಂದು ಅಷ್ಟೇ ಆಗಿದ್ದು. ತನ್ನನ್ಯಾವುದೋ ಮೋಹಿನಿ ಆವರಿಸಿಕೊಂಡಿದೆಯೆಂದು ರುದ್ರ ಭಾವಿಸಿಕೊಂಡ. ಮೂರುದಿನ ಕನವರಿಕೆ, ಜ್ವರ.

ಮೂಕಾಂಬಿಕೆ ಮಗನಿಗೆ ಹೇಳಿದರು. "ರುದ್ರಂಗೆ ಮದುವೆ ಮಾಡು, ಸಮ ಆತ'' ಅಂತ ಅವನಿಗೆ ಲಗ್ನ ಮಾಡುವ ಜವಾಬ್ದಾರಿಯೂ ಭೋಜಯ್ಯನ ತಲೆಯ ಮೇಲೆ ಬಿತ್ತು.

* * * * *

"ಅಯ್ಯೋ ಅಯ್ಯೋ'' ಎಂದು ಕಿರುಚುವ ಸದ್ದು ಪಡಸಾಲೆಯಿಂದ ಕೇಳಿ ಜಾಹ್ನವಿ ತನ್ನ ಹಿಂದಿನ ಕಾಲದಿಂದ ಪ್ರಸಕ್ತ ಕಾಲಕ್ಕೆ ಬಂದರು.

ಯಾಂತ್ರಿಕವಾಗಿ ಭಕ್ತಿಯ ಲವಲೇಶವೂ ಇಲ್ಲದ ಹಾಗೆ ಮಂತ್ರಗಳನ್ನು ಗುಣಗುಣಿಸುತ್ತ ಪೂಜೆ ಮುಗಿಸಿದ ಭೋಜಯ್ಯ ಪ್ರದಕ್ಷಿಣೆ ನಮಸ್ಕಾರಕ್ಕಾಗಿ 'ಯಾನಿಕಾನಿಚ ಪಾಪಾನಿ' ಎಂದು ಹೇಳುತ್ತ ಏಳಲು ಪ್ರಯತ್ನಿಸಿದರೆ, ಚಟ್ಟಂಬಟ್ಟವಾಗಿದ್ದ ಕಾಲುಗಳನ್ನು ಬಿಡಿಸಲಾಗಲಿಲ್ಲ. ಅವು ಜೋಮು ಹಿಡಿದಿದ್ದವು. ಆ ಕಾಲುಗಳು ತಮ್ಮ ಆಧಿಪತ್ಯದಿಂದ ಹೊರತಾಗಿವೆಯೋ ಏನೋ ಇದೂ ಸಾವಿನ ಒಂದು ಪ್ರಕ್ರಿಯೆ ಇರಬಹುದೇನೋ ಎಂದು ಭಯವಾಗಿ ಅದು ಅಯ್ಯೋ ಅಯ್ಯೋ ಆಗಿ ಮಾರ್ಪಟ್ಟಿತು.

ಜಾಹ್ನವಿ ಗಡಿಬಿಡಿಯಿಂದ ಎದ್ದು ಪಡಸಾಲೆಗೆ ಓಡೋಡಿ ಬಂದರು. ಭೋಜಯ್ಯ ಕುಳಿತಲ್ಲಿಯೇ ಚಡಪಡಿಸುತ್ತಿದ್ದರು. ವಿಷಯ ತಿಳಿದ ಆಕೆ ಗಂಡನ ಕಡ್ಡಿಕಾಲುಗಳನ್ನು ಕೆಲಕಾಲ ತಿಕ್ಕಿದರು. ಭೋಜಯ್ಯನ ಮುಖದಲ್ಲಿ ಸ್ವಲ್ಪ ಗೆಲುವು ಬಂತು.

ಮರುಕ್ಷಣವೇ ಅವರು ಎಂದಿನ 'ಸಿಡುಕು ಭೋಜಯ್ಯ' ಆಗಿಬಿಟ್ಟರು. "ರಂಡೆ ತಿಂಡಿ ಮಾಡುದ್ ಬಿಟ್ ನಿದ್ರೆ ಮಾಡ್ತ್ಯ. ಗಂಡ ಸತ್ತೇ ಹೋಯ್ಲಿ ಅಂತ ಕಾಂತ್ಯಾ'' ಎಂದರು.

ಇಂತಹ ಮಾತುಗಳನ್ನು ಮೊದಮೊದಲು ಕೇಳುವಾಗ ಆಕೆಯ ಮನಸ್ಸಿಗೆ ಘಾಸಿಯಾಗುತ್ತಿದ್ದರೂ ಅದರ ಪುನರಾವರ್ತನೆಯಾಗತೊಡಗಿದಾಗ ಆಕೆಯಲ್ಲಿ ಅದನ್ನು ಸಹಿಸಿಕೊಳ್ಳುವ ಶಕ್ತಿ ಹುಟ್ಟಿತು. ಇಂದೂ ಕೂಡ ಏನೂ ಪ್ರತಿಕ್ರಿಯಿಸದೆ ಬಾಳೆ ಎಲೆಯ ತುಂಡು ಹಾಕಿ ಅದರ ಮೇಲೆ ಇನ್ನೂ ಹಬೆಯಾಡುವ ಅಕ್ಕಿಯ ಉಪ್ಪಿಟ್ಟನ್ನು ಹಾಕಿದರು.

ಒಂದು ತುತ್ತನ್ನು ಬಾಯಿಗೆ ಹಾಕಿಕೊಂಡು, ಮುಖ ಕಹಿ ಮಾಡಿಕೊಂಡು ಅದನ್ನು ಅಲ್ಲೇ

ಗಂಡ

ಹಗಲಿನ
ದಣಿತಕ್ಕೆ
ಇರುಳಲ್ಲಿ
ಕೂಲಿ
ಕೇಳುವ
ಚಾಣಾಕ್ಷ.

— ಎಂ. ಬಿ. ಚಂದ್ರನಾಯ್ಕ



ಉಗಿದು, "ಆಯ್ತಾ ಎಲ್ಲ ಉಪ್ಪು ಸೊರಿದು, ಇದೇನು ತಿನ್ನಾಕ ಬ್ಯಾಡದಾ? ಇಷ್ಟ್ ಸಾಮಾನು ಹಾಳ್ ಮಾಡಿದ್ಯಲೇ. ಏನು ನಿನ್ನ ಅಪ್ಪ ಕೊಡ್ತಾ್ನ? ಕತ್ತೇನ ತಂದು." ಅವರ ಮನಸ್ಸಿನಲ್ಲಿ ಒಂದು ವಿಕೃತ ಆನಂದ. ನಾನು ಹೇಳಿದ್ದನ್ನು ನಿರ್ಲಕ್ಷಿಸಿದವಳಲ್ಲವಾ ಈಗ ಅನುಭವಿಸಲಿ.

ಚಿಟಿಕೆ ಉಪ್ಪಿಟ್ಟನ್ನು ಬಾಯಿಗೆ ಹಾಕಿಕೊಂಡು, ಗಂಡ ಹೇಳಿದ್ದು ಸತ್ಯ ಎಂದು ಮನಗಂಡ ಜಾಹ್ನವಿ ನಿಜವಾಗಿಯೂ ಮರುಗಿದರು. ತನ್ನ ಪಾಕ ಪ್ರಕ್ರಿಯೆಯಲ್ಲಿ ಯಾವತ್ತೂ ವ್ಯತ್ಯಯ ಬಂದುದಿಲ್ಲ. ಎಲ್ಲವನ್ನೂ ಸರಿಯಾದ ಪ್ರಮಾಣದಲ್ಲಿ ಹಾಕಿ ಶುಚಿ ರುಚಿಯಾದ ಅಡುಗೆ ಮಾಡುವುದನ್ನು ತಾಯಿ ಸೀತಾಲಕ್ಷ್ಮಮ್ಮ ಹೇಳಿಕೊಟ್ಟಿದ್ದರು.

ಕೂಡಲೇ ಎದ್ದು ಡಬ್ಬದಿಂದ ಒಂದಷ್ಟು ಅರಳು (ಬತ್ತದ ಪಾಪ್‌ಕಾರ್ನ್) ತೆಗೆದು ಅದಕ್ಕೊಂದಿಷ್ಟು ಮೊಸರು ಹಾಕಿ, ಒಂದು ಹೋಳು ಮಿಡಿ ಉಪ್ಪಿನಕಾಯಿಯೊಂದಿಗೆ ಗಂಡನಿಗೆ ಕೊಟ್ಟಳು. ತಾನು ಮಾಡಿದ ಅಪರಾಧಕ್ಕೆ ತಾನು ಶಿಕ್ಷೆ ಅನುಭವಿಸಲೇಬೇಕೆಂದು ಮನಸ್ಸನ್ನು ಕಲ್ಲು ಮಾಡಿಕೊಂಡು ಕಹಿಯಾದ ಉಪ್ಪಿಟ್ಟನ್ನು ನುಂಗತೊಡಗಿದರು.

ಪೌರೋಹಿತ್ಯಾದಿ ಕೆಲಸಗಳಿಲ್ಲದಿದ್ದರೆ, ಬೆಳಗಿನ ಉಪಾಹಾರದನಂತರ ಪ್ಯಾಟೆಗೆ ಹೋಗುವುದು ಭೋಜಯ್ಯನ ದಿನಚರಿ. ಯಾವುದಾದರೂ ಅಂಗಡಿ ಕಟ್ಟೆಯೆದುರು ಹುಡಿ ಪಟ್ಟಾಂಗ ಹೊಡೆದು ಮಧ್ಯಾಹ್ನದ ಊಟಕ್ಕೆ ಸರಿಯಾಗಿ ಮನೆಗೆ ಹಾಜರಾಗುತ್ತಿದ್ದರು. ಮನೆಯ, ತೋಟದ ಕೆಲಸಗಳನ್ನೆಲ್ಲ ಜಾಹ್ನವಿಯೇ ನಿಭಾಯಿಸಿಕೊಂಡು ಹೋಗುತ್ತಿದ್ದರು. ಯಾಕೆಂದರೆ ಗಂಡ ಶತಸೋಮಾರಿ.

ಇಂದೂ ಭೋಜಯ್ಯನವರ ಸವಾರಿ ಪ್ಯಾಟೆಗೆ ಹೊರಟಿತು.

ಬತ್ತದ ಗಿಡಗಳು, ತೆಂಗಿನ ಸಸಿಗಳು, ಗದ್ದೆಯ ಅಂಚು, ಸಂಕ ಎಲ್ಲವೂ ಒಂದೇ ಬಣ್ಣ ಬಳಿದುಕೊಂಡಿದ್ದವು. ಅದು ಕೆಂಪು ಕೆಸರಿನ ಕೆಂಪು. ಮಳೆ ವಿಶ್ರಾಂತಿ ಪಡೆದಿದ್ದರೂ ತೋಡಿನಲ್ಲಿ ನೀರು ಜುಳುಜುಳುನೆ ಹರಿಯುತ್ತಿತ್ತು. ನೀರಿನೊಂದಿಗೆ ತೇಲಿಬಂದು ನೀರು ಮುಂದೆ ಹೋದಾಗ, ಹೊಂಡಗಳ ನೀರು ಬತ್ತಿದಾಗ ಅಲ್ಲಿದ್ದ ಮೀನುಗಳು ವಿಲವಿಲ ಒದ್ದಾಡಿ ಸಾಯುತ್ತಿದ್ದವು.

ಉದ್ದದ ಹೆಜ್ಜೆಗಳನ್ನು ಹಾಕಿಕೊಂಡು, ಕೈಯನ್ನು ಉದ್ದವಾಗಿ ಬೀಸಿಕೊಂಡು ಬಿರಬಿರನೆ ನಡೆಯುವುದು ಭೋಜಯ್ಯನ ಅಭ್ಯಾಸ. ದಪ್ಪ ದೇಹದ ಜಾಹ್ನವಿ ಅವರ ಹಿಂದೆ ಹೋಗಲಾರದೇ ಏದುಸಿರು ಬಿಡುತ್ತ, ಓಡುತ್ತ ಪರದಾಡುತ್ತಿದ್ದರು. ಅವಳಿಗಿಂತ ನೂರಡಿ ಮುಂದೆ ಸಾಗಿ ದರೆಗೆ ಕಾಲು ಕೊಟ್ಟೋ ಮರವೊಂದಕ್ಕೆ ಒರಗಿಕೊಂಡೋ ನಿಂತು ಮುಂದಿನ ಒಂದೂವರೆ ಹಲ್ಲುಗಳ ನಡುವೆ ನಾಲಗೆ ಸಿಗಿಸಿ ಆನಂದಪಡುತ್ತ ಕಷ್ಟದಿಂದ ಬರುತ್ತಿರುವ ಹೆಂಡತಿಯನ್ನು ಕೀಟಲೆಯ ದೃಷ್ಟಿಯಿಂದ ನೋಡುವುದು ಭೋಜಯ್ಯನ ಕ್ರಮ. ಆಕೆ ಸನಿಹ ಬರುತ್ತಲೇ ಮತ್ತೆ ಅವರಿಂದ ದಾಪುಗಾಲು ಹಾಕುವ ಕ್ರಿಯೆಯ ಪುನರಾರಂಭ.

ಭೋಜಯ್ಯನದು ಸದಾ ಗಡಿಬಿಡಿಯ ಪ್ರವೃತ್ತಿ. ನಡೆಯುವಾಗ, ತಿನ್ನುವಾಗ, ಮಾತಾಡುವಾಗ ಅವರದು ಮಾಮೂಲಿಗಿಂತ ಹೆಚ್ಚು ವೇಗ. ಹಲ್ಲುಗಳ ಬಳಕೆಯೇ ಮಾಡದೆ ಗುಳುಂ ಎಂದು ಆಹಾರ ನುಂಗಿ ಸದಾ ಹೊಟ್ಟೆನೋವು ಎಂದು ನರಳುತ್ತ ಅದಕ್ಕೆ ಹೆಂಡತಿಯೇ ಕಾರಣ ಎಂದು ದೂಷಿಸುತ್ತಿದ್ದರು.

ಆದರೆ ಜಾಹ್ನವಿಯದು ತದ್ವಿರುದ್ಧ. ಹಿಂದೂಸ್ತಾನಿ ಗಾಯಕರು ಆಲಾಪ ಹಾಕಿದಂತೆ ನಿಧಾನದ ಮಾತು. ವಿಳಂಬವೂ ಅಲ್ಲದ ಅವಸರವೂ ಅಲ್ಲದ ಚೊಕ್ಕ ಕೆಲಸ. ಆದರೆ ಅವರ ದಡೂತಿ ದೇಹ ಗಂಡನಿಗೆ ಸದಾ ಕೀಟಲೆಯ ವಿಷಯ. ಹಾಗೆಂದು ತನ್ನ ಕಡ್ಡಿದೇಹವನ್ನು ಸಮರ್ಥಿಸಿಕೊಳ್ಳುವ, ಅದರ ಉಪಯುಕ್ತತೆಗಳ ಬಗ್ಗೆ ಕೊಚ್ಚಿಕೊಳ್ಳುವ ದುರ್ಗುಣ.

ತಾನು ಮೈ ಇಳಿಸಿಕೊಳ್ಳಬೇಕೆಂದು ಏನೆಲ್ಲ ಮಾಡಲಿಲ್ಲ ಜಾಹ್ನವಿ. ಹಾಲು, ತುಪ್ಪ ಮೊಸರುಗಳನ್ನು ವರ್ಜಿಸಿದರು. ಒಂದು ಹೊತ್ತು ಊಟ ಬಿಟ್ಟರು. ಆಸ್ತಮಾ ಇರುವವರಿಗೆ ಮೈ ಬರುವುದಿಲ್ಲವೆಂದು ಕೇಳಿ ಆ ರೋಗ ತನಗೆ ಬರಲಿ ದೇವರೇ ಎಂದು ಹರಕೆ ಹೊತ್ತರು. ಮಹಾಲಿಂಗೇಶ್ವರ ಅಸ್ತು ಎನ್ನಲಿಲ್ಲ. ಅವರ ದೇಹವಿಳಿಯದೇ ಆರೋಗ್ಯ ಕೆಟ್ಟಿತು ಅಷ್ಟೇ.

ಸಂಕದ ಹತ್ತಿರ ಬಂದು ನಿಂತ ಭೋಜಯ್ಯ ಒಂದು ಕ್ಷಣ ಅಲ್ಲೇ ನಿಂತರು. ಎರಡು ಅಡಿಕೆ ಮರಗಳನ್ನು ಜೋಡಿಸಿ ಕಟ್ಟಿ ತೋಡಿನ ಆಚೆಯಿಂದ ಈಚೆಗೆ ಹಾಸಿದ್ದರು. ಕೆಳಗೆ ಜುಳುಜುಳು ಸದ್ದು ಮಾಡುತ್ತ ಕೆಂಪುನೀರು ರಭಸದಿಂದ ಹರಿಯುತ್ತಿತ್ತು. ಆಡುಸೋಗೆ, ಸೂರಳಿ ಗಿಡಗಳು ಆ ನೀರಿನ ವೇಗವನ್ನು ಎದುರಿಸಲಾಗದೇ ತಲೆಬಾಗಿ ಶರಣಾಗಿದ್ದವು.

ಭೋಜಯ್ಯನ ತಲೆಯಲ್ಲಿ ಯೋಚನೆಯೊಂದು ಬಂತು. ತಾನು ಇಲ್ಲೇ ಇದೀಗಲೇ ಈ ಸಂಕದಿಂದ ಜಾರಿಬಿದ್ದು ಸತ್ತು ಹೋದರೆ ಹೇಗೆ? ಕೆಲ ನಿಮಿಷ ಅಯ್ಯೋ ಅಮ್ಮಾ ಎಂದು ನರಳಬಹುದು. ಆದರೆ ಆ ನದೀ ನೀರಿನ ದನಿಯೆದುರು ಲೀನವಾಗಿ ಯಾರ ಕಿವಿಗೂ ಬೀಳಲಿಕ್ಕಿಲ್ಲ. ಅಷ್ಟರಲ್ಲೇ ಕೆಂಪು ರಾಡಿ ನೀರು ತನ್ನ ಹೊಟ್ಟೆ ಸೇರಿ ತಾನು ಕೆಲವೇ ನಿಮಿಷಗಳಲ್ಲಿ ಶವವಾಗಿಬಿಡಬಹುದು. ಹಾಗೇ ನನ್ನ ದೇಹ ತೇಲಿಕೊಂಡು ಹೋಗಿ ಮುಂಡಕದ ಗಿಡದ ಬದಿಯಲ್ಲಿ ರುದ್ರನ ದೇಹದಂತೆ.

ರುದ್ರನ ಶವದ ದೃಶ್ಯ ಅವರ ಕಣ್ಣೆದುರು ಪ್ರತ್ಯಕ್ಷವಾದಂತಾಗಿ ಅವರ ಮೈ ಬಿಳುಚಿಕೊಂಡಿತು. ಭಯದಿಂದ ಇಡೀ ದೇಹ ಕಂಪಿಸಿತು.

ಹೀಗೆ ತಾನೂ ಸಾಯುವವನೇ. ಇನ್ನೇನು ಉಳಿಯುತ್ತದೆ. ಒಂದು ಹಿಡಿ ಬೂದಿ, ಒಂದು ಹೆಡಿಗೆ ಗೊಬ್ಬರ. ಇವತ್ತೋ ನಾಳೆಯೋ ನೆಗೆದುಬೀಳುವ ಈ ದೇಹಕ್ಕೆ ಜನ ಎಷ್ಟೊಂದು

ಕನಸಿನಿಂದ ನಿದ್ರೆಯನ್ನು, ಕಾಮದಿಂದ ಸ್ತ್ರೀಯನ್ನು, ಕಟ್ಟಿಗೆಯಿಂದ ಬೆಂಕಿಯನ್ನು, ಕುಡಿತದಿಂದ ಹೆಂಡವನ್ನು ಗೆಲ್ಲುವುದಕ್ಕಾಗುವುದಿಲ್ಲ.

– ಮಹಾಭಾರತ

ತಾಳ್ಮೆಗಿಂತ ಮಿಗಿಲಾದ ತಪಸ್ಸು ಬೇರೊಂದಿಲ್ಲ.

–ವಾದಿರಾಜ

ನಗಲಾರದ ಮನುಷ್ಯ ವ್ಯಾಪಾರವನ್ನೇ ಮಾಡಬಾರದು.

– ಚೀನಿ ಗಾದೆ

ಸಂಗ್ರಹ : **ಎಂ. ಮುರ್ಧಾನಲಿ**



ಹೋರಾಡುತ್ತಾರೆ. ಆಸ್ತಿ, ಮನೆ, ಹಣ, ಅಂತಸ್ತು, ಅಧರ್ಮದ, ಧರ್ಮದ ಸಂಬಂಧಗಳು, ಕೊಲೆ ಸುಲಿಗೆಗಳು, ಅನ್ಯಾಯ, ಕಪಟ. ಛೇ ಛೇ ಇವೆಲ್ಲ ಎಂಥ ಮೂರ್ಖ ಅನಾಗರಿಕ ಕ್ರಿಯೆಗಳು? ಇಷ್ಟೆಲ್ಲ ಹೋರಾಟದನಂತರ ಯಕಶ್ಚಿತ್ ಶವವಾಗಿ ಬೀಳುವ ದೇಹಕ್ಕೆ ಅವರು ಇವರೆಂಬ ಭೇದವಿದೆಯೇ? ಹೌದು ತಾನೀಗ ಗತಪ್ರಾಣನಾಗಬೇಕು. ಹಾವು ಹೊಟ್ಟೆಯ ಮೇಲೆ ಮಲಗಲಿ. ಮೀನುಗಳು ಕಣ್ಣು ಕುಕ್ಕಲಿ. ಆಗ ಏನೊಂದೂ ತಿಳಿಯುವುದಿಲ್ಲ. ಸ್ವರ್ಗದಲ್ಲಿ ರುದ್ರನನ್ನು ಭೇಟಿಯಾಗಬೇಕು. ರಂಭೆ ಊರ್ವಶಿಯರ ನೃತ್ಯವನ್ನು ಸವಿಯಬೇಕು. ಇಂದ್ರನ ಆಸ್ಥಾನದ ವೈಭವವನ್ನು ಕಣ್ತುಂಬ ನೋಡಿ ಆನಂದಿಸಬೇಕು.

ಅವರು ದೃಢ ನಿಶ್ಚಯ ಮಾಡಿಕೊಂಡರು.

ಸಾಯಬೇಕೇನೋ ಸರಿ. ಆದರೆ ಹೇಗೆ? ತಾನಾಗಿ ಹೊಳೆಗೆ ಹಾರಿಕೊಂಡರೆ ಅದು ಆತ್ಮಹತ್ಯೆ. ಆತ್ಮಹತ್ಯೆ ಮಾಡಿಕೊಂಡರೆ ಸ್ವರ್ಗ ಪ್ರಾಪ್ತಿಯಿಲ್ಲ. ಇಂದ್ರನ ವೈಭವವನ್ನು ನೋಡುವ ಸೌಲಭ್ಯದಿಂದ ವಂಚಿತ. ಆದ್ದರಿಂದ ತನ್ನಿಂದ ತಾನೇ ಕಾಲು ಜಾರಿ ಬೀಳುವಂತಾಗಬೇಕು.

ಅವರು ಕೂಡಲೇ ನಿಶ್ಚಯಿಸಿದರು. ತಾನೀಗ ಕಾಲು ಜಾರಿ ಬೀಳಬೇಕು. ಸಂಕದ ಮೇಲೆ ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಹಲವಾರು ಬಾರಿ ಸಾಗಿದರು. ಒಮ್ಮೆಯೂ ಕಾಲು ಜಾರಿ ಬೀಳಲಿಲ್ಲ.

ಆ ಹೊತ್ತಿನಲ್ಲಿ ವಿಕರಾಳ ನಗುವೊಂದು ಅವರ ಕಿವಿಯಲ್ಲಿ ಕೇಳಿ ಬಂತು. ಜಗ್ಗನೆ ನಿಂತು ಸುತ್ತ ನೋಡಿದರು. ಅವರ ಕಣ್ಣಿಗೆ ಯಾರೂ ಕಾಣಿಸಲಿಲ್ಲ. ಸ್ತಂಭೀಭೂತರಾಗಿ ನಿಂತರು.

"ನಾನೋ ಬಿರಾಮ, ರುದ್ರ, ನೀನು ಸಾಯುದಿಲ್ಲೆ. ಆ ಕಾಲ ಬರಬೇಕು ನಿಂಗೆ ಸುಖದ ಸಾವೂ ಬಪ್ಪುಕಾಗ. ನೀನು ನಂಗೆ ಏನೇನು ಮೋಸ ಮಾಡಿದೆ ನೆನೆಸು.''

"ಹೌದೋ ನಾನು ನಿಂಗೆ ಅನ್ಯಾಯ ಮಾಡಿದ್ದೆ. ಹೌದು ಹೌದು.'' ಭೋಜಯ್ಯ ಗಟ್ಟಿ ದನಿಯಲ್ಲಿ ಒಪ್ಪಿಕೊಂಡರು. ಸಂಕ ದಾಟುವುದನ್ನು ಬಿಟ್ಟು ಹತ್ತಿರದ ಮರದ ಬೊಡ್ಡೆಗೆ ಒರಗಿ ಕೆಸರಲ್ಲೇ ಕುಳಿತುಕೊಂಡರು. ಶೂನ್ಯದಲ್ಲಿ ದೃಷ್ಟಿ ನೆಟ್ಟು ಸತ್ತ ದಿನಗಳನ್ನು ನೆನಪಿಸಿಕೊಳ್ಳತೊಡಗಿದರು.

ರುದ್ರಯ್ಯನ ಪ್ರೇತ ಅದೇ ಮರದ ಕೊಂಬೆಯೊಂದರ ಮೇಲೆ ಕಾಲಾಡಿಸುತ್ತ ಕುಳಿತು ಭೋಜಯ್ಯನ ನೆನಪುಗಳನ್ನು ನೋಡತೊಡಗಿತು.

ಮಲ್ಲಿಗೆ ಸೇವಂತಿಗೆ ಹೂಗಳು ತಮ್ಮ ಸುವಾಸನೆಯನ್ನು ಬೀರುತ್ತ ಅಲ್ಲೆಲ್ಲ ಒಂದು ರೀತಿಯ ಆಹ್ಲಾದಕರ ವಾತಾವರಣವನ್ನು ಸೃಷ್ಟಿಸಿದವು.

* * * * *

ಭೋಜ ಜನ್ಮತಾ ಸೋಮಾರಿ. ನಿದ್ರೆ ಊಟಗಳಲ್ಲಿ ಮಾತ್ರ ಅತಿಯಾದ ಆಸಕ್ತಿ. ಹಕ್ಕಳೆ (ಜಿರಳೆ), ನುಸಿ (ಸೊಳ್ಳೆ) ಹಾಗೂ ಚವಣೆ(ತಿಗಣೆ)ಗಳ ಕಾಟದಿಂದ ರಾತ್ರಿ ಅವನಿಗೆ ನಿದ್ರೆ ಹತ್ತುತ್ತಿರಲಿಲ್ಲವಾದ್ದರಿಂದ, ಹಗಲು ಮಲಗಿದರೆ ಅಪ್ಪ ಶಂಕರಯ್ಯ ಬ್ರಹ್ಮಾಚಾರಿಗಳು ಹಗಲು ನಿದ್ರಿಸಬಾರದೆಂದು ರೇಗುವುದರಿಂದ ಅವನು ವಿಶ್ರಾಂತಿ ಪಡೆಯಲು ಬೇರೆಯೇ ಒಂದು ದಾರಿಯನ್ನು ಹುಡುಕಿಕೊಂಡಿದ್ದ. ಹಳತಾಗಿದ್ದ ಓಲಿ ಚಾಪೆಯನ್ನು ಹಾಡಿ(ಕಾಡು)ಗೆ ಸಾಗಿಸಿ ಮರವೊಂದರ ನೆರಳಿನಲ್ಲಿ ಮಧ್ಯಾಹ್ನ ಊಟದನಂತರ ಸ್ವಸ್ಥ ಮಲಗುವ ಅಭ್ಯಾಸ ಮಾಡಿಕೊಂಡಿದ್ದ.

ಉಪನಯನ ಅಥವಾ ಯಜ್ಞೋಪವೀತಧಾರಣೆ, ಮುಂದಿನ ವೈದಿಕ ಕ್ರಿಯೆಗಳ ಅನುಷ್ಠಾನ ಅವನಿಗೆ ಕೋಪ ತರಿಸಿತ್ತು. ಎಂಟನೆಯ ವಯಸ್ಸಿನಲ್ಲೇ ಮುಂಜಿ ಎಂದರೇನೆಂದು ಗೊತ್ತಿಲ್ಲದ ಹರೆಯದಲ್ಲೇ ತಂದೆ ಉಪನಯನದ ಕಾರ್ಯಕ್ರಮ ಯೋಜಿಸಿದ್ದರು.

ಕೀಟಲೆಯ ಪ್ರವೃತ್ತಿಯ ಊರವರೊಬ್ಬರು ಭೋಜನನ್ನು ಚುಡಾಯಿಸಿದ್ದರು. "ಉಪನಯನ ಅಂದ್ರೆ ಎಂತದನಾ ಭೋಜ?'' ಅಂತ.

ಗೊತ್ತಿಲ್ಲವೆಂಬಂತೆ ತಲೆ ಆಡಿಸಿದ ಭೋಜ. "ನಿಂಗೊತ್ತಿಲ್ಯನಾ, ಅಪ್ಪಯ್ಯ ಹೇಳಲ್ಯಾ? ಹಾಗಂದ್ರೆ ತೊಡೆ ಕೊಯ್ದು ಕಪ್ಪೆ ತುಂಬುದು'' ಎಂದು ವಿವರಿಸಿ ಅವನಲ್ಲಿ ಭಯ ಹುಟ್ಟಿಸಿದ್ದರು.

ಉಪನಯದ ದಿನ ಅದು ಹಾಗಲ್ಲ ಎಂದು ಯಾರೇ ಹೇಳಿದರೂ ಎಷ್ಟೇ ತಿಳಿಸಿದರೂ ಅವನು ನಂಬದೆ ಮಾಡಿದ ರಂಪಾಟ ಅವನ ನೆನಪಿನಿಂದ ಮಾಸಲಿಲ್ಲ. ದಾರ ಧರಿಸಿಕೊಂಡು, ಅಕ್ಕಿ ಮುಡಿಯ ಮೇಲೆ ಕುಳಿತು, ಪಂಕ್ತಿಯಲ್ಲಿ ಹೋಳಿಗೆ ಕಬಳಿಸುತ್ತಿರುವವರನ್ನು ಕಂಡು ರೇಗಿದ್ದ.

ಅಂದಿನಿಂದ ಅವನ ಬಾಳಿನ ನರಕದ ದಿನಗಳು. ಬೆಳಿಗ್ಗೆ ಬೆಳಿಗ್ಗೆಯೇ ಎದ್ದು ಸ್ನಾನ ಮಾಡಿ, ಮೈಗೆಲ್ಲ ವಿಭೂತಿ ಬಳಿದುಕೊಂಡು "ಪ್ರಾಣಾಯ ಸ್ವಾಹಾ ಅಪಾನಾಯ ಸ್ವಾಹಾ'' ಎಂದು ಹೇಳಬೇಕಿತ್ತು. ಅನಂತರ ಅಮರಕೋಶದ 'ಯಸ್ಯ ಜ್ಞಾನ ದಯಾ ಸಿಂಧೋ' ಕಲಿಯಬೇಕಿತ್ತು. ಊಟ ಮಾಡುವಾಗ ಒಮ್ಮೆ ಸುತ್ತುಗಟ್ಟಿದರೆ ಮುಗಿಯುವತನಕ ಮಾತನಾಡುವಂತಿಲ್ಲ. ದಿನಾ ನಿದ್ರೆ ವರ್ಜ್ಯ. ಉಚ್ಚೆ ಹೊಯ್ಯುವಾಗ, ಹೊರಕಡೆಗೆ ಹೋಗುವಾಗ ಜನಿವಾರವನ್ನು ಬಲಗಿವಿಗೆ ಸಿಕ್ಕಿಸಿಕೊಳ್ಳಬೇಕಿತ್ತು. ಮೂರೂ ಹೊತ್ತು ಸಂಧ್ಯಾವಂದನೆ ಮಾಡಲು ಕವಳಿಗೆ ಸೌಟು, ಹರಿವಾಣ ಸಿದ್ಧಪಡಿಸಿಕೊಳ್ಳಬೇಕಿತ್ತು.

"ಬಾಂಬ್ರಾಂಗಿ ಹುಟ್ಟಿದರೆ ಎಷ್ಟು ಕಷ್ಟ'' ಎಂದು ಭೋಜ ಮರುಗಿದ್ದ. ಕೈಗೆ ಪಾವಲಿಯೋ ಅರ್ಧಾಣೆಯೋ ದಕ್ಷಿಣೆ ಬಂದಾಗ ಖುಶಿಯೂ ಆಗದಿರುತ್ತಿರಲಿಲ್ಲ.

"ನನ್ನ ಮಗಳನ್ನು ಕಾನ್ವೆಂಟಿಗೆ ಸೇರಿಸಿದ್ದೇ ತಪ್ಪಾಗೋಯ್ತು."

"ಯಾಕಯ್ಯಾ ಹಾಗ್ಹೇಳ್ತಿ?"

"ನಮ್ಮ ರಾಜ್ಯದ ಮುಖ್ಯಮಂತ್ರಿ ಯಾರು ಅಂತ ಕೇಳಿದ್ರೆ ಏನು ಹೇಳಿದ್ಲು ಗೊತ್ತಾ?"

"ಏನು ಹೇಳಿದ್ಲು?"

"ಗೋಲ್ಡ್ ಫಾದರ್ ಅಂದುಬಿಟ್ಲು ಕಣಯ್ಯಾ!"

— ವಿನಾಯಕ ಗಾಂವ್ಕರ್



ಮೂಗಿನ ಮೇಲ್ತುದಿಗೆ ಒಂದು ಚಿಟಕೆ ಕುಂಕುಮವಿಟ್ಟು, ಕಿವಿಗಳಿಗೆ ಟಿಕ್ಕಿ ತೊಟ್ಟು, ಕೂದಲನ್ನು ಹಿಂದೆ ಬಾಚಿ ಕಟ್ಟಿದ್ದ ಭೋಜ ಯಕ್ಷಗಾನದಲ್ಲಿ ಸ್ತ್ರೀಪಾತ್ರ ಮಾಡುವವನ ಹಾಗೆ ಕಾಣುತ್ತಿದ್ದ. ಮಧ್ಯಾಹ್ನ ಮನೆಯಲ್ಲಿ ಕಡಿಗೆ ಪಲ್ಯ, ಉದ್ದಿನ ಹಿಟ್ಟಿನ ಗೊಜ್ಜು ತಿಂದವನಿಗೆ ಕಣ್ಣು ತೂಕಡಿಸುತ್ತಿತ್ತು. ಸೋನೆ ಮಾಸದ ಮಳೆಗಾಲ ಕಳೆದು ಚಳಿಗಾಲ ಕಾಲಿಡುವ ಮೊದಲ ತಂಪಾದ ಕಾಲ. ಜಡ್ಡಿನಲ್ಲಿ ಬಿಳಿ ಹೂಗಳು ತುಂಬಿದ ತುಂಬೆಗಿಡ ಬೆಳೆದಿದ್ದವು. ಅದನ್ನು ದಾಟಿ ತಾನು ಮಾಮೂಲು ಮಲಗುವ ಸ್ಥಳಕ್ಕೆ ಹೋದ ಭೋಜ.

ಮೈಮೇಲೆ ಪ್ರಜ್ಞೆ ಇಲ್ಲದವನಂತೆ ಮಲಗಿದ್ದವನ ಬಲಗಿವಿಯ ಮೇಲೆ ಅದೇನೋ ಹರಿದಂತಾಗಿ ಅಸಹನೆಯಿಂದ ಕೈಯಿಂದ ಕೆರೆದುಕೊಂಡ. ಆದರೂ ಆ ಕಿರಿಕಿರಿ ನಿಲ್ಲದೆ ಕಣ್ಣುಬಿಟ್ಟು ನೋಡಿದಾಗ ಪಕ್ಕದಲ್ಲಿ ಲಚ್ಚಿ ಕರವೀರ ಹೂವಿನಿಂದ ಅವನ ಕೆನ್ನೆಯಲ್ಲಿ ಕಚಗುಳಿ ಇಡುತ್ತಿದ್ದಳು.

ಲಚ್ಚಿಯ ಹೆಸರು ಲಕ್ಷ್ಮಿ. ತಾಯಿಯಿಲ್ಲದ, ತುಂಟತನವೇ ಮೈವೆತ್ತಿದಂತಿದ್ದ ಬೊಂಬೆಯಂತಹ ಹನ್ನೆರಡರ ಸುಮಾರಿನ ಬಾಲೆ. ಅವಳ ತಂದೆ ಮಾದಪ್ಪ ವೃತ್ತಿಯಿಂದ ಕುಂಬಾರ. ಮಡಕೆಗಳನ್ನು ಮಾಡಿ ಸಂತೆಗೆ ಹೊತ್ತು ಮಾರುವುದು ಅವನ ದೈನಂದಿನ ಕೆಲಸ. ಮನೆಗೆಲಸದ ಸಂಪೂರ್ಣ ಜವಾಬ್ದಾರಿ ಮಗಳು ಲಚ್ಚಿಯದು.

ಕಿವಿಯ ಮೇಲೆ ಹರಿದುದು ಯರು(ಇರುವೆ)ವಲ್ಲ ಎಂದು ತಿಳಿದ ಮೇಲೆ, ಅದು ಲಚ್ಚಿಯ ಕಿತಾಪತಿಯೆಂದು ಅರಿವಾದ ಮೇಲೆ, ತತ್‌ಕ್ಷಣ ಅಪರಾಧ ಪ್ರಜ್ಞೆ ಜಾಗ್ರತವಾಯಿತು, ಭೋಜನ ಮನಸ್ಸಲ್ಲಿ. ಎದ್ದು ಕುಳಿತು ಲಚ್ಚಿಯ ಗುಂಡು ಮುಖದಲ್ಲಿ ಕಣ್ಣು ನೆಟ್ಟು ಹೇಳಿದ "ಶೂದ್ರರು ಬ್ರಾಂಬ್ರನ್ನ ಮುಟ್ಟುಕ್ಕಾಗ."

ಆಕೆ ಕಿಲಕಿಲ ನಕ್ಕಳು. ಅದು ಅವನ ಮೈನವಿರೇಳಿಸುವಂತಿತ್ತು. ಆಕೆ ನಕ್ಕಾಗ ಹರಿದು ಬರುವ ದನಿ ನೀರಿನ ಜರಿಯ ಆಹ್ಲಾದಕರ ದನಿಯಂತಿತ್ತು ಅವನಿಗೆ. ಬಹಳ ಕೆನ್ನೆಗಳಲ್ಲಿ ಗುಳಿಗಳು ಮೂಡುತ್ತಿದ್ದವು ಕಣ್ಣುಗಳಲ್ಲಿ ತುಂಟತನ ಕಾಣಿತ್ತಿತ್ತು.

ಲಚ್ಚಿ ಅಲ್ಲಿದ್ದ ಕಲ್ಲೊಂದಕ್ಕೆ ಬೆನ್ನನ್ನು ಆನಿಸಿಕೊಂಡು ಕೇಳಿದಳು "ಎಂತ ಆತ್ತು?"

ಅವಳು ತಾಯಿಯ ಹಳೆಯ ಸೀರೆಯನ್ನೇ ಹೇಗೆ ಹೇಗೋ ಉಟ್ಟ ಕಾರಣ, ಅದರ ನಡುವಿನಿಂದ ಅವಳ ಕೆಂಪು ತೊಡೆಗಳು ಸ್ಪಷ್ಟವಾಗಿ ಕಾಣಿಸಿ ಭೋಜನ ಮೈಯಲ್ಲಿ ಕಂಪನವನ್ನು ಹುಟ್ಟಿಸುತ್ತಿದ್ದವು.

ತನ್ನ ಮಾತನ್ನು ಸಮರ್ಥಿಸಿಕೊಳ್ಳಲು ಭೋಜ ಬಲಕ್ಕೆ, ಕೆಲದೂರದಲ್ಲಿದ್ದ ನಾಗರ ಕಲ್ಲಿನತ್ತ ಕೈ ತೋರಿಸಿ ಹೇಳಿದ "ಮೈಲಿಗೆ ಆದರೆ ನಾಗರದೇವ್ರು ಮನೆಗೆ ಬತ್ರು."

"ಬರಲಿ" ಅವಳೆಂದಳು. "ನಿಂ ಮನೆಗೆ ಬಪ್ಪುದು ನಂಗೇನು?" ಅವಳದು ಛೇಡಿಸುವ ದನಿ.

ಅಷ್ಟಕ್ಕೇ ಸೋಲೊಪ್ಪಿಕೊಂಡರೆ ಅವನಿಗೆ ಅವಮಾನ. "ನಂಗೇನು ಅಡ್ಡಿ ಇಲ್ಲೆ, ನಾನು ಮಿಂದು ಒಳಗೆ ಹೋತೆ."

"ಅವತ್ತು ದೇವ್ರು ಹತ್ರ ದೊಣ್ಣಗೆ (ನಗ್ನವಾಗಿ) ನಿಂತಿದ್ದು?" ಲಚ್ಚಿಯ ಮಾತಿನಿಂದ ಹಳೆಯ ಆ ಘಟನೆ ಸ್ಮೃತಿಗೆ ಬಂದು ಅವನಿಗೆ ನಾಚಿಕೆಯಾಯಿತು. ಏನು ಉತ್ತರಿಸಬೇಕೆಂದು ತಿಳಿಯದೇ ಗೊಂದಲವಾಯಿತು. ಮರುಕ್ಷಣವೇ ಅದೇನೆನ್ನಿಸಿತೋ, ಎರಡೂ ಕೈಚಾಚಿ ಅವಳನ್ನು ಬಾಜಿ ತಬ್ಬಿಕೊಂಡ. ಅವಳು ಪ್ರತಿಭಟಿಸಲಿಲ್ಲವಾದರೂ ಸಣ್ಣ ದನಿಯಲ್ಲಿ ಹೇಳಿದಳು "ಈಗ ಹಾವು ಬತ್ತಿಲ್ಯಾ."

ಭೋಜ ಅಪ್ಪುಗೆಯನ್ನು ಬಿಗಿಗೊಳಿಸಿದ. "ಅಯ್ಯೋ ಬಿಡಿಯೋ ನಿಮ್ಮ ಕೈಮೂಳೆ ಮೈಗೆ ಹೆಟ್ಟುತ್ತು (ಚುಚ್ಚುತ್ತೆ)."

ಅವಳು ಅವನ ನುಣುಪಾದ ತೋಳುಗಳ ಮೇಲೆ ಕೈ ಆಡಿಸಿ ಆಪಾದಿಸಿದಳು. "ಎಂತ ಮಾರೆಯ್ರು, ಕಡ್ಡಿ ಕಣಗೆ ಇದ್ರಿ. ಸಮಾ (ತುಂಬಾ) ತಿಂದ್ರೆ ದಪ್ಪ ಆತ್ರಿ."

ಸಾವಿರ ಜನ ಸಾವಿರ ಬಾರಿ ಅಂದಿರಬಹುದು. ಆದರೆ ಹೆಣ್ಣೊಂದರ ಬಾಯಿಂದ ಬಂದ ಮಾತಿಗೆ ಬೆಲೆ ಜಾಸ್ತಿ. ಆ ಕ್ಷಣವೇ ಭೋಜ ತೀರ್ಮಾನಿಸಿಕೊಂಡ ಶತಾಯ ಗತಾಯ ದಪ್ಪವಾಗಬೇಕು. ಕನಿಷ್ಟ ರುದ್ರನಷ್ಟಾದರೂ.

ಮೇಯಿಸಲು ಹೊಡೆದುಕೊಂಡು ಬಂದಿದ್ದ ದನ ಕಾಣೆಯಾಯಿತೆನ್ನುತ್ತ ಲಚ್ಚಿ ಅಲ್ಲಿಂದ ನಿರ್ಗಮಿಸಿದಾಗಲೂ ಕೂಡ ಅವನನ್ನು ಕಾಡುತ್ತಿದ್ದ ಪ್ರಶ್ನೆ ದಪ್ಪವಾಗುವುದು ಹೇಗೆ ಎಂಬುದು. ನಿದ್ರೆ ಹಾರಿಹೋಗಿತ್ತು. ಮನೆ ಸೇರುತ್ತಲೇ ಅವನ ತಾಯಿ ಮೂಕಾಂಬಿಕೆ ಕೇಳಿದ್ಲು. "ಎತ್ಲಾಯಿ ಹೋಯಿದ್ದೆ ಅಪ್ಪಯ್ಯ ನಿನ್ನ ಕೇಂತಿದ್ರು."

ಭೋಜ ತಿಂಡಿಪೋತ. ಸದಾ ಹಸಿವು ಹಸಿವು ಎಂದು ತಾಯಿಯನ್ನು ಪೀಡಿಸುತ್ತಲೇ ಇರುತ್ತಾನೆ. ಊಟಕ್ಕೆ ಹೋದರಂತೂ ಅವನು ಬಕಾಸುರ. "ತಿಂದದ್ದೆಲ್ಲ ಅಂಡಿಲೇ ಹೋತ್ತೋ ಏನೋ. ತಟಕೂ ಮೈಗೆ ಹಿಡಿತ್ತಿಲ್ಲೆ" ಎಂದು ಮೂಕಾಂಬಿಕೆ ಅಂದುಕೊಳ್ಳುತ್ತಿದ್ದರು. ತಕ್ಷಣವೇ ತನ್ನ ಹಿರಿಮಗನ ನೆನಪಾಗುತ್ತಿತ್ತು ಅವರಿಗೆ. ಹ್ಯಾಗೆ ಗುಂಡ ಗುಂಡಗೆ ಇದ್ದ, ಏನು ಕತೆ?

ಅವರ ಕಣ್ಣುಗಳು ಹನಿಗೂಡಿದವು. ಕೂಡಲೇ ರುದ್ರನ ನೆನಪಾಯಿತು. ಯಾವ ಜನ್ಮದ ರುಣವೋ, ತನ್ನ ಮಗನಂತೆಯೇ ಬಂದು ಮನೆ ಸೇರಿಕೊಂಡ. ಯಾವ ಜಾತಿಯವನೋ. ಜಾತಿ ಯಾವುದಾದರೇನಂತೆ ಅವನು ಯಾವ ಬ್ರಾಹ್ಮಣರಿಗಿಂತ ಕಮ್ಮಿ?

ಆದರೂ?

'ರಾಗಸಂಗಮ'
ಲಾಟರಿ ಡ್ರಾ - ೧೩೨ರ ವಿಜೇತರು

ಆರ್. ಆಶಿಯಾ
ಕೊಳಗಲ್ಲು
ಬಳ್ಳಾರಿ ಜಿಲ್ಲೆ.



ಈ ಆದರೂ ಸಹಾ ಅವರನ್ನು ಕಾಡಿಸದೇ ಇರುತ್ತಿರಲಿಲ್ಲ.

ಅಂದು ಸಂಜೆ ನಾಗನ ದರ್ಶನ. ಮಹಾಲಿಂಗನ ಗುಡಿಯ ಹಿಂಭಾಗದ ಆಲದ ಮರದ ಕೆಳಗೆ ನೆಟ್ಟ ನಾಗರ ಕಲ್ಲಿಗೆ ವಿಶೇಷ ಪೂಜೆ, ನಾಗಳ್ಳಿಯ ಪಾತ್ರಿಯವರಿಂದ ದರ್ಶನ.

ದರ್ಶನ ಎಂದೊಡನೇ ನಾಗಳ್ಳಿಯ ಶಾಸ್ತ್ರಿಗಳ ರೂಪ ಭೋಜನ ಕಣ್ಣಿಗೆ ಕಟ್ಟುತ್ತದೆ. ದಡೂತಿ ದೇಹ, ರೋಮಭರಿತ ಎದೆಯ, ಕಜ್ಜಿ ಮುಖದ, ಉಬ್ಬಿದ ಕೆನ್ನೆಗಳ, ದಪ್ಪ ಹುಬ್ಬಿನ ನೀಳಕೇಶದ ಅವರ ಬಗ್ಗೆ ಒಂದಿಷ್ಟು ಕುತೂಹಲ, ಒಂದಿಷ್ಟು ಭಯ. "ಏನು ಶಂಕರಯ್ಯ" ಎಂದು ತಂದೆಯೊಡನೆ ಮಾತನಾಡುವಾಗ ಸಾಮಾನ್ಯರಂತೆ ಕಾಣಿಸುವ ಅವರು ದರ್ಶನದಲ್ಲಿ ಹೇಗಾಗಿಬಿಡುತ್ತಾರೆ. ನಾಗರಾಜನೇ ಮನುಷ್ಯ ರೂಪದಲ್ಲಿ ಅವತರಿಸಿದನಂತೆ. ಅವರು ಅವರು ಹೇಳುವ ಮಾತುಗಳೋ, ಭಕ್ತರ ಪ್ರಶ್ನೆಗೆ ನೀಡುವ ಉತ್ತಗಳೋ. ಆಹಾ ಸಾಕ್ಷಾತ್ ದೈವವಾಗಿ ಸೇರಿದ ನೂರಾರು ಜನ ಬೆನ್ನು ಬಾಗಿ, ಕೈಮುಗಿದು ನಿಂತು- ಅವರಾಡುವ ಮಾತುಗಳನ್ನು ಸಮರ್ಥನೆಗಳನ್ನು ಕೇಳುವಾಗಲೆಲ್ಲ ಭೋಜನ ಮನಸ್ಸಿನಲ್ಲಿ ಹೇಳಲಾಗದ ಭಾವಗಳು.

ಆ ಸಂಜೆ ಕೆಂಪು ಮಡಿಯುಟ್ಟು, ಸೊಂಟದ ಸುತ್ತ ದರ್ಭೆಯ ಹಗ್ಗದಿಂದ ಅದನ್ನು ಗಟ್ಟಿಯಾಗಿ ಕಟ್ಟಿಕೊಂಡು ನಾಗನ ಕಲ್ಲಿಗೆ ಕೈ ಮುಗಿದು ನಿಂತಿದ್ದರು ಶಾಸ್ತ್ರಿಗಳು. ಸಾಂಗೋಪಾಂಗ ಪೂಜೆ ನಡೆದನಂತರ ಮಹಾಮಂಗಳಾರತಿ. ಅದರಲ್ಲಿ ಹಲವಾರು ರೀತಿಯ ಆರತಿಗಳು, ಭಕ್ತ ಸಮೂಹದಲ್ಲಿ ಬ್ರಾಹ್ಮಣರಿಗೆ ವಿಶೇಷ ಸ್ಥಳ. ನಿಲ್ಲಲಿಕ್ಕೆ ಭೋಜ ಶಾಸ್ತ್ರಿಗಳ ಹಿಂದೆ ನಿಂತು ಅವರ ಹರವಾದ ಬೆನ್ನಿನ ಮೇಲೆ, ಅದರ ಮೇಲೆ ಗಾಳಿಗೆ ಹಾರಾಡುತ್ತ ಹರಡಿದ್ದ ನೀಳ ಕೂದಲಿನ ಮೇಲೆ ತನ್ನ ದೃಷ್ಟಿ ನೆಟ್ಟಿದ್ದ ಅವರ ಕಂಕುಳಿನಲ್ಲಿಯ ರೋಮಗಳು, ಕಿವಿಗಳ ಕೂದಲು ಅವನಲ್ಲಿ ವಿಶೇಷ ಕುತೂಹಲವನ್ನು ಹುಟ್ಟಿಸಿದ್ದವು.

ಕೊನೆಯ ಆರತಿ ಮುಗಿಯುತ್ತಲೇ ಶಾಸ್ತ್ರಿಗಳ ಮೈಯಲ್ಲಿ ಕಂಪನ ಆರಂಭವಾಗತೊಡಗಿತು. ಇದನ್ನೇ ಕಾದವರಂತೆ ಸುತ್ತಲಿನ ಭಕ್ತ ಸಮೂಹ ಹಿಂದೆ ಸರಿದು ಅವರಿಗೆ ಜಾಗ ಮಾಡಿಕೊಟ್ಟಿತು.

ಅವಳು ತಾಯಿಯ ಹಳೆಯ ಸೀರೆಯನ್ನೇ ಹೇಗೆ ಹೇಗೋ ಉಟ್ಟ ಕಾರಣ, ಅದರ ನಡುವಿನಿಂದ ಅವಳ ಕೆಂಪು ತೊಡೆಗಳು ಸ್ಪಷ್ಟವಾಗಿ ಕಾಣಿಸಿ ಭೋಜನ ಮೈಯಲ್ಲಿ ಕಂಪನವನ್ನು ಹುಟ್ಟಿಸುತ್ತಿದ್ದವು.

ತನ್ನ ಮಾತನ್ನು ಸಮರ್ಥಿಸಿಕೊಳ್ಳಲು ಭೋಜ ಬಲಕ್ಕೆ, ಕೆಲದೂರದಲ್ಲಿದ್ದ ನಾಗರ ಕಲ್ಲಿನತ್ತ ಕೈ ತೋರಿಸಿ ಹೇಳಿದ "ಮೈಲಿಗೆ ಆದರೆ ನಾಗರದೇವ್ರು ಮನೆಗೆ ಬತ್ರು.''

"ಬರಲಿ'' ಅವಳೆಂದಳು. "ನಿಂ ಮನೆಗೆ ಬಪ್ಪುದು ನಂಗೇನು?'' ಅವಳದು ಛೇಡಿಸುವ ದನಿ.

ಅಷ್ಟಕ್ಕೇ ಸೋಲೊಪ್ಪಿಕೊಂಡರೆ ಅವನಿಗೆ ಅವಮಾನ. "ನಂಗೇನು ಅಡ್ಡಿ ಇಲ್ಲೆ, ನಾನು ಮಿಂದು ಒಳಗೆ ಹೋತೆ.''

"ಅವತ್ತು ದೇವ್ರು ಹತ್ರ ದೊಣ್ಣಗೆ (ನಗ್ನವಾಗಿ) ನಿಂತಿದ್ದು?'' ಲಚ್ಚಿಯ ಮಾತಿನಿಂದ ಹಳೆಯ ಆ ಘಟನೆ ಸ್ಮೃತಿಗೆ ಬಂದು ಅವನಿಗೆ ನಾಚಿಕೆಯಾಯಿತು. ಏನು ಉತ್ತರಿಸಬೇಕೆಂದು ತಿಳಿಯದೇ ಗೊಂದಲವಾಯಿತು. ಮರುಕ್ಷಣವೇ ಅದೇನೆನ್ನಿಸಿತೋ, ಎರಡೂ ಕೈಚಾಚಿ ಅವಳನ್ನು ಬಾಚಿ ತಬ್ಬಿಕೊಂಡ. ಅವಳು ಪ್ರತಿಭಟಿಸಲಿಲ್ಲವಾದರೂ ಸಣ್ಣ ದನಿಯಲ್ಲಿ ಹೇಳಿದಳು "ಈಗ ಹಾವು ಬತ್ತಿಲ್ಯಾ.''

ಭೋಜ ಅಪ್ಪುಗೆಯನ್ನು ಬಿಗಿಗೊಳಿಸಿದ. "ಅಯ್ಯೋ ಬಿಡಿಯೋ ನಿಮ್ಮ ಕೈಮೂಳೆ ಮೈಗೆ ಹೆಟ್ಟುತ್ತು (ಚುಚ್ಚುತ್ತೆ).''

ಅವಳು ಅವನ ನುಣುಪಾದ ತೋಳುಗಳ ಮೇಲೆ ಕೈ ಆಡಿಸಿ ಆಪಾದಿಸಿದಳು. "ಎಂತ ಮಾರೆಯ್ರ, ಕಡ್ಡಿ ಕಣೆಗೆ ಇದ್ರಿ. ಸಮಾ (ತುಂಬಾ) ತಿಂದ್ರೆ ದಪ್ಪ ಆತ್ರಿ.''

ಸಾವಿರ ಜನ ಸಾವಿರ ಬಾರಿ ಅಂದಿರಬಹುದು. ಆದರೆ ಹೆಣ್ಣೊಂದರ ಬಾಯಿಂದ ಬಂದ ಮಾತಿಗೆ ಬೆಲೆ ಜಾಸ್ತಿ. ಆ ಕ್ಷಣವೇ ಭೋಜ ತೀರ್ಮಾನಿಸಿಕೊಂಡ ಶತಾಯ ಗತಾಯ ದಪ್ಪವಾಗಬೇಕು. ಕನಿಷ್ಟ ರುದ್ರನಷ್ಟಾದರೂ.

ಮೇಯಿಸಲು ಹೊಡೆದುಕೊಂಡು ಬಂದಿದ್ದ ದನ ಕಾಣೆಯಾಯಿತೆನ್ನುತ್ತ ಲಚ್ಚಿ ಅಲ್ಲಿಂದ ನಿರ್ಗಮಿಸಿದಾಗಲೂ ಕೂಡ ಅವನನ್ನು ಕಾಡುತ್ತಿದ್ದ ಪ್ರಶ್ನೆ ದಪ್ಪವಾಗುವುದು ಹೇಗೆ ಎಂಬುದು. ನಿದ್ರೆ ಹಾರಿಹೋಗಿತ್ತು. ಮನೆ ಸೇರುತ್ತಲೇ ಅವನ ತಾಯಿ ಮೂಕಾಂಬಿಕೆ ಕೇಳಿದ್ಲು. "ಎತ್ಲಾಯಿ ಹೋಯಿದ್ದೆ ಅಪ್ಪಯ್ಯ ನಿನ್ನ ಕೇಂತಿದ್ರು.''

ಭೋಜ ತಿಂಡಿಪೋತ. ಸದಾ ಹಸಿವು ಹಸಿವು ಎಂದು ತಾಯಿಯನ್ನು ಪೀಡಿಸುತ್ತಲೇ ಇರುತ್ತಾನೆ. ಊಟಕ್ಕೆ ಹೋದರಂತೂ ಅವನು ಬಕಾಸುರ. "ತಿಂದದ್ದೆಲ್ಲ ಅಂಡಿಲೇ ಹೋತ್ತೋ ಏನೋ. ತಟಕೂ ಮೈಗೆ ಹಿಡಿತ್ತಿಲ್ಲೆ'' ಎಂದು ಮೂಕಾಂಬಿಕೆ ಅಂದುಕೊಳ್ಳುತ್ತಿದ್ದರು. ತಕ್ಷಣವೇ ತನ್ನ ಹಿರಿಮಗನ ನೆನಪಾಗುತ್ತಿತ್ತು ಅವರಿಗೆ. ಹ್ಯಾಗೆ ಗುಂಡ ಗುಂಡಗೆ ಇದ್ದ, ಏನು ಕತೆ?

ಅವರ ಕಣ್ಣುಗಳು ಹನಿಗೂಡಿದವು. ಕೂಡಲೇ ರುದ್ರನ ನೆನಪಾಯಿತು. ಯಾವ ಜನ್ಮದ ಋಣವೋ, ತನ್ನ ಮಗನಂತೆಯೇ ಬಂದು ಮನೆ ಸೇರಿಕೊಂಡ. ಯಾವ ಜಾತಿಯವನೋ. ಜಾತಿ ಯಾವುದಾದರೇನಂತೆ ಅವನು ಯಾವ ಬ್ರಾಹ್ಮಣರಿಗಿಂತ ಕಮ್ಮಿ?

ಆದರೂ?

'ರಾಗಸಂಗಮ'
ಲಾಟರಿ ಡ್ರಾ - ೧೩೨ರ ವಿಜೇತರು



ಆರ್. ಆಶಿಯಾ
ಕೊಳಗಲ್ಲು
ಬಳ್ಳಾರಿ ಜಿಲ್ಲೆ.

ಈ ಆದರೂ ಸಹಾ ಅವರನ್ನು ಕಾಡಿಸದೇ ಇರುತ್ತಿರಲಿಲ್ಲ.

ಅಂದು ಸಂಜೆ ನಾಗನ ದರ್ಶನ. ಮಹಾಲಿಂಗನ ಗುಡಿಯ ಹಿಂಭಾಗದ ಆಲದ ಮರದ ಕೆಳಗೆ ನೆಟ್ಟ ನಾಗರ ಕಲ್ಲಿಗೆ ವಿಶೇಷ ಪೂಜೆ, ನಾಗಳ್ಳಿಯ ಪಾತ್ರಿಯವರಿಂದ ದರ್ಶನ.

ದರ್ಶನ ಎಂದೊಡನೇ ನಾಗಳ್ಳಿಯ ಶಾಸ್ತ್ರಿಗಳ ರೂಪ ಭೋಜನ ಕಣ್ಣಿಗೆ ಕಟ್ಟುತ್ತದೆ. ದಡೂತಿ ದೇಹ, ರೋಮಭರಿತ ಎದೆಯ, ಕಜ್ಜಿ ಮುಖದ, ಉಬ್ಬಿದ ಕೆನ್ನೆಗಳ, ದಪ್ಪ ಹುಬ್ಬಿನ ನೀಳಕೇಶದ ಅವರ ಬಗ್ಗೆ ಒಂದಿಷ್ಟು ಕುತೂಹಲ, ಒಂದಿಷ್ಟು ಭಯ. "ಏನು ಶಂಕರಯ್ಯ" ಎಂದು ತಂದೆಯೊಡನೆ ಮಾತನಾಡುವಾಗ ಸಾಮಾನ್ಯರಂತೆ ಕಾಣಿಸುವ ಅವರು ದರ್ಶನದಲ್ಲಿ ಹೇಗಾಗಿಬಿಡುತ್ತಾರೆ. ನಾಗರಾಜನೇ ಮನುಷ್ಯ ರೂಪದಲ್ಲಿ ಅವತರಿಸಿದನಂತೆ. ಅವರು ಅವರು ಹೇಳುವ ಮಾತುಗಳೋ, ಭಕ್ತರ ಪ್ರಶ್ನೆಗೆ ನೀಡುವ ಉತ್ತಗಳೋ. ಆಹಾ ಸಾಕ್ಷಾತ್ ದೈವವಾಗಿ ಸೇರಿದ ನೂರಾರು ಜನ ಬೆನ್ನು ಬಾಗಿ, ಕೈಮುಗಿದು ನಿಂತು ಅವರಾಡುವ ಮಾತುಗಳನ್ನು ಸಮರ್ಥನೆಗಳನ್ನು ಕೇಳುವಾಗಲೆಲ್ಲ ಭೋಜನ ಮನಸ್ಸಿನಲ್ಲಿ ಹೇಳಲಾಗದ ಭಾವಗಳು.

ಆ ಸಂಜೆ ಕೆಂಪು ಮಡಿಯುಟ್ಟು, ಸೊಂಟದ ಸುತ್ತ ದರ್ಭೆಯ ಹಗ್ಗದಿಂದ ಅದನ್ನು ಗಟ್ಟಿಯಾಗಿ ಕಟ್ಟಿಕೊಂಡು ನಾಗನ ಕಲ್ಲಿಗೆ ಕೈ ಮುಗಿದು ನಿಂತಿದ್ದರು ಶಾಸ್ತ್ರಿಗಳು. ಸಾಂಗೋಪಾಂಗ ಪೂಜೆ ನಡೆದನಂತರ ಮಹಾಮಂಗಳಾರತಿ. ಆದರಲ್ಲಿ ಹಲವಾರು ರೀತಿಯ ಆರತಿಗಳು, ಭಕ್ತ ಸಮೂಹದಲ್ಲಿ ಬ್ರಾಹ್ಮಣರಿಗೆ ವಿಶೇಷ ಸ್ಥಳ. ನಿಲ್ಲಲಿಕ್ಕೆ ಭೋಜ ಶಾಸ್ತ್ರಿಗಳ ಹಿಂದೆ ನಿಂತು ಅವರ ಹರವಾದ ಬೆನ್ನಿನ ಮೇಲೆ, ಅದರ ಮೇಲೆ ಗಾಳಿಗೆ ಹಾರಾಡುತ್ತ ಹರಡಿದ್ದ ನೀಳ ಕೂದಲಿನ ಮೇಲೆ ತನ್ನ ದೃಷ್ಟಿ ನೆಟ್ಟಿದ್ದ ಅವರ ಕಂಕುಳಿನಲ್ಲಿಯ ರೋಮಗಳು, ಕಿವಿಗಳ ಕೂದಲು ಅವನಲ್ಲಿ ವಿಶೇಷ ಕುತೂಹಲವನ್ನು ಹುಟ್ಟಿಸಿದ್ದವು.

ಕೊನೆಯ ಆರತಿ ಮುಗಿಯುತ್ತಲೇ ಶಾಸ್ತ್ರಿಗಳ ಮೈಯಲ್ಲಿ ಕಂಪನ ಆರಂಭವಾಗತೊಡಗಿತು. ಇದನ್ನೇ ಕಾದವರಂತೆ ಸುತ್ತಲಿನ ಭಕ್ತ ಸಮೂಹ ಹಿಂದೆ ಸರಿದು ಅವರಿಗೆ ಜಾಗ ಮಾಡಿಕೊಟ್ಟಿತು.

ಕೂಡಲೇ ಶಂಕರಯ್ಯ ಶಾಸ್ತ್ರಿಗಳ ಬೊಗಸೆಗೊಂದಿಷ್ಟು ಸಿಂಗಾರ ಹೂ (ಅಡಿಕೆ ಹೂ) ಕೊಟ್ಟು ಅದರ ಮೇಲೆ ಕವಳಿಗೆ ಸೌಟನಿಂದ ಒಂದಿಷ್ಟು ತೀರ್ಥ ಸುರಿದರು. ಹಿಂದೆ ನಿಂತಿದ್ದ ವಾದ್ಯದವರು ಮುಂದೆ ಬಂದು ಜೋರಾಗಿ ನಾದಸ್ವರವನ್ನು ಊದತೊಡಗಿದರು. ಶಾಸ್ತ್ರಿಗಳು ನಾಗನ ಕಲ್ಲಿಗೆ ಕರಮುಗಿದು, ಹಿಂದೆ ಬಾಗಿ ಬುಸ್ ಬುಸ್ ಎಂದು ಉಸಿರುಬಿಡುತ್ತ, ಸಿಂಗಾರ ಹೂವನ್ನು ಮುಖಕ್ಕೆಲ್ಲ ತಿಕ್ಕಿಕೊಂಡು, ಅದರ ಹೆಕ್ಕಗಳನ್ನು ಮುಖಕ್ಕೆಲ್ಲ ಅಂಟಿಸಿಕೊಂಡು, ಬಳುಕುತ್ತ ಸಾಗುವ ಸರ್ಪದೋಪಾದಿಯಲ್ಲಿ ದೇಹವನ್ನು ಆಡಿಸುತ್ತ ಭಕ್ತರತ್ತ ತಿರುಗಿ, ಸಿಂಗಾರ ಹೂವನ್ನು ಎಡಗೈಯಲ್ಲಿ ಎದೆಗವಚಿಕೊಂಡು, ಬಲಗೈಯಿಂದ ಮುಖಕ್ಕೆ ಬಂದ ಕೇಶರಾಶಿಯನ್ನು ಹಿಂದಕ್ಕೆ ತಳ್ಳುತ್ತ, ತುದಿಕಾಲಿನಲ್ಲಿಯೇ ದೇಹದ ಭಾರವನ್ನು ನಿಯಂತ್ರಿಸುತ್ತ ಭಕ್ತ ಕುಟುಂಬ, ಗರೀಬ ಕುಟುಂಬ ನನ್ನ ಬರಮಾಡಿಕೊಂಡ ಕಾರಣವೇನು ಎಂದು ಹೇಳಿದಾಗಲೇ ವಾದ್ಯದವರು ಊದುವುದನ್ನು ನಿಲ್ಲಿಸಿದ್ದು.

ಆದರೆ ಇವಿಷ್ಟೂ ದೃಶ್ಯಗಳು ಇಂದು ಭೋಜನ ಕಣ್ಣಿಗೆ ಬೇರೆಯಾಗಿಯೇ ಕಂಡವು. ಆದಿಶೇಷನು ಸಹಸ್ರ ಶಿರಗಳನ್ನು ಹೊತ್ತುಕೊಂಡು ಇಡೀ ಪ್ರಪಂಚವನ್ನೇ ಸುಟ್ಟುಬಿಡುವಂತೆ ಕಣ್ಣು ಕೆಂಪು ಮಾಡಿ, ಭೋಜನೆದುರು ಬಂದು ನಿಂತು. "ಎಲೆಲವೋ ಅಧಮಾ, ವರ್ಣಬೇಧವನ್ನು ಮರೆತು ಅಸ್ಪೃಶ್ಯಳೊಬ್ಬಳನ್ನು ಅಪ್ಪಿದೆಯಾ? ನಾನು ಕೋಪಿಷ್ಠನಾದರೆ ಇಡೀ ಪ್ರಪಂಚವನ್ನೇ ಧ್ವಂಸ ಮಾಡಬಲ್ಲೆ'' ಎಂದು ಗದರಿದಂತಾಗಿ ಭೋಜ ಬೆಬ್ಬೆಬ್ಬೆ ಅನ್ನುವುದೂ ಸಾಧ್ಯವಾಗದೆ, ಜೋರಾಗಿ ಕಿರುಚಿ ಬಿದ್ದಿದ್ದು, ಅವನ ಕಚ್ಚೆ, ಮುಂಡು ಪಂಚೆಯೆಲ್ಲ ಉಚ್ಚೆಮಯವಾಗಿದ್ದು.

ಇದು ಭೋಜನಿಗೆ ತಿಳಿದುದು ಅವನಿಗೆ ಪ್ರಜ್ಞೆ ಬಂದ ಮೇಲೆಯೇ. ತಾಯಿ ಮೂಕಾಂಬಿಕಾ ಅವನನ್ನು ಮನೆಗೆ ಹೊತ್ತು ತಂದು ಹಾಸಿಗೆ ಮೇಲೆ ಮಲಗಿಸಿ "ದೇವರೇ ಗಣಪತಿ, ನನ್ನ ಮಗನಿಗೆ ಯಾವ ದೆವ್ವದ ಕಾಟವೋ ಪರಿಹಾರ ಮಾಡು'' ಎಂದು ಕೈ ಮುಗಿದು ಕೇಳಿಕೊಂಡು ಮಂತ್ರಿಸಿದ ಬೂದಿಯನ್ನು ಹಣೆಗೆ ಇಟ್ಟಾಗಲೇ.

ಮರುದಿನ ಮಿಂದು, ಮಡಿಯುಟ್ಟು ಶುಚಿರ್ಭೂತರಾಗಿ ತನ್ನ ಮಗನ ಜಾತಕವನ್ನು ಪರಿಶೀಲಿಸಿದರು ಶಂಕರಯ್ಯ. ಸರಿಯಾಗಿದ್ದವ ರಾವು ಬಡಿದವನಂತೆ ವರ್ತಿಸಬೇಕಾದರೆ ಏನು ಕಾರಣವಿರಬಹುದೆಂಬುದನ್ನು ನವಗ್ರಹಗಳ ಪಥವನ್ನೋದಿ ಅರಿಯಲು ಪ್ರಯತ್ನಿಸಿದರು. ಏಳೂವರೆ ಶನಿ ಇವನ ಜನ್ಮ ರಾಶಿಗೆ ಕಾಲಿಡುವ ಮುನ್ಸೂಚನೆಯೋ? ಇರಬಹುದೇನೋ. .

ಮೂಕಾಂಬಿಕೆಯ ಯೋಚನಾ ಸರಣಿಯೇ ಬೇರೆ. ಇವನಿಗೆ ಯಾವುದೋ ಕೆಟ್ಟದೃಷ್ಟಿ ಬಿದ್ದಿದೆ. ದೃಷ್ಟಿ ನಿವಾಳಿಸಬೇಕು ಅಥವಾ ಅವನು ಎಲ್ಲೋ ಹೆದರಿಕೊಂಡಿದ್ದಾನೆ. ಹೆದರಿಕೆ ತೆಗೆಯಬೇಕು. ಮಗನನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಅವನ ಹಿಂದೆ ನೀರಿನ ಪಾತ್ರೆಯಿಟ್ಟು ಅದಕ್ಕಿಟ್ಟು ಕೆಂಡ ಸುರಿದರು. ದೇಹಕ್ಕೆ ಪೂರಕ ಕಡ್ಡಿ ನಿವಾಳಿಸಿ ಆದಕ್ಕೆ ಬೆಂಕಿ ಹಚ್ಚೆ ಅದು ಉರಿಯುತ್ತ ಸಟಪಟ ಎಂದು ಸದ್ದು ಮಾಡಿದಾಗ ದೃಷ್ಟಿಯಾಗಿದ್ದೇ ನಿಜ ಎಂದು ನಂಬಿದರು.

ಕೆಲಕಾಲ ಅಪರಾಧೀ ಪ್ರಜ್ಞೆಯಿಂದ ನರಳಿದರೂ, ಲಚ್ಚಿಯ ಕಿಲಕಿಲ ನಗು, ಚೂಟಿತನ ಅವನನ್ನು ಮತ್ತೆ ಅವಳತ್ತ ಆಕರ್ಷಿಸತೊಡಗಿತು. ಮತ್ತೆ ತನ್ನ ಕ್ರಿಯೆಯನ್ನು ಸಮರ್ಥಿಸಿಕೊಳ್ಳುತ್ತ, ಈ ದರ್ಶನ ಗಿರ್ಶನಗಳೆಲ್ಲ ಬೊಗಳೆ, ಶೂದ್ರರ ಪರವಾಗಿ ತನ್ನಪ್ಪಯ್ಯನೇ ಪ್ರಶ್ನೆ ಕೇಳುತ್ತಾರೆ.

ಹರಾಜು

ಪ್ರೀತಿಯೆಂಬ ಸಾಲಕ್ಕೆ
ಒತ್ತೆಯಿಟ್ಟ ನನ್ನ ಹೃದಯ
ನೀ ಮಾಡಿದ ಮೋಸಕ್ಕೆ ಈಗ
ಅದು ಹರಾಜಿಗೆ ಸಿದ್ಧವಾಗಿದೆ.

— ಬಸವರಾಜ ಈ. ಸಿಂಧೆ



ಮೊದಲೇ ಏನೇನು ಕೇಳುತ್ತಾರೆಂಬುದನ್ನು ಹೇಳಿರುತ್ತಾರೆ. "ಮೈಮೇಲೂ ಬತ್ತಿಲ್ಲೆ ಎಂತದೂ ಇಲ್ಲ" ಎಂಬ ಭಾವನೆಗಳು. ಅವನ ಮನಸ್ಸಲ್ಲಿ ಹುಟ್ಟಿ ಎದೆಗೊಂದಿಷ್ಟು ಧೈರ್ಯ ಉಣ್ಣಿಸುತ್ತಿದ್ದವು. ಲಚ್ಚಿಯ ಪ್ರಬಲ ಚುಂಬಕತ್ವದಿಂದ ತನ್ನನ್ನು ಬಚಾಯಿಸಿಕೊಳ್ಳಲು ಸಾಧ್ಯವಾಗಲಿಲ್ಲ ಅವನಿಗೆ.

ಅಂದು ಅವರಲ್ಲಿ ಪರಸ್ಪರ ಕುತೂಹಲಕ್ಕಿಂತ ಇನ್ನೇನೂ ಇರಲಿಲ್ಲ. ಹತ್ತಿರವಿದ್ದಾಗ ಮೈಯಲ್ಲಿ ಉತ್ಸಾಹ ಹುಟ್ಟುತ್ತದೆ. ದೇಹ ಹಗುರಾಗುತ್ತದೆ. ಉಸಿರು ಭಾರವಾಗುತ್ತದೆ. ಅನೂಹ್ಯ ಲೋಕವೊಂದರಲ್ಲಿ ವಿಹರಿಸಿದ ಅನುಭವವಾಗುತ್ತದೆ ಏಕೆ?

ಹತ್ತು ಹಲವಾರು ಪ್ರಶ್ನೆಗಳು. ಗಂಡಿನೊಡನೆ ಮದುವೆ ಮಾಡಲು ಹೆಣ್ಣನ್ನೇಕೆ ಹುಡುಕುತ್ತಾರೆ, ಏಕೆ? ಹೆಣ್ಣಿನೊಡನೆ ಹೆಣ್ಣೇಕೆ ಲಗ್ನವಾಗಬಾರದು? ಅವರಲ್ಲಿನ ವೈರುಧ್ಯವೇನು. ಅಪ್ಪಯ್ಯ ಅಮ್ಮ ಒಟ್ಟಿಗೇ ಮಲಗುತ್ತಾರೆ ಏಕೆ? ಅಮ್ಮ ಅಪ್ಪಯ್ಯನ ಎಂಜಲನ್ನೂ ಏಕೆ ಅಸಹ್ಯಿಸಿಕೊಳ್ಳದೆ ತಿನ್ನುತ್ತಾಳೆ. ಅವರಿಬ್ಬರು ಪರಸ್ಪರ ಸ್ಪರ್ಶಿಸುವುದು ತಪ್ಪಲ್ಲವಾದರೆ ಬೇರೆಯವರದೇಕೆ ತಪ್ಪು? ಅಮ್ಮನೊಡನೆ ನಾನು ಮಲಗುವುದು ಹೇಗೆ ನಾಚಿಕೆಗೇಡಿನ ವಿಷಯ?

ಹೀಗೆ ಹಲವಾರು ಉತ್ತರವಿರದ, ಉತ್ತರ ಸಿಗದಿರಬಹುದಾದ ಪ್ರಶ್ನೆಗಳ ಸರಣಿಗೆ ಕುತೂಹಲಕ್ಕೆ ಪರಿಹಾರ ತಿಳಿಯುವ ಕ್ರಿಯೆ ಮಾತ್ರ ಭೋಜನದು.

ಒಂದು ಮುಂಜಾನೆ, ಅದು ಚಳಿಗಾಲ, ಬತ್ತ ಬೇಯಿಸುವ ಒಲೆಯ ಮುಂದೆ ಮಗನನ್ನು ಕುಳ್ಳಿರಿಸಿಕೊಂಡು ಶಂಕರಯ್ಯ ಹೇಳಿಕೊಟ್ಟಿದ್ದು ಅಮರಕೋಶವಲ್ಲ. ರುದ್ರ ಪವಮಾನಗಳೂ ಅಲ್ಲ. ಬದಲಿಗೆ ಶಂಕರಾಚಾರ್ಯರ ಕೃತಿಗಳು "ನಾರೀ ಸ್ತನಭರ ನಾಭೀದೇಶಂ ದೃಷ್ಟ್ವಾ" ಅಂದರೆ 'ಸ್ತ್ರೀಯ ಎದೆಯ ಭಾಗವನ್ನು ಕಂಡು ಮೋಹಪರವಶನಾಗಬೇಡ. ಅದು ಒಂದು ಮಾಂಸವಿಕಾರ.'

ಅದೊಂದು ಒಗಟಾಗಿಯೇ ಉಳಿಯಿತು, ಭೋಜನಿಗೆ ತನ್ನ ತಂದೆಯವರು ವಿಷಯಾಂತರ ಮಾಡಿದ್ದು ಯಾಕೆ? ಅದೂ ಸ್ತ್ರೀಯ ವಿಷಯ. ಅವಳ ಎದೆ ಭಾಗದ ವಿಷಯ. ಅಂದರೆ ತನ್ನ ಅನಿಸಿಕೆಗಳೇನಾದರೂ ಅವರಿಗೆ ತಿಳಿದಿರಬಹುದೇ? ವರ್ಣರಂಜಿತ ಕನಸುಗಳು ತುಂಬಿದ್ದ ರಾತ್ರಿಯಲ್ಲಿ ತಾನೇನಾದರೂ ಕನವರಿಸಿರಬಹುದೇ. ಆ ಕನವರಿಕೆಗಳಿಗೇನಾದರೂ ಅರ್ಥ ಕಟ್ಟಿ?

ಅದೊಂದು ಬೇಸಗೆಯ ದಿನ. ದನಗಳು ಹಟ್ಟಿಯ ಕಡೆಗೆ, ಹಕ್ಕಿಗಳು ಸಾಲುಸಾಲಾಗಿ ಗೂಡ ಕಡೆಗೆ ಸಾಗುವ ಹೊತ್ತು. ಸೂರ್ಯನನ್ನು ರಕ್ತ ಕಾರಿಸುತ್ತ ಸಮುದ್ರದಲ್ಲಿ ಮುಳುಗಿಸಿ, ಸೊಟ್ಟ ಚಂದ್ರನನ್ನು ಬಾನಿನಲ್ಲಿ ಮೋಡದೊಂದಿಗೆ ಕಣ್ಣು ಮುಚ್ಚಾಲೆಯಾಡಲು ಬಿಡುವ

ಹೊತ್ತು. ಅನೈಚ್ಛಿಕವಾಗಿ ಭೋಜನ ಕಾಲುಗಳು ಮಾದನ ಮನೆಯತ್ತ ನಡೆದವು.

ಮಾದ ಆ ಹೊತ್ತು ಮನೆಯಲ್ಲಿ ಇರುವುದಿಲ್ಲ. ಕಪ್ಪು, ಕೆಂಪು ಬಣ್ಣಗಳ ಮಡಕೆಯನ್ನು ಕಣ್‌ಹೆಡಗೆ(ಬಳ್ಳಿಯಿಂದ ಮಾಡಿದ ದೊಡ್ಡ ಬುಟ್ಟಿ)ಯಲ್ಲಿ ಹೊತ್ತು ಯಾವುದಾದರೂ ಸಂತೆಗೆ ಹೋಗಿರುತ್ತಾನೆ. ಬರುವುದು ಒಂದು ಜಾವ ಕಳೆದ ಮೇಲೆಯೇ. ಲಚ್ಚಿ ಕೊಟ್ಟಿಗೆಯಲ್ಲಿ ಗಂಟೆಗಳ ಕುತ್ತಿಗೆಗೆ ಹಗ್ಗ ಬಿಗಿದು ಎದುರಿನ ಬಾಣಿಗೆ ಅಕ್ಕಚ್ಚೋ ಬಾಯರೋ ಸುರಿದು ರಾತ್ರಿಯೂಟಕ್ಕೆ ಗಂಜಿ ಬೇಯಿಸುವ ಕ್ರಿಯೆಯಲ್ಲಿ ಮುಳುಗಿರುವ ಹೊತ್ತು. ಇಷ್ಟು ದಿನಗಳ ಫಲಹೀನ ಕೃತಿಗಿಷ್ಟು ಕ್ರಿಯೆ ಕೊಡಬೇಕು ಎಂದು ಗಟ್ಟಿ ಮನಸ್ಸಿನಿಂದ ನಿರ್ಧರಿಸಿದಂತಿತ್ತು ಭೋಜ.

ಕೈಗೆ ಸಿಗದೇ ತಪ್ಪಿಸಿಕೊಳ್ಳುತ್ತಿದ್ದ ಕೋಳಿಗಳನ್ನು ಹಿಡಿದು ಗೂಡಿಗೆ ತುಂಬಲು ಅವುಗಳ ಹಿಂದೆ ಓಡಾಡುತ್ತಿದ್ದಳು ಲಚ್ಚಿ. ಕೊಕ್ಕೊಕ್ಕೋ ಎಂದು ಕೂಗುತ್ತ, ಮಾಡ ಮೇಲೋ ಚಪ್ಪರದ ಮೇಲೋ ಓಡಾಡುವ ಅವನ್ನು ಕೂಡಿ ಹಾಕದಿದ್ದರೆ ಕೆಲವಾದರೂ ಅಂದು ಕಾಡು ನರಿಗಳಿಗೆ ಆಹಾರವಾಗುವುದು ಖಂಡಿತ. ಅವಳು ನಡು ಬಗ್ಗಿಸಿ ಓಡುವಾಗ ಅವಳ ನುಣುಪಾದ ತೊಡೆಗಳು ಲಂಗದ ಕೆಳಗಿನಿಂದ ಬೆಳಕನ್ನು ಕುಡಿಯುತ್ತಿದ್ದವು. ಭೋಜನಿಗೆ ಅವಳನ್ನು ನೋಡುತ್ತ ನೋಡುತ್ತ ತನ್ನ ಭಾವನೆಗಳನ್ನು ಅದುಮಿ ಹಿಡಿಯಲಾಗಲಿಲ್ಲ. ಕಳ್ಳ ಹೆಜ್ಜೆಯಿಟ್ಟು ಹೋಗಿ ಹಿಂದಿನಿಂದ ಅವಳನ್ನು ಬಳಸಿದ.

ತಿರುಗಿ ನೋಡಿ ಯಾರೆಂದು ಕಂಡು 'ಅಯ್ಯೋ ಬಿಡಿ ಅಯ್ಯಾ, ಮೈ ಹೆಟ್ಟುತ್ತು' ಎಂಬ ಮಾಮೂಲಿನ ರಾಗ ಹಾಡಿ, ನೀನು ಕಡ್ಡಿ ಎಂಬುದನ್ನು ಸೂಚ್ಯವಾಗಿ ಮತ್ತೊಮ್ಮೆ ಹೇಳಿ ಹುಸಿಮುನಿಸು ತೋರಿದಳು. ಗೂಡು ಸೇರುವ ಹಕ್ಕಿಗಳು ಚಿವ ಚಿವ್ ಸದ್ದು ಮಾಡುತ್ತಿದ್ದವು. ಕಾಗೆಗಳು ಕ್ರಾವ್ ಕ್ರಾವ್ ಎಂದು ಹಾಡುತ್ತಿದ್ದವು.

ಅವಳ ಬಿಳಿಯ ಹೂಗೆನ್ನೆಗಳಿಗೆ ತನ್ನ ಕೆನ್ನೆ ತಿಕ್ಕಿ ಅಂದ ಭೋಜ "ಬಾ ಮನೆಯೊಳಗೆ ಹೋಪೋ."

ಆಕೆ ಮತ್ತೆ ಕಿಲಕಿಲ ನಕ್ಕು ಅವನ ಮನಸ್ಸನ್ನು ಪೀಡಿಸಿದಳು "ಸುಮ್ನಾಯ್ಕಣಿ, ನಂಗೆ ಮದಿ ಆಯಲಿ ಆಮೇಲೆ ಕಾಂಬೊ."

ಅವನು ಕೋಪಗೊಂಡ, ಅದು ಅಸಹಾಯಕತೆಯ ಕೋಪ. ಶಾಪಾನುಗ್ರಹ ಶಕ್ತಿಯುಳ್ಳವನಾಗಿದ್ದರೆ ಅವಳನ್ನು ಅಲ್ಲೇ ಧ್ವಂಸ ಮಾಡಿ, ಹಿಡಿಬೂದಿಯನ್ನಾಗಿಸಿ ಬಿಡುತ್ತಿದ್ದನೋ ಏನೋ. ಆದರೆ ಲಚ್ಚಿಯ ಅದೃಷ್ಟ, ಅವನಿಗೆ ಆ ಶಕ್ತಿಯಿರಲಿಲ್ಲ.

"ಹೆಣ್ಣು ಮಕ್ಕಳ ಹಾಂಗೆ ಇದ್ರಿ, ತಟಕು (ಸ್ವಲ್ಪ) ದಪ್ಪ ಆಯ್ನಿ." ಲಚ್ಚಿಯ ಮಾತನ್ನು ಸವಾಲೆಂಬಂತೆ ಸ್ವೀಕರಿಸಿದ ಭೋಜ. ಜೊತೆಗೆ ತನ್ನ ಎಲ್ಲ ಪ್ರಯತ್ನಗಳೂ ನಿರುಪಯುಕ್ತವಾದ ನೋವು.

ಇತರ ಜಾತಿಯವರೇಕೆ ಸುಪುಷ್ಟರಾಗಿರುತ್ತಾರೆ? ಮಾಂಸ ತಿಂದೇ ಇರಬಹುದು. ಆತ ಯೋಚಿಸಿದ ತಾನೂ ಮಾಂಸ ಭಕ್ಷಿಸಿದರೆ ಹೇಗೆ, ದೃಢ ಮನಸ್ಸು ಮಾಡಿಕೊಂಡವನಂತೆ ಹೇಳಿದ "ನಾನು ಮಾಂಸ ತಿಂತೆ."

ಲಚ್ಚಿ ಲೇವಡಿ ಮಾಡುವವಳಂತೆ ಮತ್ತೆ ನಕ್ಕಳು. ನೆಲ ಕೆದರುತ್ತ ಕಾಲು ಆರಿಸುತ್ತಿದ್ದ

ಹಸಿವು ಕಲಿಸುವಷ್ಟು ಪಾಠಗಳನ್ನು ಯಾವ ವಿಶ್ವವಿದ್ಯಾಲಯವೂ ಕಲಿಸಲಾರದು.

— ಬೀಚಿ

ಅಹಂಕಾರ ಬೆಳೆಯುವ ಗಿಡಕ್ಕೆ ಹತ್ತುವ ರೋಗ. — ತ. ರಾ. ಸು.

ಕಾವ್ಯ ಒಂದು ಶಬ್ದ ಶಿಲ್ಪ.

— ಪು. ತಿ. ನರಸಿಂಹಾಚಾರ್

ಹೃದಯವಿಲ್ಲದ ಶರೀರಕ್ಕೆ ಸೌಂದರ್ಯ ವ್ಯರ್ಥ. — ವಿವೇಕಾನಂದ

ಸಂಗ್ರಹ :

ಶ್ರೀನಿವಾಸ ಎಲ್. ತಾತಾಳಗೇರಿ



ಕೋಳಿಯನ್ನು ಹಿಡಿದು ಮರದ ಗೂಡೊಳಗೆ ಕೂಡಿ ಹಾಕುತ್ತ ಸವಾಲೆಸೆದಳು "ಮೀನು ತಿಂತ್ರಾ ಅಯ್ಯ?"

"ಹೋ" ಮೊದಲೇ ನಿಶ್ಚಯಿಸಿಕೊಂಡವನಂತೆ ಹೇಳಿದ ಭೋಜ. "ಕೊಡು."

ಊರ ಹೊಳೆಯಿಂದ ಹಿಡಿದ ಕಾಣೆ ಮೀನುಗಳನ್ನು ಅಡುಗೆ ಮಾಡಿ ಇಟ್ಟಿದ್ದಳು ಲಚ್ಚಿ. ಅದನ್ನು ಇವನಿಗೆ ಕೊಟ್ಟರೆ ತಿನ್ನುತ್ತಾನೆಯೇ, ತಿಂದರೆ ಅದು ಧರ್ಮಕ್ಕೆ ವಿರುದ್ಧವಲ್ಲವೇ? ಈ ಹಲವಾರು ಪ್ರಶ್ನೆಗಳು ಅವಳನ್ನು ಬಾಧಿಸುತ್ತಿರುವಾಗಲೇ ಭೋಜ ಮತ್ತೊಮ್ಮೆ ಒತ್ತಾಯಿಸಿದ "ಕೊಡುವ್ಯಲೇ."

ಅವಳು ತಟ್ಟಿ ಬಾಗಿಲು ನೂಕಿದಳು. ಜೊತೆಗೆ ಒಳಬರಲು ಸಿದ್ಧವಾದ ನಾಯಿಯನ್ನು ಹಚಾ ಹಚಾ ಎಂದು ಗದರಿಸಿದಳು. ಉರಿಯುವ ಒಲೆಯಿಂದ ಚಿಮಣಿ ದೀಪ ಅಂಟಿಸಿ ಬಾಡು ಇಟ್ಟಿದ್ದ ಪಾತ್ರೆಯತ್ತ ಹೋದಳು.

ಹೊರಗೆ ಕತ್ತಲಾಗಿತ್ತು. ಗಬ್ಬೂರಿನ ಬೀದಿಯಲ್ಲಿ ಯಕ್ಷಗಾನದ ತಂಡವೊಂದು ಪ್ರಚಾರ ಮಾಡುತ್ತಿರುವ ಸದ್ದು ಗಾಳಿಯಲ್ಲಿ ತೇಲಿಬಂತು.

ಎಲ್ಲಕ್ಕೂ ತಯಾರಾಗಿಯೇ ಬಂದಿದ್ದ ಭೋಜ. ಈಗ ಸೀದಾ ಒಳಗೆ ನುಗ್ಗಿದರೆ ಹೇಗೆ, ಅವಳನ್ನೂ ಮಾಂಸವನ್ನೂ ಒಟ್ಟಿಗೇ ಭಕ್ಷಿಸಿದರೆ ಹೇಗೆ?

ಅವಳು ಮೀನಿನ ತುಂಡೊಂಡನ್ನು ಎತ್ತಿ ಅವನೆದುರು ಹಿಡಿದಳು "ತಗಣಿ" ಎಂದಳು. ಗಾಳಿಗೆ ನರ್ತಿಸುವ ಚಿಮಣಿ ದೀಪದ ಅಸ್ಪಷ್ಟ ಬೆಳಕಿನಲ್ಲಿ ಆ ತುಂಡನ್ನು ಗಮನಿಸಿದ ಆತ. ಬೆಂದ ಬದನೆಕಾಯಿ ಹೋಳಿನ ನೆನಪಾಯಿತು. ಹೊಳೆಯಲ್ಲೋ ಕರೆಯಲ್ಲೋ ನಿರ್ಬಂಧಿತವಾಗಿ ಓಡಾಡಿಕೊಂಡಿದ್ದ ಮೀನೊಂದು ಶವವಾಗಿ ಎದುರು ನಿಂತು ತಿನ್ನು ನನ್ನನ್ನು ಎಂದು ಹೇಳಿದಂತೆ ಅಸಹ್ಯವಾಗಿ ಬೇಡ ಅನ್ನಲಾಗದೆ, ಬೇಕು ಎನ್ನಲೂ ಆಗದೆ ಗೊಂದಲವಾಗಿ, ಗಟ್ಟಿ ಮನಸ್ಸು ಮಾಡಿ ಅದನ್ನು ಕೈಯಲ್ಲಿ ಹಿಡಿದುಕೊಂಡು ಮುಂದಿನೆರಡು ಹಲ್ಲು ಹುಟ್ಟಲೇ ಇಲ್ಲವಾದ

ಕಾರಣ ಮತ್ತಷ್ಟು ಹೇಸಿಗೆಯಿಂದಲೇ ಅದನ್ನು ದವಡೆಗೆ ನೂಕಿ ಒಂದೇ ಬಾರಿಗೆ ಕಡಿಯುವಷ್ಟ ಮಧ್ಯಾಹ್ನ ತಿಂದದ್ದೆಲ್ಲ ವಾಂತಿಯಾಗಿ ಹೊರಬಂತು. ನಿಂತಲ್ಲೇ ವಕ್ ಎಂದು ಮೈಮೇ ಕಕ್ಕಿಕೊಂಡ. ಹೊಟ್ಟೆಯ ಕರುಳು ಕೂಡ ಹೊರಬಂದಿದೆಯೇನೋ ಎನ್ನಿಸಿತು. ಅಲ್ಲೇ ಕಾದಿ ನಾಯಿ ಕೆಳಗೆ ಜಾರಿದ ಮೀನಿನ ತುಂಡನ್ನು ಕಚ್ಚಿಕೊಂಡು ಓಟಕಿತ್ತಿತು.

"ಇಶ್ಶಿಶ್ಶಿ ಎಂತ ಮಾಡ್ಕಂಡ್ರಿ." ಲಚ್ಚಿ ಹೇಳಿದಾಗ ನಾಚಿಕೆಯಿಂದ ಮುದುರಿ ಗುಬ್ಬ ಮರಿಯಾಗಿಬಿಟ್ಟ. ಪ್ರಪ್ರಥಮವಾಗಿ ಅವನಿಗೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಹೇಸಿಗೆಯಾಯಿತು. ಮೈಮೇಲಾಗಿದ್ದ ಹೊಲಸನ್ನು ನೋಡುತ್ತ ಏನು ಮಾಡಬೇಕೆಂ ತೋಚದೆ ಕಲ್ಲಾಗಿ ನಿಂತ.

"ಬನ್ನಿಯೇ ಇಲ್ಲಿ." ಲಚ್ಚಿ ಅವನನ್ನು ದರದರ ಬಾವಿಕಟ್ಟೆ ಹತ್ತಿರ ಎಳೆದಳು. ನೀ ತುಂಬಿದ ಬಾಣಿಗೆ ಚೆಂಬು ಮುಳುಗಿಸಿ ಅವನ ಮೇಲೆ ಸುರಿದಳು. ಉಟ್ಟಿದ್ದ ಪಂಚೆಯನ್ನು ಬಿ ಅಲ್ಲೇ ಮುದ್ದೆ ಮಾಡಿ ಹಾಕಿ ಲಂಗೋಟಿಯ ಮೇಲೂ ಒಂದಷ್ಟು ನೀರು ಸುರುವಿ ಕೈಯಿಂ ಚೊಕ್ಕಗೊಳಿಸಿದರು.

ನಿಶ್ಚಲನಾಗಿ ನಿಂತೇ ಇದ್ದ ಭೋಜ. ಒಮ್ಮೆ ನಕ್ಕ ಚಂದ್ರ ಮೋಡದ ಮರೆಯ ಲಜ್ಜೆಯಿಂದ ಮರೆಯಾದ.

"ನಿಂ ಕೈಲಿ ಆತ್ತಿಲ್ಯೇ, ನೀವು ಮನೆಗೆ ಹೋಯ್ನಿ" ಎಂದಳು ಲಚ್ಚಿ. ಸೂ ಸಾ ಎನ್ನ ತಲೆಯನ್ನೇ ಎತ್ತದೆ ಅಲ್ಲಿಂದ ಹೊರಟ ಭೋಜ.

ರಾತ್ರಿ ಊಟವೂ ಸೇರಲಿಲ್ಲ ಅವನಿಗೆ. ಬಾಳೆ ಎಲೆಯ ತುಂಬ ಮೀನಿನ ತುಂಡುಗ ಕಾಣಿಸಿಕೊಂಡವು. "ಎಂತಕಾ ಉಂತಿಲ್ಲೆ?" ಎಂಬ ತಾಯಿಯ ಪ್ರಶ್ನೆಗೆ ಆತ ಉತ್ತರಿಸಲಿ ಮಗ ಒಂದು ತುತ್ತು ಕಡಿಮೆ ತಿಂದರೂ ತಾಯಿಗೆ ತಿಳಿಯುತ್ತದೆ. ತಾಯಿಯ ಹೃದಯ ಹಾಗೆ.

ಮರುದಿನವೇ ಶಂಕರಯ್ಯ ಹೆಂಡತಿಗೆ ಹೇಳಿದ್ದು "ಭೋಜನಿಗೆ ಮದ್ವೆ ಮಾಡಕು."

ಮದುವೆಯೆಂಬ ಶಬ್ದ ಕಿವಿಗೆ ಬಿದ್ದೊಡನೆ ಭೋಜನ ಸ್ಮೃತಿಯಲ್ಲಿ ಮೂಡಿದ್ದು ದೊ ಚಪ್ಪರ, ಗರ್ನಾಲು, ಪೆಟ್ರೋಮ್ಯಾಕ್ಸ್, ಲೈಟು, ಗಡದ್ದು ಊಟ, ವಧೂವರರು ಉತ್ಸ ಮೂರ್ತಿಗಳು. ಅವರ ನೆವದಲ್ಲಿ ಒಂದಷ್ಟು ಕುಶಿ ಪಡುವುವು.

"ಮದಿ ಮಾಡ್ಕಂಡು ಎಂತ ಮಾಡ್ತ್ಯಾ?" ಯಾರೋ ಭೋಜನನ್ನೂ ಕೇಳಿದ್ದರ ಮದುವೆಯ ಹಿಂದೆ ಸಂತೋಷಕರವಾದ ಇನ್ನೇನೋ ಇದೆ. ಆದರೆ ಅದೇನೆಂದು ಸ್ಪಷ್ಟವಾ ತಿಳಿಯದು ಆತನಿಗೆ. ಏನು ಉತ್ತರಿಸುವುದೆಂದು ತಿಳಿಯದೆ ಬೆಬ್ಬೆಬ್ಬೆ ಅಂದಿದ್ದ.

ಎಲ್ಲ ಕನಸಿನಂತೆಯೇ ನಡೆದು ಹೋಯಿತು. ಆದರೆ ಬೆರಗುಗಣ್ಣಿನ ಎಣ್ಣೆಗಪ್ಪು ಮೈಯ ಗುಂಡು ಮುಖದ ಜಾಹ್ನವಿ ಮನೆಗೆ ಬರಲಿಲ್ಲ. ಯಾಕೆಂದರೆ ಅವಳು ದೊಡ್ಡವಳಾಗಿಲ್ಲವಂ ದೊಡ್ಡವಳಾಗುವುದೆಂದರೆ ಏನು? ಬಂದರೆ ಗೋಲಿಯನ್ನಾದರೂ ಆಡಬಹುದಿತ್ತು. ಅಟ್ಟದಿಂ ಚೆನ್ನೆಮಣೆ ಕೆಳಗಿಳಿಸಿ ಆಡಬಹುದಿತ್ತು. ಛೇ ಭೋಜ ಮನಸ್ಸಿನಲ್ಲೇ ಗೊಣಗಿಕೊಂಡಿದ್ದ.

ದಿನಗಳು ಬಹುಬೇಗ ಸಾಯುತ್ತದೆ ಕೆಲವೇ ವರ್ಷಗಳಲ್ಲಿ ಏನೇನೆಲ್ಲ ನಡೆಯಿತ್ತ ಶಂಕರಯ್ಯ ಬಾಯಿಯಿಂದ ಬಿಳಿಬಿಳಿ ನೊರೆ ಉಗುಳುತ್ತ ಕೆಲವೇ ಹೊತ್ತಿನಲ್ಲಿ ಗತಪ್ರಾಣರಾದ



ಭೋಜ ಶಿರಮುಂಡನ ಮಾಡಿಸಿಕೊಂಡು ಶವಕ್ಕೆ ಹೆಗಲುಕೊಟ್ಟ. ಭೂಮಸೂದೆ ಕಾಯ್ದೆ ಬಂದ ಆಸ್ತಿಯೆಲ್ಲ ಒಕ್ಕಲು ಪಾಲಾಯಿತು. ದೇವಸ್ಥಾನದ ಆದಾಯ ಕಡಿಮೆಯಾಯಿತು.

ಈ ದುರಂತಕ್ಕೆಲ್ಲ ಜಾಹ್ನವಿಯನ್ನೇ ಹೇತುವನ್ನಾಗಿ ಮಾಡಲಾಯಿತು. ಆಕೆ ಕಣ್ಣೀರಲ್ಲ ಕೈತೊಳೆದಳು. ಈ ಎಲ್ಲ ಘಟನೆಗಳ ನಡುವೆಯೂ ಭೋಜ ಸರಿದಾರಿಗೆ ಬರುವ ಸೂಚ ಕಾಣಲಿಲ್ಲ.

ರುದ್ರನಿಗೆ ಹೊಲದಾಚೆಯಲ್ಲಿ ಚಿಕ್ಕದೊಂದು ಗುಡಿಸಲು ಮೇಲೆದ್ದಿತು. ಅದರಲ್ಲಿ ಅವನ ವಾಸಿಸುವುದಿಲ್ಲವಾದರೂ ಮನೆ ಅವನದು. ಬಡವ, ನಾಳೆ ಮದುವೆ ಮಾಡಿಕೊಂಡರೆ ಬೇಕಲ್ಲ ಎಂಬುದು ಮೂಕಾಂಬಿಕೆಯ ಆಶಯವಾಗಿತ್ತು.

ಒಂದು ದಿನ ಮೂಕಾಂಬಿಕೆ ಮಗನನ್ನು ಕೇಳಿದರು "ರುದ್ರನಿಗೆ ಮದುವೆ ಮಾಡಿದರ ಹ್ಯಾಂಗೋ?''

ರುದ್ರ ಮನೆಯ ಸರ್ವಸ್ವವೂ ಆಗಿದ್ದ. ಪ್ರತಿಫಲಾಪೇಕ್ಷೆಯಿಲ್ಲದೆ ದುಡಿದ ಅವನ ಬಾಳನ್ನೊಂದು ಸೂತ್ರದಲ್ಲಿ ಬಂಧಿಸಿಡುವುದು ಸತ್ಕಾರ್ಯವೇ ಆಗಿತ್ತು.

"ಯಾರು ಹೆಣ್ಣು ಕೊಡ್ತಾರಮ್ಮ, ಅವನಿಗೆ ದಿಕ್ಕಿಲ್ಲೆ ದ್ಯಾತಿಲ್ಲೆ.'' ಭೋಜ ರಾಗವೆಳೆದ

ಆ ಕೂಡಲೇ ಭೋಜನ ನೆನಪಿಗೆ ಬಂದವಳು ಲಚ್ಚಿ. ಅವಳ ಅಪ್ಪ ಒಂದು ದಿನ ತಲೆಸುತ್ತಿ ಬಂದು ಬಿದ್ದವನು ಮೇಲೇಳಲೇ ಇಲ್ಲ. ಅವಳನ್ನು ರುದ್ರನಿಗೆ ತಂದರೆ?

"ಆ ಹೆಣ್ಣಿಗೂ ಒಂದು ಜೀವನ ಆತ್ತು'' ಭೋಜನೆಂದ. ಆ ಕೂಡಲೇ ಅವನ ಮನಸ್ಸಿನಲ್ಲಿ ಅವಳು ರುದ್ರನ ಹೆಸರಿನಲ್ಲಿ ತನಗೆ ಸುಖವಿತ್ತಾಳೆಂಬ ಲೋಲುಪ್ತತೆ ಎದ್ದಿತು. ಹೇಳಿದ್ದಳಲ್ಲ ಅವಳು "ಮದಿ ಆಯಿಲಿ ಕಾಂಬೊ'' ಅಂತ.

ಅದೇ ಸಮ ಅಂದರು ಮೂಕಾಂಬಿಕ ರುದ್ರನ ಅನುಪಸ್ಥಿತಿಯಲ್ಲಿ.

ಮರುದಿನ ರುದ್ರನನ್ನು ಕೇಳಿದರು ಮೂಕಾಂಬಿಕಮ್ಮ "ರುದ್ರ ನಿಂಗೂ ಪ್ರಾಯ ಆಯ್ತು. ಮದುವೆ ಮಾಡ್ಕಂತ್ಯಾ?''

ರುದ್ರ ಅವರ ಮುಖವನ್ನು ಕೆಲಕಾಲ ದಿಟ್ಟಿಸಿ ನೋಡಿ ತಲೆಬಾಗಿಸಿ ನೆಲ ನೋಡತೊಡಗಿದನೇ ಹೊರತು ಹೂಂ ಎಂದಾಗಲೀ ಉಹೂಂ ಎಂದಾಗಲೀ ಹೇಳಲಿಲ್ಲ.

"ಮೌನಂ ಸಮ್ಮತಿ ಲಕ್ಷಣಂ ಅಂತ್ರು. ಹೆಣ್ ಕಾಂಬುವಾ?'' ಇದಕ್ಕೂ ರುದ್ರ ಉತ್ತರಿಸಲಿಲ್ಲ. ಅವನ ಮುಖದಲ್ಲಿ ಪ್ರಸನ್ನತೆಯನ್ನು ಗಮನಿಸದಿರಲಿಲ್ಲ ಆಕೆ. ಮತ್ತೆ ಮುಂದುವರಿಸಿದರು. "ಹೆಣ್ಣು ಯಾರು ಗೊತ್ತಾನಾ, ಮಾದನ ಮಗಳು ಲಚ್ಚಿ. ಹೆಣ್ಣ್ ಗೊಂಬೆ ಕಣೀಗೆ ಇದ್ಹು, ಮದ್ವೆ ನಾವೇ ಮಾಡ್ತೋ ನೀನೇನೂ ಯೋಚ್ನೆ ಮಾಡ್ಬೇಡ.''

ಲಚ್ಚಿಯೊಂದಿಗೆ ರುದ್ರನ ಮದುವೆ ನಡೆದೇ ಹೋಯಿತು. ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಹಾರ ವಿನಿಮಯ ಮಾಡಿಕೊಂಡರು. ಬಾಂಬ್ರ ಮದುವೆಗೆ ಮಾಡುವಷ್ಟೇ ಒಳ್ಳೆಯ ಅಡುಗೆ ಮಾಡಿ ಬಡಿಸಿದ್ದರು ಮೂಕಾಂಬಿಕಮ್ಮ.

"ಬಿರಾಮ್ರ ಮನೆ ಊಟ ನಾಲಿಗೆಗೆ ಹಿಡಿದಿತ್ತು. ಈಗ ಲಾಯಕ್ಕಿಪ್ಪ ಹೆಣ್ಣಿನ ಜೊತೆಗೆ ಮದಿಯೂ ಆಯ್ತು. ರುದ್ರ ಅಡ್ಡಿಲ್ಲೆ, ಬುರ್ನಾಸಲ್ಲ.'' ಇದು ಊರವರ ಪ್ರತಿಕ್ರಿಯೆ.

ರುದ್ರನ ಕೆಲಸದ ವೈಖರಿ ಕಂಡು ಅವನನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸಿದವರು

ಸಮುದ್ರದಲ್ಲಿ ಮುಳುಗು ಹಾಕುವವರ ತರಬೇತಿಯ ಅನಂತರ ಪರೀಕ್ಷೆಯನ್ನು ತೆಗೆದುಕೊಳ್ಳಲಾಗುತ್ತಿತ್ತು. "ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ನಾವೇನು ಮಾಡಬೇಕು?" ಒಬ್ಬ ಅಭ್ಯರ್ಥಿ ಕೇಳಿದ.

"ಏನೂ ಮಾಡಬೇಕಾಗಿಲ್ಲ, ಹಿಂತಿರುಗಿ ಬಂದರೆ ಸಾಕು." ತರಬೇತಿದಾರ ತಟ್ಟನೆ ಉತ್ತರಿಸಿದ.

– ಜಯಪ್ರಸಾದ್



ಒಬ್ಬಿಬ್ಬರಲ್ಲ. ಅವನ ನಿರ್ಧಾರ ಅಚಲ. ಪ್ರಾಣ ಉಳಿಸಿದವರ ಮನೆಗೆ ಪ್ರಾಣ ಹೋಗುವತನಕ ದುಡಿಯುತ್ತೇನೆಂಬುದು. ಹಾಗಾಗಿ ಊರವರ ಕೊಂಕಾಗಲೀ, ಸಲಹೆಗಳಾಗಲೀ ಅವನ ಕಿವಿ ಕಿವುಡುತನವನ್ನೇ ತೋರಿದ್ದು.

ವಿವಾಹವಾದ ಮೇಲೂ ತನ್ನ ವೃತ್ತಿ ಧರ್ಮವನ್ನು ಕೈಬಿಡಲಿಲ್ಲ. ಮಡಕೆ ಕುಡಿಕೆ ಮಾಡಿ ತಾನೇ ಸಂತೆಗೆ ಹೊತ್ತು ಮಾರಿ ಬರುತ್ತಿದ್ದಳು. ಅವಳ ಬಗ್ಗೆ ಏನೇನೋ ಕೆಟ್ಟ ಮಾತುಗಳು ಊರಲ್ಲೆಲ್ಲ ಹರಡಿದರೂ ಅವಳದಕ್ಕೆ ಗಮನ ಕೊಡುತ್ತಿರಲಿಲ್ಲ.

ಲಚ್ಚಿ ಗುಂಡಗುಂಡಗೆ ಬೆಳ್ಳಬೆಳ್ಳಗೆ ಬೆಳೆದಿದ್ದಳು. ಅವಳ ಮುಖದಲ್ಲಿ ಸದಾ ನಗುವಿನ ಛಾಪು ಅಚ್ಚೊತ್ತಿದಂತಿತ್ತು. ಸ್ವಲ್ಪವೇ ಹೊರಸಾರಿದ ತುಟಿಗಳು ಚುಂಬನಕ್ಕಾಗಿ ಕಾದು ನಿಂತಂತಿದ್ದವು. ಯಾರಿಗೇ ಆಗಲಿ ಒಮ್ಮೆ ನೋಡಿದರೆ ಮತ್ತೊಮ್ಮೆ ಅವಳತ್ತ ಕಣ್ಣು ಹಾಯಿಸಬೇಕು ಎಂಬ ಇಚ್ಚೆಯನ್ನು ತಡೆಯಲಾಗುತ್ತಿರಲಿಲ್ಲ.

ರುದ್ರನ ಜೀವನದಲ್ಲಿ ಅವಳ ಸೌಂದರ್ಯವಾಗಲೀ, ಅವಳ ಬಗೆಗಿನ ಮಾತುಗಳಾಗಲೀ ಪರಿಣಾಮ ಬೀರಿದಂತಿರಲಿಲ್ಲ. ರಾತ್ರಿ ಮಲಗಲು ಮನೆಗೆ ಹೋಗುತ್ತಿದ್ದ ಹೆಂಡತಿಗೂ ಜಾಹ್ನವಿಯೇ ಅನ್ನ ಹುಳಿ ಕಳುಹಿಸುತ್ತಿದ್ದಳು.

ಶನಿವಾರದ ಕುಂದಾಪುರ ಸಂತೆಗೆ ಗಾಡಿ ತುಂಬ ತೆಂಗಿನಕಾಯಿ ತೆಗೆದುಕೊಂಡ ಹೋದ ರುದ್ರ ಅದನ್ನು ಮಾರಿ ಹಿಂದಿರುಗುವುದು ಅರ್ಧ ರಾತ್ರಿ ಕಳೆದ ಮೇಲೆಯೇ ಎಂದು ತಿಳಿದಿದ್ದ ಭೋಜಯ್ಯ ಸಂಜೆ ಸಂಜೆಮಲ್ಲಿಗೆ ಮರಳುವ ಹೊತ್ತಿಗೆ ಲಚ್ಚಿಯ ಮನೆಯತ್ತ ಹೊರಟರು. ಅವಳ ಮನೆಯ ಮುಂದೆ ಹಬ್ಬಿದ್ದ ಜಾಜಿ ಬಳ್ಳಿಗಳಲ್ಲಿ ಅರಳಿದ್ದ ಹೂಗಳು ಅವಳನ್ನು ನಗುನಗುತ್ತ ಸ್ವಾಗತಿಸಿದವು.

ಅತ್ತಿತ್ತ ದೃಷ್ಟಿ ಹರಿಸಿ, ಕಳ್ಳ ಹೆಜ್ಜೆಯಿಡುತ್ತ, ತೊಡಮೆಯ ಗಳಗಳನ್ನು ಸರಿಸಿ ಮನೆಯ ವಠಾರಕ್ಕೆ ಬಂದರು. ಕದ ಮುಚ್ಚಿತ್ತು. ವಠಾರದಲ್ಲಿ ಹಲವು ಅರೆಬೆಂದ ಮಡಕೆಗಳು ಬಾಯಿತೆರೆದುಕೊಂಡು ಆಕಾಶ ನೋಡುತ್ತ ಕುಳಿತಿದ್ದವು. ತೊಂಡೆ ಚಪ್ಪರದಲ್ಲಿ ಕೆಂಪನೆಯ ತೊಂಡೆಹಣ್ಣುಗಳನ್ನು ಕಾಣಿಸುತ್ತಿದ್ದವು.

ಮೆಲ್ಲನೆ ಕದ ತಟ್ಟಿದರು ಭೋಜಯ್ಯ. ಉತ್ತರ ಬರಲಿಲ್ಲ. ಸ್ವಲ್ಪ ಜೋರಾಗಿ ಚಿಲಕ ಬಡಿದರು. ಒಳಗಿನಿಂದ ತೂರಿಬಂತು ಲಚ್ಚಿಯ ದನಿ "ಯಾರದು?"

"ನಾನು." ತನಗೇ ಕೇಳಿಸದಷ್ಟು ಸಣ್ಣ ದನಿಯಲ್ಲಿ ಅಂದರು ಭೋಜಯ್ಯ. ಲಚ್ಚಿ ಕದ ತೆರೆಯಲಿಲ್ಲ. ಮನೆಯ ಹಿಂದೆಲ್ಲೋ ಕಪ್ಪೆಯ ರೋದನ ಕೇಳಿಸಿತು. ಬಹುಶಾ ಹಾವೊಂದು ಅದನ್ನು ಕಬಳಿಸುತ್ತಿರಬಹುದು.

"ಅವರು ಮನೆಯಲ್ಲಿ ಇಲ್ಲೆ, ಕುಂದಾಪುರಕ್ಕೆ ಹೋಯಿರು." ಲಚ್ಚಿ ಕದ ತೆರೆಯದೇ ಅಂದಳು.

ಕ್ಷಣ ದಿಗಿಲಿಗೊಳಗಾದ ಭೋಜಯ್ಯ ಸಾವರಿಸಿಕೊಂಡು ಹೇಳಿದರು "ನಾನು ಭೋಜ... ಬಾಗಿಲು ತೆಗಿ ಮಾತಾಡ್ಕಿತ್ತು."

ಕದ ತೆರೆಯಲಿಲ್ಲ. ಸಂದಿಯಿಂದ ಅವಳ ದನಿ ತೂರಿಬಂತು. "ಚಣ ಕೂಕಣಿ ಅಯ್ಯಾ... ಬಂದೆ."

ಜಾಜಿಯ ಹೂಗಳ ಸುವಾಸನೆಯನ್ನು ಹೀರುತ್ತ ಅಲ್ಲಿ ಬೋರಲು ಹಾಕಿದ್ದ ಹೆಡಗೆಯೊಂದರ ಮೇಲೆ ಕುಳಿತರು ಭೋಜಯ್ಯ.

ಈ ಅಪವೇಳೆಯಲ್ಲಿ ಯಾರಾದರೂ ತನ್ನನ್ನು ನೋಡಿದರೇನು ಗತಿಯೇನೆನ್ನಿಸಿದರೂ ತನ್ನ ಒಕ್ಕಲಿನ ಮನೆಗೆ ತಾನು ಬಂದರೆ ಅಪರಾಧವೇನು ಎಂದು ತಾನೇ ಸಮಾಧಾನಿಸಿಕೊಂಡರು.

ಸಮಯ ಅಸಹನೀಯವೆನ್ನಿಸುವಷ್ಟು ದೀರ್ಘವೆನಿಸಿತು. ಕಾದು ಕಾದು ಇನ್ನು ಇಲ್ಲಿ ಇರುವುದೇ ಅಸಾಧ್ಯವೆನ್ನಿಸಿದಾಗ, ಬಾಗಿಲು ತೆರೆದುಕೊಂಡಿತು. ಆಗಷ್ಟೇ ಸ್ನಾನ ಮುಗಿಸಿ ಶುಭ್ರಳಾಗಿ ಬಂದಿದ್ದಳು ಲಚ್ಚಿ.

ಅವಳನ್ನು ನೋಡುತ್ತಲೇ ಅವರ ಮೈಯಲ್ಲಿ ಪುಳಕವೆದ್ದಿತು. ತಕ್ಷಣವೇ ಬಾಯಿತಪ್ಪಿ ಮಾತು ಹೊರಬಂತು "ನೀನು ಲಾಯಕ್ಕಾಯಿದ್ದೆ."

ಅವಳು ಎಂದಿನಂತೆ ಕಿಲಕಿಲ ನಗಲಿಲ್ಲ. ಅವರೆದೆಯಲ್ಲಿ ಉತ್ಸಾಹದ ಜರಿ ಮೂಡಿಸಲಿಲ್ಲ. "ನೀವು ಇಲ್ಲಿಗೆ ಬಪ್ಪುಕಾಗ, ನಂಗೆ ಮದಿ ಆಯಿತು."

ಇದು ಉದ್ಧಟತನದ ಮಾತು ಅನಿಸದಿರಲಿಲ್ಲ ಭೋಜಯ್ಯನಿಗೆ. "ಮದುವೆ ಆದಮೇಲೆ ಕಾಂಬೊ ಅಂದು ನೀನೆ ಹೇಳಲ್ಯಾ."

"ಹೀಗೆಲ್ಲ ಅಂಬುಕಾಗ ಒಡ್ಯಾ, ಸುಮ್ನೆ ಮನೆಗೆ ಹೋಯ್ನಿ. ಇಲ್ಲಿಗೆ ಬರಬಡಿ. ಜಾನಮ್ಮ ಕೇಂಡ್ರೆ ಬೇಜಾರು ಮಾಡ್ಕಂತ್ರು."

ಸೋತ ಹೆಜ್ಜೆಗಳನ್ನಿಡುತ್ತ ಭೋಜಯ್ಯ ಹಿಂದಿರುಗಿದರು. ಅವರಿಗೆ ಜಾಜಿಯ ಸುವಾಸನೆ ಖುಶಿ ಕೊಡಲಿಲ್ಲ. ಸಂಜೆ ಸುಂದರವೆನ್ನಿಸಲಿಲ್ಲ; ಹಕ್ಕಿಗಳ ಕಲರವ ಇಂಪೆನ್ನಿಸಲಿಲ್ಲ.


* * * * *

ಭೋಜಯ್ಯ ಕಲ್ಲಿಗೆ ಆಂಡೂರಿಕೊಂಡೇ ಕುಳಿತ್ತಿದ್ದರು. ಮರಿಕಪ್ಪೆಗಳು ನಿರ್ಭಯವಾಗಿ ಅವರ ನುಣ್ಣನೆಯ ಗಾಳಿಗೆ ತೆರೆದಿದ್ದ ತೊಡೆಯ ಮೇಲೆ ಹಾರಾಟ ನಡೆಸಿದ್ದವು. ಅವರ ಬಿಳಿ ಕುರುಚಲು ಗಡ್ಡವನ್ನು ಹೊತ್ತ ಒಳಸೇರಿದ ಕೆನ್ನೆಗಳು ಅವರ ಮುಖವನ್ನು ಇನ್ನಷ್ಟು ವಿರೂಪಗೊಳಿಸಿದ್ದವು. ಹಲ್ಲು ಹುಟ್ಟಿದ ಎರಡು ವಸಡುಗಳ ನಡುವೆ ನಾಲಿಗೆಯನ್ನು ತೂರಿಸಿ

ಶಿಕ್ಷೆ

ಮನೆ ಕದ್ದರೆ
ಕಂಬವಿಲ್ಲದ ಕೋಣೆಗೆ
ಮನ ಕದ್ದರೆ
ದೀಪವಿಲ್ಲದ ಕೋಣೆಗೆ.

— ಸೀ. ಶ್ರೀಶೈಲ



ತಿರುಗಿಸುತ್ತ ಶೂನ್ಯದಲ್ಲಿ ದೃಷ್ಟಿ ನೆಟ್ಟು ಮೈಮರೆತು ಕುಳಿತಿದ್ದ ಅವರನ್ನು ದುರ್ಗಪ್ಪನ ಮಗಳು ಪಾರ್ವತಿ ಕೆಲಕಾಲ ಅಚ್ಚರಿಯಿಂದ ನೋಡಿದಳು. ಬೀಸುವ ಗಾಳಿ ಮೈಯಲ್ಲಿ ನಡುಕ ಹುಟ್ಟಿಸುವಂತಿದ್ದರೂ ಭೋಜಯ್ಯ ಅದನ್ನು ಲಕ್ಷಿಸಿದಂತೆ ತೋರಲಿಲ್ಲ. ಸೂರ್ಯ ಮೆಲ್ಲಗೆ ಭೂದೇವಿಯ ಮೈದಡುವುತ್ತಿದ್ದ. ತುಂಟ ಮಕ್ಕಳಿಗೆ ತಾಯಿ ಶಿಕ್ಷಿಸಿ ಆಮೇಲೆ ಮುದ್ದುಗರೆಯುವ ಹಾಗೆ, ಇಡೀ ಊರಿನಲ್ಲಿ ಜಡಿಮಳೆ ನಿಂತು ಹೊಸ ಉತ್ಸಾಹ ಹುಟ್ಟಿತ್ತು.

ಈ ಭೋಜಯ್ಯ ಇಲ್ಲಿ ಯಾಕೆ ಹೀಗೆ ಕುಳಿತಿದ್ದಾರೆಂಬುದು ಪಾರ್ವತಿಗೆ ಹೊಳೆಯಲಿಲ್ಲ. ಇನ್ನೂ ಎಲ್ಲದರಲ್ಲೂ ಕುತೂಹಲ ಹುಟ್ಟುವ ಸಣ್ಣ ವಯಸ್ಸು. ಅವಳು ಮೆಲ್ಲಗೆ ಕರೆದಳು "ಅಯ್ಯಾ."

ಭೋಜಯ್ಯ ಪ್ರತಿಕ್ರಿಯಿಸಲಿಲ್ಲ. ಅವಳಿಗೆ ದಿಗಿಲಾಯಿತು. "ಓ ಭೋಜಯ್ಯ, ಇಲ್ಲಿ ಕೂಕಂಡು ಎಂತ ಮಾಡ್ತ್ರಿ?"

ನೆನಪಿನ ಸಮಾಧಿಯಲ್ಲಿ ಹುಗಿದುಹೋಗಿದ್ದ ಭೋಜಯ್ಯ ಇಹಲೋಕಕ್ಕೆ ಬಂದವರಂತೆ ಮೆಲ್ಲಗೆ ಕಣ್ಣು ಬಿಟ್ಟರು. ಲಚ್ಚಿ, ರುದ್ರ, ಜಾಹ್ನವಿ ಇವರೆಲ್ಲ ಅವರ ಮನಸಿಂದ ಓಡಿಹೋದರು. ತಾನು ಇಲ್ಲಿಗೆ ಏಕೆ, ಹೇಗೆ ಬಂದೆ ಎಂಬುದು ತಿಳಿಯದೆ ಅವಾಕ್ಕಾದರು.

ನೋಡಿದರೆ ಎದುರಿಗೆ ಊರಿನ ಹತ್ತರ ಬಾಲೆ ಪಾರ್ವತಿ. ಅವರ ನೋಟಗಳು ಯಾವ ಭಾವ ವಿಕಾರಕ್ಕೂ ಒಳಗಾಗದೆ ನಿರ್ಜೀವವಾಗಿದ್ದವು.

"ಎಂತಕಯ್ಯ ಇಲ್ಲಿ ಕೂಕಂಡಿರಿ?" ಪುನಾ ಪ್ರಶ್ನಿಸಿದಳು ಪಾರ್ವತಿ. ಭೋಜಯ್ಯ ಉತ್ತರಿಸದೇ ದಿಗ್ಗನೆದ್ದು ಉದ್ದಕ್ಕೆ ನಿಂತರು. ಅವರ ಊರುಗೋಲು ನೆಲದಲ್ಲಿ ಅನಾಥವಾಗಿ ಬಿದ್ದಿತ್ತು.

ಅವರ ಎದೆಗೂಡಿನ ಎಲುಬುಗಳು, ಬಿಳುಚಿಕೊಂಡ ದೇಹ, ಮುಖದಲ್ಲಿನ ಶವದ ಕಳೆ ಇವನ್ನು ಕಂಡು ಪಾರ್ವತಿಗೆ ಭಯದಿಂದ ಹೃದಯ ಬಾಯಿಗೆ ಬಂತು. ಯಕ್ಷಗಾನದಲ್ಲಿನ ಸ್ಮಶಾನದಲ್ಲಿ ಅಕರಾಳ ವಿಕರಾಳವಾಗಿ ಕುಣಿವ ಪ್ರೇತಗಳ ನೆನಪಾಯಿತು ಅವಳಿಗೆ. "ಅಯ್ಯಯ್ಯಬ್ಬೋ" ಎಂದು ಕಿರಿಚುತ್ತ ಒಂದೇ ಬಾರಿ ಕುಂಡೆಗೆ ಕಾಲುಕೊಟ್ಟು ಓಡತೊಡಗಿದಳು.

ಮೈಮೇಲೆ ಪ್ರಜ್ಞೆ ಮರೆತವರಂತೆ ದೆವ್ವ ಹೊಕ್ಕವರಂತೆ ದುಡುದುಡನೆ ಪೇಟೆಯತ್ತ ಓಡತೊಡಗಿದರು ಭೋಜಯ್ಯ. ಊರುಗೋಲಿಲ್ಲದ ಕಾರಣ ಅವರ ನೀಳದೇಹ ಅತ್ತಿಂದಿತ್ತ ವಾಲುತ್ತಿತ್ತು. ಬಾಯಲ್ಲಿ ಅಸ್ಪಷ್ಟವಾಗಿ ಅವರು ಗೊಣಗುತ್ತಿದ್ದರು. ಏಕಾಏಕಿ ಏದುತ್ತಿದ್ದರೂ

ಸ್ಪಷ್ಟವಾಗಿರಲಿಲ್ಲ.

"ನಗ್ತೀಯಾ ನಗು. ಯಾಕೆ ಹೇಳು? ನನಗೆ ಪಿರಾಯ ಆಯಿತ್ತು. ಮುದ್ಕ ಸ
ಹೋಪವ್ನು ಅಂತ. ಆದ್ರೆ ನೀನು, ನಿಂಗೆ ವಯಸ್ಸಾತಿಲ್ಯ. ನಿಂಗೂ ಮಂಡೆ ಕೂದ್ಲು ಬೆಳ್ಳಗ
ನೀನೂ ಮುದಿಯಾತ್ತಿಲ್ಯಾ? ಹಣ್ಣೆಲೆ ಬೀಳೋ ಹೊತ್ತಿಗೆ ಚಿಗುರೆಲೆ ನಗತ್ತಂಬ್ರು, ನಗು ನಗು

ಲಚ್ಚಿ ತನ್ನ ಲಂಗೋಟಿ ಬಿಚ್ಚಿ ತೊಳೆಯುವಾಗ ವಿಶೇಷ ಭಾವನೆಗಳು ಹುಟ್ಟ
ಕಾರಣವೇನಿತ್ತು? ಅದೇ ತಾಯಿ ತನ್ನ ಸ್ವರ ಗಡುಸಾಗತೊಡಗಿದ ಮೇಲೂ ತನ್ನ ಸೊಂಟ
ಸುತ್ತ, ತೊಡೆಗಳ ನಡುವೆ, ಸೀಗೆಪುಡಿಯೋ,ನೋಳಿರಸವೋ ಹಾಕಿ ತಿಕ್ಕುತ್ತ "ಇದೆಂತ ಮಾ
ಕರಿ ಮೆಣಸಿನಕಾಯಿ" ಎಂದು ಗಲಗಲ ಅಲುಗಿಸಿ ಕಚಗುಳಿ ಇಟ್ಟರೂ ಏಳದ ವಿಶೇಷ ಭಾ
ಅಂದೇಕೆ ಮೂಡಿಬಂತು? ಅದು ತನ್ನ ಪ್ರಾಯದ ಮಹಿಮೆಯಲ್ಲ. ಹಾಗಾದರೆ ಲಚ್ಚಿಯನ
ತನ್ನ ತಾಯಂತ ನೋಡಲಾಗದ ಅಥವಾ ಅವಳಲ್ಲದೇನೋ ವಿಶೇಷವಿದೆಯೆಂದು ಭ್ರಮಿಸಿದ್ದರಿಂ
ಅದೇ ಈಗ ಈ ಹತ್ತರ ಬಾಲೆ ಪಾರ್ವತಿ ತನಗೆ ಹಾಗೇ ಸ್ನಾನ ಮಾಡಿಸಿದರೆ ತನ್ನ ಮನಸ್ಸಿನಲ್ಲ
ದೇಹದಲ್ಲಿ ರಾಗ ವಿಕಾರಗಳೇನಾದರೂ ಹುಟ್ಟಬಹುದೆ? ಇರಲಿಕ್ಕಿಲ್ಲ, ಯಾಕೆ ಹಾಗೆ?

ಒಬ್ಬರೇ ಮಣಮಣ ಮಾತನಾಡಿಕೊಂಡು ಹೋಗುತ್ತಿರುವ ಭೋಜಯ್ಯನನ್ನು ನೋ
ಹಲವರು ಹುಬ್ಬೇರಿಸಿದರು. ಇವರಿಗೆ ಯಂತ ಆಯ್ತು. ಅರವತ್ತರ ಅರಳು ಮರುಳು ಅಥವ
ಭೂತ ಗೀತ ಮೈಮೇಲೆ ಬಂದಿತ್ತಾ?

ಭೋಜಯ್ಯ ರಸ್ತೆ ಸಮೀಪಿಸಿ ಗಕ್ಕನೆ ನಿಂತರು.

"ಓಡೋ ಓಡು, ಎಲ್ಲಿಗೆ ತಪ್ಪಿಸ್ಕೊಂಡು ಓಡ್ತೀ. ಗಾಳಿಯ ಚಲನೆಯನ್ನು ಕಾಲ
ಓಟವನ್ನು, ಸೂರ್ಯನ ಕಿರಣಗಳನ್ನು ನಿನಗೆ ನಿಲ್ಲಿಸಲಾಗುವುದಿಲ್ಲ. ಸಾವಿನ ಬಾಯಿಂ
ತಪ್ಪಿಸಿಕೊಳ್ಳಲಾಗುವುದಿಲ್ಲ. ವಯಸ್ಸಿನ ಹೆಚ್ಚಳವನ್ನು ತಡೆಯಲಿಕ್ಕಾಗುವುದಿಲ್ಲ
ಆಗುತ್ತದೆಂದುಕೊಂಡರೆ ಅದೊಂದು ಭ್ರಮೆಯಷ್ಟೇ ಹಹ್ಹಾ." ನಕ್ಕಿತು ರುದ್ರನ ಪ್ರೇತ.

ಮೋಡದ ನಡುವಿನ ಸೂರ್ಯಕಿರಣಗಳು ಅವರ ಮೈದಡವಲಿಲ್ಲ. ತಂಗಾಳಿ ಕಚಗುಳಿಯಿಡಲಿಲ್ಲ
ಶುಭ್ರವಾಗಿ ಮಿಂದು ನಿಂತಿದ್ದ ಗಿಡಮರಗಳ ಹಚ್ಚ ಹಸಿರು ನಗೆ ಮೈಪುಳಕಗೊಳಿಸಲಿಲ್ಲ
ಭೋಜಯ್ಯ ಒಬ್ಬರೇ ಮಾತಾಡಿಕೊಳ್ಳುತ್ತ ದಾಪುಗಾಲು ಹಾಕಿ ಓಡಿದ್ದು. ತಮ್ಮಷ್ಟಕ್ಕೇ ತಾವ
ಗೊಣಗುಟ್ಟಿದ್ದು, ಕಚ್ಚೆ ಬಿಚ್ಚಿ ಹೋದರೂ ಸರಿಪಡಿಸಿಕೊಳ್ಳದೇ ನಿಂತಿದ್ದು, ಎದುರು ಬದುರ
ನಿಂತವರನ್ನೂ ಗುರುತಿಸದೆ ವಸಡಿನ ನಡುವೆ ನಾಲಿಗೆಯಾಡಿಸುತ್ತ, ದೊಗಳೆ ಕಣ್ಣುಮಾ
ನೋಡಿದ್ದು.

ಇದೆಲ್ಲ ಗಬ್ಬೂರಿನಲ್ಲಿ ಮಾತಿನ ವಿಷಯವಾಯಿತು. ಜಾಹ್ನವಿಯ ಕಿವಿಗೂ ಬಿತ್ತ
ಮನಸ್ಸಲ್ಲೇ ಮರುಗಿದರು ಅವರು.

ಪ್ರೇತಕ್ಕೆ ನಿರ್ಭಾರ ಪರಿಸ್ಥಿತಿ. ಹಾಗೇ ಗಾಳಿಯಲ್ಲಿ ತೇಲುತ್ತ ತನ್ನ ಮನೆಯತ್ತ ಸಾಗಿತು
ಮನೆಯ ಸುತ್ತಲಿನ ಗೋಡೆ ಸಂಪೂರ್ಣ ಕುಸಿದುಹೋಗಿತ್ತು. ಅಂಗಳದ ತೊಂಡೆ, ಹೀ
ಬೆಂಡೆಗಳ ಅವಶೇಷಗಳು ನೆಲಕಚ್ಚಿದವು. ತೊಂಡೆ ಚಪ್ಪರದ ಹೊಂಡದ ಪಕ್ಕ ಸ್ನಾನಕ್ಕೆ ನೀರು
ಕಾಯಿಸಲೆಂದು ಹೂಡಿದ್ದ ಒಲೆ, ಮೈಯ ಚರ್ಮವನ್ನು ಕಳಚಿಕೊಂಡು ನಗ್ನವಾಗಿ ನಿಂತಿತ್ತು
ಅಲ್ಲಲ್ಲಿ ಕುಸಿದ ಗೋಡೆಯ ಇಟ್ಟಿಗೆಗಳು ಕಣ್ಣು ತೆರೆದುಕೊಂಡು ಆಕಾಶವನ್ನೇ ದಿಟ್ಟಿಸುತ್ತಿದ್ದವು

ಸ್ತ್ರೀಯನ್ನು ಪ್ರೀತಿಸುವಷ್ಟೇ ಅವಳ ಶೀಲವನ್ನು ಪ್ರೀತಿಸುವವನನ್ನು ನಾನು ಇದುವರೆಗೂ ಕಂಡಿಲ್ಲ.

— ಕನ್‌ಫ್ಯೂಸಿಯಸ್

ಪಕ್ಕದ ಮನೆಯವರನ್ನು ಪ್ರೀತಿಸು, ಆದರೆ ಆ ಎರಡೂ ಮನೆಗಳನ್ನು ಪ್ರತ್ಯೇಕಿಸುವ ಗೋಡೆಯನ್ನು ಕೆಡವದಿರು.

— ಪುರಂದರದಾಸ

ತನ್ನ ಸತ್ಯವಾದ ವಯಸ್ಸನ್ನು ಹೇಳುವ ಹೆಂಗಸನ್ನು ಎಂದೂ ನಂಬಬೇಡ. ಆವಳು ಏನು ಬೇಕಾದರೂ ಹೇಳಲು, ಸಿದ್ಧಳಾದಾಳು.

— ಆಸ್ಕರ್ ವೈಲ್ಡ್

ಸಂಗ್ರಹ : ಬಿ. ಜಿ. ಗಾಣಿಗೇರ



ಕೆಂಪು ಮಂಗಳೂರು ಹೆಂಚನ್ನು ಹೊದ್ದಿದ್ದ ಮಾಡು ಈಗ ನೆನಪಾಗಿ ಮಾತ್ರ ಇಳಿದಿವೆ. ನೆಲಕ್ಕೆ ಅಲ್ಲಲ್ಲಿ ಬಿದ್ದಿದ್ದವು ಹಂಚಿನ ಚೂರುಗಳು.

ಮೊದಲು ಹೇಗಿತ್ತು ಈ ಮನೆ, ಪ್ರೇತ ಯೋಚಿಸತೊಡಗಿತು. ಯೋಚನೆ ಎರಡು ದಶಕಗಳಷ್ಟು ಹಿಂದೋಡಿತು.

ತನಗೆ ಅವಶ್ಯಕತೆಯಿಲ್ಲದಿದ್ದರೂ ತನಗೆಂದು ಮಣ್ಣಿನ ಗೋಡೆ ಏರಿಸಿ ಅಡಕೆ ದಬ್ಬೆಯನ್ನು ಪಕಾಶಿಗೆ ಕಟ್ಟಿ, ಹುಲ್ಲು ಹೊದಿಸಿ ಸಾಗುವಾನಿ ಮರದ ಬಾಗಿಲನ್ನು ನಿಲ್ಲಿಸಿ ಮನೆಕಟ್ಟಿ "ರುದ್ದ, ಇದು ನಿನ್ನ ಮನೆ ತಿಳಿತಾ'' ಎಂದು ಪರಡಿ (ಅಕ್ಕಿ ಹಿಟ್ಟಿನ) ಪಾಯಸವನ್ನು ಎಲೆಗೆ ಸುರಿಯುತ್ತ ಮೂಕಾಂಬಿಕಮ್ಮ ಹೇಳಿದಾಗ ರುದ್ರನ ಮನಸ್ಸು ಆನಂದದಿಂದ ಹುಚ್ಚೆದ್ದು ಕುಣಿಯದಿದ್ದರೂ, ಅವನಿಗೆ ಸಂತೋಷವಾದದ್ದಂತೂ ಸುಳ್ಳಲ್ಲ. ತನ್ನ ಜೀವಮಾನವೆಲ್ಲ ಶಂಕರಯ್ಯನವರ ಮನೆಯ ಚಾವಡಿಯಲ್ಲೇ ಕಳೆದು ಹೋಗುವುದಕ್ಕೆ ಕೊನೆ ಬರಬಹುದೆಂದು ಯೋಚಿಸಿ ಬಣ್ಣಬಣ್ಣದ ಕನಸುಗಳನ್ನು ಕಾಣತೊಡಗಿದ. ತನಗೊಂದು ನಿವಾಸ. ಅದರಲ್ಲಿ ಪಾತ್ರೆ ಪರಡಿಗಳು, ನಗುವ ಒಂದು ಹೆಣ್ಣು, ಅಳುವ, ಹೇಲುವ ಒಂದು ಮಗು. ಎಲ್ಲೆಡೆ ಆನಂದ ಸಂಭ್ರಮ.

ರುದ್ರ "ಪಾಯಸ ಬೇಕೇನೋ?'' ಎಂದು ಸುರಿಯಲು ಸಿದ್ಧವಾಗೇ ನಿಂತಿದ್ದ ಸಾಕುತಾಯಿ ಮೂಕಾಂಬಿಕೆಯ ಪಾದಕ್ಕೆ ಮೌನವಾಗಿಯೇ ನಮಿಸಿ ಕೃತಜ್ಞತೆ ಸಲ್ಲಿಸಿದ.

ಅದೇ ಮಹತಾಯಿ ಮುಂದೊಂದು ದಿನ "ಮದಿ ಮಾಡ್ಕಂತಿಲ್ಯಾ'' ಎಂದು ಪ್ರಶ್ನಿಸಿದಾಗ, ಸಮ್ಮತಿಯನ್ನು ಕಣ್ಣಲ್ಲೇ ಸೂಚಿಸಿದ್ದ. ಅದೇ ಆಟದಲ್ಲಿ ಬರುವ ಸೀತೆ, ದ್ರೌಪತಿಯರನ್ನು ನೆನಪಿಸುವ ಲಚ್ಚಿ ನಿನ್ನಾಕೆಯಾಗುತ್ತಾಳೆಂದು ಹೇಳಿದಾಗ ಸ್ವರ್ಗಕ್ಕೆ ಮೂರೇ ಗೇಣು ಎನ್ನಿಸಿತ್ತು. ಮದುವೆಯಾದ ಮೇಲಂತೂ ತನ್ನ ಜೀವನ ಸಾರ್ಥಕಗೊಂಡಿದೆ ಎಂದುಕೊಂಡ.

ರುದ್ರನ ಪ್ರವೃತ್ತಿಯೇ ವಿಚಿತ್ರ. ನಿರಂತರವಾಗಿ ಶ್ರಮವಹಿಸಿ ದುಡಿಯುತ್ತಿದ್ದರೇನೇ ಅವನ ಮನಸ್ಸಿಗೆ ಶಾಂತಿ. ದಿನದ ಕೆಲವು ಗಂಟೆಗಳ ಕಾಲ ಮೈಮರೆತು ನಿದ್ರಿಸಿದರೆ ಪುನಾ ಅವನಲ್ಲಿ ಅದೇ ಉತ್ಸಾಹ ಮೂಡುತ್ತದೆ. ಬೇಕೇ ಬೇಕೆನ್ನಿಸಿದ ದಿನಕ್ಕೆ ಒಂದೆರಡು ಪದ ಮಾತನಾಡುತ್ತಾನೆ. ಅದೂ ಸ್ಪಷ್ಟವಾಗಿ ಅಲ್ಲ. ತನ್ನ ಉಗ್ಗಿನಿಂದಾಗಿ ಅವನಿಗೆ ಒಂದು ರೀತಿಯ ಕೀಳರಿಮೆ.

ವಾದ್ಯ ಊದಿಸಿ ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಹಾರ ವಿನಿಮಯ ಮಾಡಿಕೊಂಡು ದೇವರಿಗೆ ವಂದಿಸಿ, ಪಾಯಸವುಂಡು ಕೈತೊಳೆದ ರುದ್ರನಿಗೆ ಹಾಡಿಗೆ ದರೆಯೇಳಿಸುವ ಕೆಲಸ ಬಾಕಿ ಇದ್ದುದು ನೆನಪಾಯಿತು. ಕಿಲಕಿಲ ನಗುತ್ತಿದ್ದ ಲಚ್ಚಿಯನ್ನು ಒಡತಿಯೊಡನೆ ಅಲ್ಲೇ ಬಿಟ್ಟು ಹಾರೆ, ಪಿಕಾಸೆ ಹಿಡಿದು ಕಾಡಿಗೆ ಹೊರಟ. ಮೂಕಾಂಬಿಕಮ್ಮ ಮಾತಿನಲ್ಲಿ ರುದ್ರನನ್ನು ಮರೆತೇ ಬಿಟ್ಟಿದ್ದರು. ಭೋಜಯ್ಯನಂತೂ ಸದಾ ಕಾಮುಕ ದೃಷ್ಟಿಯಿಂದ ಲಚ್ಚಿಯನ್ನು ನೋಡುತ್ತ ಅನಾವಶ್ಯಕ ಮಾತಿಗೆಳೆಯಲು ಯತ್ನಿಸುತ್ತಿರುವುದು ಸ್ವಭಾವತಾ ಮಿತಭಾಷಿಯಾದ ಜಾಹ್ನವಿಗೆ ಗೊತ್ತಾಗದಿರಲಿಲ್ಲ, ಲಚ್ಚಿ ಅದಕ್ಕೇನು ಪ್ರತಿಕ್ರಿಯಿಸಬಹುದೆಂದೂ ಗಮನಿಸಿದರಾಕೆ. ಆದರೆ ಲಚ್ಚಿಯ ವರ್ತನೆಯಲ್ಲಿ ವಿಶೇಷವೇನೂ ಗೋಚರಿಸಲಿಲ್ಲ. ಆಕೆ ಹೆಂಗಸರೊಡನೆ ಹೇಗೋ ಹಾಗೇ ಗಂಡಸರೊಡನೆಯೂ ನಡೆದುಕೊಳ್ಳುತ್ತಿದ್ದಳು. ಚೆಲ್ಲುಚೆಲ್ಲಾಗಿರುವುದು ಅವಳ ಸ್ವಭಾವ. ಆ ಚೆಲ್ಲುತನ ಗಂಡುಗಳ ಪಿತ್ತವಿಕಾರ ಮಾಡುವುದಂತೂ ನಿಜ.

ಊಟವಾದ ಮೇಲೆ ಸೂರು ಹಾರಿಹೋಗುವಂತೆ ಗೊರಕೆ ಹೊಡೆಯುತ್ತ ಮಲಗುವ ಭೋಜಯ್ಯ ಇಂದು ಇಲ್ಲಿ ಹೆಂಗಸರ ಮಾತಿನ ನಡುವೆ ಮೂಗು ತೂರಿಸುತ್ತಿರುವುದು ಸರಿಕಾಣಿಸಲಿಲ್ಲ ಮೂಕಾಂಬಿಕೆಗೆ. "ನಿಂಗೇನು ಕೆಲಸ ಇಲ್ಯಾನಾ?'' ಎಂದು ಕೇಳಿದವರಿಗೆ ಕೂಡಲೇ ರುದ್ರನ ನೆನಪಾಯಿತು. "ಎಲ್ಲಿ ಹೋದ ಮದಿ ಗಂಡು?'' ಎಂದು ಹೇಳಿದವರೇ ಲಚ್ಚಿಯನ್ನು ಪ್ರಶ್ನಿಸಿದರು. "ಎಲ್ಲಿ ಹಣೇ ನಿನ್ನ ಗಂಡ.'' ಲಚ್ಚಿ ಎಂದಿನಂತೆ ಕಿಲಕಿಲ ನಕ್ಕಳು.

ಭೋಜಯ್ಯನಿಗೆ ಮುಖಭಂಗವಾದಾಗ ಆನಂದ ಪಟ್ಟವಳೆಂದರೆ ಜಾಹ್ನವಿ.

"ಇದೆಂತದಾ ರುದ್ರ, ಹೆಂಡ್ತಿನ ಬಿಟ್ಟು ಕೆಲಸಕ್ಕೆ ಹೋಪ್ದಾ? ಅವ್ಳನ್ನು ಕರಕಂಡು ದೇವಸ್ಥಾನಕ್ಕೆ ಹೋಯಿಬಾ. ಕುಂದಾಪುರ ಟಾಕೀಸಲ್ಲಿ ಸಿನೆಮಾ ಕಡ್ಕಂಡು ಬಾ. ದುಡ್ ನಾನು ಕೊಡ್ತೆ'' ಎಂದು ಮೂಕಾಂಬಿಕೆ ಹೇಳಿದರೂ ರುದ್ರ ಏನೂ ಉತ್ತರಿಸಲಿಲ್ಲ. ಆಕೆ ಮತ್ತೊಂದು ಬಾರಿ ಹೇಳಿದ ಮೇಲೆ ಅವನು ಕೋಟೇಶ್ವರದ ಕೊಡಿ ಹಬ್ಬಕ್ಕೆ ಪತ್ನಿಯೊಂದಿಗೆ ಹೊರಟ. ಮೂಕಾಂಬಿಕಾ ಒಂದಿಷ್ಟು ಹಣ ಕೊಟ್ಟರು.

ಬಸ್ಸಿನ ಕಂಪನದಲ್ಲಿ ತನ್ನ ತೋಳನ್ನು ಲಚ್ಚಿಯ ತೋಳು ಸವರುವಾಗ ತಣಿಸಲಾರದಷ್ಟು ಆನಂದವುಂಟಾಯಿತವನಿಗೆ. ತನಗೆ ಇನ್ನೇನೂ ಸುಖ ಬೇಡ ಎಲ್ಲ ಸಿಕ್ಕಿಬಿಟ್ಟಿದೆ ಎಂಬ ಭಾವನೆ ಅವನ ಮನದಲ್ಲಿ ಹುಟ್ಟಿಬಿಟ್ಟಿತು. ಅವನ ಬಲಿಷ್ಠ ದೇಹ, ಅವನ ದೈಹಿಕ ಶಕ್ತಿ ಒಂದಷ್ಟು ರಕ್ಷಣಾ ಭಾವವನ್ನು ಲಚ್ಚಿಯಲ್ಲೂ ಮೂಡಿಸಿದವು. ಕೊಡಿಹಬ್ಬದ ಓಕುಳಿ ಹೊಂಡದಲ್ಲಿ ರುದ್ರ ಉತ್ಸಾಹದಿಂದ ಜಿಗಿದ. ನೋಡುತ್ತ ನಿಂತಿದ್ದ ಲಚ್ಚಿಯ ಮುಖದಲ್ಲಿ ಮೂಡುತ್ತಿದ್ದ ಮೆಚ್ಚುಗೆಯನ್ನು ಕಂಡು ಮತ್ತಷ್ಟು ಪುಳಕ ಉತ್ಸಾಹಗಳನ್ನು ಪಡೆದ. ಹೋಟೆಲಿನಲ್ಲಿ ಕಾರಾಶೇವು, ಪೋಡಿ, ಚಟ್ಟಂಬಡೆ ಕೊಡಿಸಿದ. ಕೊನೆಯ ಶಂಕರ ಬಸ್ಸಿನಲ್ಲಿ ಮನೆಗೆ ಬರುವಾಗ ಒಂದೆರಡು ಕಲ್ಲಂಗಡಿ ಹಣ್ಣು, ಮುಂಡಕ್ಕಿಯನ್ನು ತರಲು ಮರೆಯಲಿಲ್ಲ.

ಮನೆಯ ಯಜಮಾನರು ಎಲ್ಲಿಗೋ ಹೊರಟು ಅಂಗಳಕ್ಕಿಳಿದಿದ್ದರು. ಅಷ್ಟರಲ್ಲಿ, ಸಂಬಂಧಿಕರ ಮನೆಯಲ್ಲಿ ತಿಂಗಳುಗಟ್ಟಲೆ ಉಳಿಯುವ ನೆಂಟರೊಬ್ಬರು ಬರುತ್ತಾ "ಓಹೋ, ಏನು ಸ್ವಾಮಿ. ಎಲ್ಲೋ ಹೊರಟ ಹಾಗಿದೆಯಲ್ಲ?'' ಎಂದರು. ಅದಕ್ಕೆ ಯಜಮಾನರು "ಹೌದು, ನಮ್ಮಲ್ಲಿ ಮನೆ ಕಾಯಲು ಯಾರೂ ಇಲ್ಲದ್ದರಿಂದ ಒಂದು ನಾಯಿ ತರಲು ಹೊರಟಿದ್ದೆ'' ಎಂದರು.

"ಹೌದೇ ಅದನ್ನು ತರಲು ಈಗಲೇ ಹೋಗುವಿರೇನು?'' ನೆಂಟರು ಪ್ರಶ್ನಿಸಿದರು.

ಯಜಮಾನರು ಒಳಗೆ ಬರುತ್ತ "ಇಲ್ಲ. ಅಷ್ಟರಲ್ಲೇ ನೀವು ಬಂದಿರಲ್ಲ'' ಎಂದರು.

— ಗಂಗಾಧರ್ ಬೆಳ್ಳಾರೆ



ಇದರ ವರದಿಯನ್ನು ಲಚ್ಚಿ ತನ್ನೆದುರು ಇಟ್ಟಾಗ ಜಾಹ್ನವಿ ಮನದಲ್ಲೇ ಮರುಗಿದಳು. ಜಾಹ್ನವಿ ತನ್ನ ಬದುಕಿಗಾಗಿ ಕೊಡಿಸುವುದಿರಲಿ, ಏನನ್ನು ತೋರಿಸಲೂ ಇಲ್ಲ ತನ್ನ ಗಂಡ ಎನ್ನುವ ಮಹಾನುಭಾವ. ಕುಟ್ಟಿ ಕುಂದಾಪುರಕ್ಕೆ ಹೋದ ಎಂಬಂತೆ ಅಷ್ಟು ದೂರ ನಡೆದು, ಪುನಾ ಹಿಂದುರುಗಿದ ತನ್ನ ಸ್ಥಿತಿ ಅವಳಲ್ಲಿ ನೋವು ಹುಟ್ಟಿಸಿತು. ಇವರ ಬದಲು ರುದ್ರನೇ ತನ್ನವನಾಗಿದ್ದರೆ?

ಏನಾಗಿದೆ ಅವನಿಗೆ, ಮಾತು ಬರುವುದಿಲ್ಲ ಅಷ್ಟೇ ತಾನೆ? ಕೀಳು ಜಾತಿ, ಮಂತ್ರ ಹೇಳುವಂತಿಲ್ಲ. ಆಶೀರ್ವದಿಸುವಂತಿಲ್ಲ. ದಕ್ಷಿಣೆ ಹಿಡಿಯುವಂತಿಲ್ಲ ಅಷ್ಟೇ ತಾನೇ? ಮೂಳೆಗಳನ್ನು ಲಟಲಟಗೊಳಿಸುವ ಒಂದು ಅಪ್ಪುಗೆ ಈ ಎಲ್ಲ ಕೊರತೆಗಳನ್ನು ತುಂಬಿಬಿಡಬಲ್ಲುದು ಎಂದುಕೊಂಡಳು.

ಮತ್ತೆ ತನ್ನ ತಲೆಯಲ್ಲಿ ಇಂತಹ ಕೆಟ್ಟ ಯೋಚನೆ ಮೂಡಿದುದಕ್ಕಾಗಿ ಮಹಾಲಿಂಗೇಶ್ವರನಲ್ಲಿ ಕ್ಷಮೆ ಕೇಳಿಕೊಂಡಳು.

ರುದ್ರನ ಕಾಲಿ ಮನೆಗೆ ಸಂಸಾರ ನಡೆಸಲು ಬೇಕಾದ ಅನೇಕ ಸಾಮಗ್ರಿಗಳನ್ನು ಮೂಕಾಂಬಿಕೆಯೇ ತರಿಸಿಕೊಟ್ಟರು. ನಿಧಾನವಾಗಿ ಆ ಗುಡಿಸಲಿಗೊಂದಿಷ್ಟು ಕಳೆ ಬಂತು. ಮನೆಯ ಸುತ್ತ ಹೂಬಳ್ಳಿಗಳು ಬೆಳೆಯತೊಡಗಿದವು. ಬದನೆ, ಬೆಂಡೆ ಮುಂತಾದ ತರಕಾರಿ ಗಿಡಗಳು. ಮನೆಯೆದುರಿನ ಹೊಲದಲ್ಲಿ ಗೆಣಸು, ಸೌತೆಗಿಡಗಳು ಬೆಳೆಯತೊಡಗಿದವು. ಈ ಎಲ್ಲ ಶ್ರಮಗಳನ್ನೂ ಭೋಜಯ್ಯನ ಮನೆಯ ಕೆಲಸದೊಂದಿಗೆ ಮಾಡತೊಡಗಿದ ರುದ್ರ. ವರ್ಷೇ ವರ್ಷೇ ಅವನಲ್ಲಿ ಉತ್ಸಾಹ ವೃದ್ಧಿಸುತ್ತಿತ್ತೇ ವಿನಾ ಕಡಿಮೆಯಾಗುತ್ತಿರಲಿಲ್ಲ.

ಒಂದೆರಡು ತಿಂಗಳು ಲಚ್ಚಿ ಮನೆಯಲ್ಲೇ ಬಂದಿಯಾಗುಳಿದಳು. ನಾಲ್ಕು ಗೋಡೆಗಳ ನಡುವೆ ಬದುಕುವುದು ಅವಳಿಗೆ ಹಿಂಸೆಯೆನ್ನಿಸತೊಡಗಿತು. ಮತ್ತೆ ತನ್ನ ಹಳೆಯ ವೃತ್ತಿಯನ್ನು ಮುಂದುವರಿಸುವತ್ತ ಮನಸ್ಸು ಮಾಡಿದಳು.

ಮನೆಯೆದುರು ಮಡಕೆಗಳು, ಬಾನಿಗಳು, ಬಸಿಲಿನಲ್ಲಿ ತಮ್ಮನ್ನು ಒಣಗಿಸುಕೊಳ್ಳುತ್ತ ಕುಳಿತುಕೊಳ್ಳತೊಡಗಿದವು.

ತಮ್ಮ ಮನೆಯ ಕೆಲಸಕ್ಕೆ ಸಹಾಯ ಲಚ್ಚಿ ದೊರೆಯುವಳೆಂಬ ಮೂಕಾಂಬಿಕಮ್ಮನವರ ಆಸೆ ನನಸಾಗಲಿಲ್ಲ. ಮಾಡಿದ ಮಡಕೆಗಳನ್ನು ಹೊತ್ತು ಆಕೆ ಮತ್ತೆ ಸಂತೆಗಳಿಗೆ ಹೊರಡುವ ಅಭ್ಯಾಸಗಳನ್ನು ಬೆಳೆಸಿಕೊಳ್ಳತೊಡಗಿದಳು. ಅಲ್ಲಿ ಸಂಜೆಯ ಹೊತ್ತು ಮೀನು ವಾಸನೆ ಕುಡಿಯುತ್ತ, ಮುಂಡಕ್ಕಿ(ಪುರಿ)ತಂದು, ಲಿಂಬುಸೋಡಾ ಕುಡಿದು ಬಂದವರೊಡನೆ ಬೆರೆಯುವ ಆನಂದವನ್ನು ಪುನಾ ತನ್ನದಾಗಿಸಿಕೊಂಡಳು. ಮಂಗಳವಾರ ಹಾಲಾಡಿ ಸಂತೆ, ಭಾನುವಾರ ಬಿದ್ಕಲ್‌ಕಟ್ಟೆದು, ಬುಧವಾರ ಗೋಳಿಯಂಗಡಿ ಹೀಗೆ ಯಾವ ಸಂತೆಗೆ ಹೋದರೂ ಅಲ್ಲಿ ಲಚ್ಚಿಯ ಹಾಜರಿ ಖಾತರಿ. ಕೊನೆಯ ಬಸ್ಸು ಹಿಡಿದು ಮನೆಗೆ ಬರುವುದು ರಾತ್ರಿಯ ಕೆಲ ಜಾವ ಕಳೆದ ಮೇಲೆಯೇ. ಬರುವಷ್ಟರಲ್ಲಿ ರುದ್ರನಿಗೆ ಇಹದ ಪರಿವೆಯಿಲ್ಲದಷ್ಟು, ಅಂದು ಕುಯ್ದರೂ ಎಚ್ಚರವಾಗದಷ್ಟು ನಿದ್ರೆ. ಸಂತೆಯಲ್ಲಿ ಮೂಗಿಗೆ ಬರುವಷ್ಟು ಮೆಂದಿರುತ್ತಾಳಾದ್ದರಿಂದ ಲಚ್ಚಿಗೂ ಊಟ ಬೇಡ.

ಮಡಕೆಯ ಜೊತೆಗೆ ಮನೆಯಲ್ಲಿ ಬೆಳೆದಿದ್ದ ತರಕಾರಿಗಳೂ, ಗೆಣಸು, ಹಲಸುಗಳೂ ಲಚ್ಚಿಯ ತಲೆಯಮೇಲೆ ಸವಾರಿ ಮಾಡಿಕೊಂಡು, ಸಂತೆಯಲ್ಲಿ ತಮ್ಮ ಎದೆಯನ್ನು ಬಗೆಯುವವರಿಗಾಗಿ ಕಾದು ಕುಳಿತುಕೊಳ್ಳತೊಡಗಿದವು. ಹೀಗಾಗಿ ಅವಳ ಹಣ ಅವಳ ಕಣ್ಣಲ್ಲಿ ಹಣ ಸಂಪಾದಿಸದ ಗಂಡ ರುದ್ರ ನಿಕೃಷ್ಟವಾಗತೊಡಗಿದ.

ಒಂದು ದಿನ ಕೆಲವರು ಬಂದು ರುದ್ರನ ಮನೆಯ ಮಣ್ಣಿನ ಗೋಡೆಗಳನ್ನು ಒಡೆದರು. ಹುಲ್ಲು ಹೊದೆಸಿದ ಮಾಡನ್ನು ಕಿತ್ತೆಸೆದರು. ಇಟ್ಟಿಗೆ ಗೋಡೆ ಏರಿಸಿ ಹೆಂಚುಗಳನ್ನು ಹೊದಿಸಿದರು. ಕೆಂಪು ಮಂಗಳೂರು ಹೆಂಚಿನ ಮನೆ, ಬಿಳಿ ಸುಣ್ಣ ಬಳಿದ ಗೋಡೆ, ಲಚ್ಚಿಯ ಪ್ರತಿಷ್ಟೆಯನ್ನು, ಜಂಬವನ್ನು ಇನ್ನಷ್ಟು ಹೆಚ್ಚಿಸಿತು.

ಊರ ಜನ, ಹೊಟ್ಟೆಉರಿಯಿಂದ ಆಡಿಕೊಂಡರು. “ಈ ರಂಡೆಗೆ ಹಣ ಎಲ್ಲಿಂದ ಬರುತ್ತೆ? ಹೇತಲಾಂಡಿ ಗಂಡ ಸಿಕ್ಕಿದ. ಇವಳು ಎಂತ ಮಾಡಿರೂ ಕೇಂತಿಲ್ಲೆ ಮಾಡಲಿ ಮಾಡಲಿ.”

ಹತ್ತು ಹಲವಾರು ಮಾತುಗಳು. ಎಲ್ಲವೂ ಧ್ವನಿಸುವುದು ಒಂದನ್ನೇ, ಅವಳ ಗುಣ ನಡತೆ ಸರಿಯಿಲ್ಲ. ಕತೆಗೆ ಉಪಕತೆ ಹುಟ್ಟಿ ಮೂಕಾಂಬಿಕಮ್ಮ ನೊಂದಿದ್ದು ಹೌದು. ಆದರೆ ಆ ನೋವು ಅವರ ಸಾವಿಗಿಂತ ಮುಂದೆ ಅವರನ್ನು ಕಾಡಿಸಲಿಲ್ಲ.

ರುದ್ರನ ಕಿವಿಗೂ ಆ ವಿಷಯ ಬಿತ್ತು. ಪತ್ನಿಯ ಮೇಲಿನ ಪ್ರೀತಿಯನ್ನು ಅದುಮಲಾರದೆ ಮೊದಮೊದಲು ಸುಮ್ಮನಿದ್ದರೂ, ಕೊನೆಗೆ ಅದನ್ನು ಅವನಿಂದ ಸಹಿಸಲಾಗಲಿಲ್ಲ. ಒಂದು ರಾತ್ರಿ ಅವಳು ಬರುವುದನ್ನೇ ಕಾದು ಕುಳಿತು ಅವಳು ಬುಟ್ಟಿಯನ್ನು ಕೆಳಗಿಳಿಸುತ್ತಲೇ ಅವಳ ಮುಖ ಮೂತಿ ನೋಡದೇ ದಬದಬ ಎಂದು ಹೋರಿಗೆ ಹೊಡೆಯುವಂತೆ ಹೊಡೆದ. ಅವಳು ಲಬೋ ಲಬೋ ಎಂದು ಇಡೀ ಗಬ್ಬೂರಿಗೆ ಕೇಳುವಂತೆ ಕಿರುಚಿಕೊಂಡಳು.

ನೆನಪುಗಳು

ಮಳೆ ನಿಂತರೂ ಬಿಡದೆ
ತೊಟ್ಟಿಕ್ಕುವ
ಮರದ ಹನಿಗಳು
ಮುಪ್ಪಾದರೂ ಮರುಕಳಿಸುತ್ತವೆ
ಹರೆಯದ
ಹಿತಕರ
ನೆನಪುಗಳು.

— ಪ್ರಕಾಶ ಸಿ. ರಾಜಗೋಳಿ



ಕೈಸೋತಾಗ ಪ್ರಹಾರ ನಿಲ್ಲಿಸಿದ ರುದ್ರ. ಆಗ ಲಚ್ಚಿ ಕೆರಳಿಸದ ಸರ್ಪಿಣಿಯಾದಳು. "ಹೊಡಿತ್ಯನಾ ಹೊಡಿ. ಅಪ್ಪ ಅಮ್ಮ ಇಲ್ದಿರೋ ಹೆಣ್ಣಿಗೆ ಹೊಡ್ಯುವ ನೀನೆಂತಾ ಗಂಡ್ಸು. ನಿನ್ನ ಮೂತಿ ಕಾಣೆ. ಒಂದು ಅರ್ಧಾಣೆ ಸಂಪಾದ್ನೆ ಮಾಡುಕೆ ಆತ್ತಿಲ್ಲೆ. ನಾನು ಮಾಡ್ರೆ ಸಿಟ್ಟು ಬತ್ತು ನಿಂಗೆ. ಈ ಮನೇಲಿ ಗಂಜಿ ಉಂಡ್ಕಂಡ್ ಇಪ್ಪುಕಾತ್ತಾ? ನಾನು ಎಂತ ತಪ್ಪು ಮಾಡದಿದ್ರೂ ಊರ ಮಾತು ಕೇಂಬದ ಅಲ್ದನಾ ನೀನು? ನಂಬುವವ ಅಲ್ದಾ. ಅದನ್ನು ನಾನು ಸಮ ಮಾಡ್ತೆ. ಬೇರೆಯವರ ಜೊತೆ ಮನೆಕಂಡೇ ಸೈ.'' ಅವಳು ಅಲ್ಲೇ ಪ್ರತಿಜ್ಞೆ ಮಾಡಿದಳು.

ಮುಂದೆ ಅವಳು ತನ್ನ ಮೇಲಿನ ಆಪಾದನೆಗಳನ್ನು ಪುಷ್ಟೀಕರಿಸುವಂತೆ ನಡೆದುಕೊಳ್ಳತೊಡಗಿದಳು. ಮನೆಯಲ್ಲಿ ಒಂದಿಷ್ಟೂ ನಗುವಿಲ್ಲ. ಕೆಲವು ಬಾರಿ ರಾತ್ರಿ ಬಂದರೂ ಬಂದಳು. ಇಲ್ಲವಾದರೆ ಇಲ್ಲ. ಅಪರಾಧೀ ಪ್ರಜ್ಞೆಯಿಂದ ನರಳಿದ ರುದ್ರ. ಇದನ್ನೆಲ್ಲ ತನಗೆ ಸಂಬಂಧಿಸಿದುದೇ ಅಲ್ಲವೆಂಬಂತೆ ನಿರ್ಲಕ್ಷಿಸತೊಡಗಿದ.

ಪಲವಾಗಿ ದೈಹಿಕ ಶ್ರಮಗಳಲ್ಲಿ ತನ್ನನ್ನು ಇನ್ನಷ್ಟು ತೊಡಗಿಸಿಕೊಂಡ.

ಲಚ್ಚಿಯ ಮನೆಯೊಳಗೆ ಅಲಂಕಾರ ಸಾಮಗ್ರಿಗಳು ಪ್ರವೇಶಿಸತೊಡಗಿದವು. ಸ್ನೋ, ಪೌಡರು, ಲಿಪ್‌ಸ್ಟಿಕ್ಕು, ಪರಿಮಳದ ಎಣ್ಣೆ, ಹಲ್ಲುಜ್ಜಲು ಪೇಸ್ಟು ಬ್ರಶ್‌ಗಳು ಧರಿಸಲು ನವೀನ ರೀತಿಯ ಬ್ರಾಗಳು, ಸೀರೆ, ಕುಪ್ಪುಸಗಳು. ಇವೆಲ್ಲ ಬಂದು ಮನೆಗೆ ಒಂದಿಷ್ಟು ಕಳೆ ಬಂತು.

ಅವಳ ಕೈಯನ್ನು ವಾಚೊಂದು ಅಲಂಕರಿಸಿತು. ಇದರಿಂದ ಅವಳ ಶೋಭೆ ಇನ್ನಷ್ಟು ಹೆಚ್ಚಿತು. ಅವಳನ್ನು ಪ್ರೀತಿಸಬೇಕೆಂದು ಹಲವಾರು ಬಾರಿ ಅನ್ನಿಸಿದರೂ ಅದನ್ನು ಹೇಗೆ ಪ್ರಾರಂಭಿಸಬೇಕೆಂದು ತಿಳಿಯದೇ ರುದ್ರ ಪರದಾಡಿದ. ಆಕೆ ಅವನೊಂದಿಗೆ ಮಲಗುತ್ತಿರಲಿಲ್ಲ. ಇವನೇ ಧೈರ್ಯ ಮಾಡಿದರೆ "ಸುಮ್ನೆ ಆಯ್ಕಂಬೆ ಆತಿಲ್ಯಾ?'' ಎಂದು ಗದರುತ್ತಿದ್ದಳು.

ಹೀಗಾಗಿ ತನ್ನ ಮನೆಯಲ್ಲೇ ರುದ್ರ ಪರಕೀಯನಾಗತೊಡಗಿದ. ಈ ಅವಧಿಯಲ್ಲಿ ಲಚ್ಚಿಯ ಹೊಟ್ಟೆಯಲ್ಲಿ ಕೂಸೂ ಬೆಳೆಯತೊಡಗಿತು.

ಮನೆಗೆ ಟಿಕ್ ಟಿಕ್ ಎಂದು ಗೊಣಗುವ ಚಿಕ್ಕ ಗಡಿಯಾರ ಬಂದಾಗ ರುದ್ರ ಅದರ ಹಿಂದೆ ಮುಂದೆಲ್ಲ ಅಪ್ಯಾಯತೆಯಿಂದ ಮುಟ್ಟಿ ಖುಶಿ ಪಟ್ಟಿದ್ದ. ಒಂದು ದಿನ ಮನೆಗೊಂದು ಟ್ರಾನ್ಸಿಸ್ಟರೂ

ಬಂದು ಕುಳಿತುಬಿಟ್ಟಿತು. ಎಲ್ಲ ಲಚ್ಚಿಯ ಸಂಪಾದನೆ.

ಗಬ್ಬೂರಿನ ಜನರ ನಾಲಿಗೆ ಏನೇನೇನೋ ಆಡಿತು. ಆದರೆ ಲಚ್ಚಿ ಯಾವುದನ್ನೂ ಲಕ್ಷಿಸಲಿಲ್ಲ. ಅದಾಗಲೇ ಹಳೆಯ ವಿಷಯ.

ಮೊದಮೊದಲು ಸುಖವಾಗಿ ಕಂಡದ್ದು ಕೊನೆಕೊನೆಗೆ ಹಿಂಸೆಯೆನ್ನಿಸದಿರಲಿಲ್ಲ. ಕಾಲು ತೊಳೆಯದೇ ಗಂಡ ಒಳಗೆ ಬಂದರೆ ಲಚ್ಚಿ ಗದರುತ್ತಿದ್ದಳು. ಸ್ನಾನ ಮಾಡದಿದ್ದರೆ ಹಲ್ಲು ಸರಿಯಾಗಿ ತಿಕ್ಕದಿದ್ದರೆ, ಶುಚಿಯಾಗಿರದ ಬಟ್ಟೆ ಧರಿಸಿದರೆ, ಹೀನಾಮಾನವಾಗಿ ಬೈಯುತ್ತಿದ್ದಳು. ನೀರಿನಿಂದ ತೆಗೆದು ಹಾಕಿದ ಮೀನಿನ ಪರಿಸ್ಥಿತಿಯಾಯಿತು ರುದ್ರನದು.

ಒಂದು ಸಂಜೆ ಲಚ್ಚಿ ಅಡುಗೆ ಮನೆಯಲ್ಲಿ ಇದ್ದ ಹೊತ್ತಿನಲ್ಲಿ ರೇಡಿಯೋ ಹಾಕಬೇಕೆನ್ನಿಸಿತ್ತು ರುದ್ರನಿಗೆ. ಯಾವ ಸ್ವಿಚ್ ಹಾಕಬೇಕೆಂದು ತಿಳಿಯದಿದ್ದರೂ ಪ್ರಯತ್ನಿಸುವ ಮನಸ್ಸಾಯಿತು. ಹತ್ತಿರ ಬಂದು ತಿರುಪೊಂದನ್ನು ತಿರುಗಿಸಿದ. ಸದ್ದೇ ಬರಲಿಲ್ಲ. ಇನ್ನೊಂದನ್ನು ಬಲಕ್ಕೆ ತಿರುಗಿಸಿದಾಗ ಏಕಾಏಕಿ ಗೊರ್ರೆಂದು ದೊಡ್ಡ ದನಿಯಲ್ಲಿ ಕಿರುಚಿತು. ಒಂದು ಕ್ಷಣ ರುದ್ರನಿಗೆ ದಿಗಿಲಾಯಿತು.

ಅಡುಗೆ ಮನೆಯಿಂದ ಮಿಂಚಿನಂತೆ ಹೊರಗೋಡಿ ಬಂದಳು ಲಚ್ಚಿ. ರೇಡಿಯೋ ಪಕ್ಕ ನಿಂತಿದ್ದ ಗಂಡನನ್ನು ಜೋರಾಗಿ ತಳ್ಳಿದಳು. ಅನಿರೀಕ್ಷಿತ ತಳ್ಳುವಿಕೆಯಿಂದ ರುದ್ರನ ದೇಹ ನಿಯಂತ್ರಣ ತಪ್ಪಿ ಆತ ಗೋಡೆಗೆ ಅಪ್ಪಳಿಸಲ್ಪಟ್ಟ ನೋವೇನೂ ಆಗದಿದ್ದರೂ ರುದ್ರ ನೊಂದಿದ್ದ.

"ಅದೆಂತಕೆ ಮುಟ್ಟುಕೆ ಹೋದ್ರಿ, ಅದು ಹಾಳಾಯಿ ಹೋದ್ರೆ ನೀವು ಬೇರೆ ತತ್ರ್ಯಾ? ಒಂದು ದುಗ್ಗಾಣಿ ಸಂಪಾದ್ನೆ ಮಾಡುಕೆ ಆತಿಲ್ಲೆ ಮತ್ತೆ ರೇಡಿಯೋ ಬೇಕಂಬ್ರು. ಇನ್ನೊಂದ್‌ಸಲ ಇದನ್ನು ಮುಟ್ಟಿಗಿಟ್ಟಿದ್ರೆ ಲಾಯಕ್ಕಾತ್ತಿಲ್ಲೆ.'' ಆವೇಶ ಬಂದವರಂತೆ ಲಚ್ಚಿ ಕೆಂಪು ಕಣ್ಣು ಮಾಡಿಕೊಂಡು ಗಂಡನನ್ನು ಗದರಿದಳು.

ಹತಾಶನಾದ ರುದ್ರ ಮನೆಯಿಂದ ಹೊರಬಂದು ಯೋಚಿಸಿದ 'ಅವಳು ಅಂದಿದ್ದೂ ಒಂದು ತರಾ ನಿಜವೇ. ಇದೆಲ್ಲ ಅವಳೇ ದುಡಿದುದು ತನ್ನದೇನೂ ಇಲ್ಲ ಇಲ್ಲಿ. ಈ ಮನೆಯಲ್ಲಿ ನಾನು ಯಾರು?'

ಎದುರಿನ ಮರದ ಗೂಡಿನಲ್ಲಿ ಕೊಕ್ಕರೆಯೊಂದು ಬಾಯಿ ತೆರದ ತನ್ನ ಮರಿಗೆ ಉಣಿಸು ನೀಡುತ್ತಿತ್ತು. ಹಕ್ಕಿಗಳು ಚಿವ್ ಚಿವ್‌ಗುಟ್ಟುತ್ತ ಗೂಡು ಸೇರುವ ತವಕದಲ್ಲಿದ್ದವು. ಸಂಜೆಯ ತಂಪು ಬೆಳಕು ಅಲ್ಲೆಲ್ಲ ಹಾಸಿತ್ತು.

ಕೆಲನಿಮಿಷ ಶೂನ್ಯ ಮನಸ್ಕನಾಗಿ ಅವನ್ನೆಲ್ಲ ನೋಡುತ್ತ ನಿಂತ ರುದ್ರ. ಮರುಕ್ಷಣವೇ ಉಟ್ಟ ಪಂಚೆಯನ್ನು ಮೇಲೆತ್ತಿ ಕಟ್ಟಿಕೊಂಡು ಬಿರಬಿರನೆ ಮನೆಯಿಂದ ಹೊರಟ.

ಕತ್ತಲಾಗಿ ಕೆಲ ಗಂಟೆಗಳು ಕಳೆದ ಮೇಲೆ ತೂರಾಡುತ್ತ ಮನೆಗೆ ಬಂದ ರುದ್ರ. ಅವನ ಬಾಯಿಂದ ಸಾರಾಯಿಯ ವಾಸನೆ ಹೊರಬರುತ್ತಿತ್ತು. ಇಲ್ಲಿಂದ ರುದ್ರನ ಜೀವನದ ಅವನತಿ ಪ್ರಾರಂಭವಾಯಿತು.

ರುದ್ರನಿಗಾದ ನೋವು ಅವನ ಬದುಕಿನಲ್ಲಿ ಮೊದಲನೆಯದು. ಅದಕ್ಕೇ ಅದು ಅವನ ಮನಸ್ಸಿಗೆ ಚೆನ್ನಾಗಿಯೇ ನಾಟಿತು. ಈ ಮನೆ ತನ್ನದಲ್ಲ. ತನಗಿಲ್ಲೇನೂ ಅಧಿಕಾರವಿಲ್ಲ ಎಂದು ದೃಢನಿಶ್ಚಯ ಮಾಡಿಕೊಂಡ. ಹಾಗೆಯೇ ತಾನು ಮನೆಯಲ್ಲಿರುವ ಅವಧಿಯನ್ನೂ

ಕತ್ತಲಿನ ನಡುವೆ ಬೆಳಕನ್ನು ಕಾಣುವಾತ ಆಶಾವಾದಿ. ಹಿಗ್ಗನ್ನು ಹುಡುಕುತ್ತಿರುವವನೇ ನಿರಾಶಾವಾದಿ.

– ದ. ರಾ. ಬೇಂದ್ರೆ

ನೀವು ಮಾಡಿದ್ದನ್ನೆಲ್ಲ ಮೆಚ್ಚುವ ಮಿತ್ರರನ್ನು ನಂಬಬೇಡಿ, ತಪ್ಪನ್ನು ತೋರಿಸಿ ಕೊಡುವವರನ್ನು ಮೆಚ್ಚಿಕೊಳ್ಳಿ.

– ಸಾಕ್ರೆಟಿಸ್

ಸಂಗ್ರಹ : ಈ. ಉಮೇಶ್ ಸಜ್ಜನ್



ಕಿರಿದಾಗಿಸತೊಡಗಿದ.

ಮೊದಮೊದಲು ತನ್ನ ಹಣದಿಂದ ಅನಂತರ ಹೆಂಡತಿಯ ಪೆಟ್ಟಿಗೆಯೊಳಗಿಂದ ಹಣ ತೆಗೆದು ಕುಡಿಯತೊಡಗಿದ. ಅವನ ಚಟ ಹೆಚ್ಚುತ್ತ ಹೋಯಿತು. ಸಂಜೆ ಅವನು ಮನೆಯಲ್ಲಿಲ್ಲದುದು ತನ್ನ ಕೆಲಸಕ್ಕೆ ಉಪಯುಕ್ತವಾಗಿ ಕಂಡುದರಿಂದ ಕೊನೆಗೆ ಅವನಿಗೆ ಕುಡಿಯಲು ಲಚ್ಚಿಯೇ ದಿನಂಪ್ರತಿ ಹಣ ನೀಡತೊಡಗಿದಳು.

ಅವನು ಮನೆಗೆ ಬರುವಾಗ ಕೆಲವೊಮ್ಮೆ ಕದ ಹಾಕಿರುತ್ತಿತ್ತು. ಒಳಗಿನಿಂದ ಪಿಸುಪಿಸು ದನಿಯೂ ಕೇಳಿಸುತ್ತಿತ್ತು. ಕದ ತೆರೆದು ಬಂದವರು ಹೊರ ಹೋಗುವತನಕ ರುದ್ರ ಹೊರಗೇ ಕಾಯುತ್ತಿದ್ದ. ಅನಂತರ ಏನೂ ಸಂಭವಿಸಿಲ್ಲವೆಂಬಂತೆ ಒಳಗೆ ಹೋಗಿ ತನಗಾಗಿ ಹಾಕಿದ ಚಾಪೆಯಲ್ಲಿ ಹೆಣವಾಗಿ ಬೀಳುತ್ತಿದ್ದ.

ಇದರಿಂದ ರುದ್ರನ ಆರೋಗ್ಯ ಹದಗೆಡತೊಡಗಿತು. ಕೆಲಸದಲ್ಲಿ ಆಸಕ್ತಿ ಕಡಿಮೆಯಾಗತೊಡಗಿತು. ಅದರ ಪರಿಣಾಮ ಭೋಜಯ್ಯನವರ ಮನೆಯ ಮೇಲಾಯಿತು.

ಈ ಅವಧಿಯಲ್ಲಿ ಲಚ್ಚಿಗೊಂದು ಮಗು ಹುಟ್ಟಿತು. ಅವಳದಕ್ಕೆ ಶಕುಂತಲಾ ಎಂದು ಹೆಸರಿಟ್ಟಳು. ಗಬ್ಬೂರಿನಲ್ಲಿ ಈ ಹೆಸರು ಹೊಸದು. ಹಾಗಾಗಿ ಅದೊಂದು ಚರ್ಚೆಯ ವಿಷಯವಾಯಿತು ಊರಲ್ಲಿ.

ರುದ್ರ ಒಂದು ದಿನವೂ ಮಗುವನ್ನು ಸರಿಯಾಗಿ ದಿಟ್ಟಿಸಲಿಲ್ಲ. ಅದರ ಮೇಲೆ ಪ್ರೀತಿಯನ್ನು ತೋರಲಿಲ್ಲ. ಅದು ತಾಯಿಯಂತೆ ಗುಂಡುಗುಂಡಾಗಿ ಬೆಳೆದರೂ ಅದೇನೂ ವಿಶೇಷವೆನಿಸಲಿಲ್ಲ ರುದ್ರನಿಗೆ.

ಶಕುಂತಲಾ ಬಹುಬೇಗ ಬೆಳೆಯತೊಡಗಿದಳು. ಅವಳನ್ನು ಶಾಲೆಗೆ ಸೇರಿಸಬೇಕು, ವಿದ್ಯಾವಂತೆಯಾಗಿಸಬೇಕು ಎಂಬ ಲಚ್ಚಿಯ ಹಂಬಲ ಈಡೇರಲೇ ಇಲ್ಲ. ಶಾಲೆಯ ಮೇಸ್ಟ್ರು ಗಂಗಣ್ಣ ನಾಲ್ಕಾರು ಬಾರಿ ಲಚ್ಚಿಯ ಮನೆಗೆ ಬಂದು ಅವಳ ಎದೆಯಭಾಗವನ್ನು ಚಪಲಚಿತ್ತ ಕಣ್ಣುಗಳಿಂದ ನೆಕ್ಕುತ್ತ "ಮಗಳನ್ನು ಶಾಲೆಗೆ ಕಳಿಸು, ಪುಸ್ತಕ ಫೀಸೆಲ್ಲ ಗೋರ್ಮೆಂಟೇ ಕೊಡುತ್ತೆ. ಅವ್ಳು ಮುಂದೆ ಓದಿ ಲಾಯರೋ, ಡಾಕ್ಟರೋ, ಇಂಜಿನಿಯರೋ ಆದ್ರೆ ನಿಂಗೂ ಹೆಸರು ಬತ್ತು"

ಎಂದಾಗ ಲಚ್ಚಿಯ ಮನದಲ್ಲಿ ಬಣ್ಣಬಣ್ಣದ ಕಾಮನಬಿಲ್ಲು ಮೂಡಿದ್ದವು.

ಆದರೆ ಶಕೂಗೆ ಶಾಲೆಗೆ ಹೋಗಿ ಅಕ್ಷರಗಳ ಜೊತೆ ಗುದ್ದಾಡುವುದಕ್ಕಿಂತ ಅಮ್ಮ ತಂದುಕೊಟ್ಟ ಬಣ್ಣಬಣ್ಣದ ಲಂಗಕ್ಕಿಷ್ಟುಗೋವೆ ಹಣ್ಣಿನ ಕಲೆಯನ್ನೋ, ಹಲಸಿನ ಮೇಣವನ್ನೋ ಅಂಟಿಸಿಕೊಳ್ಳುವುದರಲ್ಲೇ ಹೆಚ್ಚು ಆನಂದ ಸಿಗುತ್ತಿತ್ತು. ಗಂಟಿ ಮೇಯಿಸುತ್ತ, ಗರಚನ ಹಣ್ಣು, ಕಿಸ್ಕಾರ ಹಣ್ಣುಗಳನ್ನು ಆರಿಸಿ ತಿನ್ನುವುದರಲ್ಲೇ ಖುಶಿಯಾಗುತ್ತಿತ್ತು. ಅಮ್ಮ ಸಂತೆಯಿಂದ ತರುವ ಮುಂಡಕ್ಕಿ, ಸಕ್ಕರೆಕಡ್ಡಿಗಳೇ ರುಚಿಯೆನ್ನಿಸುತ್ತಿದ್ದವು.

ಹೀಗೆ ಅವಳ ವಿದ್ಯೆ ನೈವೇದ್ಯವಾಯಿತು. ಆದರೆ ಅವಳು ಮೈಕೈ ತುಂಬಿಕೊಂಡು ದಷ್ಟಪುಷ್ಟವಾಗಿ ಬೆಳೆದುದು ಸುಳ್ಳೇನೂ ಅಲ್ಲ. ನನ್ನ ಮಗಳು ಯಾವುದಾದರೂ ಸಿನಿಮಾ ನಟಿಯಾಗಬಹುದು ಎಂಬ ಕನಸು ಲಚ್ಚಿಯ ಮನಸ್ಸಲ್ಲಿ ಆಗಾಗ ಮೂಡುತ್ತಿತ್ತು.

ಈ ಅವಧಿಯಲ್ಲಿ ಲಚ್ಚಿ ಹಾಸಿಗೆ ಹಿಡಿದಳು. ಸುಮಾರು ಒಂದೂವರೆ ತಿಂಗಳಕಾಲ ಹಾಸಿಗೆಯಲ್ಲೇ ಬಿದ್ದು ಕೆಮ್ಮಿ ನರಳಿ, ಏಳಲಾಗದೇ ಅಲ್ಲೇ ಉಚ್ಚೆ, ಹೇಲು ಮಾಡಿಕೊಂಡು ಒಂದು ದಿನ ಕೊನೆಯುಸಿರೆಳೆದಳು. ಶಕು ಮನಪೂರ್ತಿ ತಾಯಿ ಸೇವೆ ಮಾಡಿದ್ದಳು. ತಾಯಿ ಸತ್ತಾಗ ಅತ್ತವಳೆಂದರೆ ಅವಳೊಬ್ಬಳೆ.

ಉಚ್ಛ್ರಾಯ ಸ್ಥಿತಿಗೇರಿದ್ದ ರುದ್ರ ಹಂತಹಂತವಾಗಿ ಹೀನಾಯ ಸ್ಥಿತಿಗಿಳಿಯತೊಡಗಿದ್ದ. ಮೈಯಲ್ಲಿ ಸೋಮಾರಿತನ, ಮದ್ಯಪಾನದ ಹುತ್ತಿಕ್ಕಲಾರದ ಬಯಕೆ, ಇವುಗಳಿಂದಾಗಿ ಮನೆಯ ಸಾಮಾನುಗಳೆಲ್ಲ ಕಾಣೆಯಾಗಲಾರಂಭಿಸಿದವು. ಕೊನೆಗೆ ಒಂದು ದಿನ ರುದ್ರ ಸಾರಾಯಿ ಅಂಗಡಿಯಲ್ಲಿ ಸಾಲ ಕೇಳಿದ.

"ನಿಂಗೆಂತಾ ಬರವಾ ರುದ್ರ. ಸಂಪಾದ್ನೆ ಮಾಡು ಹೆಂಡ್ತಿ ಹೋರೆ ಪಿರಾಯಕ್ಕೆ ಬಂದ ಮಗಳಿಲ್ವಾ?'' ಎಂದು ಯಾರೋ ಕೇಳಿದಾಗ ಅಮಲೇರಿದ್ದ ರುದ್ರನ ತಲೆಗೆ ಅಮೋಘ ಉಪಾಯವೊಂದು ಹೊಳೆಯಿತು. ಹೌದಲ್ವಾ ಕೈಲಿ ಬೆಣ್ಣೆ ಇಟ್ಟುಕೊಂಡು ತಾನು ತುಪ್ಪಕ್ಕಾಗಿ ಅಳುತ್ತಿದ್ದೇನೆ.

ಅವರಿವರ ಮನೆಯಲ್ಲಿ ಕೂಲಿ ಮಾಡಿಕೊಂಡು, ಚಾಕಣ್ಣು ಕಾಯಿಸಿ ಕುಡಿದುಕೊಂಡು, ಬತ್ತ ಕುಟ್ಟಿ ಅಕ್ಕಿ ಮಾಡಿ ಗೇರಿ, ಹಪ್ಪಳಕ್ಕೆ ಹಲಸಿನ ತೊಳೆ ಬಿಡಿಸಿಕೊಟ್ಟು, ನಟ್ಟಿ ಮಾಡಿ ದರಲೆ ಸಂಗ್ರಹಿಸಿ ಹಟ್ಟಿಗೆ ತಂದುಹಾಕಿ, ತಂದೆಯ ಅಸ್ತಿತ್ವವನ್ನೇ ನಿರ್ಲಕ್ಷಿಸಿ, ತನ್ನ ಬಾಳನ್ನು ತಾನೇ ರೂಪಿಸಿಕೊಂಡಿದ್ದಳು ಶಕುಂತಲಾ. ವಯಸ್ಸೇನು ನಿಲ್ಲುತ್ತದೆಯೇ, ತಾಯಿಗಿಂತ ಒಂದಾಣೆ ಜಾಸ್ತಿಯೇ ಸುಂದರಳಾಗಿದ್ದು ಹುಡುಗರೇಕೆ, ಮುದುಕರ ಹೃದಯದಲ್ಲೂ ಕಿಚ್ಚೆಬ್ಬಿಸುವಂತಿದ್ದಳು ಅವಳು.

ಆ ಸಂಜೆ ದೇವಯ್ಯ ಹೆಗ್ಗಡೆಯವರ ಮಗ, ಭೋಜಯ್ಯನ ಸಮಕಾಲೀನರಾದ ದಾಸಯ್ಯ ಹೆಗ್ಗಡೆಯವರ ಮನೆಯ ಕದದಲ್ಲಿ ಬೆನ್ನುಬಾಗಿಸಿ ನಿಂತ ರುದ್ರ. ತನ್ನ ಕಪ್ಪು ಹಚ್ಚಿದ ಮೀಸೆಯ ಮೇಲೆ ಆಪ್ಯಾಯತೆಯಿಂದ ಬೆರಳಾಡಿಸಿಕೊಳ್ಳುತ್ತ "ಏನಾ ರುದ್ರ ಇತ್ಲಾಯಿ ಬಂದೆ?'' ಎಂದು ತಮ್ಮ ಗಡಸು ಸ್ವರದಲ್ಲಿ ಕೇಳಿದರು.

"ಒಡೆಯಾ'' ಅಷ್ಟನ್ನು ಮಾತ್ರ ಶ್ರಮವಹಿಸಿ ಹೇಳಿದ ರುದ್ರ. ಕೈಮುಗಿದು ಅವರ ಜಿರ್ಕಿ ಚಪ್ಪಲಿ ತೊಟ್ಟ ಪಾದಗಳನ್ನೇ ನೋಡುತ್ತ ನಿಂತ. ತಮ್ಮ ವಯಸ್ಸು ಆರನೆಯ ದಶಕದ

“ನಿನ್ನೆ ರಾತ್ರಿ ನಾನು ನನ್ನ ಯಜಮಾನರು ಜಗಳವಾಡುತ್ತಿದ್ದಾಗ ಏಕೆ ನಿಮ್ಮ ಯಜಮಾನ್ರು ಹೆದರಿ ನಡುಗ್ತಾ ನಿಂತಿದ್ದರಲ್ಲ?”

“ಆದ್ರಾ, ನಾವು ಹಿಂದೆ ಇದ್ದ ವಠಾರದಲ್ಲಿ ನಿಮ್ಮ ಹಾಗೇ ಇಬ್ಬರು ಗಂಡ ಹೆಂಡತಿ ಜಗಳವಾಡುತ್ತಿದ್ದರು. ನೋಡಲಾರದೆ ಇವರು ಬಿಡಿಸಲು ಹೋದಾಗ ಆಕೆ ನಮ್ಮವರ ಕೈಯನ್ನು ತನ್ನ ಗಂಡನದು ಅಂತ ತಿಳಿದು ಜೋರಾಗಿ ಕಚ್ಚಿ ಬಿಟ್ಟಿದ್ದಳು ಅದಕ್ಕೆ.”

— ಡಿ. ಎಸ್. ಕೃಷ್ಣಮೂರ್ತಿ



ಕೊನೆಯಲ್ಲಿದ್ದರೂ ತಮ್ಮ ಯೌವನವಿನ್ನೂ ಮಾಸಿಲ್ಲವೆಂಬ ನಂಬಿಕೆಯಲ್ಲಿದ್ದರು.

“ಮಮ ಮನೆಗೆ ಬಬ ಬರ್ಕಂಬ್ರು. ಶಶಶಕು ಹೇಳಿಳ್.” ಇಷ್ಟು ಹೇಳುವಾಗ ರುದ್ರನಿಗೆ ಎಂದಿಲ್ಲದಷ್ಟು ಸುಸ್ತಾಗಿತ್ತು. ಚಿಗರೆ ಮರಿಯ ಹಾಗೆ ಅತ್ತಿತ್ತ ಓಡಾಡುವ ಶಕುಂತಲಳನ್ನು ಆಸೆಯ ಕಣ್ಣುಗಳಿಂದ ಹಲವಾರು ಬಾರಿ ಚಪ್ಪರಿಸಿದ್ದರು ದಾಸಯ್ಯ. ಇಂದು ಆ ಅವಕಾಶ ತಾನಾಗಿಯೇ ಒದಗಿ ಬಂದಿರಬೇಕಾದರೆ. ರೂಪದಲ್ಲಿ ದುಗ್ಗಿಗಿಂತ ಒಂದು ಕೈ ಮೇಲೇ ಈ ಶಕು ಅಂದುಕೊಂಡರು. ಮೈಯಲ್ಲಿ ತಾರುಣ್ಯ ಉಕ್ಕಿ ಬಂತು. “ಬಂದೆ ಆಯ್ಕೋ” ಎಂದು ಹೇಳಿ ಟಾರ್ಚ್ ತರಲು ಮನೆಯೊಳಗೆ ಹೋದರು. ಹತ್ತರ ಕೆಲವು ನೋಟುಗಳನ್ನು ಜೇಬಿಗೆ ತುಂಬಿಕೊಂಡು “ಪ್ಯಾಟೆಗೆ ಹೋಯಿ ಬತ್ತೆ” ಎಂದು ಹೆಂಡತಿಗೆ ಅಲ್ಲಿಂದಲೇ ಕೂಗಿ ಹೇಳಿ ಮನೆಯಿಂದ ಹೊರಬಂದರು. ಮೂರು ಮಹಡಿಯ ಭವ್ಯ ಸೌಧದ ಕುಸುರಿ ಕೆಲಸ ಮಾಡಿದ ಬಾಗಿಲನ್ನೂ, ಕಿಟಕಿಯ ಗಾತ್ರವನ್ನೂ ನೋಡುತ್ತ ಇದ್ದರೆ ಹೀಗಿರಬೇಕು ಶ್ರೀಮಂತಿಕೆ ಎಂದು ಕನಸು ಕಾಣುತ್ತಿದ್ದ ರುದ್ರನನ್ನು ಎಚ್ಚರಿಸಿದ್ದು “ನಡೆ ಹೋಪೊ” ಎಂಬ ದಾಸಯ್ಯನವರ ಕಂಚಿನ ದನಿ.

ಮುಂದೆ ರುದ್ರ. ಹಿಂದೆ ಮೂರು ಸೆಲ್ಲಿನ ದೊಡ್ಡ ತಲೆಯ ಟಾರ್ಚ್ ಹಿಡಿದು ದಾರಿಗೆ ಬೆಳಕು ಚೆಲ್ಲುತ್ತಿದ್ದ ಹೆಗ್ಗಡೆ. ಮೌನವಾಗಿ ದಾರಿ ಸಾಗುತ್ತಿತ್ತು. ಆಕಾಶದಲ್ಲಿ ನಕ್ಷತ್ರಗಳು ಕಣ್ಣು ಮಿಟುಕಿಸಲು ಕೆಲ ಶ್ವಾನಗಳು ಕರ್ತವ್ಯ ವಿಮುಖರಾಗದೆ ಎಂದಿನ ಬೊಗಳುವಿಕೆಯ ಕೆಲಸವನ್ನು ಮಾಡುತ್ತಿದ್ದವು.

“ಒಳಗೆ ಹೋಯ್ನಿ” ಎಂದು ಸಂಕೇತಿಸಿ, ಆವರು ಒಳಹೊಕ್ಕ ಕೂಡಲೇ ತಾನೇ ಬಾಗಿಲು ಹಾಕಿಕೊಂಡು ಶಕು ಏನನ್ನಬಹುದು. ಇವತ್ತೇನು ಸಂಪಾದನೆಯಾಗಬಹುದು ಎಂದೆಲ್ಲ ಯೋಚಿಸುತ್ತ ನಿಂತಿದ್ದ ರುದ್ರನಿಗೆ ಹೆಗ್ಗಡೆಯವರು ಕಿರುಚಿದ್ದು ಸ್ಪಷ್ಟವಾಗಿ ಕೇಳಿ ಬಾಗಿಲ ತೆಗೆದ. ಮಿಣಿಮಿಣಿ ಉರಿಯುವ ಗಾಜಿನ ಗ್ಲಾಸಿಲ್ಲದ ಚಿಮಣಿ ದೀಪದ ಬೆಳಕಿನಲ್ಲಿ ಸ್ಟೂಲ್ ಮೇಲೆ ಹತ್ತಿನಿಂತು ಭಯದಿಂದ ನಡುಗುತ್ತ ನಿಂತಿದ್ದ ಹೆಗ್ಗಡೆಯವರು ಕಾಣಿಸಿಕೊಂಡರು. ಯಂತ

ಎಂದ. ಹೆಗ್ಗಡೆಯವರು ಟಾರ್ಚ್ ಬೆಳಗಿ ಗೋಡೆಯತ್ತ ತೋರಿಸಿದರು. ತಣ್ಣನೆಯ ಹೊಳೆಯುವ ದೇಹದ ಹಾವೊಂದು ತೆವಳುತ್ತಿತ್ತು.

"ಅದು ಹೈಂಸಾರ ಹಾವು. ಅದಕ್ಕೆ ಹೆಡೆಯೂ ಇಲ್ಲೆ, ಅದು ಕಚ್ಚುದೂ ಇಲ್ಲೆ. ಕಚ್ಚಿದ್ರೂ ಎಂತ ಆತ್ತಿಲ್ಲೆ.'' ಕೀಟಲೆಯ ದನಿಯಲ್ಲಿ ಹೇಳಿದಾಗ ಭಯದಿಂದ ತಣ್ಣಗಾಗಿದ್ದ ಹೆಗ್ಗಡೆಯವರ ದೇಹದಲ್ಲಿ ಇನಿತು ಬಿಸಿ ಸಂಚರಿಸಿದರೂ ತಾನು ಮುದುಕನಾಗುತ್ತಿದ್ದೇನೆ, ದೈಹಿಕವಾಗಿ, ಮಾನಸಿಕವಾಗಿ ತಾನೂ ಹೆಡೆ ಎತ್ತಲಾಗದ ಹಾವು ವೃದ್ಧ ಸರ್ಪ ಎಂಬ ಅರಿವು ಉಂಟಾಗಿ ಏನೂ ಹೇಳಲಾಗದೆ ಬತ್ತೆ ಎಂದಷ್ಟೇ ಹೇಳಿ ಅಲ್ಲಿಂದ ಬಿರಬಿರನೆ ತನ್ನ ಮನೆಯತ್ತ ಹೊರಟರು. ಆಗ ಬಿದಿಗೆ ಚಂದ್ರ ಮೂಡಣದ ಮರಗಳ ಸಂದಿಯಿಂದ ಇಣುಕಿ ನೋಡುತ್ತಿದ್ದ.

ಇದಾಗಿ ಕೆಲವೇ ದಿನಗಳಲ್ಲಿ ಶಕು ಮನೆಯಿಂದ ಮಾಯವಾಗಿಬಿಟ್ಟಳು. ಬಾಂಬೆಗೆ ಹೋಯಿಪ್ಪು. ಇನ್ನೆಲ್ಲಿಗೆ ಹೋತ್ಲು ಅಂತ ಜನ ಅಂದುಕೊಂಡರು.

ರುದ್ರ ದೈಹಿಕವಾಗಿ, ಮಾನಸಿಕವಾಗಿ ತುಂಬ ಕೃಶನಾಗಿಬಿಟ್ಟಿದ್ದ. ಅದಮ್ಯ ಮದ್ಯ ಲಾಲಸೆಯನ್ನು ತೀರಿಸಿಕೊಳ್ಳುವ ದಾರಿ ಕಾಣದಾಯಿತು. ಮೊದಮೊದಲು ಸವತೆ, ಗುಂಬಳ, ತೆಂಗಿನಕಾಯಿಗಳನ್ನು ಕದ್ದು ಮಾರಲು ಪ್ರಾರಂಭಿಸಿದ. ಕೆಲಬಾರಿ ಒದೆ ತಿಂದ.

ಕೊನೆಕೊನೆಗೆ ಗಬ್ಬೂರಿನ ಅಂಗಡಿಗಳಲ್ಲಿ ಬಾಳೆಹಣ್ಣು, ಚಾಕಲೇಟು ಮುಂಡಕ್ಕಿಗಳನ್ನು ಎದುರೆದುರೇ ತೆಗೆದುಕೊಂಡು ತಿನ್ನಲಾರಂಭಿಸಿದ. ಹತ್ತು ಪೈಸೆ ಸಿಗುವುದಾದರೆ ಏನು ಮಾಡಲೂ ಸಿದ್ಧನಾಗತೊಡಗಿದ. ದಾರಿಯಲ್ಲಿ ಹೋಗುವ ಹೆಣ್ಣೊಬ್ಬಳನ್ನು ಅಪ್ಪಿಕೊಂಡರೆ ಐದು ರೂಪಾಯಿ ಕೊಡುವುದಾಗಿ ಆಮಿಷ ತೋರಿಸಿದ ಪುಂಡನೊಬ್ಬನ ಮಾತು ಕೇಳ ಹೋಗಿ ಅಲ್ಲಿದ್ದವರಿಂದ ಮೈಮುರಿಯುವಷ್ಟು ಹೊಡೆಸಿಕೊಂಡಿದ್ದ.


ಹಸಿ ಎಲೆ, ಕಲ್ಲು, ಗೋವೆಕಾಯಿ, ಗರುಚನ ಹಣ್ಣು ಇವು ಅವನ ಆಹಾರವಾಗತೊಡಗಿದವು. ದಾರಿಯಲ್ಲಿ ಸಾಗುತ್ತಿರುವವನೆದುರು ಬೊಗಸೆ ತುಂಬ ಸಗಣಿ ಹಿಡಿದು, ಕಾಸು ಕೊಡದಿದ್ದರೆ ಹಚ್ಚುತ್ತೇನೆಂದು ಬೆದರಿಸತೊಡಗಿದ. ಅದು ಕೆಲಬಾರಿ ಯಶ ಕೊಟ್ಟಿದ್ದೂ ಇತ್ತು.

ಹೀಗೆ ತಾನು ಸಾಯುವತನಕ ರುದ್ರ ಊರವರಿಗೆ ತಲೆನೋವಾಗಿಯೇ ಉಳಿದ. ಅವನ ಸಾವು ದುರಂತ ಹೌದೋ ಅಲ್ಲವೋ ಊರವರ ಪಾಲಿಗಂತೂ ಅಂದು ನೆಮ್ಮದಿ ತಂದಿತು.

* * * * *

ಬದುಕಿನ ಅರ್ಧ ಶತಮಾನ ಕಳೆಯುತ್ತಲೇ ಆಗಾಗ ಸಾವಿನ ಭಯ ಭೋಜಯ್ಯನನ್ನು ಕಾಡತೊಡಗಿತು. ಅದೊಂದು ಹೆಚ್ಚು ಭಯಾನಕ ವಿಷಯವೆನ್ನಿಸಿದ್ದು ರುದ್ರನ ಶವದ ದರ್ಶನವಾದ ಮೇಲೆಯೇ. ಅವರ ಕ್ರಿಯೆಗಳು ಪ್ರತಿಯೊಂದೂ ಸಾವಿನ ಜೊತೆ ತಳುಕು ಹಾಕಿಕೊಳ್ಳತೊಡಗಿದವು. ಈ ಜಗತ್ತಿನ ಜೀವರಾಶಿಗಳಿಗೆಲ್ಲ ಸಾವು ಯಾಕೆ ಬರುತ್ತದೆ? ಬಾರದಿದ್ದರೆ ಏನಾಗುತ್ತದೆ? ತನ್ನ ಹಾಗೇ ಪಶುಪಕ್ಷಿಗಳೂ ಮರಗಿಡಗಳೂ ಮರಣಭಯದಿಂದ ವಿಹ್ವಲಗೊಳ್ಳುತ್ತವೆಯೇ, ಎಷ್ಟು? 'ವಾ ಸಾಂಸಿ ಜೀರ್ಣಾನಿ ಯಥಾ ವಿಹಾಯ' ಎಂದು ಶ್ರೀಕೃಷ್ಣ ಹೇಳಿದಂತೆ ಹಳೆಯ ಬಟ್ಟೆಯನ್ನು ತೆಗೆದು ಹೊಸತನ್ನು ಆತ್ಮ ಧರಿಸುವ ಕ್ರಿಯೆಯೇ ಈ ಮರಣ, ಜನ್ಮ ಹೌದೇ?

ಈ ಪ್ರಶ್ನೆಗಳು ಅವರನ್ನು ಹೆಚ್ಚು ಹೆಚ್ಚು ಅಧೀರರನ್ನಾಗಿಸತೊಡಗಿದವು. ತಾನು



ಸಾಯುತ್ತಲೇ ಪ್ರಪಂಚವೇನೂ ಬದಲಾಗುವುದಿಲ್ಲ. ಪ್ರಕೃತಿ ಮಾತೆಯ ಸೃಷ್ಟಿ ಲಯ ಕ್ರಿಯೆ ನಿರಂತರವಾಗಿ ಜರಗುತ್ತಲೇ ಇರುತ್ತದೆ. ಹೊಸ ಜೀವಗಳು ಹುಟ್ಟುತ್ತಲೇ ಇರುತ್ತವೆ. ಈ ಹುಲುಮಾನವ ಆಸ್ತಿ ಅಂತಸ್ತು, ಹೆಣ್ಣು ಮುಂತಾದ ಹಲವಾರು ರಗಳೆಗಳನ್ನು ತನ್ನ ಜೀವ ಶಾಶ್ವತ ಎಂಬ ಭ್ರಮೆಯಿಂದ ಯಾಕೆ ಮಾಡಿಕೊಳ್ಳುತ್ತಾನೆ? ತಾನು ಹಿಡಿ ಮಣ್ಣಾದ ಮೇಲೆ ತಾನು ಬೆಳೆಸಿದ ಗಿಡ ಮರಳೋಪಾದಿಯಾಗಿ ಎಲ್ಲವೂ ಇತರರಿಗೆ ಉಪಯೋಗವಾಗುತ್ತದೆ ತಾನು ತೆಗೆದುಕೊಂಡು ಹೋಗುವುದೇನೂ ಇಲ್ಲ. ನಿನ್ನನ್ನು ಬಿಟ್ಟರೆ ನಮಗಿನ್ನಾರೂ ಇಲ್ಲ ಎಂದು ಜೀವಿತಾವಧಿಯಲ್ಲಿ ಬೊಗಳೆ ಬಿಡುವ ಜನ ಅದೇ ತೀರಿಕೊಂಡ ಮೇಲೆ ಮೂರು ದಿನ ಅತ್ತ ಶಾಸ್ತ್ರಿ ಮಾಡಿ ಕೊನೆಗೆ ಶತಶಾ ಮರೆತೇ ಬಿಡುತ್ತಾರೆ. ಮತ್ತೆ ತಮ್ಮ ಜೀವನದ ಗೋಳನ್ನೆದುರಿಸಲು ಸನ್ನದ್ಧವಾಗುತ್ತಾರೆ.

ಜಂಗು ಹಿಡಿದ ಜಂತಿಯ ಹಿಂದೆ ಸಿಕ್ಕಿಸಲ್ಪಟ್ಟ ಕತ್ತಿಯನ್ನು ಕೈಗೆತ್ತಿಕೊಂಡರು ಭೋಜಯ್ಯ. ಬಿರಬಿರನೆ ಹೊರಬಂದು ಮನೆಯೆದುರು ಸೊಂಪಾಗಿ ಬೆಳೆದಿದ್ದ ಎರಡು ಬಾಳೆಯ ಗಿಡಗಳನ್ನು ಒಂದೇ ಏಟಿಗೆ ಕತ್ತರಿಸಿದರು. ಮರ ಧರೆಗೆ ಬಿದ್ದ ಮೇಲೆ, ಈ ಮರ ಮತ್ತೆ ನಾಳೆ ಚಿಗುರುತ್ತದೆ. ಗೊನೆ ಬಿಟ್ಟು ಹಣ್ಣಾಗುತ್ತದೆ. ನಾನು ಆಗ ಈ ಲೋಕದಲ್ಲಿ ಇರುವುದಿಲ್ಲ. ಇದು ನಾನು ನೆಟ್ಟ ಗಿಡ ನಾನಿಲ್ಲದಾಗ ನನ್ನ ಶ್ರಮದ ಫಲವನ್ನು ಇನ್ನಾರೋ ಉಣ್ಣುತ್ತಾರೆ ಹಾಗಾಗಬಾರದು ಎಂದು ನಿಶ್ಚಯಿಸಿಕೊಂಡವರಂತೆ ಆ ಮರವನ್ನು ಗಡ್ಡೆಸಹಿತ ಕತ್ತರಿಸಿ ಚೂರು ಚೂರು ಮಾಡಿದರು. ಮನಸ್ಸಿಗೊಂದಿಷ್ಟು ಸಮಾಧಾನವಾಯಿತು.

ಜಾಹ್ನವಿ ಅವರನ್ನೇ ನೋಡುತ್ತ ನಿಂತರು. ಇವರೇಕೆ ಹೀಗೆ ಮಾಡುತ್ತಾರೆಂಬುದು ತಿಳಿಯಲಿಲ್ಲ. ಅಂತೂ ತಮಗೇನೋ ದುರಂತ ಕಾದಿದೆ ಎಂದು ಮನದಲ್ಲೇ ಮರುಗಿದರು.

ಇನ್ನೊಂದು ದಿನ ಜಾಹ್ನವಿ ಕರಡಿಗೆಯಲ್ಲಿ ಶೇಖರಿಸಿಟ್ಟಿದ್ದ ಹಣವನ್ನೆಲ್ಲ ಬೊಗಸೆಗೆ ಸುರಿದುಕೊಂಡರು. ಇವರು ಪೂಜೆಗೆ ಹೋಗುವುದು, ಪೌರೋಹಿತ್ಯ ನಡೆಸುವುದು ನಿಂತ ಮೇಲೆ ಮನೆಯ ಖರ್ಚಿಗೆ ಸಾಕಾಗುವಷ್ಟು ಆದಾಯವಿರುತ್ತಿರಲಿಲ್ಲ. ಮಳೆಗಾಲ ಇನ್ನೂ ಮುಗಿದಿರದ ಕಾರಣ ತೆಂಗಿನಕಾಯನ್ನೋ, ಎಳನೀರನ್ನೋ ಕೇಳುವ ಧೈರ್ಯಶಾಲಿಗಳು ಸಿಗುತ್ತಿರಲಿಲ್ಲ. ಮರ ಸಿಕ್ಕಾಪಟ್ಟೆ ಜಾರುತ್ತದಲ್ಲದೆ ಆ ಕಾಲದಲ್ಲಿ ಎಳನೀರಿಗೆ ಬೇಡಿಕೆಯೂ ಇಲ್ಲ.

ಇಂತಹ ಕಾಲದಲ್ಲಿ ಆಕೆ ಜತನದಿಂದ ಶೇಖರಿಸಿದ ಹಣವನ್ನು ತೆಗೆದುಕೊಂಡು ಪೇಟೆಗೆ ಹೊರಟರು ಭೋಜಯ್ಯ. ಯಾಕೆ ಹೀಗೆ ಎಂಬ ಪ್ರಶ್ನೆಗೆ ಅವರು ಸಮರ್ಥವಾಗಿ ಉತ್ತರಿಸಲಾರರಾದರೂ ಯಾವುದೋ ನಿರ್ದಿಷ್ಟವಲ್ಲದ ಕಾರಣಕ್ಕೆ ಪೇಟೆಯ ಕಡೆಗೆ ದಾಪುಗಾಲು ಹಾಕುತ್ತ ಹೊರಟರು.

ಗಾಡಿ ಪೈಂಟಿನ ಕೆಂಪು ದೂಳು ಅವರ ನೀಳ ಕಾಲ್ಬೆರಳುಗಳ ನಡುವೆ ನುಸುಳಿ ಸುಡುತ್ತಿದ್ದರೂ ಅದವರ ಗಮನಕ್ಕೆ ಬರಲಿಲ್ಲ. ಉಪ್ಪುಪ್ಪಾದ ಬೆವರು ತಲೆಯ ಮೇಲಿಂದ ಹರಿದು ದೇಹದ ಮೇಲೆ ಇಳಿಯುತ್ತಿದ್ದರೂ ಅದನ್ನು ಒರೆಸಿಕೊಳ್ಳಬೇಕೆನ್ನಿಸಲಿಲ್ಲ.

ಬೀಡಾ ಅಂಗಡಿ ಪೈಗಳು ಹೆಂಡತಿ ಮೀನಕ್ಕಳನ್ನು ಅಂಗಡಿಯಲ್ಲಿ ಕೂರಿಸಿ ಗಜಾನನ ಬಸ್ಸಿಗೆ ಟಿಕೆಟ್ ಕೊಡಲು ಹೋಗಿದ್ದರು. ನಾಲ್ಕಾರು ಜನ ಬೀಡ ಜಗಿಯುತ್ತಲೋ, ಆಟದ ವಿಷಯ ಮಾತಾಡುತ್ತಲೋ, ಬೀಡಿ ಎಳೆಯುತ್ತಲೋ ತಮ್ಮ ತಮ್ಮಲ್ಲೇ ಮಾತನಾಡುತ್ತ ಅಂಗಡಿಯೆದುರು ನಿಂತಿದ್ದರು.

ಬೆಲೆ

ಬಡ ಕವಿಗೆ
ಸನ್ಮಾನಿಸಿ ಕೊಟ್ಟರು
ಶಾಲ್
ರಾತ್ರಿ ಒತ್ತೆಯಿಟ್ಟು
ಕುಡಿದನಾತ
ಅಲ್ಕೋಹಾಲ್.

– ಪ್ರಭು ಅ. ಗುಜೀಹಾಳ್



ಭೋಜಯ್ಯ ಬಂದು ಕೈಲಿದ್ದ ಅಷ್ಟೂ ಹಣವನ್ನು ಚಾಕಲೇಟ್ ತುಂಬಿದ್ದ ಬಾಟಲಿಯ ಮುಚ್ಚಳದ ಮೇಲಿಟ್ಟು "ಹಣೆ ಒಂದು ಬೀಡ ಕೊಡು" ಎಂದರು.

ಮೀನಕ್ಕ ತ್ರಿಕೋಣಾಕಾರವಾಗಿ ಮಡಚಿದ್ದ ಬೀಡವೊಂದನ್ನು ಬಾಟಲಿಯಿಂದ ತೆಗೆದು ಹೊಗೆಸೊಪ್ಪಿನ ತುಂಡಿನೊಂದಿಗೆ ಎದುರಿನ ಸ್ಟೀಲ್ ಪ್ಲೇಟಿನ ಮೇಲಿಟ್ಟು "ಇನ್ನೆಂತ ಬೇಕು" ಎಂದು ಅಲ್ಲಿರಬಹುದಾದ ಹತ್ತು ಹನ್ನೆರಡು ರೂಪಾಯಿಗಳನ್ನು ನೋಡುತ್ತ ಕೇಳಿದರು. ಅಂಗಡಿಯೆದುರು ಕಪ್ಪು ರಸ್ತೆ ಬಿಸಿ ಕಾರುತ್ತ ಮಲಗಿತ್ತು. ರಸ್ತೆಗಂಟಿಸಿದ್ದ ಯಕ್ಷಗಾನ ಪ್ರಚಾರ ಪತ್ರದಲ್ಲಿನ ಚಿತ್ರದ ನಳನ ತಲೆಯ ಮೇಲೊಂದು ವಾಹನ ಸಾಗಿದ್ದರಿಂದ ನಳನ ಕಿರೀಟ ಛಿದ್ರಛಿದ್ರವಾಗಿತ್ತು.

ಎಲೆ ಬಿಡಿಸಿ ಸುಣ್ಣ ಸವರುತ್ತ ಅಂದರು ಭೋಜಯ್ಯ "ಇನ್ನೆಂತ ಬ್ಯಾಡ. ಎಲ್ಲ ದುಡ್ಡೂ ನೀನೇ ಇಟ್ಕೋ."

ಆಶ್ಚರ್ಯಚಕಿತರಾಗಿ ಭೋಜಯ್ಯನವರನ್ನೊಮ್ಮೆ ನೋಡಿದಳು ಮೀನಕ್ಕ. ಈ ಬಿರಾಮನಿಗೆ ಪೋಂಕೇ ಹೌದು ಎಂದು ಕಾತರಿಯಾಯಿತು. ಏನೂ ಉತ್ತರಿಸದೆ ನಾಲ್ಕಾಣೆಯನ್ನು ಮಾತ್ರ ತೆಗೆದುಕೊಂಡು ಉಳಿದುದನ್ನು ಅಲ್ಲೇ ಬಿಟ್ಟಳು.

ಬೀಡಾವನ್ನು ಮಡಚಿ, ಮುರುಕು ಹಲ್ಲುಗಳ ಬಾಯಿಗೆ ತುರುಕಿ, ಹಲ್ಲುಗಳ ಸಂದಿಯಲ್ಲೊಮ್ಮೆ ನಾಲಿಗೆಯಾಡಿಸಿ ಏನೋ ಮಹತ್ತರವಾದುದನ್ನು ಹೇಳುವಂತೆ "ನಿಂಗೆ ಗೊತ್ತಿತ್ತ ಮೀನಕ್ಕ. ನಾನು ಲಚ್ಚಿ ಒಟ್ಟಿಗೆ ಮನಕಂಡಿದ್ದೆ."

ತಮ್ಮ ತಮ್ಮ ಮಾತಿನಲ್ಲೇ ಮಗ್ನರಾಗಿದ್ದವರು ಅದನ್ನು ಅಲ್ಲೇ ಬಿಟ್ಟು ಭೋಜಯ್ಯ ಹೇಳಿದ ಮಾತಿನತ್ತ ಆಕರ್ಷಿತರಾದರು. ತುಂಬಾಕಿನ ಜೊತೆಗೆ ಸುಣ್ಣ ಸೇರಿಸಿ ಅಂಗೈಯಲ್ಲಿ ಹೊಸೆದು ಹದ ಮಾಡುತ್ತಿದ್ದ ಭೋಜಯ್ಯ ಹೆಮ್ಮೆ ತುಂಬಿದ ದೃಷ್ಟಿಯನ್ನು ಅವರತ್ತ ಬೀರುತ್ತ ಕ್ಷಣಕಾಲ ನೋಡಿ ಹೊಗೆಸೊಪ್ಪಿನ ತುಂಡನ್ನು ಮೇಲೆತ್ತಿದ ಬಾಯಿಗೆ ತೂರಿ ಮತ್ತೆ ಹೇಳಿದರು "ನಂಬುದಿಲ್ವನಾ, ನಾನು ಸುಳ್ ಹೇಳ್ವನಾ? ಶತ್ಯ, ದೇವರಾಣೆಗೂ ಶತ್ಯ. ಆ್ಯಹ್ ಥೂ." ಕೆಂಪು ರಸವನ್ನು ರಸ್ತೆ ಬದಿಯ ಹಲಸಿನ ಮರದ ಬುಡಕ್ಕೆ ಉಗಿದು, ಸುಣ್ಣ ಹಿಡಿದು ಹೆಬ್ಬೆರಳನ್ನು ಮರದ ಕಾಂಡಕ್ಕೆ ಒರೆಸಿ ಶುಚಿ ಮಾಡಿಕೊಂಡು ಮತ್ತೆ ಹೇಳಿದರು. "ನಾನು ಅವಳ ತೊಡೇಲಿ

ಕಪ್ಪು ಮಚ್ಚೆ ಇತ್ಯಾಂತ ಹೇಳ್ದೆ. ಶುಳ್ಳಂದೋರು ಬನ್ನಿ.''

ಮೀನಕ್ಕ ನಾಚಿಕೆ ಹೇಸಿಗೆಗಳಿಂದ ಅವನತಮುಖರಾಗಿ ಕುಳಿತಿದ್ದರು. ಅಲ್ಲಿದ್ದವರಲ್ಲಿ ಕೆಲವರು ಗಂಭೀರವಾಗೇ ಇದ್ದರೆ ಇನ್ನು ಕೆಲವರು ತುಟಿಯಂಚಿನಲ್ಲೇ ನಕ್ಕರು.

ಇಷ್ಟು ಹೇಳಿದ ಮೇಲೂ ಈ ಜನ ತನ್ನನ್ನು ನಂಬುವುದಿಲ್ಲವಲ್ಲ ಎಂಬ ಚಿಂತೆ ಭೋಜಯ್ಯನವರನ್ನು ಕಾಡತೊಡಗಿತು. ಅದೂ ಅಲ್ಲದೆ ಲೇವಡಿಯ ನಗೆ ಬೇರೆ. ಆ ನಗು ಅವರನ್ನು ರೇಗಿಸಿತು. ಪುನಾ ಅದೇ ಹಳೇ ಹೇಳಿಕೆ ನೆನಪಿಗೆ ಬಂತು. "ನಗಿ ನಗಿ, ಹಣ್ಣೆಲೆ ಬೀಳು ಸಮೆಗೆ ಚಿಗುರೆಲೆ ನಗತ್ತಂಬ್ರು. ನಿಮಗೂ ನಾಳೆ ಪ್ರಾಯ ಆಯಿ.''

ಚಿಗುರು ಮೀಸೆಯ ಹುಡುಗನೊಬ್ಬ ಸಮಜಾಯಿಸಿ ನೀಡಲು ಪ್ರಯತ್ನಿಸಿದ "ಹಾಂಗಲ್ಲ ಅಜ್ಜಯ್ಯ...''

ಅಜ್ಜಯ್ಯ ಶಬ್ದ ಕಿವಿಗೆ ಬೀಳುತ್ತಲೇ ಭೋಜಯ್ಯ ಕೆಂಡಾಮಂಡಲವಾದರು. "ಏನು, ನೀನು ನಂಗೆ ಅಜ್ಜಯ್ಯ ಅಂಬ್ದಾ. ಈಗಿನ ಕಾಲದ ನಿಮಗಿಂತ ನಾವೇ ಗಟ್ಟಿ.'' ಅವರು ನೇರವಾಗಿ ಸೆಟೆದು ನಿಂತು ಮಾತು ಮುಂದುವರಿಸಿದರು. "ನಾವೆಲ್ಲ ಒಳ್ಳೆ ಅನ್ನ ತಿಂದವರು. ಕಾಣ್ ಈಗ್ಲೂ ಹ್ಯಾಂಗಿದ್ದೆ. ನೀವಾ ಇಂಗ್ಲಿಷ್ ಗೊಬ್ರ ಹಾಕಿ ಬೆಳೆದ ಅಕ್ಕಿ ತಿಂಬ್ದು. ಇಂಗ್ಲಿಷ್ ಔಷಧಿ ಹೊಡೆದ ತರಕಾರಿ ತಿಂಬ್ದು, ಇಂಗ್ಲಿಷ್ ಪಿಚ್ಚರ್ ಕಂಡ್ ಅಪಾಪೋಲಿಯಾಗಿ ಟುಸು ಪುಸ್ಸು ಅಂತ ಇಂಗ್ಲಿಷ್‌ನಲ್ಲಿ ಮಾತಾಡಿದ್ರೆ ಅಂಡ್ ದಪ್ಪ ಆದರೆ ಕಣೆಗೆ ಮಾಡ್ತ್ರೀ. ಹೇಳುದು ಸುಳ್ಳಾ ಮೀಸೆ ಬಪ್ಪ ಹೊತ್ತಿಗೆ ದೇಶ ಕಾಂತಿಲ್ಲೆ ಅಂತ. ನಾಳೆ...'' ಕೆಲವರು ಗಂಭೀರರಾಗಿ ಇದೊಂದು ಪೀಡೆ ಎಂದುಕೊಂಡು, ಇನ್ನು ಕೆಲವರು ಈ ಗ್ರಹಚಾರ ನಮ್ಮ ಹತ್ತಿರ ಬಾರದಿದ್ದರೆ ಸಾಕು ಎಂದುಕೊಂಡು ಅವರಿಂದ ದೂರವಾದಾಗ, ಹೇಳದೇ ಉಳಿದಿದ್ದ ಅನೇಕ ವಿಷಯಗಳು ತಮ್ಮ ಹೊಟ್ಟೆಯನ್ನು ಉಬ್ಬರಿಸಿಬಿಟ್ಟಿದೆ ಎಂದುಕೊಂಡ ಭೋಜಯ್ಯ ಯಾರಿಗೆ ಹೇಳುವುದಿದನ್ನೆಲ್ಲ ಎಂದು ಯೋಚಿಸಿ ಅತ್ತ ಪುಗ್ಗೆ(ಬೆಲೂನು)ಯೊಂದನ್ನು ಎತ್ತಿಕೊಂಡು ಆಡುತ್ತ ಕಲ್ಲೊಂದರ ಮೇಲೆ ಕುಳಿತಿದ್ದ ದಾಸಯ್ಯ ಹೆಗ್ಗಡೆಯವರ ಐದು ವರ್ಷದ ಮೊಮ್ಮಗಳನ್ನು ಕಂಡು ಸೀದಾ ಅದರ ಹತ್ತಿರ ಹೋದರು.

ಮಗುವನ್ನು ಮುದ್ದಿಸುವವರಂತೆ ಅದರ ಹತ್ತಿರ ಕುಳಿತುಕೊಂಡು, ಒಮ್ಮೆ ತನ್ನ ಕುರುಚಲು ಗಡ್ಡವನ್ನು ನವಿರಾಗಿ ನೀವಿಕೊಂಡು 'ಮಗಾ' ಎಂದರು.

ಆ ಮಗು ತಲೆಯೆತ್ತಿ ಅವರನ್ನು ನೋಡಿತು. ಗುಂಡುಗುಂಡಾಗಿದ್ದ, ಚುರುಕುತನವೇ ಮೈವೆತ್ತಿದಂತಿದ್ದ ಆ ಮಗುವೂ ಒಮ್ಮೆ ಸಾಯಲೇಬೇಕಲ್ಲ ಎಂದು ಭೋಜಯ್ಯ ಯೋಚಿಸಿ ಜೀವನದ ಪ್ರತಿಯೊಂದೂ ಸಾವಿನಲ್ಲೇ ಪರ್ಯಾವಸಾನ ಹೊಂದುತ್ತದೆ. ಈ ಸಾವಿನ ಅಸ್ತಿತ್ವದ ಅರಿವು ಮನುಷ್ಯನಿಗೆ ಹುಟ್ಟಿನಿಂದಲೇ ಇದ್ದರೆ ಈ ದೇಶದಲ್ಲಿಯೇ ಏಕೆ ಈ ಪ್ರಪಂಚದಲ್ಲಿಯೇ ಕಲಹ, ಯುದ್ಧ, ದುರಾಸೆ, ವೈಮನಸ್ಸು, ಮೋಸ ಎಲ್ಲ ಮಾಯವಾಗುತ್ತದೆ ಎನಿಸಿ ಸಣ್ಣ ದನಿಯಲ್ಲಿ ನಿಧಾನವಾಗಿ ಹೇಳತೊಡಗಿದರು. "ಮಗಾ ನಾಳೆ ನೀನು ದೊಡ್ಡವಳಾತ್ತೆ. ಕಡೆಗೆ ನಿಂಗೆ ಮದ್ವೆ ಮಾಡ್ತ್ರು. ನಿಂಗೆ ಮಕ್ಳು ಆತೋ ಹಾಂಗೇ ನಿಂಗೆ ಪ್ರಾಯ ಆತ್ತು. ಕೂದ್ಲೆಲ್ಲ ಬೆಳ್ಳಗಾತ್ತು. ಏಳುಕ್ಕಾತ್ತಿಲ್ಲೆ ಕೂಕಂಬುತೂ ಆತ್ತಿಲ್ಲೆ. ಒಂದುದಿನ ನೀನು ಸತ್ಹೋತೆ. ನಿನ್ನನ್ನು ತಕ್ಕಂಡು ಹೋಯಿ ಮಾವಿನ ಕೊಳ್ಳಿ ಮೇಲೆ ಇಟ್ಟು ಬೆಂಕಿ ಹಚ್ತ್ರು. ನೀನು ಸುಟ್ಟು ಹೋಯಿ

ಪ್ರಾಪ್ತಿಗಿಂತ ಪ್ರಯತ್ನದ ಆನಂದ ಹೆಚ್ಚಿನದು.

— ವಿನೋಬಾ

ವಿವೇಕ ಭ್ರಷ್ಟರಾದವರ ಅಧಃಪತನವು ನೂರಾರು ರೀತಿಯಿಂದ ಆಗುತ್ತದೆ.

— ಸುಭಾಷಿತ


ತನುವರಿಯದ ನೋವಿಲ್ಲ, ಮನವರಿಯದ ಪಾಪವಿಲ್ಲ.

— ಜಾಹ್ನವಿ

ಸಕಲರ ಟೀಕೆಯನ್ನು ಸ್ವಾಗತಿಸು. ನಿನ್ನ ನಿರ್ಣಯವನ್ನು ಕಾದಿರಿಸು.

— ಶೇಕ್ಸ್‌ಪಿಯರ್

ಸಂಗ್ರಹ : ಹ. ಗೋ. ಶಿ.



ಬೂದಿ ಆತೆ. ಸತ್ ಕೂಡ್ಲೆ ಒಂದ್ ಚಣ(ಕ್ಷಣ) ಮರಕಿದ ಶಾಸ್ತ್ರ ಮಾಡಿ ಮತ್ತೆ ಮರೀತ್ರು.''

ಆ ಮಗುವನ್ನು ಅವರ ತಾಯಿ ಕೂಗಿದಾಗ ಅದು ಅಲ್ಲಿಂದ ಹೊರಟು ಹೋಯಿತು.

ಅಂದು ರಾತ್ರಿ ಆ ಮಗು ಮನೆಯಲ್ಲಿ ದೊಡ್ಡ ರಾದ್ಧಾಂತವನ್ನೇ ಮಾಡಿತು. ಯಾರು ಏನು ಹೇಳಿದರೂ ಊಟ ಮಾಡುವುದೇ ಇಲ್ಲ ಎಂದು ಹಟ ಮಾಡಿತು. ಮನೆಯವರೆಲ್ಲ ರಮಿಸಿ, ಬೆದರಿಸಿ ಕೇಳಿದಾಗ "ನಾ ಉಂತಿಲ್ಲೆ ಉಂಡ್ರೆ ದೊಡ್ಡವಳಾತೆ. ಕೂದ್ಲೆಲ್ಲ ಬೆಳ್ಳಗಾತ್ತ ಹೋತ್. ಕಡೆಗೆ ನೀವೆಲ್ಲ ನನ್ನ ಸುಡ್ತ್ರಿ. ಅದ್ಕೇ ನಾ ದೊಡ್ಡವಳಾತ್ತೇ ಇಲ್ಲೆ, ಉಂಬುದೂ ಇಲ್ಲೆ.''

ಇದನ್ನು ಇವಳ ತಲೆಗೆ ತುಂಬಿದಾತ ಭೋಜಯ್ಯ ಎಂಬುದು ತಿಳಿದ ಮೇಲೆ ಎಲ್ಲರೂ ಏಕಾಏಕಿ ತೀರ್ಮಾನಕ್ಕೆ ಬಂದರು. "ಆ ಭೋಜಯ್ಯನಿಗೆ ಮಂಡೆ ಸಮ ಇಲ್ಲೆ.''

ನೆನೆದಲ್ಲಿ, ನಿಂತಲ್ಲಿ, ಕುಳಿತಲ್ಲಿ ಭೋಜಯ್ಯ ಸಾವಿನ ಬಗ್ಗೆಯೇ ಯೋಚಿಸುತ್ತಿದ್ದರು. ರುದ್ರನ ಹೆಣ ಅವರ ಕಣ್ಣೆದುರೇ ನಿಂತಂತೆ ಅವರಿಗೆ ಭಾಸವಾಗುತ್ತಿತ್ತು. ಕಾಲರಾಯ ತನ್ನ ಪಾಶವನ್ನು ಬೀಸಲು ಸನ್ನದ್ಧನಾಗಿ ನಿಂತಂತೆನ್ನಿಸುತ್ತಿತ್ತು. ಎಲ್ಲರಿಗೂ ಆಗುವ ಹಾಗೆ ತಾನು ಹಿಂದಿನ ಜೀವನ ಕಾಲವನ್ನು ಸದುಪಯೋಗಪಡಿಸಿಕೊಳ್ಳಲಿಲ್ಲವಲ್ಲ ಎಂದು ಭೋಜಯ್ಯ ಮರುಗಿದ್ದೂ ಉಂಟು.

ಸುತ್ತ ಕತ್ತಲೆ ಗುಪ್ಪೆ ಹಾಕಿದಂತೆ ತುಂಬಿಕೊಂಡಿತ್ತು. ದಪ್ಪವಾಗಿ ದೂರದಲ್ಲೆಲ್ಲೋ ದೈಯ್ಯದ ಗೆಂಡದ್ದೋ, ಪಜುರ್ಲಿ ಕಲ್ಲುಕುಟಿಗದ ಕೋಲದ್ದೋ ವಾದ್ಯ ಅಸ್ಪಷ್ಟವಾಗಿ ಕೇಳಿ ಬರುತ್ತಿತ್ತು. ಕೋಣೆಯ ಮೂಲೆಯಲ್ಲಿ ಮಲಗಿದ್ದ ಭೋಜಯ್ಯ ದೀರ್ಘ ಉಸಿರು ಬಿಡುತ್ತಿದ್ದರು. ಗೊರಕೆಯಲ್ಲಿ ಟುಸ್ಸು ಪುಸ್ಸುಗಳೂ ಸೇರಿಕೊಂಡು ಮನಸ್ಸಿಗೆ ಕಿರಿಕಿರಿಯಾಗುವಂತಿತ್ತು.

ಜಾಹ್ನವಿ ಯೋಚಿಸುತ್ತಿದ್ದರು. ಇದನ್ನೇ ಈ ಮೊದಲು ಹಲವಾರು ಬಾರಿ ಯೋಚಿಸಿದ್ದರು. ಈ ರಾತ್ರಿ ಹೀಗೇ ನಿರಂತರವಾಗಿ ಉಳಿದರೆ ಹೇಗೆ? ಪಡ್ಲಾಯಿಯ ಕಡಲಲ್ಲಿ ಮುಳುಗಿದ ಸೂರ್ಯ

ತಣ್ಣಗಾಗಿ ನಿಗಿರಿ ಹೋಗಿ ಬೆಳಿಗ್ಗೆ ಮೂಡ್ಲಾಯಿಂದ ಮೂಡದಿದ್ದರೆ ಹೇಗೆ? ಆಗ ಕೋಳಿಗಳು ಕೂಗಿ ಕೂಗಿ ಕಾಗೆಗಳು ಕ್ರೌವ್ ಕ್ರೌವ್ ಎಂದು ಅರಚಿ ಅರಚಿ ಕತ್ತು ಉದ್ದ ಮಾಡಿ ನಿರಾಶರಾಗಿ ಇನ್ನು ರವಿ ಮೂಡುವುದೇ ಇಲ್ಲ ಎಂದು ತೀರ್ಮಾನಿಸಿದರೆ ಹೇಗೆ?

ಹಾಗಾದರೆ? ಹಾಗಾದಾಗ ಮಾತ್ರ ತನಗೆ ಈ ಬಂಧನದಿಂದ ಮುಕ್ತಿ. ಇಷ್ಟು ಕಾಲ ಒಂದು ರೀತಿಯಲ್ಲಿ ತನ್ನ ಜೀವ ತಿಂದರು. ಈಗ ಇನ್ನೊಂದು ತರಾ. ಇವರು ಸಾಯಲಿ ಎಂದು ಬಯಸುವುದು ಸದ್ಗೃಹಿಣಿಯ ಲಕ್ಷಣವಲ್ಲ. ಬದಲಿಗೆ ತನಗೇ ಮುತ್ತೈದೆ ಸಾವು ಬರಲಿ, ಬದುಕಿನಲ್ಲಿ ತಾನಾದರೂ ಏನು ಸುಖವುಂಡಿದ್ದೇನೆ? ಸುಖ ಎಂಬ ಪದ ತನ್ನ ಹತ್ತಿರ ಕೂಡ ಸುಳಿಯಲಿಲ್ಲ. ಬೆಳಗ್ಗೆ ಏಳು, ಕಸ ಗುಡಿಸು, ಸಗಣಿ ಬಳಿ, ಗಂಜಿ ಬೇಯಿಸು, ಹಾಲು ಕರೆ, ಗಂಟೆಯನ್ನು ಗುಡ್ಡಕ್ಕೆ ಅಟ್ಟು, ಪಾತ್ರೆ ತೊಳೆ, ಸಾರಿಸು ಮಧ್ಯಾಹ್ನಕ್ಕೆ ಎಸರಿಡು. ಕಷಾಯ ಮಾಡು, ಉಣ್ಣು, ಹೂಂಸು, ಆಕಳಿಸು, ಮಲಗು ಮತ್ತೆ ಜಂತಿ ನೋಡುತ್ತ ಈ ನಿರರ್ಥಕ ಜೀವನದ ಬಗ್ಗೆ ಕೊರಗು.

ಹಬ್ಬ ಹರಿದಿನ ಜಾತ್ರೆ ನನ್ನ ಜೀವನದಲ್ಲಿ ಇವೆಲ್ಲ ಬರಲೇ ಇಲ್ಲ. ದೀಪಾವಳಿಯ ದಿನ ಸಂಜೆ ಕತ್ತಲಿನಲ್ಲಿ ಗದ್ದೆಗಳಲ್ಲಿ ಹಚ್ಚಿದ ದೊಂದಿ ನಿಲ್ಲಿಸಿ, ಬುಡಕ್ಕೆ ಅರಳು ಹೂ, ಬಣ್ಣದ ಎಲೆ ಸುರುವಿ "ಹೊಲಿ ಕೊಟ್ರೋ ಬಲಿ ತಗಂಡ್ರೋ ಬಲೀಂದ್ರ ದೇವ್ರು ತಮ್ರಾಜ್ಯಕ್ಕೆ ತಾವೇ ಬಂದ್ರು" ಎಂದು ಕೂಗುವ ಸಂಭ್ರಮ ಬರೀ ಯಾಂತ್ರಿಕವಾಯಿತು. ಹೊಲದಲ್ಲಿ ಹೊಸ ಬೆಳೆ ಬಂದಾಗ ಎಲೆ ಕದಿರು ಕತ್ತರಿಸಿ, ಪೂಜಿಸಿ ಮನೆ ಕಂಬಗಳಿಗೆ ಅವನ್ನು ಕಟ್ಟುವ ನಿರರ್ಥಕ ಕ್ರಿಯೆ ಖುಶಿ ತರಲಿಲ್ಲ. ತನಗೆ ದೈಹಿಕ ಸುಖವೂ ಇಲ್ಲ. ಮಾನಸಿಕವಾಗಿಯೂ ಇಲ್ಲ. ಒಂದು ಮಗು ಹುಟ್ಟಿದ್ದರೆ, ಕೊರಗರು ಡೊಳ್ಳು ಕುಟ್ಟುತ್ತ ಕುಣಿಯುವುದನ್ನು, ಹೂವಿನ ಕೋಲನ್ನು ಹಿಡಿದ ಬಾಲ ಕಲಾವಿದರು ಯಕ್ಷಗಾನದ ಅರ್ಥಗಳನ್ನು ಹೇಳುವುದು ಇವನ್ನೆಲ್ಲ ಅದು ಕಣ್ಣರಳಿಸಿ ನೋಡುವಾಗ ಮನಸ್ಸಿಗೆ ಎಷ್ಟು ಆನಂದವಾಗುತ್ತಿತ್ತೋ. ಆದರೆ ಆ ಭಾಗ್ಯ ತನ್ನದಾಗಲಿಲ್ಲ. ತನ್ನದಲ್ಲದ ತಪ್ಪಿಗೆ ತಾನು ಬಂಜೆ ಎನ್ನಿಸಿಕೊಳ್ಳಬೇಕಾಯಿತು. ಸತ್ತರೆ ಎಳ್ಳು ನೀರು ಬಿಡಲೂ ಯಾರೂ ಇಲ್ಲ ಈಗ. ಭೂಮಸೂದೆಯಿಂದಾಗಿ ಆರ್ಥಿಕ ಸ್ಥಿತಿ ಹದಗೆಟ್ಟಿರುವುದರಿಂದ ಯಾವುದಾದರೂ ಮಗುವನ್ನು ದತ್ತು ತೆಗೆದುಕೊಳ್ಳುವ ಹಾಗೂ ಇರಲಿಲ್ಲ. ಏನೂ ಗತಿಯಿಲ್ಲದವರಿಗೆ ಯಾರು ತಾನೇ ಕಂದನನ್ನು ಕೊಟ್ಟಾರು?

ಒಮ್ಮೆ ಜೋರಾಗಿ ಕೆಮ್ಮಿ ಬಾಯಿಂದೊಸಗಿದ ಜೊಲ್ಲನ್ನು ಹೊದಿಕೆಯಿಂದಲೇ ಒರೆಸಿಕೊಂಡ ಭೋಜಯ್ಯನಿಗೆ ತನ್ನ ಬಲಗಾಲು ನಿಶ್ಚಲವಾಗಂತೆನ್ನಿಸಿತು. ಕಾಲನ್ನು ಎತ್ತಲು ಪ್ರಯತ್ನಿಸಿದರು. ಊಹೂಂ ಆಗಲಿಲ್ಲ. ಅಲುಗಿಸಲೂ ಅವರಿಗೆ ಸಾಧ್ಯವಾಗಲಿಲ್ಲ. ಹಾಗಾದರೆ ತನ್ನ ಕಾಲು ಆದಾಗಲೇ ಸತ್ತು ಹೋಯಿತೇ ಅಥವಾ ಇದು ವೃದ್ಧಾಪ್ಯದ ವೈಕಲ್ಯವೇ? ಅವರ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಅನುಭವ. ತಾನು ಇಲ್ಲೇ ಹೀಗೇ ಸತ್ತುಹೋದರೆ ಎಂದು ದಿಗಿಲಾಗಿ ಗಟ್ಟಿಯಾಗಿ ಕಿರುಚಿಕೊಂಡರು "ಜಾನೀ ನಾನು ಸತ್ತೆ."


ಯೋಚನೆಯಲ್ಲಿಯೇ ಮುಳುಗಿದ್ದ ಜಾಹ್ನವಿ ಈ ಕಿರಿಚಾಟದಿಂದ ಬೆಚ್ಚಿಬಿದ್ದರು. "ಎಂತಾ ಆಯ್ತು" ಎಂದು ಕೇಳಿದರೂ ಧ್ವನಿ ಹೊರಬಂದುದರ ಬಗ್ಗೆ ಅವರಿಗೇ ನಂಬಿಕೆ ಬರಲಿಲ್ಲ. ತಲೆದೆಸಿಯಲ್ಲಿ ಚಿಮಣಿಗಾಗಿ, ಬೆಂಕಿಪೊಟ್ಟಣಕ್ಕಾಗಿ ಬಳಚಿದರು. ಸಿಗಲಿಲ್ಲ ಎದೆ

"ನನ್ನ ಮಗಳು ಸಂಗೀತ ಅಭ್ಯಾಸ ಮಾಡತೊಡಗಿದ ಮೇಲೆ ನನ್ನ ಅದೃಷ್ಟ ಖುಲಾಯಿಸಿತು."

"ಅದು ಹೇಗೆ...?"

"ಪಕ್ಕದ ಮನೆಯವನು ತನ್ನ ಮನೆಯನ್ನು ಅರ್ಧ ಬೆಲೆಗೆ ನನಗೆ ಮಾರಿದ."

– ಶಂಕರಗೌಡ ವಯ್. ಪಾಟೀಲ



ಡವಗುಟ್ಟುತ್ತಿತ್ತು. "ದೀಪ ಹಚ್ಚೇ ಕತ್ತೆ ರಂಡೆ. ನಾನು ಸತ್ತು ಹೋತೆ" ಎಂದು ಭೋಜಯ್ಯ ಹೇಳಿದುದು ಮತ್ತಷ್ಟು ಗೊಂದಲವನ್ನುಂಟುಮಾಡಿತು ಅವರಲ್ಲಿ. ಕೈಗೆ ಸಿಕ್ಕ ಕಡ್ಡಿ ಪೊಟ್ಟಣದಿಂದ ಒಂದು ಕಡ್ಡಿ ತೆಗೆಯುವಾಗ ಹಲವಾರು ಕೆಳಚೆಲ್ಲಿದವು. ಅಂತೂ ಜಾಹ್ನವಿ ದೀಪ ಹೊತ್ತಿಸಿದರು.

"ಬೇಗ ಎರಡು ಹಪ್ಪ ಸುಟ್ಟುಕೊಡು, ತಿಂದ್ಕಂಡು ಸಾಯ್ತೆ." ಆ ನಡುರಾತ್ರಿಯಲ್ಲಿ ಭೋಜಯ್ಯ ಗಡಿಬಿಡಿ ಮಾಡಿದರು ಜಾಹ್ನವಿ ಸೆರಗು ಸರಿ ಮಾಡಿಕೊಂಡು ದೀಪ ಹಿಡಿದುಕೊಂಡೇ ಅಡುಗೆ ಮನೆಗೆ ಹೋಗಿ ಡಬ್ಬದಿಂದ ಎರಡು ಹಲಸಿನಕಾಯಿ ಹಪ್ಪಳ ತೆಗೆದರು. ಒಲೆಯ ಎದುರು ಕುಳಿತುಕೊಳ್ಳುವಾಗ ಎದೆ ಹಿಡಿದುಕೊಂಡಂತೆನ್ನಿಸಿತು. ಒಲೆಯಿಂದ ಕೆಂಡ ಕೆದಕಿ, ಹಪ್ಪಳದಿಂದಲೇ ಗಾಳ ಹಾಕಿ ಹಪ್ಪಳವನ್ನ ಸುಟ್ಟರು. ಸೀಮೆಎಣ್ಣೆ ಖಾಲಿಯಾಗಿ ದೀಪ ಕೊನೆಯುಸಿರನ್ನು ಎಳೆಯತೊಡಗಿತು.

ಹಪ್ಪಳವನ್ನು ಕೊಟ್ಟಾಗ ಜೀವನದಲ್ಲಿ ಹಪ್ಪಳವನ್ನೇ ಕಾಣದವರ ಹಾಗೇ ಕುರುಂ ಕುರುಂ ಎಂದು ಇರುವ ಕೆಲವೇ ಹಲ್ಲುಗಳಲ್ಲಿ ಅಗಿದರು. ತಿಂದು ಮುಗಿಸುತ್ತಲೇ ಕೈ ಕೊಡವಿಕೊಂಡು ಚಾಪೆಯ ಮೇಲೆ ಬಿದ್ದ ಹಪ್ಪಳದ ತುಂಡುಗಳನ್ನು ನೆಲಕ್ಕೆ ತಳ್ಳಿದ ಶಾಸ್ತ್ರ ಮಾಡಿ ಮಲಗಿದ ಭೋಜಯ್ಯ ತಕ್ಷಣ ನಿದ್ರಾವಶರಾದರು. ಜಾಹ್ನವಿ ಮತ್ತೆ ತನ್ನ ಯೋಚನೆಯಲ್ಲಿ ಮುಳುಗಿದರು. ಸೊಳ್ಳೆಯೊಂದು ಬಲಗಿವಿಯ ಹತ್ತಿ ಹಾಡತೊಡಗಿ, ಅವರು ತಲೆ ಕೊಡವಿದಾಗ ಎಡಗಿವಿಯತ್ತ ಸಾಗಿತು. ದೀಪ ಆರಿ ಕತ್ತಲಾದುದರಿಂದ ತಿಗಣೆಗಳು ಚಾಪೆಯ ಓಲಿಯಿಂದ ಹೊರಬಂದವು.

ಇವರಿಂದ ಸಾಧ್ಯವಿಲ್ಲೆಂದು ತಿಳಿದಾಗ ತಾನು ರುದ್ರನಿಂದಾದರೂ ಮಗುವನ್ನು ಪಡೆಯುವ ತನ್ನ ನಿರ್ಧಾರವನ್ನು ಸಡಿಲಗೊಳಿಸಬಾರದಿತ್ತು. ಆಗ ತನ್ನ ತಲೆಯನ್ನು ಅದಾವ ಭೀತಿಯ ಭೂತ ಹೊಕ್ಕಿತ್ತೋ ಹಿಂಜರಿತವುಂಟಾಯಿತು. ಅದನ್ನು ಹಿಂಬಾಲಿಸಿಕೊಂಡು ಧರ್ಮ, ದೇವರು, ನೀತಿ, ಅನೀತಿಗಳ ತಕಲಾಟ ಮನಸ್ಸಿನಲ್ಲಿ. ಜೊತೆಗೆ ರುದ್ರ ಈ ಘಟನೆಯನ್ನೇನಾದರೂ ಬಹಿರಂಗಗೊಳಿಸಿಯಾನೆಂಬ ಆತಂಕ. ಆದರೂ ತಾ ಪುನಾ ಯತ್ನ ಮಾಡಬಹುದಾಗಿತ್ತು. ಯಶಸ್ವಿಯಾಗಲೂ ಸಾಧ್ಯವಿತ್ತೇನೋ. ಲಚ್ಚಿಯ ಮಗಳು ಶಕುವನ್ನು ಕಂಡಾಗಲೆಲ್ಲ ತನ್ನ ಹೊಟ್ಟೆಯಲ್ಲಿ ಅಂತಹ ಬೊಂಬೆಯೊಂದು ಬರದೇ ಅನಾಹುತವಾಯಿತು. ಅದು ಅತ್ತರೆ ಎಷ್ಟು ಚಂದ, ನಕ್ಕರೆ ಎಷ್ಟು ಅಂದ, ಪುಟು ಪುಟು ಅಂತ ಆಚೀಚೆ

ಓಡಾಡುವುದನ್ನು ಕಂಡಾಗ ಅದನ್ನು ಕದ್ದು ತಂದು ತನ್ನ ಮನೆಯಲ್ಲಿಯೇ ಇಟ್ಟುಕೊಂಡರೆ ಹೇಗೆ? ತಾನೇ ಸಾಕಿ ಸಲಹಿದರೆ ಹೇಗೆ ಎಂಬ ಭಾವನೆ ಮೂಡಿರಲಿಲ್ಲವೇ? ಹೌದು ಮೂಡಿತ್ತು.

ಎರಡು ಇಲಿಗಳು ಸಶಬ್ದವಾಗಿ ಮಾಡಿನಲ್ಲಿ ಕಾದಾಡುತ್ತಿದ್ದವು. ಮನೆಯ ಗೋಡೆಯನ್ನೆಲ್ಲ ಕೊರೆಕೊರೆದು ಮನೆಯಲ್ಲೆಲ್ಲ ಮಣ್ಣು ತುಂಬಿದ ಅವನ್ನಷ್ಟು ಶಪಿಸಿದರು ಜಾಹ್ನವಿ.

ದೇವರ ಕೃಪೆಯಿದ್ದರೆ ಏನೂ ಆಗಬಹುದು. ತೀರ್ಥಸ್ನಾನ ದೈವ ದರ್ಶನಗಳಿಂದ ಬಂಜೆಯರು ಮಕ್ಕಳನ್ನು ಹೆತ್ತ ಕತೆಗಳು ಅವರನ್ನು ತಲುಪದಿರಲಿಲ್ಲ. ಮಹಾಲಿಂಗೇಶ್ವರನ ಜಾತ್ರೆಯಂದು ವಿಪ್ರಭಕ್ತರು ಭೋಜನ ಮಾಡಿದ ಮೇಲೆ ಆ ಎಲೆಗಳ ಮೇಲೆ ತಾನು ಉರುಳುಸೇವೆ ಮಾಡಿರಲಿಲ್ಲವೇ? ಹೆಗಡೆ ಕಟ್ಟೆಯಲ್ಲಿ ದೇವರು ಭಕ್ತರ ಮೇಲೆ ಸಾಮೂಹಿಕವಾಗಿ ಆವಾಹನೆಯಾಗಿ 'ಓಯಾ ನಾನೋ ಹಾ ನೀನೋ ಹಾ' ಎಂದು ಸಿಂಗಾರ ಹೂ ಹಿಡಿದು ತಲೆದೂಗುವಾಗ ಆ ಭಕ್ತಿಯ ವಾತಾವರಣದಲ್ಲಿ ಹತ್ತಾರು ಬಾರಿ ದೇವರನ್ನು ಮಗುವೊಂದನ್ನು ಕರುಣಿಸೆಂದು ಬೇಡಲಿಲ್ಲವೇ? ಗುಡ್ಡಟ್ಟು ಗಣಪತಿಯ ಆಯರ್‌ಕೊಡಕ್ಕೆ ಹೋದಾಗಲೊಮ್ಮೆ, ಮುಡಿಯಕ್ಕಿ ಕಡುಬಿನ ಉತ್ಸವಕ್ಕೆ ಹೋದಾಗೊಮ್ಮೆ ಇದೇ ವಿನಂತಿಯನ್ನು ತಾನು ಮಾಡಿರಲಿಲ್ಲವೇ? ದೇವರ ಗರ್ಭಗುಡಿಯಲ್ಲಿ ಹಲಸಿನೆಲೆಯಲ್ಲಿ ಕೊಟ್ಟೆ ಕಡಬು ಮಾಡಿ ತುಂಬುವುದನ್ನು ನೋಡುವುದೆಷ್ಟು ಆನಂದ. ಆ ಉರಿದೇವರಿಗೆ ಸಹಸ್ರ ಕೊಡಗಳ ನೀರನ್ನು ಬ್ರಾಹ್ಮಣರು ಮಾತಿ (ಕೈಯಿಂದ ಕೈಗೆ) ತಂದು ಸುರಿದರೂ ಇನ್ನೂ ಶಾಂತ ಪರಿಸ್ಥಿತಿ ಉಂಟಾಗಲಿಲ್ಲವಲ್ಲ ಎಂದು ಆಶ್ಚರ್ಯಪಟ್ಟದ್ದೂ ಉಂಟು. ಸ್ವಲ್ಪ ಕಾಲ ಚಂಡಿ (ಒದ್ದೆ) ಬಟ್ಟೆ ಉಟ್ಟರೂ ತಮಗೆಲ್ಲ ಶೀತವಾಗುವಾಗ, ದೇವರಿಗೇಕೆ ಆಗುವುದಿಲ್ಲ ಎಂದು ತಲೆಕೆಡಿಸಿಕೊಂಡಿದ್ದೂ ಉಂಟು.


ಅಂದು ಶಿವರಾತ್ರಿ, ಹಣಬಿನ ದಿನ. ರಾತ್ರಿಯೆಲ್ಲ ಡೋಲು ಬಡಿದುಕೊಂಡು, ತಮಟೆ ಬಾರಿಸಿಕೊಂಡು ಉರಿಯುವ ಸೂಡಿ ಬೀಸುತ್ತ ಕುಣಿಯುತ್ತ ಮನೆ ಮನೆಗೆ ಹೋಗಿ ಅಕ್ಕಿ, ಕಾಯಿ ಸಂಗ್ರಹಿಸುತ್ತಾರೆ ಬಿಸಿರಕ್ತದ ಯುವಕರು. ಇದು ಆ ಸ್ಥಳದಲ್ಲಿನ ಕಾಮದಹನದ ಕ್ರಮ. ತೆಂಗಿನಗರಿ ಕಟ್ಟಿಗೆ ಮುಂತಾದುವುಗಳನ್ನು ಆಳೆತ್ತರ ಸೇರಿಸಿ ಬೆಂಕಿ ಹಚ್ಚಿ ಆ ಬಿಸಿಯಲ್ಲಿ, ಬೆಳಕಿನಲ್ಲಿ ಬೆಂಕಿಯ ಸುತ್ತ ಕುಣಿಯುತ್ತಾರೆ. 'ಕಾಮನೋ ಭೀಮನೋ ಕಳ್ಳ ರಂಡೇ ಮಗನೋ. ದಿಮ್ಸಾಲ್ ದಿಮ್ಸಾಲ್ ಎನಿರೋ ದಿಮಗುಟ್ಟ ಬನಿರೋ ದಿಮ್ಸಾಲ್. ಆಚಾರ್‌ರ ಕೂದ್ಲೋ ಬಾಚಣಿಗೆ ಕೆಲ್ಲೋ ದಿಮ್ಸಾಲ್' ಇತ್ಯಾದಿ ಹಾಡುತ್ತಾರೆ. ಆ ಹಾಡಿಗೆ ಅರ್ಥವಿರಲೇಬೇಕೆಂದೇನಿಲ್ಲ.

ಅಂದೇ ಕಳ್ಳತನ, ಮನೆಗಳಿಗೆ ಕಲ್ಲು, ಮಣ್ಣುಹೆಂಟೆ ಕುಟ್ಟುವುದು ಕೆಟ್ಟದಾಗಿ ಕಂಡ ಕಂಡವರಿಗೆ ಬೈಯುವುದು ಬೈಸಿಕೊಳ್ಳುವುದು ಜಾಸ್ತಿ. ಹೊಲದಲ್ಲಿ ಸೌತೆ ಗುಂಬಳ ಬೆಳೆದಿರುತ್ತದೆ. ಜಡಿಮಳೆ ಕಳೆದು ಚಳಿಗಾಲವೂ ಹೋಗಿ, ವಸಂತದ ಆಗಮನದ ಹೊಸ ಉತ್ಸಾಹದಲ್ಲಿ ತೆಂಗು ಕಂಗುಗಳು ಸಮೃದ್ಧಿಯಿಂದ ಬೆಳೆದಿರುತ್ತವೆ. ರಾತ್ರಿಯೆಲ್ಲ ಕಣ್ಣಲ್ಲಿ ಕಣ್ಣಿಟ್ಟು ಕಾದರೂ ಅದಾವ ಮಾಯದಲ್ಲೋ ಕಳ್ಳರು ತಮ್ಮ ಕೈ ಚಳಕ ತೋರಿಸಿಬಿಟ್ಟಿರುತ್ತಾರೆ. ಜಾಹ್ನವಿ ರಾತ್ರಿಯೆಲ್ಲ ನಿದ್ದೆಯಿಲ್ಲದೇ ತೋಟದಲ್ಲಿ ಕಾದು ಕುಳಿತಿದ್ದರು. ಹೆಣ್ಣು ಹೆಂಗುಸಾದ ತನಗೆ ಕಳ್ಳರು ಭಯ ಪಡುವುದಿಲ್ಲವಾದರೂ ನರಜೀವಿಯೊಂದಿದೆ ಎಂಬ ಕಾರಣಕ್ಕಾದರೂ

ಅಂತರ

ಪ್ರಿಯೇ ನಾವಿಬ್ಬರು ಸೇರಿ
ಗುಟ್ಟಾಗಿ ಮಾಡುವುದು ಪ್ರಣಯ
ಹಲವಾರು ಜನ ಸೇರಿ
ಬಹಿರಂಗ ಪಡಿಸುವುದು
ಪರಿಣಯ.

— ಮಂಜುಳಾದೇವಿ



ಲೂಟಿಯನ್ನು ನಿಲ್ಲಿಸಬಹುದು. ಅದೂ ಸಾಧ್ಯವಾಗದಿದ್ದರೆ ಹಿಂಗೆ ಮಾಡಬೇಡಿ ಹೆಣ್ ಹೆಂಗ್ಸು ಅಂತ ಕೈಮುಗಿದಾದರೂ ಕೇಳಿಕೊಳ್ಳಬಹುದು ಎಂಬುದು ಜಾಹ್ನವಿಯ ನಂಬಿಕೆಯಾಗಿತ್ತು.

ಇತ್ತೀಚೆಗೆ ಅವರಿಗೆ ಮೊದಲಿನ ಶಕ್ತಿಯಿಲ್ಲ. ವಯಸ್ಸಾಗುತ್ತಿರುವುದರ ಸೂಚನೆ ಸ್ಪಷ್ಟವಾಗಿ ಕಾಣಿಸುತ್ತದೆ. ಸ್ವಲ್ಪ ಹೊತ್ತು ನಡೆದರೂ ಆಯಾಸವಾಗಿ ಬಿಡುತ್ತದೆ. ಕೈಕಾಲುಗಳಲ್ಲಿ ಸೆಳೆತ ಕಾಣಿಸಿಕೊಳ್ಳುತ್ತದೆ. ಬಿಸಿಲಿನಲ್ಲಿ ಕ್ಷಣ ನಿಂತರೂ ತಲೆಸುತ್ತಿ ಬರುತ್ತದೆ. ಅವರಿಗೆ ಮೊದಲಿನಂತೆ ಭಾರ ಹೊರಲಾಗುವುದಿಲ್ಲ. ಮಹಡಿ ಏರಲಾಗುವುದಿಲ್ಲ. ನಿದ್ರೆ ಬಿಟ್ಟು ಇರಲಾಗುವುದಿಲ್ಲ ಆದರೂ ಮಾಡದೇ ವಿಧಿಯಿಲ್ಲ.

ಮುಂಜಾನೆ ಮನೆಗೆ ಬಂದು ಕ್ಷಣಕಾಲ ಕುಳಿತು ಆಯಾಸ ಪರಿಹರಿಸಿಕೊಂಡು ಗಂಡನತ್ತ ನೋಡಿದರೆ ಅಲ್ಲಿಂದ ಯಾವುದೇ ಮಿಸುಕಾಟವಿಲ್ಲ. ಗಾಬರಿಯಾಯಿತು. ರೀ ಎಂದರೆ ಪ್ರತಿಕ್ರಿಯೆ ಬರಲಿಲ್ಲ. ಹತ್ತಿರ ಬಂದು ಮೈ ಅಲುಗಿಸಿದರು. ಜಡವಾದ ದೀರ್ಘ ದೇಹ ಸುಮ್ಮನೆ ಪಕ್ಕಕ್ಕೆ ವಾಲಿತು. ಸತ್ತೇ ಹೋದರೇನೋ ಎಂದು ಭಯವಾಗಿ ಹಾಗಾದರೇನಪ್ಪಾ ಗತಿ ಎಂದು ದಿಗಿಲಾಗಿ ಹಾಗಾಗದಿರಲಿ ದೇವರೇ ಎಂದು ಪ್ರಾರ್ಥಿಸತೊಡಗಿದರು.

ಪತಿಯ ಮೂಗಿನೆದುರು ಬೆರಳಿಟ್ಟು ನೋಡಿದರು. ಕ್ಷೀಣವಾಗಿ ಉಸಿರಾಟ ನಡೆಯುತ್ತಿರುವುದು ಅನುಭವಕ್ಕೆ ಬಂತು ಸಮಾಧಾನವಾಯಿತು. ಕೂಡಲೇ ಅಡುಗೆ ಮನೆಗೆ ಹೋಗಿ ಒಲೆಯಿಂದ ಬಿಸಿ ಬೂದಿಯನ್ನು ತಂದು ಪಾದಗಳಿಗೆ ಹಚ್ಚಿ ತಿಕ್ಕಿದರು. ಭೋಜಯ್ಯನ ಮೆಯ್ಯಲ್ಲಿ ಶಾಖ ಹುಟ್ಟಿತ್ತು. ಅವರು ನಿಧಾನವಾಗಿ ಕಣ್ಣುಬಿಟ್ಟರು. ಹಟ್ಟಿಯಲ್ಲಿ ಕರು ಅಂಬಾ ಎಂದು ಕೂಗಿತು.

ಬಿಸಿನಲ್ಲಿ ಹಪ್ಪಳ ಒಣಗಿಸಿ ಗಂಡನಿಗೆ ಕಾದು ಕುಳಿತಿರಲು ಹೇಳಿದರು ಜಾಹ್ನವಿ. ದನವೋ, ಎತ್ತೋ ಬಂದು ತಿಂದರೆ, ಕಾಗೆ ಎತ್ತಿಕೊಂಡು ಹೋದರೆ ಕಷ್ಟ ಎಂದು ಮಳೆಗಾಲದಲ್ಲಿ ತೊಡುವಾದಾಗ ಅದನ್ನು ಬಿಟ್ಟರೆ ಬೇರೇನೂ ಸಿಗುವುದಿಲ್ಲ. ಹಾಗಂದವರೇ ಚೆಪ್ಪು(ಒಣ ಸೌದೆ) ಹೆಕ್ಕಿ ತರಲು ಹಾಡಿಗೆ ಹೊರಟರು. ಒಲೆ ಉರಿಸಲು ಬೇಕಲ್ಲ.

ಬರುವಾಗ ಭೋಜಯ್ಯ ಹಪ್ಪಳವನ್ನು ಆನಂದದಿಂದ ತಿನ್ನುತ್ತಿದ್ದ ಗುಡ್ಡ(ಗಂಡು ಕರು)ವೊಂದನ್ನು ನೋಡುತ್ತ ಆನಂದದಿಂದ ಹೇಳುತ್ತಿದ್ದರು. "ತಿನ್ನು ಮಗಾ ತಿನ್ನು. ಸಮಾ ತಿನ್ನು. ಎಷ್ಟು ತಿಂಬುಕೆ ಆತ್ತು. ಸಾಯುವರೆಗೆ ಆತ್ತು ತಿನ್ನು."

ನೋವಿನಿಂದ ಜಾಹ್ನವಿ 'ಹಚ ಹಚ ನಿನ್ನ ವಾಲಿಕಳ್ಯಾಕ' ಎಂದು ಹೇಳಿದರೂ ಇವಳ್ಯಾವ

ಗೌಡತಿ ಮನೆಯ ಯಜಮಾನನೇ ಸುಮ್ಮನಿರುವಾಗ ಎಂಬಂತೆ ಅವಳನ್ನು ನಿರ್ಲಕ್ಷಿಸಿ ಹಪ್ಪಳವನ್ನು ಗಬಗಬನೆ ಮತ್ತೆ ಮುಕ್ಕತೊಡಗಿತು. ಜಾಹ್ನವಿ ಕೋಲು ತೆಗೆದುಕೊಂಡು ದಡದಡ ಬೆನ್ನಿನ ಮೇಲೆ ಏಟು ಹಾಕಿದಾಗಲೇ ಅದು ಜಾಗ ಖಾಲಿ ಮಾಡಿದ್ದು.

ತಿಂದುಬಿಟ್ಟು ಉಳಿದ ತುಳಿದು ಹುಡಿಯಾದ ಹಪ್ಪಳವನ್ನು ಕಂಡಾಗ ಜಾಹ್ನವಿಗೆ ಕರುಳು ಕಿತ್ತು ಬರುವಷ್ಟು ವೇದನೆಯಾಯಿತು. ದಿನವೆಲ್ಲ ಹಲಸಿನ ತೊಳೆ ಬಿಡಿಸಿ ಬೇಯಿಸಿ, ಕುಟ್ಟಿ, ಮಣೆಗಳ ನಡುವೆ ಇಟ್ಟು ಒತ್ತಿ ಒಣಗಿಸಿದ ಹಪ್ಪಳವಷ್ಟೂ ಹಾಳಾಯಿತೆಂದರೆ ರೇಗದೇ ಇನ್ನೇನು? ದೆವ್ವದಂತೆ ಕುಳಿತ ಗಂಡನಿಗೆ ಬಯ್ಯಬೇಕೆಂದು ಅತ್ತ ತಿರುಗಿದರೆ ಇಹಲೋಕದ ಪರಿವೆಯೇ ಇಲ್ಲದವರಂತೆ ಶೂನ್ಯವನ್ನೇ ನೋಡುತ್ತ ಏನೋ ಗುಣುಗುಣಿಸುತ್ತಿದ್ದಾರೆ ಅವರು.

ಭೋಜಯ್ಯ ಮೊದಲೇ ನರಪೇತಲ ನಾರಾಯಣ. ಇತ್ತೀಚೆಗಂತೂ ಮತ್ತಷ್ಟು ಸೊರಗಿ ಹೋಗಿದ್ದಾರೆ. ಚೆನ್ನಾಗಿ ತಿಂದುಂಡು ಮರದ ಕೆಳಗೆ ನಿದ್ರಿಸುವ, ಕಟ್ಟು ಹಾಕಿದ ಹೊಳೆಯಲ್ಲಿ ತೇಲುವ ಸುಖ ಬಾಲ್ಯದಲ್ಲಿ ಸಿಕ್ಕರೂ, ದೇಹದಲ್ಲಿ ಸ್ವಲ್ಪವೂ ಮಾಂಸ ಹುಟ್ಟಲಿಲ್ಲ. ಅದರ ಬದಲು ತಾನು ದಪ್ಪವಾಗತೊಡಗಿದೆನಲ್ಲ. ಏನಿದು ವಿಚಿತ್ರ ಎಂದು ಜಾಹ್ನವಿ ತಾನೇ ಅಂದು ನೊಂದುಕೊಂಡಳು.

ಭೋಜಯ್ಯ ಸದಾ ಮಲಗಿರುವುದೇ ಹೆಚ್ಚಾಯಿತು. ಅರ್ಧ ಸೋಮಾರಿತನ ಇನ್ನರ್ಧ ದೈಹಿಕ ದೌರ್ಬಲ್ಯ. ಸದಾ ಪೇಟೆ ಊಟ ಜಾತ್ರೆ ಎಂದು ಸುತ್ತುತ್ತಿದ್ದವರಿಗೆ ಹಾಸಿಗೆಗೆ ಬೆನ್ನೂರಿಕೊಂಡು ಇರುವುದು ಹಿಂಸೆಯಾಗತೊಡಗಿತು. ಎದ್ದರೆ ಒಂದು ಹೆಜ್ಜೆ ಮುಂದಿಡಲೂ ಆಗದೆಂಬ ಸ್ಥಿತಿ ಸುಮ್ಮನೆ ಸೂರು ನೋಡುತ್ತ ಹಳೆಯ ದಿನಗಳನ್ನು ನೆನಪಿಸಿಕೊಳ್ಳುತ್ತ ಕೊರಗುತ್ತಿದ್ದರು. ತಾನು ಸರಿಯಾಗಿದ್ದಾಗ ಕೆಲವು ಹೆಣ್ಣುಗಳನ್ನಾದರೂ ಹಾರಿಸಿಕೊಂಡು ಹೋಗಬೇಕಾಗಿತ್ತು. ಹಾಗೆ ಮಾಡದೆ ಸುಖವೊಂದರಿಂದ ವಂಚಿತನಾದೆ. ತಾನು ಲಚ್ಚಿಯನ್ನು ಬಲಾತ್ಕರಿಸಬೇಕಿತ್ತು. ಅವಳ ಒಂದೇ ಮಾತಿಗೆ ಹಿಂದಿರುಗಿ ಬರಬಾರದಾಗಿತ್ತು. ಹೀಗೆ ತಾನೇ ತನ್ನೊಳಗೇ ಮಾತನಾಡಿಕೊಳ್ಳುತ್ತ ಇದ್ದರು. ಪೇಟೆಯ ರಸ್ತೆಯಲ್ಲಿ ವಾಹನ ಸಂಚರಿಸಿದ್ದ ಶಬ್ದ ಕೇಳಿದರೆ ಇದು ಬಸ್ಸಿನದಿರಬಹುದೇ, ಲಾರಿಯದೇ? ಇದ್ದರೆ ಯಾರದು ಎಂದು ಯೋಚಿಸುವರು. ಯಕ್ಷಗಾನದ ಚಂಡೆ ಶಬ್ದ ಕೇಳಿಸಿದರೆ ದುಶ್ಯಾಸನ ದ್ರೌಪತಿಯ ಸೀರೆಯನ್ನು ನಿಜವಾಗಿಯೂ ಪೂರ್ತಿ ಎಳೆದುಬಿಟ್ಟು ಪಾತ್ರಧಾರಿಯ ಚೊಣ್ಣ ಕಾಣಿಸಿದಂತೆ ಕಲ್ಪಿಸಿಕೊಂಡು ನಗುವರು. ಮನೆಯೆದುರಿನ ಮಾವಿನ ಮರದಲ್ಲಿ ಕರ್ಜೂರ ಬೆಳೆದರೆ ಹೇಗೆ? ತಾನು ಕೈ ಚಾಚಿದಾಗ ಅದು ತಲೆಬಾಗಿಸಿ ಕೈಗೇ ಹಣ್ಣು ಸಿಕ್ಕರೆ ಹೇಗೆ. ಇಂದಿನ ನಡುರಾತ್ರಿಯಲ್ಲಿ ದೇವರು ದುತ್ತೆಂದು ಪ್ರತ್ಯಕ್ಷವಾಗಿ "ಎಲವೋ ಭಕ್ತಾ" ಎಂದಾಗ ತಾನು ಕೈಮುಗಿದು ಶಿರಬಾಗಿ ನಿಂತಾಗ "ನಿನಗೆ ತಾರುಣ್ಯವನ್ನೂ, ಆಯುಸ್ಸನ್ನೂ ಕೊಡಮಾಡಿದ್ದೇನೆ" ಎಂದು ಯಾಕೆ ಆಶೀರ್ವದಿಸಬಾರದು?

ಜಾಹ್ನವಿಯ ದೂರದ ಸಂಬಂಧಿ. ಸುಮಾರಾಗಿ ತಮ್ಮನ ಮಗ ಆಗಬೇಕು. ಗಬ್ಬೂರಿಗೆ ಬಂದಾಗ ಜಾಹ್ನವಿ ಅವನೊಡನೆ ತನ್ನ ಗೋಳಿನ ಕತೆಯನ್ನು ಹೇಳಿಕೊಂಡು ಅತ್ತರು, "ಯಾರು ಯಾರದು ಮಾತಾಡುದು." ಭೋಜಯ್ಯ ಮಲಗಿದಲ್ಲಿಂದಲೇ ಅಸಹನೆಯಿಂದ ಕೂಗಿದರು. ಇತ್ತೀಚೆಗೆ ಎಲ್ಲರೂ ತನ್ನನ್ನು ನಿರ್ಲಕ್ಷಿಸುತ್ತಿದ್ದಾರೆ. ತನ್ನ ಇರವನ್ನೇ ಮರೆತವರಂತೆ ತಾವು ತಾವೇ ಏನೇನೋ ಮಾತನಾಡುತ್ತಾರೆ. ಯಾಕೆಂದರೆ ತಾನು ಮುದಿಜೀವ ತನಗೆ ಏನು ತಿಳಿದರೆಷ್ಟು,

ಪರಿಸ್ಥಿತಿಯನ್ನು ಕಾಲ ಕೆಳಗೆ ಮೆಟ್ಟಿ ನಿಲ್ಲಬಲ್ಲವನೇ ಪುರುಷನಾಗಲು ತಕ್ಕವನು. ಆತ್ಮ ಬಲಿದಾನಕ್ಕೆ ಸಿದ್ಧರಾಗಿ, ಮೃತ್ಯುವನ್ನು ಕಡೆಗಣಿಸಿ ನಿರ್ಭಯತೆ ಗಳಿಸಿ ಭಾರತವೊಂದೇ ನಿಮ್ಮ ಆರಾಧ್ಯ ದೈವವಾಗಲಿ.

— ಭಗಿನಿ ನಿವೇದಿತಾ

ಸೋಮಾರಿತನದಿಂದ ಪ್ರಯೋಜನವಿಲ್ಲ. ಅದ್ಭುತ ಸಾಮರ್ಥ್ಯದಿಂದ ಹೃತ್ಪೂರ್ವಕವಾಗಿ ಕೆಲಸ ಮಾಡಲು ಕಾರ್ಯರಂಗಕ್ಕೆ ಇಳಿಯಿರಿ. ಉಳಿದುದನ್ನು ದೇವರೇ ತೋರುವನು.

— ಸ್ವಾಮಿ ವಿವೇಕಾನಂದ

ಸಂಗ್ರಹ : ಸುರೇಶ ಪಿ. ಪಡುಪೆರಾರ



ಬಿಟ್ಟರೆಷ್ಟು.

"ನಾನು ಚಿಕ್ಕಪ್ಪಯ್ಯ ಶಂಕರ." ಶಂಕರ ಭೋಜಯ್ಯನ ಹತ್ತಿರ ಬಂದ. ಭೋಜಯ್ಯ ತನ್ನ ಕೈಗಳಿಂದ ಶಂಕರನ ಹಸ್ತಗಳನ್ನು ಅದುಮಿದರು. "ಲಾಯಕ್ಕಿದ್ಯನಾ, ಎಲ್ಲ ಹ್ಯಾಂಗಿದ್ರು? ನೀವೆಲ್ಲ ಹುಡುಗ್ರು ಉಂಡು ತಿಂದು ಲಾಯಕ್ಕಿರು. ನಂಗೆ ವಯಸ್ಸಾಯ್ತು. ಇವತ್ತೋ ನಾಳೆಯೋ ಭಗವಂತ ಕರ್ಕಂತ ನಂಗೆ ಯಂತದೂ ಯಡಿತ್ತಿಲ್ಲೆ (ಆಗೋಲ್ಲ) ಮಗಾ ಏಳೂಕೂ ಆತ್ತಿಲ್ಲೆ, ಕೂಕಂಬ್ಲೂಕ್ಕ ಆತ್ತಿಲ್ಲೆ." ಅವರು ತಮ್ಮ ಎದೆಗೂಡನ್ನು ಆತನಿಗೆ ತೋರಿಸಿ "ಎದೆಯೆಲ್ಲ ಒಳಗೆ ಹೋಯಿತ್ತು. ಮಗಾ ಪ್ರಾಯ ಆದಮೇಲೆ ಬದುಕು. ಆಗ ನಮ್ಮದು ಎಲ್ಲ ಆಯಿ ಹೋಯ್ತು ಮಗಾ ಆಯಿ ಹೋಯ್ತು ನೀವು ಚೆನ್ನಾಗಿರಿ. ಊಂ ಊಂ." ಭೋಜಯ್ಯ ಕಣ್ಣೀರು ಸುರಿಸಿದರು. ಊಂ ಎಂದು ಗಟ್ಟಿಯಾಗಿ ಅತ್ತರು. ಶಂಕರನ ಮೈ ಕೈಗಳನ್ನು ತಡವಿದರು. ತಣ್ಣನೆಯ ಹಸ್ತ ಮೈಮೇಲೆ ಹರಿದಾಗ ಶಂಕರನಿಗೆ ಹೇಸಿಗೆಯಾಯಿತು. ಭೋಜಯ್ಯನ ಗುಳಿಬಿದ್ದ ಕೆನ್ನೆಗಳು, ಒಳಸೇರಿದ ಕಣ್ಣುಗಳು, ಕಣ್ಣುಗಳಿಂದ ಹರಿದ ಕಣ್ಣೀರು ಇವು ಅವನಿಗೆ ಅಸಹ್ಯ ತರಿಸಿತು.

ಭೋಜಯ್ಯ ಅಳು ನಿಲ್ಲಿಸಿ ನಗತೊಡಗಿದರು. "ಎಂತಕೆ ಮರುಕುದು, ಸಮ ಅಲ್ಲ. ಅಲ್ದನಾ? ಸಾಯುದು ಅಂದ್ರೆ ಪುನಾ ಹುಟ್ಟುದು. ಹಳೇ ಅಂಗಿ ಬಿಸಾಡಿ ಹೊಸದನ್ನು ಹಾಕ್ಕಂಡ ಹಾಗೆ ಮುಪ್ಪಿನ ಸಾವು ಮದ್ವೆಗೆ ಸಮ ಅಲ್ದನಾ?" ಅವರು ಮಾತು ಮುಗಿಸುವ ಮೊದಲೇ ಶಂಕರ ಜಾಗ ಕಾಲಿ ಮಾಡಿದ್ದ.

ಕೆಲವೇ ದಿನಗಳಲ್ಲಿ ಭೋಜಯ್ಯ ಗಟ್ಟಿಯಾಗಿ ಕಿರುಚಿಕೊಳ್ಳುವುದು ಹೆಚ್ಚಾಯಿತು. ಅವರ ಕಿರುಚುವಿಕೆಗೆ ಸ್ಪಷ್ಟ ರೂಪವಿರಲಿಲ್ಲ. ಏನೇನೋ ಅರ್ಥಹೀನ ನುಡಿಗಳು. ಪಿತ್ತ ನೆತ್ತಿಗೇರಬಹುದೆಂದುಕೊಂಡು ಅವರ ತಲೆಗೆ ತಣ್ಣೀರೆತ್ತಿ ಸುರಿದು ತಟ್ಟಿದರು ಜಾಹ್ನವಿ. ಅವರಿಗೆ ಶ್ರಮವಾಯಿತೇ ಹೊರತು ಏನೂ ಉಪಯೋಗವಾಗಲಿಲ್ಲ.

ನಿಧಾನವಾಗಿ ಅವರ ಸ್ವರವೂ ಉಡುಗಿತು. ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ನೋಡಿದರೂ ಯಾರನ್ನೂ ಗುರುತಿಸುತ್ತಿರಲಿಲ್ಲ. ಮಲಗಿದಲ್ಲಿಯೇ ಉಚ್ಚೆ, ಹೇಲು ಮಾಡತೊಡಗಿದರು. ಕಿವಿ ಕೇಳದು, ನಾಲಿಗೆ ಬೇಕಾದಂತೆ ತಿರುಗದು, ಬಾಲ್ಯದಲ್ಲೇ ಉದುರಿಬಿದ್ದ ಎರಡು ಹಲ್ಲುಗಳನ್ನು ಅರಸಿಕೊಂಡು ಇತರ ಹಲ್ಲುಗಳೂ ಹೊರಟು ಹೋಗಿದ್ದವು.

ಕಣ್ಣುಬಿಟ್ಟಾಗ ಅವರಿಗೆ ಬೆಳಕಿನ ಪುಂಜವೊಂದೇ ಕಾಣುತ್ತಿತ್ತು. ಅದರ ಮಧ್ಯೆ ಅಕರಾಳ ವಿಕರಾಳ ಚಿತ್ರಗಳು. ಅವು ರುದ್ರನದೋ ಲಚ್ಚಿಯದೋ ಎಂದು ತಿಳಿಯುತ್ತಿರಲಿಲ್ಲ. ಕಣ್ಣು ಮುಚ್ಚಿದರೆ ಮನಸ್ಸಿನೊಳಗೆ ಏನೇನೋ ಅಸ್ಪಷ್ಟ ಆಕೃತಿಗಳು ಸ್ಮಶಾನದಲ್ಲಿ ಕುಣಿವ ಪ್ರೇತಗಳ ಹಾಗೆ ದಿಮಿಗುಟ್ಟುತ್ತವೆ. ಕಿವಿಯಲ್ಲಿ ತಮಟೆ ಬಡಿದ ಶಬ್ದ. ಕಣ್ಣು ಬಿಟ್ಟರೆ ಇನ್ನೊಂದು ಗೋಳು "ಏ ಬ್ರಾಹ್ಮಣಾ ಬಾರೋ ಬಾರೋ. ಈ ಲೋಕದಲ್ಲಿ ಜಾತಿ ಗೀತಿ ವ್ಯತ್ಯಾಸವಿಲ್ಲ. ಮೇಲು ಕೀಳಿಲ್ಲ. ಪ್ರಾಯದ ಭೇದವಿಲ್ಲ. ದಪ್ಪ ತೆಳು ಎಂಬ ವೈಪರೀತ್ಯವೂ ಇಲ್ಲ ಬಾ ಬಾ'' ಎಂದು ರುದ್ರ ಕರೆದಂತೆ, ಕಿರುಚಬೇಕೆಂದರೆ ಧ್ವನಿಪೆಟ್ಟಿಗೆ ಕೆಲಸ ಮಾಡುವುದಿಲ್ಲ ಎನ್ನುತ್ತಿದೆ.

ಆ ನಡು ಮಧ್ಯಾಹ್ನ ಕರಿಕರಿ ದೇಹದ ಬಲಿಷ್ಟ ಕೋಣವನ್ನೇರಿ ಬಂದವನು ಯಮರಾಯನೇ ಸರಿ. ಅವನ ಠೀವಿಯೇನು ಗತ್ತೇನು. ವಾಹ್ ನ್ಯಾಯದೇವತೆಯೆಂದರೆ ಹಾಗಿರಬೇಕು. ಕೈಲಿದ್ದ ಪಾಶವನ್ನು ಬೀಸಲಿಕ್ಕೆ ತಯಾರಿ ಮಾಡಿಕೊಂಡೇ ಬಂದಿದ್ದಾನೆ. ಅವನ ಮುಖದಲ್ಲಿ ಏನಂಥ ಕಳೆ?

"ನೀನೇ ಬಂದೆಯೇನೋ ಮಹರಾಯ ದೂತರೆಲ್ಲ ಎಲ್ಲಿ ಹೋದ್ರು. ರಜೆಯೋ?'' ಕೇಳಿ ಕಿಸಕ್ಕೆಂದು ನಕ್ಕರು ಭೋಜಯ್ಯ. ಯಮನ ಕಣ್ಣುಗಳು ಬೆಂಕಿಯುಗುಳಿದಂತೆನ್ನಿಸಿತು. "ಇನ್ನೇನು ಕಾಂತೆ ಬೀಸೋ, ಮುಪ್ಪಿನ ಸಾವು ಮದ್ವೆ ಸಮಾನ ಅಂತಾರೆ. ನಂಗೂ ಮದ್ವೆ, ನಡಿ ಹೋಗುವಾ.''

ಇಷ್ಟು ಹೇಳಿ ಮತ್ತೆ ನಕ್ಕರು ಭೋಜಯ್ಯ.

ಗಂಡ ದುಸುಮುಸು ಉಸಿರುಬಿಡುವುದು, ನಗುವಿನಿಂದ ತುಟಿ ಅರಳಿದುದು, ಜಾಹ್ನವಿಯ ಕಣ್ಣಿಗೆ ಬಿದ್ದು ಅವರಿಗೆ ಭಯವಾಯಿತು. ಊಟ ತಿಂಡಿ ಬಿಟ್ಟು, ನಿದ್ರೆಯನ್ನೂ ತೊರೆದು ಗಂಡನ ಪಕ್ಕದಲ್ಲೇ ಕುಳಿತಿದ್ದರು ಅವರು.

"ಒಳಗೆ ಬಾರೋ ಮಾರಾಯ, ಆ ಪಾಟ ದಪ್ಪ ಬೆಳೆದರೆ ಬಾಗ್ಲಿಲಿ ಹ್ಯಾಂಗೆ ಬತ್ತೆ. ನಿಂಗಿರ್‍ಲಿ ನಿನ್ನ ಎಮ್ಮೆಗೆ ಸತೇ ಆಗುವುದಿಲ್ಲ.''

ಮತ್ತೆ ನಕ್ಕರು ಭೋಜಯ್ಯ. "ಹೋಗಲಿ ನಾನೇ ಬತ್ತೆ'' ಎನ್ನುತ್ತ ಎದ್ದರು. ಶ್ರಮವಾಗಲಿಲ್ಲ ಹಗುರಾದೆನ್ನೆನ್ನಿಸಿತು. ಗಾಳಿಯಲ್ಲಿ ತೇಲಬಹುದೆನ್ನಿಸಿತು. ತಿರುಗಿ ಜಾಹ್ನವಿಯನ್ನು ನೋಡಿದರು.

ಆಕೆ ತನ್ನ ನಿರ್ಜೀವ ದೇಹದ ಮೇಲೆ ಬಿದ್ದು ಗಳಗಳನೆ ಅಳುವುದನ್ನು ಕಂಡು ನಕ್ಕರು. ಮತ್ತೂ ನಕ್ಕರು. ಅದು ಹೃದಯಾಂತರಾಳದಿಂದ ಮೂಡಿಬಂದ ನಿಷ್ಕಳಂಕ ನಗು.

ಭೋಜಯ್ಯ ಸತ್ತರು ಅಥವಾ ಹುಟ್ಟಿದರು. ಯಾವುದೂ ಆಗಬಹುದು ಅಲ್ಲವೇ?

ಮ್ಯಾಗಜಿನ್

ವಿಭಾಗ

ಸಣ್ಣ ಕಥೆ

ಕಾಯುತ್ತಿರುವಳು ರಾಧೆ

ಕೆ. ಸಿ. ಲಲಿತಾ ಅರಸೀಕೆರೆ

"ಏಯ್ ಹುಡುಗಿ ನಾನು ಬಂದಿದ್ದೇನೆ ನೋಡು." ಮರಳ ದಂಡೆಯ ಮೇಲೆ ಕುಳಿತು ಸಮುದ್ರವನ್ನೇ ತದೇಕಚಿತ್ತದಿಂದ ನೋಡುತ್ತಿದ್ದ ರಾಧಾ, ಧ್ವನಿ ಬಂದ ಕಡೆ ಕತ್ತು ಹೊರಳಿಸಿದಳು.

"ಓಹ್ ಕಿಟ್ಟಿ 'ಇಷ್ಟು ಬೇಗ ವಾಪಾಸ್ ಬಂದುಬಿಟ್ಟೆಯಾ, ನಿನಗಾಗಿ ನಾನೆಷ್ಟು ಪರಿತಪಿಸುತ್ತಿದ್ದೆ ಗೊತ್ತಾ?" ಎಂದವಳೇ ಅವನತ್ತ ಓಡಿ ತಬ್ಬಿಹಿಡಿದಳು. ಆದರೆ ಆಧಾರವಿಲ್ಲದೆ ಕೆಳಗೆ ಬಿದ್ದುಬಿಟ್ಟಳು. ಅವನು ಬಂದಿರಲಿಲ್ಲ. ಅದು ಅವಳ ಭ್ರಮೆ. ಭ್ರಮ ನಿರಸನವಾದಾಗ ಹುಚ್ಚಿಯಂತೆ ಅತ್ತುಬಿಟ್ಟಳು.

ಬೀಚಿನಲ್ಲಿ ಹತ್ತಾರು ಜೋಡಿಗಳು ತಮ್ಮ ತಮ್ಮ ಲೋಕದಲ್ಲಿ ವಿಹರಿಸುತ್ತಿದ್ದವು. ಮಕ್ಕಳೊಂದಿಗರೂ ಪಾನೀಪೂರಿ, ಹುರಿಗಡಲೆ, ಎಳನೀರುಗಳನ್ನು ಕೊಳ್ಳುತ್ತಿದ್ದರು. ಕೆಲವು ಯುವಕರು, ಮಕ್ಕಳು ಮೇಲ್ವಸ್ತ್ರ ತೆಗೆದು ನೀರಿನಲ್ಲಿ ಬಿದ್ದು ಅಲೆಗಳೊಂದಿಗೆ ಹಿಂದಿರುಗಿ ದಡ ಸೇರುತ್ತಿದ್ದರೆ, ಹದಿಹರೆಯದ ಹುಡುಗಿಯರು ಅರ್ಧ ನೀರಿನಲ್ಲಿ ಮುಳುಗಿ ಒಬ್ಬರಿಗೊಬ್ಬರು ನೀರೆರಚಿಕೊಂಡು ಖುಶಿ ಪಡುತ್ತಿದ್ದರು. ಒಮ್ಮೊಮ್ಮೆ ಸಮುದ್ರದಿಂದ ತೀಡಿ ಬರುವ ತಿಳಿಗಾಳಿಗೆ, ಬೆಂದ ಮೈ ಮನಗಳನ್ನು ಒಡ್ಡಿ ಅಲ್ಲಲ್ಲಿ ಕುಳಿತುಕೊಂಡಿದ್ದ ಪ್ರವಾಸಿಗರು, ಮದ್ರಾಸಿಗರು ಹೀಗೆ ಎಲ್ಲರೂ ಸುಖಿಗಳೆಂದೇ ಹೇಳಲು ಬರುವುದಿಲ್ಲ. ಇಂತಾ ಉಲ್ಲಾಸಕರ ವಾತಾವರಣದಲ್ಲಿಯೂ ಅನೇಕ ಶ್ವಾಸಗಳ ನಿಟ್ಟುಸಿರು ಹೊರಬಂದು ಕಡಲ ಹವೆಯಲ್ಲಿ ಒಂದಾಗುತ್ತಿತ್ತು. ಜೀವನವನ್ನು ಉತ್ಕಟವಾಗಿ ಉಣ್ಣ ಬಯಸುವವರೂ ಅಲ್ಲಿದ್ದರು. ಹಾಗೆಯೇ ಬದುಕನ್ನು ಉತ್ಕಟವಾಗಿ ಬಯಸಿ ಸೋತು ಹುಚ್ಚರಾದವರೂ ಅಲ್ಲಿದ್ದರು.

ರಾಧಾ ತನ್ನಿನಿಯನಿಗಾಗಿ ಕಾಯುತ್ತಿದ್ದಳು. ದಿನವೂ ಕಾದು ನಿರಾಶೆಯಿಂದ ಕನವರಿಸಿ ಹುಚ್ಚಿಯಂತಾಗಿದ್ದಳು. ಅವಳಿಗೆ ತನ್ನ ಸುತ್ತಲಿನ ಪರಿಸರದ ಅರಿವೇ ಇದ್ದಂತಿರಲಿಲ್ಲ. ಅವಳ ನೋಟವೆಲ್ಲ ಸಮುದ್ರದ ಅಲೆಗಳ ಮೇಲೆಯೇ ಕೇಂದ್ರೀಕೃತವಾಗಿತ್ತು. ಅವಳ ಮನ ನೆನಪಿನಂಗಳಕ್ಕೆ ಜಿಗಿದಿತ್ತು. 'ತನ್ನ ಬದುಕೂ ಹೀಗೆಯೇ ಅಲೆಗಳಂತೆ ಏರಿಳಿತಗಳನ್ನು ಕಂಡಿತು. ತನ್ನ, ಕಿಟ್ಟಿಯ ನಿರ್ಮಲ ಪ್ರೇಮಕ್ಕೆ ಎಷ್ಟೊಂದು ಅಡ್ಡಿ ಆತಂಕಗಳು. ಅಬ್ಬಾ ನೆನೆಸಿಕೊಂಡರೇನೇ ಭಯುವಾಗುತ್ತಿತ್ತು. ತಮ್ಮಿಬ್ಬರದೂ ಅಂತರ್ಜಾತಿ. ಒಂದೇ ಕಾಲೇಜಿನಲ್ಲಿ ಒಟ್ಟಿಗೆ ಕಲಿತು, ವಿದ್ಯೆಯೊಂದಿಗೆ ಪ್ರೇಮದ ಬೆಸುಗೆಯಾಗಿ ಮದುವೆಯವರೆಗೂ ಪರಿಸ್ಥಿತಿ ಬಂದು ನಿಂತಾಗ ಅವರು ಗಂಡಾಂತರಗಳ ಅಡಿಯಲ್ಲಿದ್ದರು. ಸಂಪ್ರದಾಯಸ್ಥ ಮನೆತನಗಳು ತಮ್ಮ ಮಕ್ಕಳ ಮೇಲೆ ಜಾತಿ, ನೀತಿಯ ಕಾರಣದಿಂದ ವಾತ್ಸಲ್ಯ, ಮಮತೆ, ಕರುಣೆಗಳನ್ನು ತೊರೆದು ದ್ವೇಷ ಉಗುಳತೊಡಗಿದ್ದವು. ಇಂಥ ಪರಿಸ್ಥಿತಿಯಲ್ಲಿ ತಮ್ಮ ಸಹಾಯಕ್ಕೆ ಬಾರದ ಸಮಾಜವನ್ನು ಅದರ ಕೊಡಲಿ ಪೆಟ್ಟಿನಿಂದ ಪಾರಾಗಲು ಇದ್ದದ್ದು ಒಂದೇ ದಾರಿ.'

ಉಟ್ಟ ಬಟ್ಟೆಯಲ್ಲೇ ಅವರಿಬ್ಬರೂ ಬೆಂಗಳೂರು ಬಿಟ್ಟು ಮದ್ರಾಸಿಗೆ ಬಂದು ನಿಂತಾಗ,

> ಭಾರವಾದ ಬದುಕಿನ ಮುಳ್ಳಿನ ದಾರಿಯಲ್ಲಿಯೂ ನಗುನಗುತ್ತ ಒಂದಾಗಿ ದಾರಿ ಸವೆಸಿದ ರಾಧಾ, ಕೃಷ್ಣರ ಬದುಕಿನಲ್ಲಿ ಸುಖದ ದಿನಗಳು ಬರಲಿದೆ ಎನ್ನುವಾಗಲೇ ವಿಧಿ ತನ್ನ ಕ್ರೂರ ದೃಷ್ಟಿ ಬೀರಿ ನಕ್ಕಿತು.

ಜಾತ್ಯಾತೀತರಾಗಿ ಪ್ರಪಂಚವೇ ತಮ್ಮ ಮನೆಯಾಗಿ ನೆಲವೇ ಹಾಸಿಗೆಯಾಗಿ ಆಕಾಶವೇ ಹೊದಿಕೆಯಂತೆ ಸ್ವತಂತ್ರ್ಯ ಅನುಭವಿಸಿದರು. ಆದರೆ ಅದು ಸ್ವಲ್ಪ ದಿನ ಮಾತ್ರ. ತಮ್ಮಲ್ಲಿದ್ದ ಹಣ ಖರ್ಚಾಗಿ ತಿನ್ನುವ ಅನ್ನಕ್ಕೇ ಗತಿಯಿಲ್ಲವಾದಾಗ ಕಿಟ್ಟಿ ಉದ್ಯೋಗಕ್ಕಾಗಿ ಅಲೆದು ಯೋಗ್ಯತೆಗೆ ತಕ್ಕ ಉದ್ಯೋಗ ಸಿಗದೆ ಸಣ್ಣ ಪುಟ್ಟ ಕೆಲಸಗಳಲ್ಲೇ ತೃಪ್ತಿಪಡಬೇಕಾಯಿತು.

ನಿಂತ ಹೆಜ್ಜೆಯಲ್ಲೇ ತನಗಾಗಿ ತನ್ನ ಹೆತ್ತವರನ್ನೇ ತೊರೆದು ಬಂದ ರಾಧೆಯನ್ನು ಒಂದು ದಿನವೂ ಬಿಟ್ಟಿರದೆ, ಕಿಟ್ಟಿ ತನ್ನ ದೇಹದ ಕಣಕಣದಲ್ಲೂ ತುಂಬಿಕೊಂಡ. ಹಾಗೆಯೇ ತನ್ನಿಂದ ಅವಳನ್ನು ಸುಖವಾಗಿರಿಸಲು ಸಾಧ್ಯವಾಗುತ್ತಿಲ್ಲವಲ್ಲ ಎಂದು ದುಃಖಿಸುತ್ತಿದ್ದ. ಅವಳ ಬೇಕು ಬೇಡಗಳನ್ನು ಸಾಧ್ಯವಾದಷ್ಟು ಶಕ್ತಿಮೀರಿ ತೀರಿಸುತ್ತಿದ್ದ.

ರಾಧಾ ಸಾಧ್ಯವಾದಷ್ಟು ಅವನು ಗೆಲುವಾಗಿರುವಂತೆ ಧೈರ್ಯ ತುಂಬುತ್ತಿದ್ದಳು. ಕಿಟ್ಟಿ ಸಂಜೆ ಕೆಲಸದಿಂದ ದಣಿದು ಮನೆಗೆ ಬಂದಾಗ ನಗುನಗುತ್ತಲೇ ಅವನ ಸೇವೆ ಮಾಡುತ್ತಿದ್ದಳು. ಅವರ ಸಂಸಾರ ಹಾಲು ಜೇನಿನ ಮಿಶ್ರಣವಾಗಿತ್ತು. ಅವರು ಬಿಡುವಿನ ದಿನಗಳಂದು ಬೀಚಿಗೆ ಹೋಗಿ ತಮ್ಮ ನೋವುಗಳನ್ನು ಮರೆತು ಸಮುದ್ರದ ಅಲೆಗಳೊಂದಿಗೆ ಆಡಿ ಆನಂದಿಸುತ್ತಿದ್ದರು. ಮರಳ ದಂಡೆಯ ಮೇಲೆ ಕುಳಿತು ಅನೇಕ ವಿಷಯಗಳ ಕುರಿತು ಚರ್ಚಿಸುತ್ತಿದ್ದರು. ಅವರು ಆಡದ ಮಾತೇ ಇರುತ್ತಿರಲಿಲ್ಲ.

ಮಾತಿನ ನಡುವೆ ಕಿಟ್ಟಿ ಕೇಳಿದ "ರಾಧಾ ನಿನ್ನ ತಂದೆ ತಾಯಿಯ ನೆನಪು ಕಾಡುವುದಿಲ್ಲವೇ?"

"ಕಿಟ್ಟಿ ನನ್ನ ತಾಯ್ತಂದೆಯರ ಮಾತು ಕೇಳಿದ್ದರೆ ಇಂದು ನಾನು ಯಾಂತ್ರಿಕವಾಗಿ ಬೇರೊಬ್ಬನ ಬಾಳಿನಲ್ಲಿ ಪ್ರವೇಶಿಸಿ ಆತ್ಮತೃಪ್ತಿಯಿಲ್ಲದೆ ಬದುಕಬೇಕಾಗುತ್ತಿತ್ತು. ಒಲ್ಲದವರ ಜೊತೆ ಬಾಳುವುದರ ಕಲ್ಪನೆಯೇ ಘೋರವಾದುದು ಕಿಟ್ಟಿ" ಎನ್ನುತ್ತ ಅವನೆದೆಗೆ ಮುಖವಿಟ್ಟು ಬಡಬಡಿಸಿದಳು. ಕಿಟ್ಟಿ ಅವಳನ್ನು ಬಲವಾಗಿ ತನ್ನ ತೋಳುಗಳಲ್ಲಿ ಬಳಸಿ ಅವಳ ಹಣೆಗೆ ಮುದ್ದಿಟ್ಟು ರಮಿಸಿದ.

ಅದೊಂದು ದಿನ ಪೋಸ್ಟ್‌ನಲ್ಲಿ ಬಂದ ಕವರೊಂದನ್ನು ಹಿಡಿದು "ರಾಧಾ ರಾಧಾ" ಎಂದು ಕೂಗುತ್ತ ಕಿಟ್ಟಿ, ಗಾಬರಿಯಿಂದ ಹೊರಬಂದ ಅವಳನ್ನು ಸಂತೋಷದ ಭರದಲ್ಲಿ ಎತ್ತಿಕೊಂಡು ಗಿರಿ ಗಿರಿ ಸುತ್ತಿಸಿಬಿಟ್ಟ. ಅವನಿಗೆ ಹೆಸರಾಂತ ಕಂಪೆನಿಯಿಂದ ಇಂಟರ್‌ವ್ಯೂ ಬಂದಿತ್ತು.

ಕಿಟ್ಟಿ ಇಂಟರ್‌ವ್ಯೂಗಾಗಿ ಬೆಂಗಳೂರಿಗೆ ಹೊರಟು ನಿಂತಾಗ ಅವಳ ಕಣ್ಣು ತುಂಬಿಬಂತು. ಅದು ಅವನಿಗೂ ಅರ್ಥವಾಯಿತು. ತಾವು ಬಿಟ್ಟು ಬಂದ ಹುಟ್ಟೂರಲ್ಲವೇ ಅದು. ಖಂಡಿತವಾಗಿ ತನಗೆ ಕೆಲಸ ಸಿಗುವುದೆಂಬ ಭರವಸೆ ಅವನಲ್ಲಿತ್ತು. ಮೆರಿಟ್ ಸ್ಟೂಡೆಂಟ್ ಅವನು. ಈ ನೌಕರಿಯೊಂದು ಸಿಕ್ಕರೆ ರಾಧೆಯನ್ನು ತಾನೆಷ್ಟು ಸುಖವಾಗಿಡುವೆನೆಂಬ ಮಹದಾಸೆಯಿಂದ ಅವಳನ್ನು ಸಂತೈಸಿ ಕಣ್ಣಲ್ಲೇ ಕನಸು ಹೊತ್ತುಕೊಂಡು ಸಾಗಿದ.

ಬೆಂಗಳೂರಲ್ಲಿ ಅವನ ಸ್ನೇಹಿತನೊಬ್ಬನ ಸಹಾಯದಿಂದ ಅವನಿಗೆ ಕೆಲಸ ಸಿಕ್ಕಿತು. ಎಷ್ಟು ಬೇಗ ಈ ಸುದ್ದಿಯನ್ನು ರಾಧೆಗೆ ಹೇಳುವೆನೋ ಎಂಬ ಆತುರ, ಸಂಭ್ರಮದೊಡನೆ ಅವನು ಬಸ್ಸನ್ನೇರಿದ. ಆದರೆ ವಿಧಿ ಬೇರೆಯೇ ಬಗೆದಿತ್ತು. ಇವನನ್ನು ಹೊತ್ತ ಬಸ್ಸಿಗೆ ಅಪಘಾತ ಸಂಭವಿಸಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬಾರದಾಯಿತು.

ಹೃದಯದ ತುಂಬ ಆಸೆ, ಕಣ್ಣು ತುಂಬ ಕನಸು ಹೊತ್ತುಕೊಂಡಿರುವ ರಾಧೆ ಕಿಟ್ಟಿಗಾಗಿ ಇಂದು ಬರುತ್ತಾನೆ, ನಾಳೆ ಬರುತ್ತಾನೆ ಎಂದು ದಿನವೂ ದಾರಿ ಕಾಯುತ್ತಿದ್ದಾಳೆ. ಒಂದು ವಾರವಾದರೂ ಅವನ ಸುಳಿವಿಲ್ಲ. ದಿನಾ ಸಮುದ್ರ ದಂಡೆಗೆ ಹೋಗುತ್ತಾಳೆ. ಅಲ್ಲೆಲ್ಲ ಹುಡುಕಾಡುತ್ತಾಳೆ. ಅವರಿವರನ್ನು ನೋಡಿ ಕಿಟ್ಟಿ ಎಂದು ಕೂಗಿ ಹಾಸ್ಯಕ್ಕೀಡಾಗುತ್ತಾಳೆ. ಮನದ ಕಡಲ ತುಂಬ ಅವನ ನೆನಪನ್ನೇ ತುಂಬಿಕೊಂಡು ಕಣ್ಣೀರು ಸುರಿಸುತ್ತ ಕುಳಿತಿರುತ್ತಾಳೆ. ಬಾಹ್ಯ ಪ್ರಜ್ಞೆ ಕಳೆದುಕೊಳ್ಳುತ್ತಾಳೆ. ಅವನು ಬರುವನೆಂದೇ ನಂಬಿ ಕಾಯುತ್ತಿದ್ದಾಳೆ. ಯಾರು ಎಷ್ಟೇ ಹೇಳಿದರೂ ನಂಬುವುದಿಲ್ಲ. ಅವನು ಬರಲಾರನೆಂದು ನೀವಾದರೂ ಹೇಳಲಾರಿರಾ?

ಧಾರಾವಾಹಿ–೨

ಜೀವನ ಗಂಗೋತ್ರಿ

ಭಾರತಿ ಕೇಶವ್

ನಾನು ಅಡ್ಡಿಪಡಿಸಲಾಗುವುದೇ? ಹಾಗೆ ನೋಡಿದರೆ ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸವಾಗಲೀ, ಅಲ್ಲಿಯೇ ನೆಲೆನಿಲ್ಲುವ ಯೋಗವಾಗಲೀ ನನಗೇನೂ ಹೊಸದಲ್ಲ. ಆದರೆ ನಾನು ನನ್ನ ಜವಾಬ್ದಾರಿ ಅರಿತುಕೊಂಡು ಇಂತಿಷ್ಟೇ ವರ್ಷ ಅಲ್ಲಿರುವುದು ಎಂದು ನಿರ್ಧರಿಸಿ ತಾಯ್ನಾಡು, ತಾಯ್ನೆಲ ಎಂದು ಹೇಳಿ ಮರಳಿ ಬಂದು ಇಲ್ಲಿಯೇ ನೆಲೆನಿಂತೆ. ಈಗ ನಮ್ಮ ಇಬ್ಬರು ಮಕ್ಕಳಲ್ಲಿ ಒಬ್ಬರಾದರೂ ನಮ್ಮ ಕಣ್ಮುಂದಿರಲಿ, ನಮ್ಮ ವೃದ್ಧಾಪ್ಯದ ಬಾಳಿಗೆ ಆಸರೆಯಾಗಿರಲಿ ಎಂದು ಮಾಯಾ ಆಶಿಸುವುದು ಸಹಜವೇ ಆಗಿದೆ. ಆದರೆ ಇದೇ ಆಸೆ ಹಂಬಲ ಮಕ್ಕಳಿಗೂ ಇರಬೇಕಲ್ಲ. ಇರುವ ಒಬ್ಬ ಮಗ ನೀನು ದೂರದ ನಾಡಿನಲ್ಲಿ, ನಾವು ಇಲ್ಲಿ ಏನು ಮಾಡಲು ಆದೀತು? ನೀನೂ ಇಲ್ಲಿಯೇ ಬಂದಿರು ಎಂದು ನಾವು ನರೇಂದ್ರನಲ್ಲಿ ಹೇಳಬಹುದೇ ಹೊರತು, ಇಲ್ಲಿಯೇ ಬಂದಿರಬೇಕು ಎಂದು ಒತ್ತಾಯ ಹೇರಲಾದೀತೇ? ನಾವು ಕಂಡಷ್ಟೇ ಪ್ರಪಂಚ, ನಮ್ಮ ಒಟ್ಟಿಗಿನ ಬದುಕನ್ನೇ ಬದುಕಬೇಕು ಎಂದು ನಿರ್ಬಂಧ ಹೇರಲಾದೀತೇ, ಅದು ತರವೇ? ಇದೊಂದು ಹೇಳಲಾಗದ, ಅನುಭವಿಸಲಾಗದ ಸಂಕಟ.

ಇಂದು ಇದು ಒಂದು ಮನೆಯ ಕಥೆಯಾಗಿಲ್ಲ. ಮನೆ ಮನೆಯ ಕತೆಯೂ ಇದೇ ಆಗಿದೆ. ಕುಟುಂಬ ಯೋಜನೆಯ ಫಲವಾಗಿ ಮನೆಗೆ ಒಂದು ಮಗು ಅಥವಾ ಇಬ್ಬರು ಮಕ್ಕಳು. ಆ ಮಗ ಅಥವಾ ಮಗಳು ಇಂಜಿನಿಯರ್ ಆಗಲಿ, ಡಾಕ್ಟರ್ ಆಗಲಿ ಎಂಬುದೇ ಹೆತ್ತವರ ಬಯಕೆ. ಆ ಮಗ ಬುದ್ಧಿವಂತನಾಗಿ ಇಂಜಿನಿಯರ್ ಅಥವಾ ಡಾಕ್ಟರ್ ಆಗಲು ಸೀಟು ಗಿಟ್ಟಿಸಿಕೊಂಡರೆ ಸರಿ, ಇಲ್ಲದಿದ್ದರೆ ಕಷ್ಟಪಟ್ಟು ಹಣ ತೆತ್ತಾದರೂ ಸರಿಯೇ ಮಗನನ್ನು ಅಥವಾ ಮಗಳನ್ನು ಅದೇ ಕೋರ್ಸಿಗೆ ಸೇರಿಸುತ್ತಾರೆ ಹೆತ್ತವರು. ಓದು ಮುಗಿದೊಡನೆ ಆ ಮಗ ಅಥವಾ ಮಗಳು ವಿದೇಶದತ್ತಲೇ ಕಣ್ಣು ಹಾಯಿಸುವುದು. ಅಲ್ಲಿ ಉನ್ನತ ವಿದ್ಯಾಭ್ಯಾಸ, ಉದ್ಯೋಗ ಹಿಡಿದು ಅಲ್ಲಿಯೇ ನೆಲಸುವವರು ಬಹುಮಂದಿ. ಹಾಗಾಗಿ ಪಾಲಕರು ಇಲ್ಲಿ, ಮಕ್ಕಳು ಅಲ್ಲಿ. ಎರಡೋ ಮೂರೋ ವರುಷಕ್ಕೊಮ್ಮೆ ಬಂದು ಹೋಗುವವರು ಮಕ್ಕಳು ಅತಿಥಿಗಳ ಹಾಗೆ. ದಿನದಿಂದ ದಿನಕ್ಕೆ ಈ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಬೌದ್ಧಿಕ ಪಲಾಯನ ಹೆಚ್ಚುತ್ತಿದೆ. ಎಷ್ಟು ಅಂಕಗಳನ್ನು ಪಡೆದರೂ ಓದಬೇಕೆಂದು ಆಸೆ ಪಟ್ಟ ಕೋರ್ಸಿಗೆ ಸೀಟು ದೊರಕದೆ ಇರುವುದು, ಮೀಸಲಾತಿಗಳು, ಸರಿಯಾಗಿ ಉದ್ಯೋಗ, ಮುಂಬಡ್ತಿ ದೊರಕದಿರುವುದು ಇದೆಲ್ಲಕ್ಕೂ ಇಂದಿನ ಬುದ್ಧಿವಂತ ವಿದ್ಯಾರ್ಥಿಗಳು ಒಳ್ಳೆಯ ದಾರಿ ಕಂಡುಕೊಂಡಿದ್ದಾರೆ. ಅದೇ ವಿದೇಶಕ್ಕೆ ಪಲಾಯನ ಮಾಡುವುದು. ಒಮ್ಮೆ ಅಲ್ಲಿನ ಉದ್ಯೋಗ, ಹಣ, ಸ್ವಚ್ಛಂಧ ವಾತಾವರಣ ಹಿಡಿಸಿತೆಂದಮೇಲೆ, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಗೊಂದಲಮಯವಾಗಿರುವ ಈ ನಾಡಿಗೆ ಹಿಂದಿರುಗುವುದು ಅವರಿಗೆ ಬೇಕಿರುವುದಿಲ್ಲ. ಇಲ್ಲಿ ಅವರ ಬರುವಿಕೆಗಾಗಿ ಕಾದು ಕುಳಿತಿರುವರು ಪಾಲಕರು

ಏಕಾಂಗಿಯಾಗಿ.

ಮಗ ಅಥವಾ ಮಗಳ ಕಾಗದ ಬಂದಾಗ ಎಲ್ಲಿಲ್ಲದ ಸಂಭ್ರಮ, ಸಂತಸ ಮಾಯಾಳಿಗೆ. ಮತ್ತೆ ತಿಂಗಳವರೆಗೆ ಪರವಾಗಿಲ್ಲ. ಮಕ್ಕಳ ಕಾಗದದ ವಿಚಾರವನ್ನೇ ಮಣಮಣಿಸುತ್ತ ಕಾಲ ಕಳೆಯುವಳು. ಅದಾದನಂತರ ಮತ್ತೆ ಆಂತಕ, ಕಾತುರ, ನಿರೀಕ್ಷೆಯಲ್ಲಿ ದಿನ ದೂಡುವಳು. ಮನೆ ದೊಡ್ಡದು ಎಂದಾದಮೇಲೆ ಅದನ್ನು ಒಪ್ಪವಾಗಿಡಲೂ ಸಾಕಷ್ಟು ಶ್ರಮಿಸಬೇಕಲ್ಲವೇ? ಮನೆಯ ಕೆಲಸ ಕಾರ್ಯಗಳನ್ನು ಮಾಡಿಕೊಡಲು ಸಿದ್ದಮ್ಮ ಇದ್ದಾಳೆ ನಿಜ. ಆದರೆ ಅವಳು ಕುದುರೆಯ ಮೇಲೆ ಬಂದಂತ ಬರುವುದು. ಬರುವಾಗಲೇ ಮಾಡುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂಬುದಕ್ಕಿಂತ, ಕೆಲಸ ಮುಗಿಸಿ ಮುಂದಿನ ಮನೆಗೆ ಯಾವಾಗ ಹೋದೇನೋ ಎಂಬ ತವಕ ಅವಳಿಗೆ. ಸ್ವಲ್ಪ ಇಲ್ಲಿ ದೂಳು ತೆಗಿ, ಗುಡಿಸು, ಒರೆಸು ಎಂದು ಹೇಳಿದರೆ ಸಾಕು ಮನೆಯಲ್ಲಿ ಮಂದಿಯೇ ಇಲ್ಲ. ಎಷ್ಟು ಗುಡಿಸುವುದು, ಒರೆಸುವುದು, ಕಸ ಹಾಕುವವರು ಯಾರಿದ್ದಾರೆ ನಿಮ್ಮ ಮನೆಯಲಿ? ಇಟ್ಟ ಸಾಮಾನು ಇಟ್ಟ ಕಡೆಯೇ ಇರುತ್ತದೆ ಎನ್ನುತ್ತಾಳೆ. ಅವಳ ನಿಷ್ಠುರದ ನುಡಿಗಳನ್ನು ಕೇಳಲು ಇಷ್ಟಪಡದ ಮಾಯಾ ತಾನೇ ಮನೆಯ ಒಂದೊಂದು ಭಾಗವನ್ನೇ ಸ್ವಚ್ಛಗೊಳಿಸುತ್ತ ಇರುತ್ತಾಳೆ ವಿರಾಮದ ವೇಳೆಯಲ್ಲಿ. 'ಯಾಕೆ ಈಗ ಏರಿಯಾಗೆ ಒಂದು ಎರಡು ಮಹಿಳಾ ಸಂಘಗಳು, ಸಮಾಜಗಳು ತಲೆಯೆತ್ತಿದೆ. ಎಲ್ಲಾದರೂ ಹೋಗಿ ಸ್ವಲ್ಪ ಹೊತ್ತು ಕಾಲ ಕಳೆದು ಬರಬಾರದೇ? ನಿನಗೂ ಒಂದು ಬದಲಾವಣೆ ಆದಹಾಗೆ ಆಗುತ್ತದೆ' ಎನ್ನುತ್ತೇನೆ ನಾನು. ಆದರೆ ಅವಳಿಗೂ ಅದೆಲ್ಲ ಅಷ್ಟಾಗಿ ರುಚಿಸುವುದಿಲ್ಲ. ನೀವು ಹೇಳಿದ ಹಾಗೆ ಹೊರಗಡೆ ಎಲ್ಲಾದರೂ ಸಂಘ, ಸಮಾಜ ಎಂದು ಹೋಗಿ ಬರುವುದಕ್ಕಿಂತ, ಮನೆಯನ್ನು ಸ್ವಚ್ಛಗೊಳಿಸುವುದರಲ್ಲಿಯೇ ಮನಸ್ಸು ಮುದಗೊಳ್ಳುತ್ತದೆ ಎನ್ನುತ್ತಾಳೆ ಅವಳು. ಹಾಗೆ ಹೇಳಬೇಕೆಂದರೂ ಬೆಂಗಳೂರಿನಲ್ಲಿ ಕಾರ್ಯಕ್ರಮಗಳಿಗೇನು ಬರವೇ? ನಿತ್ಯ ಎಲ್ಲಾದರೊಂದು ಕಡೆ, ಏನಾದರೊಂದು ಕಾರ್ಯಕ್ರಮ ಇದ್ದೇ ಇರುತ್ತದೆ. ಇಬ್ಬರೂ ಒಟ್ಟಿಗೆ ಹೋಗಿ, ಒಟ್ಟಿಗೆ ಬರೋಣ ಎನ್ನುತ್ತಾಳೆ ಅವಳು. ಈ ವಯಸ್ಸಿನಲ್ಲೂ ನನ್ನ ಮೇಲೆ ಅಳಿಯದ ಮೋಹ ಅವಳಿಗೆ. ಇದೇ ವಿವಾಹ ಬಂಧನದ ಗುಟ್ಟಲ್ಲವೇ?

ನಾನಾದರೋ ಏಕಾಂತಪ್ರಿಯ. ಇಷ್ಟು ವರುಷಗಳ ದೀರ್ಘಾವಧಿಯ ಬದುಕಿನಲ್ಲಿ ಸುಖ, ದುಃಖ, ಲಾಭ, ನಷ್ಟ, ನೋವು, ನಲಿವು, ಸಂಭ್ರಮ, ವಿಭ್ರಮಗಳನ್ನು ಸಾಕು, ಸಾಕೆನಿಸುವಷ್ಟು ಅನುಭವಿಸಿದುದಾಗಿದೆ. ಈಗ ಯಾವ ಜಂಜಾಟವೂ ಬೇಕಿಲ್ಲ. ಮನೆಯ ಒಳಗೆ, ಹೊರಗೆ ಬೀಸುವ ಗಾಳಿ, ಬೆಳಕು, ನೆರಳುಗಳು, ಮಾಯಾ ಕೈಯಿನ ಬಳೆಗಳು ಕಿಣಿಕಿಣಿ ನಿನಾದ, ಹೆಜ್ಜೆ ಸಪ್ಪಳ, ಮನಸ್ಸಿಗೆ ಮುದ ನೀಡುತ್ತದೆ. ಮನೆಯ ಒಳಗಿನ ಹೊರಗಿನ ಆಗುಹೋಗುಗಳು, ಅತಿಥಿ, ಅಭ್ಯಾಗತರ ಆದರಣೆ, ಇನ್ನುಗಳಲ್ಲೇ ದಿನ ಕಳೆದು ಹೋಗುತ್ತಿದೆ ಹಾಯಾಗಿ. ನೀವು ಮನೆಯಲ್ಲಿರಬೇಕಾದರೆ ನಾನೊಬ್ಬಳು ಹೊರಗೆ ತಿರುಗಲು ಎಲ್ಲಿಗೆ ಹೋಗಲಿ? ನೀವೆಲ್ಲಿದ್ದರೆ ನಾನಲ್ಲಿ ಎನ್ನುತ್ತಾಳೆ ನನ್ನ ಅರ್ಧಾಂಗಿ. ಈ ಮಾತಿಗೆ ಬದಲು ಹೇಳಲು ಬರುತ್ತದೆಯೇ? ಈ ಸಂದರ್ಭದಲ್ಲಿ 'ದಕ್ಷಸ್ಮೃತಿ'ಯಲ್ಲಿನ ಒಂದು ಮಾತು ನೆನಪಿಗೆ ಬರುತ್ತದೆ.

ಕಳೆದ ಸಂಚಿಕೆಯಲ್ಲಿ...

'ನಾನೀಗ ಜೀವನದ ಸಂಧ್ಯೆಯಲ್ಲಿದ್ದೇನೆ. ಒಂದೇ ರೀತಿಯಲ್ಲಿ ಕ್ರಮಬದ್ಧವಾದ ಜೀವನ ನಡೆಯುತ್ತಿದೆ. ಹಿಂದಿರುಗಿ ನೋಡಿದರೆ ಸಾರ್ಥಕತೆಯ ಹೆಜ್ಜೆಗಳೇ ಎದ್ದು ಕಾಣುತ್ತಿವೆ.'

.....ಮುಂದೆ ಓದಿ

'ಅನುಕೂಲಕಲತ್ರೋ ಯಃ ತಸ್ಯ ಸ್ವರ್ಗ ಇಹೈವ ಹಿ!

ಪ್ರತಿಕೂಲ ಕಲತ್ರಸ್ಯ ನರಕೋ ನಾತ್ರ ಸಂಶಯಃ'

(ಹೆಂಡತಿಯ ಅನುಕೂಲಳಾಗಿದ್ದರೆ ಸ್ವರ್ಗ ಇಲ್ಲಿಯೇ ಇದೆ. ಹೆಂಡತಿ ಪ್ರತಿಕೂಲಳಾಗಿದ್ದರೆ ನರಕ ಇಲ್ಲಿಯೇ, ಸಂಶಯವಿಲ್ಲ.) ಈ ವಿಚಾರದಲ್ಲಿ ನಾನು ಭಾಗ್ಯವಂತ.

ಡಿಸೆಂಬರ್ ತಿಂಗಳ ಬೆಳಗಿನ ನಡಿಗೆ ಅಷ್ಟೇನೂ ಹಿತಕರವಾದುದಲ್ಲ. ಚಳಿಗಾಳಿಯ ಕೊರೆತ ಒಂದೆಡೆಯಾದರೆ, ಸುತ್ತಲ ನೋಟ ರಮಣೀಯವಾಗಿರುವುದಿಲ್ಲ. ಗಿಡಮರಗಳು ಎಲೆ ಎದುರಿಸಿಕೊಂಡು ಬೋಳು ಬೋಳಾಗಿರುತ್ತವೆ. ಅದು ಕೆಲವು ದಿನಗಳವರೆಗಷ್ಟೆ. ಮತ್ತೆ ನೋಡು ನೋಡುತ್ತಿದ್ದಂತೆ ಮರ ಚಿಗುರಿ ಟಿಸಿಲೊಡೆದು ಕಂಗೊಳಿಸುತ್ತದೆ. ಎಂತಾ ಅದ್ಭುತ ದೃಶ್ಯ.

ಮನೆಗೆ ಬಂದೊಡನೆ ಬೆಚ್ಚನೆಯ ಉಡುಪನ್ನು ತೆಗೆದು ಹಾಕಿ, ಕಿಟಕಿ ಬಾಗಿಲುಗಳನ್ನು ತೆರೆದು ಮಾಯಾ ತಂದಿತ್ತ ಬಿಸಿಬಿಸಿ ಕಾಫಿ ಕುಡಿದೆ. ಅನಂತರ ಅಂದಿನ ಪತ್ರಿಕೆಯ ಪಠಣ. ಪತ್ರಿಕೆಯಲ್ಲಿನ ಸುದ್ದಿಯನ್ನೆಲ್ಲ ಓದಿ ಮುಗಿಸಲು ಕನಿಷ್ಟ ಪಕ್ಷ ಒಂದು ಗಂಟೆಯ ಸಮಯವಾದರೂ ಬೇಕು ನನಗೆ. ಅನಂತರ ಸ್ನಾನ, ಉಪಾಹಾರ, ಬಿಸಿಬಿಸಿ ಇಡ್ಲಿ, ಸಾಂಬಾರನ್ನು ತಂದು ಬಡಿಸಿದಳು ಮಾಯಾ. ತಿಂಡಿ ಮುಗಿಸಿದ ಮೇಲೆ ಎರಡನೆಯ ಬಾರಿಗೆ ಕಾಫಿ ತಂದುಕೊಟ್ಟಳು.

"ಮಾಯಾ ನನ್ನ ಉಪಚಾರವೇ ಆಯಿತಲ್ಲ, ನೀನೂ ಕುಳಿತು ತಿಂಡಿ ತಿನ್ನು" ಎಂದೆ. "ತಿನ್ನುತ್ತೇನೆ, ಆದರೆ ನಾನು ಈ ದಿನ ಅಡುಗೆ ಮಾಡುವುದಿಲ್ಲ."

"ಯಾಕೆ, ಇಂದು ಏಕಾದಶಿಯೇ?"

"ಅಲ್ಲ."

"ಮತ್ತೆ?"

"ಆಗಲೇ ಮರೆತುಹೋಯಿತೇ, ಈ ದಿನ ನನ್ನ ತಂಗಿ ಮಯೂರಳ ಮೊಮ್ಮಗುವಿನ ನಾಮಕರಣ. ಕಳೆದ ವಾರವೇ ಬಂದು ಕರೆದು ಹೋಗಿಲ್ಲವೇ ಅವಳು?"

"ಹೌದಲ್ಲವೇ, ನಿನಗೇ ತಿಳಿದಿರುವ ಹಾ ನಾನು ಈಚೆಗೆ ಸಮಾರಂಭಗಳಿಗೆ ಅಷ್ಟಾ ಹೋಗುವುದಿಲ್ಲ. ನಾನು ಮನೆಯಲ್ಲಿಯೆ ಇರುತ್ತೇನೆ. ನೀನು ಹೋಗಿ ಬಾ."

"ಚೆನ್ನಾಗಿದೆ, ಅಲ್ಲಿ ಎಲ್ಲರೂ ನೀವು ಯಾ ಬರಲಿಲ್ಲ ಎಂದು ಕೇಳಿದರೆ ಏನು ಹೇಳ ನಾನು?"


"ನಿನಗೆ ಸಬೂಬನ್ನು ನಾನು ಹೇಳಿಕೊಡಬೇಕೆ ಏನಾದರೊಂದು ನೆವ ಹೇಳು."

"ಊಟಕ್ಕೇನು ಮಾಡುತ್ತೀರಿ ನೀವು?"

"ನನ್ನ ಊಟದ ಚಿಂತೆ ನಿನಗೆ ಬೇಡ ಉಪವಾಸವಂತೂ ಇರುವುದಿಲ್ಲ." ಮನೆಯ ಕೆಲಸ ಬೊಗಸೆಗಳನ್ನೆಲ್ಲ ಮುಗಿಸಿ ಮಾಯ ಹೊರಡಲು ಅಣಿಯಾದಳು. ಎರಡು ಕಿಲೋ ಮೀಟರ್ ದೂರದ ಚಿರಪರಿಚಿತ ಹಾದಿ. ಆಗಾ ಹೋಗಿ ಬಂದು ರೂಢಿ ಅವಳಿಗೆ. ಹಾಗಾ ಅವಳು ಹೊರಟಾಗ ನನಗೆ ಆತಂಕವೇನೂ ಇಲ್ಲ "ಕತ್ತಲಾಗುವ ಮುನ್ನ ಮನೆಗೆ ಬಂದು ಬಿಡು" ಎಂದು ಹೇಳಲು ಮರೆಯಲಿಲ್ಲ. ಮಗುವಿ ಕೈಗಿಟ್ಟು ಆಶೀರ್ವದಿಸು ಎಂದು ಹೇಳಿ ನೂರ ರೂಪಾಯಿಯ ನೋಟೊಂದನ್ನು ಕೊಟ್ಟೆ.

ಮನೆಯ ಬಾಗಿಲಲ್ಲೇ ಆಟೋ ಕಾಣಿಸಿತು ಮಾಯಾ ಆಟೋ ಹತ್ತಿ ಹೊರಟಳು. ನಾನ ನಿತ್ಯದಂತೆ ಮನೆಯ ಅಂಗಳದಲ್ಲಿ ನಾಲ್ಕು ಸುತ್ತು ಸುತ್ತಿ ಒಳಗಡೆ ಬಂದೆ. ಈಸೀ ಚೇರಿನಲ್ಲಿ ಒರ ಕುಳಿತೆ.


ನೆನಪು ಹಿಂದಕ್ಕೋಡಿತು. ದಿನಗಳ ವರ್ಷಗಳು ಹೇಗೆ ಕಳೆದು ಹೋದವು. ಹಗಲ ಸತ್ತು ಇರುಳು ಹುಟ್ಟಿ, ಇರುಳು ಕರಗಿ ಹಗಲ ಬೆಳಗಿ ದಿನಗಳು, ವರ್ಷಗಳು ಕಳೆದೇ ಹೋದವ ನಿರಂತರವಾಗಿ ಸುತ್ತುವುದಷ್ಟೇ ಕಾಲಚಕ್ರದ ಮಹಿ ಕಾಲಚಕ್ರ ಮುಂದೆ ಮುಂದಕ್ಕೆ ಉರುಳು



ಸಾಗುವುದು. ಹಿಂದಕ್ಕೆ ಬಾರದು. ಒಂದು ಕ್ಷಣವೂ ಅದಕ್ಕೆ ಹಿನ್ನಡೆ ಎಂಬುದೇ ಇಲ್ಲ. ಮುಂದೆ ಮುಂದಕ್ಕೆ ಸಾಗುವುದು. ಯಾರ ಸುಖ, ದುಃಖ, ಲಾಭ, ನಷ್ಟ, ನೋವು, ನಲಿವು, ಸಂಭ್ರಮ, ವಿಭ್ರಮಗಳು ಅದಕ್ಕೆ ತಟ್ಟುವುದಿಲ್ಲ. ಅದಕ್ಕೆ ಯಾರೂ ಅನಿವಾರ್ಯರಲ್ಲ. ಬಡವ, ಬಲ್ಲಿದರಾದಿಯಾಗಿ ಎಲ್ಲರೂ ಒಂದೇ. ಕ್ಷಣ ಕ್ಷಣಗಳೂ, ಗಂಟೆ ಗಂಟೆಗಳೂ, ದಿನ ದಿನಗಳೂ ಕಳೆದ ಹಾಗೆ ನಾವು ಬದುಕಿಗೆ ದೂರವಾಗಿ ಸಾವಿಗೆ ಸಮೀಪವಾಗುತ್ತ ಹೋಗುತ್ತೇವೆ. ಅದಕ್ಕೇ ಶ್ರೀ ಶಂಕರರು 'ಕಾಲೋಜಗದ್ಭಕ್ಷಕಃ' ಎಂದಿದ್ದಾರೆ. ಕಾಲವನ್ನು ಮೀರಿ ನಿಲ್ಲಬಲ್ಲಂಥ ಶಕ್ತಿ, ತಾಕತ್ತು ಯಾರಿಗೂ ಇಲ್ಲ. ಕಾಲದ ಮಹಿಮೆಗೆ ಎಲ್ಲರೂ ತಲೆಬಾಗಲೇಬೇಕು.

ಹೌದು, ನನ್ನ ಬದುಕಿನ ಬಹು ಅಮೂಲ್ಯವಾದ ಸಮಯ ಮುಗಿದು ಹೋಗಿದೆ. ವಾರ್ಧಕ್ಯ ತನಗೀಗ ಪ್ರಾಪ್ತವಾಗಿದೆ. ಯಾವ ಕೋನದಿಂದ ದಿಟ್ಟಿಸಿ ನೋಡಿದರೂ ತನ್ನ ಬದುಕೊಂದು ಯಶಸ್ವೀ ಬದುಕು, ಸಾರ್ಥಕ ಬದುಕು ಎಂದೇ ಹೇಳಬೇಕಾಗುತ್ತದೆ. ಬದುಕಿನಲ್ಲಿ ತಾನು ಕಾಣದ ಕಷ್ಟ, ನಷ್ಟ, ನೋವು, ನಲಿವುಗಳು ಇಲ್ಲವೆಂದೇ ಹೇಳಬೇಕು. ಕಾಣದ ಆ ಭಗವಂತ ನನ್ನ ವಿಚಾರದಲ್ಲಿ ಉದಾರಿಯಾಗಿದ್ದಾನೆ, ದಯಾಮಯನಾಗಿದ್ದಾನೆ. ತಾನೂ ಅಹರ್ನಿಶಿ ದುಡಿದು, ದಣಿದು ಒಂದು ಹಂತಕ್ಕೆ ತಲುಪಿದೆ ಎಂಬುದು ನಿಜವಾದರೂ, ಎಲ್ಲ ಪ್ರಯತ್ನಗಳ ಹಿಂದೆ ಭಗವತ್ಕೃಪೆ ಎಂಬ ಆ ಕರ್ತೃವಿನ ಕೈವಾಡವೂ ಇದೆ ಎಂಬುದನ್ನು ಅಲ್ಲ ಗಳೆಯುವಂತಿಲ್ಲ. ಸಮಸ್ತ ಬಂಧು ಬಾಂಧವರೂ, ಅದೆಷ್ಟೋ ಅಕ್ಷೋಹಿಣಿ ಸೈನ್ಯ ಜೊತೆಗಿದ್ದರೂ ಕೌರವನಿಗೆ ಪಾಂಡವರನ್ನು ಗೆಲ್ಲಲಾಗಲಿಲ್ಲ. ಕಾರಣ ಅವರ ಮೇಲೆ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನ ಕೃಪಾಕಟಾಕ್ಷವಿತ್ತು. ಹಾಗೆಂದು ಮನುಷ್ಯ ಪ್ರಯತ್ನ ಮಾಡದೆ ಭಗವತ್ಕೃಪೆಗಾಗಿ ಕಾಯುತ್ತ ಕುಳಿತರೆ ಆದೀತೇ? ಖಂಡಿತ ಇಲ್ಲ. ಯಾರು ತಮ್ಮ ತಮ್ಮ ಹಾದಿಯಲ್ಲಿ ಅವಿರತ ಪ್ರಯತ್ನ ನಡೆಸುತ್ತ ಹೋಗುತ್ತಾರೆಯೋ, ದೈವ ಸಹಾಯ ತನ್ನಿಂತಾನೆ ಅವರ ನೆರವಿಗೆ ಬರುತ್ತದೆ ಎಂಬ ಮಾತು ನನ್ನ ವಿಚಾರದಲ್ಲಂತೂ ಸತ್ಯವಾಗಿದೆ.

ಈ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಲು ತಾನು ಪಟ್ಟ ಪಾಡೆಷ್ಟು ಪ್ರಯತ್ನವೆಷ್ಟು? ಅಲ್ಲದೆ ಜೀವನ ಎಷ್ಟೊಂದು ಪಾವನ. ಅದನ್ನು ಸಫಲಗೊಳಿಸಿಕೊಳ್ಳಲು ತಾನು ಪಟ್ಟ ಪಾಡು, ಪ್ರಯತ್ನ ಅದೊಂದು ರಸಮಯವಾದ ಕಥೆ. ಒಬ್ಬ ಮನುಷ್ಯ ಸ್ವಪ್ರಯತ್ನದಿಂದ, ಅವಿರತ ಶ್ರಮದಿಂದ, ಅನವರತ ದುಡಿಮೆಯಿಂದ, ಶ್ರದ್ಧೆಯಿಂದ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಸೋದಾಹರಣೆ. ಬದುಕಿನ ಈ ನಿಟ್ಟಿನಲ್ಲಿ ನಿಂತು ನೋಡುವಾಗ ತನಗೇ ಅಚ್ಚರಿಯಾಗುತ್ತದೆ, ವಿಸ್ಮಯವಾಗುತ್ತದೆ. ತನ್ನ ಸಾರ್ಥಕ ಬದುಕಿನ ಕಥೆಯನ್ನು ಯಾರೊಂದಿಗಾದರೂ ಹೇಳಬೇಕು ಎಂಬ ತೀವ್ರವಾದ ತುಡಿತ. ಹೌದು ಹೇಳಬೇಕು ನಿಜ, ಯಾರಲ್ಲಿ? ಮಕ್ಕಳು ದೂರವಿದ್ದಾರೆ. ಏಕಾಂತಪ್ರಿಯನಾದ ನನಗೆ ಮಿತ್ರರು ಕಡಿಮೆ. ಮಾಯಾಳ ಬಳಿ ತೋಡಿಕೊಳ್ಳೋಣವೆಂದರೆ ಯಾಕೆ ನೆನೆಯುತ್ತೀರಿ ಆ ಹಳೆಯ ಪರಿಪಾಟಲನ್ನು ಎನ್ನುತ್ತಾಳೆ ಅವಳು? ಮತ್ತೆ ಯಾರಲ್ಲಿ, ಯಾರಲ್ಲಿ ಹೇಳುವುದು? ಹೌದು ಹೇಳಲೇ ಬೇಕು, ಹೇಳಿದ್ದಲ್ಲದೆ ತನ್ನ ಮನದ ತಾಪ ತೀರಲಾರದು. ತುಡಿತ, ತಲ್ಲಣ ಇಂಗದು. ಏನು ಮಾಡುವುದೀಗ, ಇದಕ್ಕಿಲ್ಲವೇ ಮದ್ದು, ಪರಿಹಾರ? ಇದೆ. ಇರುವುದೊಂದೇ ದಾರಿ. ಬರೆಯಬೇಕು ಹೌದು ತನ್ನ ಕಳೆದ ಬಾಳಿನ ರೋಚಕ ಕತೆಯನ್ನು ಬರಹದಲ್ಲಿ ಹಿಡಿದಿಡಬೇಕು. ಅದನ್ನು ಓದಿದ ಕೆಲವರಿಗಾದರೂ ಅದು ಅವರ ನೂತನ ಬಾಳಿಗೆ ಸ್ಫೂರ್ತಿಯಾದರೆ, ತಾನು ಪ್ರಯತ್ನ ದಿಂದ ಏನನ್ನಾದರೂ ಸಾಧಿಸಬಹುದು ಎಂಬ ಅರಿವು ಉಂಟಾದರೆ ಅಲ್ಲಿಗೆ ತಾನು ಕೃತಕೃತ್ಯ, ಧನ್ಯ ಎಂಬ ಭಾವನೆ ಮೂಡಿತು. **(ಸಶೇಷ)**



ಚುಕ್ಕೆ 21ರಿಂದ 11ರವರೆಗೆ



ಆರ್. ವಿ. ಪದ್ಮಾವತಿ
ಬೆಂಗಳೂರು


ಸೂಚನೆ

[illegible]

ರಂಗೋಲಿ



ಜಯಶ್ರೀ
ಕವತ್ತಾರು



9 ಚುಕ್ಕೆ 9 ಸಾಲು

ಧಾರಾವಾಹಿ-೧೬



ಚೈತ್ರ ಚಂದನ

ಯು. ವಿ. ತಾರಿಣಿ ರಾವ್

"ಚೆನ್ನಾಗಿದ್ದರೆ ಯಾಕಮ್ಮ ಊಟ ತಿಂಡಿ ಯಾಕೆ ಬಿಡಬೇಕು." ಅಂಬುಜಮ್ಮನಲ್ಲಿ ವಿಪರೀತ ಬದಲಾವಣೆಯಾಗಿದೆ ಎಂದು ಎಲ್ಲರ ಗಮನಕ್ಕೂ ಬಂದಿತು. ತುರ್ತಾಗಿ ಆಕೆ ಏಕೆ ಎಂಟು ಸಾವಿರ ಕೇಳಿ ಪಡೆದರು. ಆ ಹಣವೇನಾಯ್ತು. ಆದರೂ ಶಾಸ್ತ್ರಿಗಳು ಅದೆಲ್ಲ ಯೋಚಿಸಲು ಹೋಗದೆ ಒಳ್ಳೆಯ ವೈದ್ಯರಿಂದ ಚಿಕಿತ್ಸೆ ನಡೆಸಿದರು. ಅಲ್ಪ ಕಾಲದಲ್ಲೇ ಅಂಬುಜಮ್ಮ ಅರವತ್ತರ ಮುದುಕಿಯಂತೆ ಮುಪ್ಪಾಗಿದ್ದಳು. ಆ ಕಾರಿನ ಶೆಡ್ಡಿನ ಪುಟ್ಟ ಮನೆಯಲ್ಲಿ ರಾಶಿ ರಾಶಿ ದೂಳು ಬಿದ್ದಿದೆ. ಮೂಲೆಯಲ್ಲಿ ಹಚ್ಚಿದ ಮುತ್ತುಗದ ಎಲೆಗಳು ಎತ್ತಿಡುವವರಿಲ್ಲದೆ ಹರಡಿತ್ತು.

ಶಾಸ್ತ್ರಿಗಳ ಮನೆಯವರ ಉಪಚಾರ, ವೈದ್ಯರ ಚಿಕಿತ್ಸೆಯಿಂದ ತಿಂಗಳ ಅವಧಿಯಲ್ಲಿ ಎದ್ದು ಬಡಾಡುವಂತಾಗಿದ್ದಳು. ಹಿತೈಷಿ ಎಂಬ ಅಪರಿಚಿತನಿಂದ ಪತ್ರದ ಗಡುವಿನ ದಿನ ಬರುತ್ತಿದ್ದಂತೆ ಕಂಗಾಲಾಗಿದ್ದಳು. ಅವಳ ಈ ಪರಿಸ್ಥಿತಿ ಅರಿತು ನಿರಂಜನ, ಪದ್ಮ ಇಬ್ಬರನ್ನೂ ಚೈತ್ರಳಿಗೆ ಬಳೆ ತೊಡಿಸುವ ಶಾಸ್ತ್ರಕ್ಕೆ ಶಾಸ್ತ್ರಿಗಳು ಕಳಿಸಿಕೊಟ್ಟಿದ್ದರು.

ಬೇಕಾದ ಸಾಮಾಗ್ರಿಗಳನ್ನು ನಿರಂಜನನೇ ತಂದಿದ್ದ. ಎಷ್ಟೆಂದರೂ ಗೆಳೆಯನ ಪತ್ನಿಗೆ ತಾನೇ ಬಳೆ ತೊಡಿಸುವ ಶಾಸ್ತ್ರ. ದಂಪತಿಗಳಿಬ್ಬರೂ ಶಾಂಭವಿ ನಿಲಯದ ಸಿರಿಸಂಪತ್ತಿನ ಬಗ್ಗೆ ಚೈತ್ರಳ ಬಗ್ಗೆ ವಿಷದವಾಗಿ ಹೇಳಿದರು. ಫಾರಂ ಹೌಸ್, ಗಿರಿಕನ್ಯೆ ಎಸ್ಟೇಟು ಎಲ್ಲವನ್ನೂ ವರ್ಣಿಸಿದಾಗ ತಾಯಿ ಹೃದಯ ಶಾಂತವಾಗಿತ್ತು. ಅಂತರಂಗದ ಜ್ವಾಲೆ ಹೊತ್ತಿಕೊಂಡೇ ಇತ್ತು. ಇಂಥ ಸಮಯದಲ್ಲೇ ಹಿತೈಷಿಯ ಗಡುವು ಮುಗಿದುಹೋಯ್ತು.

ತನಗೆ ಪತ್ರ ಬರೆಯುವ ಈ ಹಿತೈಷಿ ಯಾರಾಗಿರಬಹುದು. ತನ್ನ ಮೇಲೇಕೆ ದ್ವೇಷ, ತಾನೇನು ಯಾರಿಗೂ ಅಪಕಾರ ಮಾಡಿದವಳಲ್ಲ.

ಆ ತಿಂಗಳೂ ಕಳೆದು ಹೋಗತೊಡಗಿತ್ತು. ಶಾಸ್ತ್ರಿಗಳ ಮನೆಯಂಗಳ ಗುಡಿಸಿ ಸಾರಿಸುತ್ತಿರುವಾಗ ಅಂಬುಜಮ್ಮನಿಗೆ ಯಾರೋ ತನ್ನನ್ನೇ ದಿಟ್ಟಿಸುತ್ತಿರುವಂತೆ ಭಾಸವಾಯ್ತು. ಎದೆ ಡವ ಗುಟ್ಟಿತು. ಹೆದರಿಕೆಯಿಂದ ಅತ್ತಲೇ ನಿಟ್ಟಿಸಿದಳು. ಎದುರು ಮರಕ್ಕೆ ಒರಗಿಕೊಂಡ ಚೌಕುಳಿ ಪ್ಯಾಂಟು ತೊಟ್ಟ, ಬಣ್ಣದ ಪ್ಲಾಗ್ ಹಾಕಿದ್ದ ದಪ್ಪನೆಯ ಕಪ್ಪು ವ್ಯಕ್ತಿ ಇತ್ತಲೇ ನೋಡುತ್ತಿದ್ದಂತೆ ಭಾಸವಾಯ್ತು. ಯಾರೀತ, ಇಲ್ಲೇನು ಕೆಲಸ. ತನ್ನನ್ನೇಕೆ ನೋಡಿದ. ಯಾರೋ ಹಾದಿ ಹೋಕನಿರಬೇಕು ಎಂದುಕೊಂಡಳು. ಒಳಗೆ ಕೆಲಸಕ್ಕೆ ತೊಡಗಿದಳು. "ಅಂಬುಜಮ್ಮ ಯಾರೋ ನಿಮ್ಮನ್ನು ಕರಿತಿದ್ದಾರೆ." ಶಾಸ್ತ್ರಿಗಳ ಹಿರಿಮಗ ಗೋಪಾಲ ಬಂದು ಕರೆದಾಗ ಹೊರಗೆ ಬಂದಳು. ಗೇಟಿನ ಹೊರಗೆ ಬೆಳ್ಳಗೆ ನಿಂತಿದ್ದ ವ್ಯಕ್ತಿ ಕಂಡ. ಅವಳನ್ನೇ ಕುಹಕವಾಗಿ ನಿಟ್ಟಿಸುತ್ತ ಸಿಗರೆಟ್ ಹೊಚ್ಚಿಕೊಂಡ.

"ಯಾರಪ್ಪ ನೀನು?"

"ಶಾರದ." ಅವನ ಕಣ್ಣುಗಳು, ಆ ಮುಖ ಹತ್ತಿರದಲ್ಲಿ ನೋಡುತ್ತಿದ್ದಂತೆ ಅವಳಲ್ಲಿ ಭೀತಿಯುತ್ಪನ್ನವಾಯ್ತು. ಹಾಗಾದರೆ ನನಗೆ

ಬೆದರಿಕೆಯ ಪತ್ರ ಬರೆದವನು ಇವನೇ. ಇವನನ್ನೆಲ್ಲೋ ಕಂಡಂತಿದೆಯಲ್ಲ. ಅವಳ ಚಿತ್ತದಲ್ಲಿ ಏನೋ ಕೋಲಾಹಲ ತುಂಬಿತು.

'ಇವನು ಇವನು ಮುಹಮ್ಮದ್. ಮದುವೆಯಾಗಿ ಗಂಡನೇ ದೇವರೆಂದುಕೊಂಡು ಸಂಸಾರ ಸಾಗಿಸಿದವನ ಗೆಳೆಯ ಮುಹಮ್ಮದ್. ಇವನೆಲ್ಲಿ ಗಂಟುಬಿದ್ದ. ಪಾಪಿ, ಮರ್ಯಾದೆಯಿಂದ ಬಾಳುತ್ತಿದ್ದವಳನ್ನು ಕಂಡು ಹೊಟ್ಟೆಕಿಚ್ಚೇ ಇವನಿಗೆ. ಅಯ್ಯೋ ತನ್ನ ಬಾಳಂತೂ ಹಾಳಾಯ್ತು. ಚೈತ್ರಳ ಬಾಳು ಹಾಳುಗೆಡವಲು ಕಾಯ್ತಾ ಇದ್ದಾನೆಯೆ.'

ಅವಳ ಕಂಗಳಲ್ಲಿದ್ದ ಹೆದರಿಕೆ ಮಾಯವಾಗಿ ಅವುಗಳಲ್ಲಿ ಸೇಡು ತುಂಬಿ ಅವಳು ಉನ್ಮಾದಿನಿಯಂತಾದಳು.

"ಬಾಭಿ ನಾ ಕೇಳಿದ ಹಣ ಎಲ್ಲಿ. ನಿನ್ನ ಮಗಳಿಗೆ ಒಂದು ಪತ್ರ ಹಾಕಿದ್ದೀನಿ ಗೊತ್ತೇನು. ಇಪ್ಪತ್ತೈದು ಸಾವಿರ ನೀ ಕೊಡದಿದ್ದರೇನು ನಿನ್ನ ಮಗಳು ಇದ್ದಾಳಲ್ಲ. ಅವಳತ್ರ ಇಸ್ಕೊಳ್ಳೇನು." ಅವನು ಧೂರ್ತ ನಗೆ ನಕ್ಕ. ಅವಳನ್ನೇ ಒಂದು ಬಗೆಯಾಗಿ ದಿಟ್ಟಿಸಿ "ಆಷ್ಟೇ ಹಾಗೇ ಮಾಡ್ತಿನಿ ಬಿಡು."

ಚೈತ್ರಳಿಗೆ ಪತ್ರ ಬರೆದ ಸುದ್ದಿ ಕೇಳುತ್ತಿದ್ದಂತೆ ಇನ್ನು ಮಗಳ ರಕ್ಷಣೆ ತನ್ನಿಂದ ಸಾಧ್ಯವಿಲ್ಲ ಎಂಬ ಅರಿವಾಯ್ತು. ಆ ಉನ್ಮಾದಿನಿಯ ಬಾಯಿಂದ ಜೋರು ಜೋರಾಗಿ ಮಾತು ಹೊರಟವು.

"ನಿನ್ನ ಮನೆ ಹಾಳಾಗ, ಬಾಯಿಗೆ ಮಣ್ಣು ಬೀಳ, ಚೈತ್ರ ಏನೂ ಮಾಡಿದ್ದಾಳೋ ನಿಂಗೆ. ಬೇಕಿದ್ರೆ ನನ್ನ ಕೊಂದು ಬಿಡು." ತಾನೇನು ಮಾತಾಡುತ್ತಿದ್ದೇನೆ ಅದರ ಪರಿಣಾಮ ಏನು ಎಂಬುವ ಸ್ಥಿತಿಯಲ್ಲಿ ಇರಲಿಲ್ಲ. ಹುಚ್ಚುಚ್ಚಾಗಿ ಕೂಗುತ್ತ ಅಳುತ್ತ ಮಾತಾಡತೊಡಗಿದಳು. ಸುತ್ತಲೂ ಜನ ಗುಂಪು ಕಟ್ಟಿ ನಿಂತಿದ್ದರು.

ಶಾಸ್ತ್ರಿಗಳು ಗಲಾಟೆ ಕೇಳಿ ಹೊರಗೆ ಎದ್ದು ಬಂದರು. ಅಂಬುಜಮ್ಮ ಅಳುತ್ತ ಅವನೆದುರು ಸೆರಗೊಡ್ಡಿ ಬೇಡುತ್ತಿದ್ದಾಳೆ.

"ಮುಹಮ್ಮದ್ ನಿನ್ನ ಕಾಲಿಗೆ ಬೀಳ್ತೀನಿ. ನನ್ನ ಮಗಳ ಬಾಳು ಹಾಳು ಮಾಡಬೇಡ. ನನ್ನ ಜೀವ ತಗೊಳ್ಳಯ್ಯ."

"ನಿನ್ನ ಜೀವ ಯಾರಿಗೆ ಬೇಕು, ಓಡಿ ಬಂದವಳು. ಸೂಳೆಯಾಗಿ ಇದ್ದು ಮಗಳನ್ನು ಹೆತ್ತವಳು. ನಡಿ ನಡಿ ಹಣ ಕೊಡು ಮುಂಚೆ. ತಾಯಿಯಂತೆ ಮಗಳು. ನೂಲಿನಂತೆ ಸೀರೆ. ನಾ ಕೇಳಿದ್ದು ಪೈಸಾ. ತಾ ತ್ತಾ ಇಲ್ಲಿ ನಾನೂ ಹೊರಟೋಗ್ತೀನಿ."

"ಥೂ ಪಾಪಿ, ಚಾಂಡಾಲ. ನಿನ್ನ ಬಾಯಿಗೆ ಮಣ್ಣು ಬೀಳ" ಅವಳು ಬಗ್ಗಿ ನೆಲದ ಮಣ್ಣು ತೆಗೆದು ಅವನ ಮುಖದತ್ತ ತೂರಿದಳು.

"ಯಾರಯ್ಯ ನೀನು ಇವಳೊಟ್ಟಿಗೆ ನಿನ್ನದೇನು ಕೆಲಸ?"

"ಈಕೆ ಸೂಳೆ ಸ್ವಾಮಿ, ನಿಮಗೆ ಗೊತ್ತಿಲ್ಲವೇನು?"

"ಏ ಸಾಕು ಹೋಗಯ್ಯ, ಪೋಲೀಸರಿಗೆ ಹೇಳಿ ಕಳಿಸ್ತೀನಿ."

"ಹೇಳಿ ಕಳ್ಸಿ ಸ್ವಾಮಿ, ಈಕೆ ನಂಗೆ ಗೊತ್ತು. ಶಾರದ ಇವಳ್ಹೆಸರು. ಬಾಂಬೆಯಿಂದ ಸೂಳೆ ಮನೆಯಿಂದ ಓಡಿ ಬಂದವಳೆ. ಕೇಳಿ ನೋಡ್ರಿ."

"ಹೆಚ್ಚು ಮಾತು ಬೇಡ ಇಲ್ಲಿಂದ ಹೋಗ್ತೀಯೋ ಇಲ್ಲವೊ."

"ಪೋಲೀಸರಿಗೆ ತಿಳಿಸ್ತೀರ ತಿಳಿಸಿ ಬುಡಿ. ಯಾರು ಬೇಡಾಂತಾರೆ ನಿಮ್ಮಂತಾ ಶ್ರೀಮಂತರು

ಇಲ್ಲಿಯವರೆಗೆ...

ಶ್ರೇಯಸ್ ಮತ್ತು ಚೈತ್ರ ಹೊಸದಾಗಿ ಮದುವೆಯಾದವರು. ಚೈತ್ರ ಓರ್ವ ಅನಾಥೆ. ಶ್ರೇಯಸ್‌ನ ಭವ್ಯ ಎಸ್ಟೇಟಿನ ಮನೆ ಅವಳಿಗೇಕೋ ಭಯದ ಗೂಡಾಗಿ ಕಾಡುತ್ತದೆ. ಆಗಂತುಕ ವ್ಯಕ್ತಿ ಬೆನ್ನು ಹತ್ತುತ್ತದೆ.

....ಮುಂದೆ ಓದಿ

ಈ ಸೂಳೇನ ಇಟ್ಕೊಂಡಿದ್ದೀರ. ಜನಕ್ಕ ಗೊತ್ತಾಯ್ತು ಬುಡಿ."

ಶಾಸ್ತ್ರಿಗಳ ಇಳಿ ವಯಸ್ಸಿನ ಜೀವಕ್ಕೆ ಇಂತಾ ಮಾತುಗಳಿಂದ ಆಘಾತವಾಯ್ತು.

"ನಂಮ್ದೂಕೆ ಹಣ ಕೊಟ್ಬುಡಿ ಹೊಂಟೋಯ್ತಿನಿ."

ಅಂಬುಜಮ್ಮನ ಕಾಲುಗಳು ಉನ್ಮಾದದಿಂದ ಎಲ್ಲೋ ಹೊರಟವು, ಆಕೆಯನ್ನು ಯಾರೂ ತಡೆಯಲಿಲ್ಲ. ಮಾತೂ ಆಡಲಿಲ್ಲ.

ಸ್ವಲ್ಪ ಹೊತ್ತಿನಲ್ಲಿ ಮುಹಮ್ಮದನೂ ಹೊರಟುಹೋದ. ಮನೆಯ ಎಲ್ಲರಿಗೂ ಬಹಳ ಬೇಸರವಾಗಿತ್ತು. ಶಾಸ್ತ್ರಿಗಳಿಗೆ ಕಳವಳ ಹುಟ್ಟಿತು. ಮಗಳಿಗಿಂತ ಹೆಚ್ಚಾಗಿ ಅಂಬುಜಮ್ಮ ಅವರ ಬಳಿ ಒಳ್ಳೆಯವಳಾಗಿ ನಡೆದುಕೊಂಡಿದ್ದಳು.

ಸಾದಾ ಬಿಳೀ ಸೀರೆ, ಕುಪ್ಪಸ ತೊಟ್ಟ ಅವಳು ಸದಾ ಶಾಂತವಾಗಿದ್ದಳು. ಎಳೆಯ ಮಗು ಚೈತ್ರಳನ್ನು ಉಡಿಯಲ್ಲಿಟ್ಟುಕೊಂಡು ಆಕೆ ಅವರ ಆಶ್ರಯದಲ್ಲಿ ಕಳೆದಿದ್ದಳು.

ಸಂಜೆ ಕಳೆಯುತ್ತಿದ್ದಂತೆ ಆಳೊಬ್ಬ ಓಡಿ ಬಂದು "ಯಜಮಾನ್ರೆ ಅಂಬುಜಮ್ಮ ರಸ್ತೆಗಳಲ್ಲಿ ಜೋರಾಗಿ ಕುಣೆಯುತ್ತ ಬಸ್ಸು ಹತ್ತಿ ಸಂಗಮಕ್ಕೆ ಹೋಗಿ ಹಾರ್‍ಕೊಂಡ್ರು. ಶವ ಹುಡುಕ್ತಿದ್ದಾರೆ. ಪೋಲೀಸರಿಗೂ ಸುದ್ದಿ ತಿಳೀದೈತ."

ಶಾಸ್ತ್ರಿಗಳಿಗೆ ದುಃಖ ಉಕ್ಕಿತು. ಇಲ್ಲಿಗೆ ಬಂದ ರಾಕ್ಷಸ ಚೈತ್ರಳ ಮನೆಗೆ ಹೋಗದೇ ಇರಲಾರ. ಈ ವಿಷಯ ಯಾರಿಗೆ ಹ್ಯಾಗೆ ತಿಳಿಸಬೇಕೋ ತಿಳಿಯದೆ ಒದ್ದಾಡಿತು ಹಿರಿ ಜೀವ. ನಂಜುಂಡಯ್ಯರ ನೆನಪಾಯ್ತು. ಪತ್ರ ಬರೆಯಲು ಕೂತರು.

ಫಾರಂ ಒಳಗೆ ಚೈತ್ರಳ ಜೀಪು ಪ್ರವೇಶಿಸುತ್ತಿದ್ದಂತೆ ಜಾಕಿ ಜೀಪಿನ ಹಿಂದೆಯೇ ಓಡಿ ಬರಲಾರಂಭಿಸಿತು. ಜಾಕಿ, ರೋಸಿ ಕಪ್ಪು ಬಣ್ಣದ ಡಾಬರ್‌ಮನ್ ಜಾತಿಯವು. ಅವುಗಳ ಕೆಂಗಣ್ಣುಗಳು ಕ್ರೂರತೆಯಿಂದ ಹೊಳೆಯುತ್ತಿದ್ದರೂ ಜೀಪು ಬರುವ ಸದ್ದಿಗೆ ಎಷ್ಟೋ ಬಾರಿ ಸರಪಳಿ ಕಿತ್ತುಕೊಂಡು ಓಡಿ ಮಣ್ಣಿನ ಕಾಲ್ದಾರಿಗೆ ಬಂದು ಬಿಡುತ್ತಿದ್ದವು.

ಜೀಪಿನ ವೇಗ ಕಮ್ಮಿ ಮಾಡುತ್ತಿದ್ದಂತೆ ಜಾಕಿ ಅವಳನ್ನೇ ದಿಟ್ಟಿಸಿ ಕುಂಯ್ಯಿಗುಟ್ಟಿತು. ರೋಸಿ ಎಲ್ಲಿ ಹೋಯ್ತು. ಅವಳು ನಿಧಾನವಾಗಿ ಮಣ್ಣರಸ್ತೆ ಬಳಸಿಕೊಂಡು ಕೋಳಿ ಫೌಲ್ಟ್ರಿ ಕಡೆ ಜೀಪು ತಿರುಗಿಸಿದಳು. ಕೋಳಿಗಳ ಲಯಬದ್ಧವಾದ ಕೊಕ ಕೊಕ ಸ್ವರ, ಅವುಗಳ ವಾಸನೆ ಸುತ್ತಲೂ ಹರಡಿತ್ತು. ಒಳಗೆ ಅದೆಷ್ಟೇ ಸ್ವಚ್ಛಗೊಳಿಸಿದರೂ ವಾಸನೆ ಕಮ್ಮಿಯಾಗುತ್ತಿರಲಿಲ್ಲ. ಅವುಗಳ ಲಯಬದ್ಧ ಸ್ವರದಲ್ಲಿ ಅದೇ ಸದ್ದು ಒಂದೇ ಸಮ ಹರಡಿರುತ್ತದೆ. ಏನಾದರೂ ಹೊಸಬರನ್ನು ಕಂಡಾಗಲೋ, ಇಲ್ಲ ಹೆದರಿಯೋ ಸ್ವರ ಹೆಚ್ಚಿ ಗಾಬರಿಯಿಂದ ಕೂಗಿಕೊಳ್ಳುತ್ತವೆ. ಅವುಗಳ ಬೆಳ್ಳಗಿನ ಬಿಳುಪು ಜೋತುಬಿದ್ದ ರಕ್ತ ಕೆಂಪು ಬಾಸಿಂಗದ ಕಿರೀಟ ನೋಡಲು ಮತ್ತೂ ಚೆನ್ನ. ಆಕಡೆ ಈ ಕಡೆಯಿಂದ ದಿಟ್ಟಿಸುವ ಅವುಗಳ ಗುಲಗಂಜಿ ಕಣ್ಣುಗಳು ಕನ್ನಡಿಯಂತೆ ಪಳಪಳಿಸುತ್ತವೆ.

ಜೀಪು ನಿಲ್ಲಿಸುತ್ತಿದ್ದಂತೆ ಜಾಕಿ ಅವಳನ್ನು ಸುತ್ತಿಕೊಂಡಿತು. ಇಂದು ಅದರ ಕಣ್ಣಲ್ಲಿ ಯಾವುದೋ ಆತಂಕ ಭಾವವಿತ್ತು. ಏನಾಯ್ತು ಜಾಕಿ ಅವಳ ಮೊಣಕಾಲ ಎತ್ತರ ಸುತ್ತಿಕೊಳ್ಳುತ್ತ ಹಾರುತ್ತಿದ್ದ ಅದರ ದಪ್ಪ ತಲೆ ಸವರುತ್ತಿದ್ದಾಗ ಸಮಾಧಾನವಾಗಿ ಬಾಲ ಅಲ್ಲಾಡಿಸಿತು.

"ಚಿಕ್ಕಮ್ಮಾವ್ರೆ ರಾತ್ರೆನಾಗೆ ರೋಸಿ ಸತ್ತು ಹೋಗಿದೆ. ಅದಕ್ಕೇ ಅಳ್ತಾ ಇದೆ." ಆಳೊಬ್ಬ ನುಡಿದಾಗ ಅವಳಿಗೆ ಆಘಾತ.

"ಯಾಕೆ ಏನಾಗಿತ್ತು. ನಿನ್ನೆ ಚೆನ್ನಾಗಿದ್ದಲ್ಲ ರೋಸಿ." ಸಂಕಟದಿಂದ ನುಡಿದಳು.

"ಅದೇನೋ ಗೊತ್ತಿಲ್ಲ ಕಣ್ರವ್ವ. ಬೆಳಿಗ್ಗೆ ನೋಡಿದ್ರೆ ರೋಸಿ ಸತ್ತುಹೋಗಿತ್ತು. ದಿನದಂತೆ ರಾತ್ರೆನಾಗೂ ಫಾರಂ ಕಾಯಕ್ಕೆ ಬಿಟ್ಟಿದ್ವಿ."



ಮಾತಾಡುತ್ತಲೇ ಆಳುಗಳು ಕೋಳಿ ಮನೆಯೊಳಗೆ ಹೊಕ್ಕರು. ಕೋಳಿಗಳ ಮುಂದೆ ಆಹಾರ ನೀರು ಇಡಲು,

"ಹೌದೆ ಜಾಕಿ." ಅವಳಿಗೂ ಸಂಕಟವಾಗಿತ್ತು. ಅವಳ ಮುಖವನ್ನೇ ಕನಿಕರ ಯಾಚಿಸುವಂತ ಜಾಕಿ ತನ್ನ ಕಂಗಣ್ಣಿನಿಂದ ದಿಟ್ಟಿಸಿತು. "ಅಳಬೇಡ ಬಾ." ಜಾಕಿ ಅವಳೊಟ್ಟಿಗೆ ಜೀಪು ಹತ್ತಿ ಪಕ್ಕ ನಾಲಿಗೆ ಚಾಚಿ ಕುಳಿತುಕೊಂಡಿತು.

ಕೌ ಹೌಸ್ ಸುತ್ತಿಕೊಂಡು ಆಫೀಸು ಕೋಣೆಗೆ ಬಂದಳು. ಫಾರಂ ವ್ಯಾನು ನಿಂತಿತ್ತು. ದೊಡ್ಡ ಕ್ಯಾನುಗಳಲ್ಲಿ ಹಾಲು ತಂದು ವ್ಯಾನಿನೊಳಗೆ ವ್ಯವಸ್ಥಿತವಾಗಿ ಇಡತೊಡಗಿದ್ದರು ಆಳುಗಳು. ಜಾಕಿಯನ್ನು ಕಟ್ಟುವಂತೆ ಆಳುಗಳಿಗೆ ಹೇಳಿ ಆಫೀಸಿನೊಳಗೆ ಬಂದಳು.

"ಓ ಚಿಕ್ಕಮ್ಮಾವ್ರು ಬನ್ನಿ." ಆಫೀಸು ಕೋಣೆಯಲ್ಲೇ ಇದ್ದ ಮಿ. ಪ್ರಮೋದ್‌ನ ತುಟಿಯಂಚಿನಲ್ಲಿ ಇನ್ನಷ್ಟು ಉದಾಸ ಛಾಯೆ ಕಂಡಂತೆ ಭಾಸವಾಯ್ತು."

"ನಿನ್ನೆಯ ಲೆಕ್ಕಗಳೆಲ್ಲ ಆಡಿಟ್ ಮಾಡಿದ್ದೀರ ತಾನೆ?"

"ನಿನ್ನೆ ಸ್ವಲ್ಪ ಕೆಲಸವಿತ್ತು. ಅದಕ್ಕೆ ಈಗ ಮಾಡ್ತಾ ಇದ್ದೀನಿ." ಅವನು ಧೂರ್ತ ನಗೆ ಚೆಲ್ಲಿದ.

"ನಿನ್ನೆ ಸಂಜೆ ಏನ್ಮಾಡ್ತಿದ್ರಿ ಬರೀದೆ. ನಿಮ್ಮ ಸಾಹೇಬ್ರು ಸಂಜೆಯೊಳಗೆ ಬರ್ತಾರೆ ನೆನಪಿರ್ಲಿ." ಅವಳು ಹೇಳುತ್ತಿದ್ದಂತೆ ಕಪ್ಪನೆಯ ದಪ್ಪ ವ್ಯಕ್ತಿ ರೂಮಿನೊಳಗೆ ಪ್ರವೇಶಿಸಿದ.

ಯಾರೀತ ಎನ್ನುವಂತಿದ್ದ ಅವಳ ನೋಟ ದಿಟ್ಟಿಸಿ "ಇವರು ನನ್ನ ರಿಲೇಟಿವ್ಸ್ ಆಗ್ಬೇಕು. ಇವರು ಇಲ್ಲಿನ ಯಜಮಾನಿ ಮಿಸೆಸ್ ಶ್ರೇಯಸ್." ಆತನ ನೋಟ ಅವಳಿಗೆ ಸ್ವಲ್ಪವೂ ಇಷ್ಟವಾಗಲಿಲ್ಲ. "ಅದೆಲ್ಲ ಇರ್ಲಿ, ರೋಸಿಗೆ ಏನಾಗಿತ್ತು. ಅದರ ಬಗ್ಗೆ ಗಮನ ಕೊಡೋಕೆ ಆಗ್ಲಿಲ್ವೇನು?"

"ನಿನ್ನೆ ರಾತ್ರ ಕೂಡ ಚೆನ್ನಾಗಿ ಇತ್ತು. ರಾತ್ರ ಫಾರಂ ತಿರುಗ್ತಾ ಇರ್ಬೇಕಾದ್ರೆ ಯಾವುದೋ ಬಳ್ಳಿ ಕಡಿದಿರಬೇಕು."

ಪ್ರಮೋದ್ ಸಾಧಾರಣ ವಿಷಯವೆಂಬಂತೆ ಹೇಳಿದ್ದು ಅವಳಿಗೆ ಸಿಟ್ಟು ತರಿಸಿತು.

"ರೋಸಿ ಬಹಳ ಒಳ್ಳೆಯ ನಾಯಿ. ಎಷ್ಟೋ ಬಾರಿ ಕಳ್ಳರನ್ನು ಹೆದರಿಸಿ ಕಚ್ಚಿ ಓಡಿಸಿತ್ತು. ಮೊಟ್ಟೆ ತಿನ್ನಲು ಬರುವ ಹಾವುಗಳನ್ನು ಕಚ್ಚಿ ಸಾಯಿಸಿತ್ತು. ಸಾಕಷ್ಟು ಸಲ ಮರಿ ಮಾಡಿ ಹಣ ಗಳಿಸಿಕೊಟ್ಟಿತ್ತು. ಶ್ರೇಯಸ್ ಬಹಳ ಬೇಜಾರುಪಟ್ಟು ಕೊಳ್ಳುವರು."

"ಬೇರೆ ನಾಯಿ ಇದೆ, ರಾಣಿ, ಜಿಮ್ಮಿ ಇವೆ ಫಾರಂ ಕಾಯಲು ಅವುಗಳನ್ನು ಬಿಟ್ಟರೆ ಆಯ್ತು." ಪ್ರಮೋದ್ ವಿನಾಕಾರಣ ಹಲ್ಲು ಕಿಸಿದಾಗ ಅವನ ಕಸಿನ್ ಬಾಯಿ ಹಾಕಿದ. "ಎಷ್ಟೆಂದರೂ ನಾಯಿ, ಬೇರೆ ಸಾಕಿದ್ರೆ ಆಯ್ತು. ಬೇಕಾದಷ್ಟು ವೆರೈಟಿ ಇವೆ." ಅವಳು ಅವನನ್ನೇ ತೀಕ್ಷ್ಣವಾಗಿ ನೋಡಿದಳು. ಆತನನ್ನು ಎಲ್ಲೋ ಕಂಡಂತೆ ಭಾಸವಾಯ್ತು ಎಲ್ಲಿರಬಹುದು. ಉಹ್ಞು ನೆನಪಾಗಲಿಲ್ಲ.

"ಎಲ್ಲಿ ಪುಸ್ತಕ ಕೊಡಿ ಇಲ್ಲಿ. ಇದೇನು ನಿನ್ನೆ ಇನ್ನೂರ ಇಪ್ಪತ್ತೈದು ಲೀಟರ್ ಹಾಲು ಆಗಿತ್ತಲ್ಲ ನೀವಿದರಲ್ಲಿ ನೂರೈವತ್ತು ಎಂದು ಎಂಟ್ರಿ ಮಾಡಿದ್ದೀರ. ಹಾಲು ಅಳೆಯುವಾಗ ನಿನ್ನೆ ನಾನಿದ್ದೆ. ಯಾಕಿಂಥ ಮೋಸ ಮಾಡ್ತಿದ್ದೀರ." ಅವಳು ಸಿಟ್ಟಿನಿಂದ ತಡೆಯಲಾರದೆ ಗದರಿದಳು.

"ಇಲ್ಲ, ನಿನ್ನೆ ಹಾಲು ಅಳೆದದ್ದೇ ನೂರೈವತ್ತು ಲೀಟರ್." ಆತ ವಾದಿಸತೊಡಗಿದ.

"ನೋಡಿ ಮಿ. ಪ್ರಮೋದ್ ನಿಮ್ಮ ಮೇಲೆ ಸಾಹೇಬ್ರಿಗೆ ಎಷ್ಟೊಂದು ನಂಬುಗೆ ಇದೆ. ಹತ್ತು ವರ್ಷದಿಂದ ಇದ್ದೀರಂತೆ. ಇಂಥ ಸುಳ್ಳು ವಾದ ಕೇಳಲು ನಾನೇನು ಮೂರ್ಖಳಲ್ಲ ಸ್ವಲ್ಪ ಎಚ್ಚರಿಕೆ ಇರಲಿ."

ಮೊಟ್ಟೆಗಳು, ಸಂಜೆ ಹಾಲಿನ ಲೆಕ್ಕ, ಫಾರಂನಲ್ಲಿ ಬೆಳೆದ ಹಣ್ಣುಗಳ ಲೆಕ್ಕ ಬರೀ ಮೋಸದಂತೆ ತೋರಿತು.

.(ಸಶೇಷ)

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.

* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಅಗತ್ಯವಿಲ್ಲ.

* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.

* 'ಪದರಂಗ' 'ಚಾಣಕ್ಯ ಸ್ಪರ್ಧೆ' ಮುಂತಾದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಅದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟು ಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.

* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.

* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸಂಖ್ಯೆ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬರಹಕ್ಕೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.

* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 13–9–92.

* ನಿಮ್ಮ 'ಲಾಟರಿ ಟಿಕೇಟ್' ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಖು ಮತ್ತು ಸಮಯ : ಶುಕ್ರವಾರ 21–8–92 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧೩೯

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛಿಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು ; ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಮೊಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ.

ಒಂದು ಪುಟದ ಮಿನಿ ಕಥೆ

ನೆನಪು

ವಿ. ಎಸ್. ಶ್ರೀನಿವಾಸ ಪ್ರಸನ್ನ

ಇದ್ದಕ್ಕಿದ್ದಂತ ರೈಲು ನಿಂತಿದ್ದನ್ನು ಕಂಡು ಆಶ್ಚರ್ಯಗೊಂಡ ರವಿ ವಾಚ್‌ನತ್ತ ದೃಷ್ಟಿ ಹರಿಸಿದಾಗ ಗಂಟೆ 12. ನಿಲ್ದಾಣ ಸಿಗುವ ಮುನ್ನವೇ ರೈಲು ನಿಂತಿದ್ದು ಆತನ ಕುತೂಹಲವನ್ನು ಕೆರಳಿಸಿತ್ತು. ರೈಲಿನಿಂದಿಳಿದಿದ್ದ ಜನರನ್ನು ಕಿಟಕಿಯಿಂದ ಕಂಡ ರವಿ ತಾನೂ ಅವರಂತೆ ಕಾರಣ ತಿಳಿಯಲು ಬಯಸಿ ಕೆಳಗಿಳಿದ.

ಗಾರ್ಡ್ ಹಿಡಿದಿದ್ದ ಲಾಂದ್ರದ ಬೆಳಕಿನಲ್ಲಿ ಅಲ್ಲಿನ ದೃಶ್ಯವನ್ನು ಕಂಡ ಕೆಲ ಪ್ರಯಾಣಿಕರು ಹೇಳುತ್ತಿದ್ದರು "ಅಯ್ಯೋ ಪಾಪ, ರೈಲ್‌ಗೆ ಸಿಕ್ಕಿ ಸತ್ಹೋಗಿದ್ದಾನೆ."

"ಕೆಂಪು ಚೇಲ ಹಿಡಿದಿರೋ ಕೈ ನೋಡಿ ಹೇಗೆ ಕಟ್ಟಾಗಿದೆ." ಜನರಿಂದ ಹೊರಟ ವಿಧವಿಧವಾದ ಪ್ರತಿಕ್ರಿಯೆಯನ್ನು ಕೇಳಿ ತಾನೂ ಆ ವ್ಯಕ್ತಿಯನ್ನು ನೋಡಲು ಅಪಘಾತದ ಸ್ಥಳದತ್ತ ಹೋದಾಗ ಆತನನ್ನು ಕಂಡು ಅದುರಿಬಿದ್ದ ರವಿ.

ಹಳೆಯ ನೆನಪುಗಳನ್ನು ಆ ಹೆಣ ರವಿಯ ಸ್ಮರಣೆಗೆ ತಂದಿತು. ತೇಜ, ರವಿ ಬಾಲ್ಯ ಸ್ನೇಹಿತರು. ಭಿಕ್ಷೆ ಬೇಡಿ ಹಣ ಗಳಿಸುವುದು ಅವರ ದಿನಚರಿಯಾಗಿತ್ತು. ಬೇಡಿದ್ದರಲ್ಲಿ ಬಂದಿದ್ದನ್ನು ಹಂಚಿ ತಿನ್ನುವುದನ್ನು ಅವರು ರೂಢಿಸಿಕೊಂಡಿದ್ದರು. ಅಂದು ರವಿ ಬರಿಗೈಲಿ ಬಂದಿದ್ದರೂ ತೇಜ 20 ರೂ. ಗಳಿಸಿ ತಂದಿದ್ದರಿಂದ ಅವರು ಜಾತ್ರೆಗೆ ಹೋಗಬೇಕೆಂದಿದ್ದ ಕನಸು ಭಗ್ನಗೊಳ್ಳಲಿಲ್ಲ.


ಮರುದಿನವಿಡೀ ಜಾತ್ರೆಯಲ್ಲಿ ಸುತ್ತಾಡಿದ್ದೇ ಅಲ್ಲದೆ ಜೋಡಿಯಾಗಿ ನಿಂತು ಫೋಟೋವೊಂದನ್ನು ತೆಗೆಸಿಕೊಂಡು ಸ್ಟುಡಿಯೋದಿಂದ ಹೊರಬಂದಾಗ ಅವರ ಬಳಿ ಉಳಿದದ್ದು ಕೇವಲ 1 ರೂ. ನಾಣ್ಯ.

"ರವಿ ಈ ಒಂದು ರೂಪಾಯಿಯಿಂದ ಲಾಟರಿ ತೊಗೋಳ್ಳೋಣ, ಬಂದ್ರೆ ಇಬ್ಬರಿಗೂ 50, 50" ಎಂದು ರವಿಯ ಉತ್ತರಕ್ಕೂ ಕಾಯದೆ ಟಿಕೇಟೊಂದನ್ನು ಖರೀದಿಸಿದ್ದ ತೇಜ. ಅದನ್ನು ರವಿಗೆ ನೀಡುತ್ತ "ರವಿ ಮುಂದಿನ ವಾರ ಡ್ರಾ, ಅಲ್ಲಿಯವರ್ಗೂ ಇದು ನಿನ್ನ ಹತ್ರಾನೇ ಇರ್ಲಿ" ಎಂದಿದ್ದ.

ವಾರದನಂತರ ರವಿ ಕಾಣೆಯಾದ ಕಾರಣವನ್ನು ತೇಜ ಊಹಿಸದೇ ಹೋದರೂ ತನ್ನ ಸ್ನೇಹಿತ ಎಲ್ಲಿದ್ದಾನೋ ಏನಾದನೋ ಎಂದು ಹಲುಬುತ್ತಲೇ ಜೀವನವನ್ನು ಸಾಗಿಸಹತ್ತಿದ್ದ. ತಾವು ತೆಗೆಸಿಕೊಂಡಿದ್ದ ಫೋಟೋ ಪ್ರತಿಯೊಂದನ್ನು ತನ್ನ ಬಳಿಯೇ ಇಟ್ಟುಕೊಂಡು ದಿನವೂ ಅದನ್ನೊಮ್ಮೆ ನೋಡಿ ಸ್ನೇಹಿತನನ್ನು ನೆನಪು ಮಾಡಿಕೊಳ್ಳುವುದು ತೇಜನ ಪರಿಪಾಠವಾಯಿತು.

ಅಂದು ಎಂದಿನಂತೆ ರಾತ್ರಿ ತನ್ನ ಮುರುಕಲು ಗುಡಿಸಿಲಿನತ್ತ ಹೊರಟಿದ್ದ ತೇಜನಿಗೆ ರೈಲ್ವೇ ಹಳಿ ಕಿತ್ತು ಬಂದಿರುವುದು ಕಂಡು ಬಂದಿತ್ತು. ಹತ್ತಿರದ ರೈಲ್ವೇ ನಿಲ್ದಾಣಕ್ಕೆ ಆ ಸುದ್ದಿಯನ್ನು ಮುಟ್ಟಿಸಲು ಹೊರಟಿದ್ದವನಿಗೆ ರೈಲು ಶಬ್ದ ಹತ್ತಿರದಲ್ಲೇ ಕೇಳಿ ಬರಲು ತನ್ನ ಹರಕಲು ಕೆಂಪು ಚೇಲವನ್ನೇ ಗಾಳಿಯಲ್ಲಿ ಬೀಸುತ್ತ ರೈಲನ್ನು ನಿಲ್ಲಿಸಲು ಹಳಿಯ ಮೇಲೆ ಶಬ್ದ ಬರುತ್ತಿದ್ದ ದಿಕ್ಕಿನತ್ತ ಓಡತೊಡಗಿದ. ಓಡುತ್ತ ಆತ ಎಡವಿ ಬೀಳುವ ವೇಳೆಗೆ ರೈಲು ಆತನನ್ನು ಸಮೀಪಿಸಿ ಆಗಿತ್ತು. ಬ್ರೇಕ್ ಹಾಕುವಷ್ಟರಲ್ಲಿ ಕೈಚೇಲ ಹಿಡಿದಿದ್ದ ಕೈ ಆತನ ಪ್ರಾಣದೊಂದಿಗೆ ಹಾರಿ ದೂರದಲ್ಲಿ ಬಿದ್ದಿತ್ತು. ಅನತಿ ದೂರದಲ್ಲಿಯೇ ಹಳಿ ಮುರಿದಿರುವುದು ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಅಪಘಾತವನ್ನು ತಡೆಯಲು ಹೋಗಿ ತಾನೇ ಅಪಘಾತಕ್ಕೆ ಸಿಲುಕಿದ್ದ ತೇಜ ರೈಲಿನಲ್ಲಿರುವ ತನ್ನ ಮಿತ್ರನ ಪ್ರಾಣವನ್ನು ಉಳಿಸಿದ್ದ. ಆತನ ಪಕ್ಕದಲ್ಲಿ ಬಿದ್ದಿದ್ದ ಫೋಟೋವನ್ನು ಕಂಡ ರವಿಗೆ ತಾನು ತೇಜನಿಗೆ ಮೋಸ ಮಾಡಿ ಲಾಟರಿ ಹಣವನ್ನೆಲ್ಲ ಹೊಡೆದುಕೊಂಡು ಹೋಗಿದ್ದು ನೆನಪಿಗೆ ಬಂದಿತು. ಆತನ ಹಣವನ್ನೆಲ್ಲ ತಾನು ಕಬಳಿಸಿ ಬಾಂಬೆಗೆ ಓಡಿಹೋದರೂ ತನ್ನ ನೆನಪನ್ನು ಸದಾ ಹೊತ್ತು ತನ್ನ ಫೋಟೋವನ್ನೂ ಬ್ಯಾಗ್ ನಲ್ಲಿಯೇ ಇಟ್ಟುಕೊಂಡಿದ್ದ ತೇಜನ ಹೆಣವನ್ನು ಕಂಡು ರವಿಯ ಕಣ್ಣಲ್ಲಿ ಕಂಬನಿ ಕಾಣಿಸಿಕೊಂಡಿತು.

ಅಳಿಯದ ಪಿಡುಗು



ಹುಡುಕುತಿಹರು
ನನಗಾಗಿ ವರವೊಂದನ್ನು
ವರದಕ್ಷಿಣೆ ಪಡೆಯದೆ ಮದುವೆ
ಆಗುವ ಗಂಡನ್ನು

ವರದಕ್ಷಿಣೆ ಪಡೆಯದ ಗಂಡುಗಳು
ಇಲ್ಲಿ ಸಿಗುವರೇನು
ಹುಡುಕಿದಂತೆ ಹುಲ್ಲಿನ ಬಣವೆಯಲ್ಲಿ
ಸೂಜಿಯೊಂದನು

ಕೇಳುವರೆಲ್ಲರು ನಿಮ್ಮ ಹುಡುಗಿ
ಇರುವಳೇನು ನೌಕರಿಯಲ್ಲಿ
ಇಲ್ಲದಿದ್ದರೆ ಕೊಡುವಿರೆಷ್ಟು
ಹಣವನ್ನು ಮದುವೆಯಲ್ಲಿ

ಹೀಗೆ ದಿನ ಕಳೆದು ಹೋಗಿ
ಬೆಳ್ಳಿ ಕೂದಲು ಬಂತು ತಲೆಯಲ್ಲಿ
ಮದುವೆಯ ಕನಸು ಬತ್ತಿ
ಹೋಗಿದೆ ನನ್ನಲ್ಲಿ

ಗೃಹಿಣಿಯಾಗದೆ ಕನ್ಯೆಯಾಗಿಯೇ
ಬದುಕುವೆನೆಂಬ ಛಲ ಬೆಳೆದಿದೆ
ನನ್ನಲ್ಲಿ.

ಶಾ. ನ. ಶ್ರೀನಾಥ್

ಸ್ವಚ್ಛಂದ ಸ್ವಪ್ನಗಳು

ಧಾರಾವಾಹಿ–೩೦

ತಮಿಳು ಮೂಲ :
ಪಿ. ಕೆ. ಪ್ರಭಾಕರ್

ಕನ್ನಡಕ್ಕೆ :
ಕಲ್ಯಾಣಿ ಮೂರ್ತಿ
ರಾಮನಾಥಪುರ

"ನಿನಗೊಂದು ಗಾದೆ ಗೊತ್ತ ವಿಜಯ್, ಯಾರೋ ಇಟ್ಟ ಬೆಂಕಿ ಮನೆ ಹತ್ತಿ ಉರಿಯುತ್ತಿದೆ. ಮನೆ ಹತ್ತಿ ಉರಿಯುತ್ತಿರುವಾಗ ಬೆಂಕಿ ಇಟ್ಟವರು ಯಾರೆಂದು ಹುಡುಕುವುದು ವಿವೇಕವೋ, ಪೂರ್ಣ ಉರಿದು ಹೋಗುವಷ್ಟರಲ್ಲಿ ಅದನ್ನು ಆರಿಸುವುದು ವಿವೇಕವೋ? ಹೇಗಾದರೂ ಬೆಂಕಿಯನ್ನು ಆರಿಸಬೇಕಾದದ್ದು ಮುಖ್ಯ."

"ಅದಕ್ಕೆ?"

"ಅದಕ್ಕೆ ನೀನಾಗಿ ಯಾವ ಪ್ರಯತ್ನವನ್ನೂ ಮಾಡಿಲ್ಲ. ಅವರೋ ಮನ ಬಿಚ್ಚಿ ಮಾತನಾಡ ಬೇಕೆಂದು ಫೋನ್ ಮಾಡಿದರೂ ಹಟದಿಂದ ಫೋನ್ ಲೈನನ್ನು ಕಟ್ ಮಾಡಿದ್ದೀಯಲ್ಲ ಇದು ಎಂತಾ ನ್ಯಾಯ?"

"ಹೇಳದೆ ಕೇಳದೆ ಪತ್ರ ಬರೆದಿಟ್ಟು ಮನೆ ಬಿಟ್ಟು ಹೋಗುವುದು ಯಾವ ನ್ಯಾಯ?"

"ಹೋಗು ಎಂದು ಹೇಳಿದ್ದು ನೀನೇ ಅಲ್ಲವೆ?"

"ಕೋಪದಲ್ಲಿ ಒಂದು ಮಾತನ್ನು ಆಡಬಾರದೇ?"

"ನಿನ್ನ ಹೆಂಡತಿಯು ಅಂತಾ ಮಾತನ್ನು ಸಹಿಸಲಾರಳು ಎಂಬುದೂ ಗೊತ್ತಿರಲಿಲ್ಲವೆ? ಇಷ್ಟು ದಿನಗಳಾದರೂ ಆಕೆಯ ಆಸೆ, ಆತ್ಮಾಭಿಮಾನ ತಿಳಿಯಲಿಲ್ಲವೆ? ಮದುವೆಗೆ ಮುಂಚೆಯೇ ಅದರ ಪರಿಚಯ ಆಗಿರಲಿಲ್ಲವೆ. ಇಂತಾ ಪತ್ನಿಯನ್ನೇ ಪಡೆಯಬೇಕೆಂದು ನನ್ನ ಆಸೆಯಾಗಿತ್ತು ಎಂದು ನನ್ನ ಬಳಿ ಸಂತೋಷವಾಗಿ ಹೇಳಿಕೊಂಡಿದ್ದ?"

ವಿಜಯ್‌ಕುಮಾರ್ ಏನೂ ಮಾತನಾಡದೆ ಕಾರ್ ಓಡಿಸುತ್ತಿದ್ದ. "ಅವರಮ್ಮ ಹೇಳಿದಾಗಿನಿಂದ ನನಗೆ ಹೇಗೇಗೋ ಆಗುತ್ತಿದೆ ವಿಜಯ್. ಆಕೆ ಮಾಡಿದ್ದೆಲ್ಲ ನ್ಯಾಯವೆಂದೂ ನಾನು ಹೇಳಲಾರೆ. ನಾನಿನ್ನೂ ಅವರೊಂದಿಗೆ ನೇರವಾಗಿ ಮಾತನಾಡಿಲ್ಲ. ಆದರೆ ನಿಮ್ಮ ಕಂಡೀಶನ್ ನನಗೆ ಆಶ್ಚರ್ಯ ತರ್‍ತಾ ಇದೆ. ಒಂದು ನಿಮಿಷ ಕಾರನ್ನು ಸೈಡಿಗೆ ನಿಲ್ಲಿಸು ಹೇಳ್ತೀನಿ." ನಿಲ್ಲಿಸಿದ.

"ನನ್ನನ್ನು ನೋಡಿ ಹೇಳು, ಕರೆಟ್ಟಾಗಿ ಹೇಳಬೇಕು. ಈ ನಿಮಿಷವೂ ನೀನು ನಿನ್ನ ಹೆಂಡತಿಯನ್ನು ಪ್ರೀತಿಸುತ್ತೀಯ, ಅಥವಾ?"

ವಿಜಯ್‌ಕುಮಾರ್ ಈ ಪ್ರಶ್ನೆಯಿಂದ ಸ್ವಲ್ಪ ತಡವರಿಸಿದ.

"ಇದೆಂತಾ ಪ್ರಶ್ನೆ?"

"ಜಾರಿಕೊಳ್ಳಬೇಡ. ನನ್ನ ಮುಖ ನೋಡಿ ಹೇಳು. ನಿನ್ನ ಹೆಂಡತಿಯನ್ನು ನೀನು ಈಗಲೂ ಈ ನಿಮಿಷವೂ ಪ್ರೀತಿಸುತ್ತೀಯ ಅಥವಾ ದ್ವೇಷಿಸುತ್ತೀಯ?"

"ಎರಡೂ."

"ಯಾವುದಾದರೂ ಒಂದು ಹೇಳು, ಎರಡೂ ಸಾಧ್ಯವಿಲ್ಲ."

"ನೋಡು ಇಳಂಗೋ ಪದ್ಮಿನಿಯನ್ನು ಮದುವೆಗೆ ಮುಂಚೆಯೇ ಭೇಟಿಯಾಗಿ ಮಾತಾಡಿ, ಪಳಗಿಯೇ ಮದುವೆಯಾದೆ. ಮಧ್ಯೆ ಎಷ್ಟೋ ಸಣ್ಣ ಪುಟ್ಟ ಕಾರಣಗಳಿಗೆ ನಾನು ಕಿವಿಗೊಡಲಿಲ್ಲ. ಪ್ರೀತಿಯಿಂದಲೇ ಇದ್ದೆ. ಈಗಲೂ ಅವಳು ಮಾಡಿರುವ ಕೆಲಸಕ್ಕೆ ಅವಳಲ್ಲಿ ಬಹಳ ಕೋಪವೇ ಹೊರತು ಅವಳು ನನ್ನ ಹೆಂಡತಿಯಲ್ಲ, ಅವಳಿಗೂ ನನಗೂ ಯಾವ ಸಂಬಂಧವೂ ಇಲ್ಲ ಎನ್ನುವಷ್ಟು ದುಷ್ಟನಲ್ಲ. ಅವಳ ಸ್ವತಂತ್ರತೆಯ ಭಾವನೆ, ಆತ್ಮಾಭಿಮಾನ ಎಲ್ಲವೂ ಇರಬೇಕಾದದ್ದೆ. ಅದೇ ಸಮಯ ಹಟ, ಸ್ವಲ್ಪ ಅಲಕ್ಷ್ಯವೂ ಇದೆಯಲ್ಲ ಅದೇ ಅವಳಲ್ಲಿ ದ್ವೇಷ ತರುವಂತೆ ಮಾಡುತ್ತದೆ."

"ಅದೆಂತಹ ಹಟ, ದ್ವೇಷವೆಂದು ಹೇಳ್ತೀಯ?"

"ಅದೇ ಹೇಳಿದೆನಲ್ಲ. ನಿನ್ನ ಸಂಬಳದ ವಿಷಯವಾಗಿ ಅಪ್ಪ ಏನು ಹೇಳಿದರು ಎಂಬುದನ್ನು ಪತ್ರದಲ್ಲಿ ಬರದಿದ್ದೇನೆಂದು ಬರೆದಿಟ್ಟನಂತರವೂ, ಇವಳು ನೇರವಾಗಿ ತಂದೆಯ ಜೊತೆ ಮಾತನಾಡುವ ಅವಶ್ಯಕತೆ ಏನಿತ್ತು?"

"ಆಯ್ತು, ಅಲಕ್ಷ್ಯ ಮಾಡಿದ್ದು?"

"ನಮ್ಮಮ್ಮ ವಿಷಯವನ್ನು ವಿವರಿಸಿ ಹೇಳಿದ ನಂತರವೂ ರಜೆ ಬರೆಯದೆ ಆಫೀಸಿಗೆ ಹೋಗಬೇಕಿತ್ತೆ? ನಾನು ಆತುರದಲ್ಲಿ ಒಂದೆರಡು ಮಾತನಾಡಿದೆ ಎಂದ ಮಾತ್ರಕ್ಕೆ ಮನೆ ಬಿಟ್ಟೇ ಹೊರಡಬೇಕೆ? ಅದೂ ನನಗೆ ಮಾತ್ರ ಪತ್ರ ಬರೆದಿಟ್ಟು. ಹಾಗಾದರೆ ಮನೆಯಲ್ಲಿರುವ ನನ್ನ ಅಪ್ಪಾ ಅಮ್ಮಾನಿಗೆ ಯಾವ ಮರ್ಯಾದೆ ಇದೆ?"

ಇಳಂಗೋ ಏನೂ ಹೇಳದೆ ಸುಮ್ಮನಿದ್ದ.

"ಏನು ಉತ್ತರವೇ ಇಲ್ಲ."

"ನೀನು ಹೇಳುವುದಕ್ಕೆಲ್ಲ ಸರಿಯಾದ ಉತ್ತರ ಸಿಸ್ಟರ್ ಬಳಿ ಇದ್ದೇ ಇದೆ ಎಂದೆನಿಸುತ್ತದೆ. ಅದನ್ನು ತಿಳಿಯದೆ ನಾನು ಹೇಗೆ ಉತ್ತರಿಸಲಿ? ಆದರೆ ಒಂದು, ಆಕೆ ಕೆಲಸವನ್ನು ಬಿಟ್ಟರೆ ಇದೆಲ್ಲ ಸರಿಹೋಗುವುದೇನು?"

"ಕುಟುಂಬದ ನಿರ್ವಹಣೆಯನ್ನು ಗಮನಿಸುವಾಗ ಒಂದು ರೀತಿಯ ವಾತ್ಸಲ್ಯ ಉಂಟಾಗಬಹುದೆಂದು ತಂದೆಯ ಅಭಿಪ್ರಾಯ."

"ಅಪ್ಪಾ ಅವರ ಅಭಿಪ್ರಾಯವಿರಲಿ, ನಿನ್ನ ಅಭಿಪ್ರಾಯವೇನು?"

"ಅಪ್ಪಾ ಹೇಳುವುದರಲ್ಲಿ ನ್ಯಾಯವಿದೆಂತ ಕಾಣಿಸುತ್ತದೆ."

"ನಾನು ಏನು ಹೇಳ್ತೇನೆ ಗೊತ್ತಾ?"

"ಏನು?"

"ನಿನ್ನ ಮನೆಯಲ್ಲಿ ಅದೂ ಇದೂಂತ ಹೇಳಿ ನಿನ್ನ ಬುದ್ಧಿವಂತಿಕೆಯನ್ನು ಯಾವುದೋ ಡ್ರೈಕ್ಲೀನಿಗೆ ಕೊಟ್ಟು ಕ್ಲೀನ್ ಮಾಡಿದ್ದಾರೆ."

"ಇಳಂಗೋ!"

"ಏಕಪ್ಪಾ ಅರಚುತ್ತೀಯ, ಸತ್ಯ ಕಹಿಯಾಗಲೂ ಸಾಧ್ಯ ಅರ್ಥವಾಯ್ತು. ಈಗ ಎದ್ದಿರುವ ತೊಂದರೆ, ಸಮಸ್ಯೆ ಗಂಡ ಹೆಂಡತಿಯರದ್ದಲ್ಲ. ಅತ್ತೆ ಮಾವ ಇವರಿಂದ ಬಂದಿರುವಂತಾದ್ದು. ಬುದ್ಧಿವಂತಿಕೆಯಿಂದ ಎಲ್ಲರನ್ನು ಸಮಾಧಾನ ಗೊಳಿಸುವುದನ್ನು ಬಿಟ್ಟು ತಂದೆಯಲ್ಲಿನ ಭಯ, ಆತುರದಿಂದ ಇನ್ನೂ ಗೋಜಲು ಮಾಡಿಕೊಂಡಿರುವೆ

ಇಲ್ಲಿಯವರೆಗೆ...

ಪದ್ಮಿನಿ ಆಧುನಿಕ ಮನೋಭಾವದ ಹೆಣ್ಣು, ತಾನು ಮೆಚ್ಚಿದ ವಿಜಯಕುಮಾರ್ ಜೊತೆಗೆ ಮದುವೆ ಆಗುತ್ತಾಳೆ. ಅಲ್ಲಿ ಎಲ್ಲರೂ ಕಟ್ಟಾ ಸಂಪ್ರದಾಯವಾದಿಗಳು. ಪದ್ಮಿನಿ ಹೊಂದಿಕೊಳ್ಳಲೆತ್ನಿಸುತ್ತಾಳೆ. ಆದರೆ ನಿಷ್ಠುರಳಾಗುತ್ತಾಳೆ. ...ಮುಂದೆ ಓದಿ

ಅಷ್ಟೆ ಈಗ ವಿಷಯ ಈಗೋ ಕ್ಲಾಷಿನಲ್ಲಿ ಬಂದು ನಿಂತಿದೆ. ಆತ್ಮಾಭಿಮಾನದ ಹೋರಾಟ. ನೀನೋ ನಾನೋ ಯಾರು ನೋಡೇ ಬಿಡೋಣವೆಂಬ ಪ್ರೈಮರಿ ಸ್ಕೂಲಿನ ಜಗಳದಂತೆ. ಇದರಲ್ಲಿ ನಿಮ್ಮಿಬ್ಬರ ನಿಕಟತೆ, ಆತ್ಮೀಯತೆ ಸಿಕ್ಕಿ ಜಜ್ಜಿ ಹೋಗುತ್ತಿರುವುದರ ಅರ್ಥವಾಗುತ್ತಿಲ್ಲವೆ ನನಗೆ?''

"ಏನು ನೀನು ನನ್ನ ಮೇಲೆ ತಪ್ಪು ಹೊರಿಸುತ್ತಿರುವೆಯಲ್ಲ? ನಾನು ಡೀಟೈಲಾಗಿ ಹೇಳಾಯ್ತಲ್ಲ. ನನ್ನ ಆ ಎರಡು ಪಾಯಿಂಟ್‌ಗಳಿಗೆ ಉತ್ತರ ಹೇಳು.''

"ಹೇಳ್ತೀನೆ, ಅಂದ್ಮೇಲೆ ಈ ಪ್ರಾಬ್ಲಮ್ಮನ್ನು ನಿಮ್ಮ ತಂದೆಗೇ ಒಪ್ಪಿಸಿದ್ದೀಯ.''

"ಇದು ಸಂಸಾರದ ಪ್ರಶ್ನೆ. ನಮ್ಮ ಸಂಸಾರಕ್ಕೆ ಹಿರಿಯರು ಅಪ್ಪಾನೇ. ಅವರು ತೀರ್ಮಾನ ಮಾಡುವುದೇ ರೂಡಿಯಲ್ಲಿ ಬಂದಿರುವುದು.''

"ಕೋಪಿಸಿಕೊಳ್ಳಬೇಡ, ಮದುವೆಗೆ ಮುಂಚೆ ನೀನೂ ಸಿಸ್ಟರ್ ಭೇಟಿಯಾಗಿದ್ದರಲ್ಲ, ಅದು ನಿಮ್ಮ ತಂದೆಗೆ ತಿಳಿದೇ ನಡೆದ ಕೆಲಸವೇ ಅಥವಾ ಇಂದಿನವರೆಗೂ ತಿಳಿಯಲೇ ಇಲ್ಲವೆ?''

"ಅದು...'' ತಡವರಿಸಿದ ವಿಜಯ್‌ಕುಮಾರ್.

"ಇಷ್ಟು ವರ್ಷಗಳಿಂದ ನನ್ನೊಂದಿಗೆ ಇದ್ದು ನಿನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲವೆಂದರೆ ಅದಕ್ಕೆ ಹೆಸರು ನಿಕಟತೆ, ಸ್ನೇಹವೇ ಅಲ್ಲ. ನಿನ್ನ ದೂರಾಲೋಚನೆ, ಪಕ್ವವಾದ ಮನಸ್ಸು ಈಗ ಎಲ್ಲೋ ಮುಳುಗಿ ಹೋಗಿದೆ. ಕಾರಣ ಇದ್ದಕ್ಕಿದ್ದಂತೆ ಪತ್ನಿಯಲ್ಲಿ ಉಂಟಾಗಿರುವ, ಕಣ್ಣಾ ಮುಚ್ಚಾಲೆಯಂತಹ ದ್ವೇಷ. ಆಕೆಯನ್ನು ಕೆಲಸಕ್ಕೆ ರಾಜೀನಾಮೆ ಕೊಡು ಎನ್ನುವುದೇ ಆಕೆಗೆ ಶಿಕ್ಷೆ ಎಂದು ಅಂದುಕೊಂಡಿರುವೆ. ಅದರಲ್ಲಿ ನಿನ್ನ ಧೋರಣೆಯನ್ನು ತೋರಿಸಬೇಕೆಂದಿರುವೆ. ತಪ್ಪು ತಂದೆಯ ಮೇಲೆ ಹಾಕುತ್ತಿರುವೆ. ಮೂರ್ಖ, ಇದು ನಿನ್ನ ಜೀವನ. ತೀರ್ಮಾನಿಸಬೇಕಾದವ ನೀನು. ನೀವು ಸಿಸ್ಟರು ಇಬ್ಬರೂ ಮನಬಿಚ್ಚಿ ಮಾತಾಡಿ. ಆತ್ಮ ಗೌರವವೆಂದು ಕೂರಬೇಡ. ನಾಳೆ ಆಕೆಗೆ ಫೋನ್ ಮಾಡು, ಮಾತಾಡು. ಏನು?''

"ಸಾರಿ ಇಳಂಗೋ, ಬೇರೆ ಮಾತಾಡೋಣ. ದೆಹಲಿಯಲ್ಲಿ ಚಳಿ ಹೇಗೆ?'' ಕೆಲಸಮಯ ಮೌನವಾಗಿದ್ದ ಇಳಂಗೋ ಕಾರಿನ ಬಾಗಿಲು ತೆರೆದು ಕೆಳಗೆ ಇಳಿದ.

"ಇಳಂಗೋ, ಏಕೆ ಇಳಿದುಬಿಟ್ಟೆ ಹಸಿವು ಎಂದೆ. ಹೋಟೆಲಿಗೆ ಹೋಗುವುದು ಬೇಡವೆ?''

"ಥ್ಯಾಂಕ್ಸ್. ದೆಹಲಿಯಲ್ಲಿ ಚಳಿ ಜಾಸ್ತೀನೆ ಮದ್ರಾಸಿನಲ್ಲಿ ಉಷ್ಣ, ಆಮೇಲೆ ಭೇಟಿಯಾಗೋಣ.''

ಇಳಂಗೋ ಬಾಗಿಲನ್ನು ಮುಚ್ಚಿ ಎದುರಿನಲ್ಲಿದ್ದ ಬಸ್‌ಸ್ಟಾಪಿನತ್ತ ನಡೆದ. ಕೆಲಕ್ಷಣ ಅವನನ್ನೇ ದಿಟ್ಟಿಸಿ ಕಾರ್ ಸ್ಟಾರ್ಟ್ ಮಾಡಿದ ವಿಜಯಕುಮಾರ್.

ಮನೆಗೆ ಬಂದು ಸೀರೆ ಬದಲಿಸಿ ಹ್ಯಾಂಡ್‌ಲ್ಯೂಮ್ ಸೀರೆ ಉಟ್ಟುಮುಖ ತೊಳೆದಳು ಪದ್ಮಿನಿ. ಚಂದ್ರು, ಅಪ್ಪ ಇನ್ನೂ ಬಂದಿರಲಿಲ್ಲ. ಹಾಲ್‌ನಲ್ಲಿ ಕುಳಿತು ಭವಾನಿಗೆ ಗೋರಂಟಿ ಹಾಕುತ್ತಿದ್ದಳು ಅಮ್ಮಾ. ಗಂಟೆ ಆರನ್ನು ಸಮೀಪಿಸುತ್ತಿತ್ತು. ಪದ್ಮಿನಿ ಕೈಯಲ್ಲಿ ಯಾವುದೋ ಪೆಯಿಂಟಿಂಗ್ ಪುಸ್ತಕ ಹಿಡಿದು ಸೋಫಾದಲ್ಲಿ ಕುಳಿತಳು.

"ನೀನು ಗೋರಂಟಿ ಹಚ್ಚಿಕೋ ಅಕ್ಕಾ.''

"ಬೇಡ.''

"ಏಕೆ ಬೇಡಾಂತಿಯಾ?'' ಎಂದಳು ಅಮ್ಮಾ.

"ಗೋರಂಟಿ ಹಚ್ಚಿಕೊಂಡು ಯಾರನ್ನು ಮೆಚ್ಚಸಲಿ?'' ಎಂದು ಕೇಳಬೇಕೆಂದಿದ್ದವಳು ತಡೆದು "ಬೇಡಾಮ್ಮಾಂದ್ರೆ ಸುಮ್ಮನಿರು'' ಎಂದಳು ಸಿಡಸಿಡನೆ.

"ಅಳಿಯಂದಿರ ಜೊತೆ ಮಾತನಾಡಿದೆಯಾ?''



"ಇಲ್ಲ" ಎಂದಳು ಪುಸ್ತಕದ ಹಾಳೆಗಳನ್ನು ತಿರುಗಿಸುತ್ತಲೇ.

"ಏಕೆ, ಊರಲ್ಲಿ ಇಲ್ಲವಂತಾ?"

"ಫೋನ್ ಮಾಡಿ ಮಾತನಾಡಿದೆ. ನನ್ನ ತಂದೆ ನಿನ್ನ ತಂದೆ ಮಾತನಾಡಿದ್ದೇ ಸಾಕು ಎಂದರು."

"ಅಯ್ಯೋ ಅಷ್ಟೊಂದು ಕೋಪದಲ್ಲಿದ್ದಾರೇನು?"

"ನಾಲ್ಕು ಜನ್ಮಕ್ಕೂ ಮರೆಯಲಾಗದ ಕೆಲಸ ಮಾಡಿದ್ದೇನಂತೆ."

"ಹೀಗೆ ಇಬ್ಬರೂ ಹಟ ಮಾಡಿದರೆ ಹೇಗಮ್ಮ?"

"ನಾನೇನು ಹಟ ಮಾಡಿದೆ, ಈಗ ನಾನೇ ಅಲ್ಲವೆ ಫೋನ್ ಮಾಡಿದ್ದು."

"ಹೇಗಾದರೂ ಪ್ರಾಬ್ಲಂ ಸಾಲ್ವ್ ಆಗಬೇಕು ಎಂಬ ಹೆದರಿಕೆ ಇಲ್ಲವೇನು?"

"ಕಾಡು ಮೃಗದಂತೆ ನನಗೆ ಕೋಪವಿಲ್ಲ. ನಡೆದದ್ದನ್ನು ದೊಡ್ಡ ಹಳ್ಳವೆಂದುಕೊಂಡಿರಲಿಲ್ಲ ಒಂದು ಸೀಳು ಅಂದುಕೊಂಡಿದ್ದು. ಸರಿ ಮಾಡಬೇಕೆಂದೇ ಇರುವೆ. ಅದಕ್ಕೆ ಫೋನ್ ಮಾಡಿದೆ."

"ಅದನ್ನೇ ಹಟವೆಂದದ್ದು. ಪ್ರಾಬ್ಲಂ ಸಾಲ್ವಾಗಬೇಕೆಂದುಕೊಂಡಿರುವ ನಿನಗೆ ಫೋನ್‌ನಲ್ಲಿ ಎಂತಾ ಮಾತು. ನಿನಗೆ ಆ ಮನೆಯಲ್ಲಿ ಕಾಲಿಡಲು ಹಕ್ಕಿಲ್ಲವೇನೂ, ನೇರ ಮನೆಗೆ ಹೋಗಿ ಮಾತನಾಡುವುದನ್ನು ಬಿಟ್ಟು"

"ಅವರು ಯಾವ ಮೂಡಿನಲ್ಲಿದ್ದಾರೋ ಏನೋ ಎಂಬುದನ್ನು ತಿಳಿಯದೆ ಆ ಮನೆಗೆ ನಾನು ಹೇಗಮ್ಮಾ ಹೋಗಲಿ?"

"ಈಗ ಅವರ ಮೂಡ್ ತಿಳಿದು ಹೋಯ್ತೇನು?"

"ತಿಳಿಯಿತು. ಅವರಿನ್ನೂ ಯಥಾಸ್ಥಿತಿಗೆ ಬಂದಿಲ್ಲ. ಈಗ ನೇರವಾಗಿ ಮಾತನಾಡಿಯೂ ಪ್ರಯೋಜನವಾಗಲಾರದು. ಒಂದೊಂದು ಸಲ ಕೋಪ ಬಂದರೂನೂ ಅವರನ್ನು ಜ್ಞಾಪಿಸಿಕೊಂಡಾಗ ಅಯ್ಯೋ ಪಾಪ ಅನ್ನಿಸುತ್ತೆ."

"ನಾನು ನಿನ್ನ ಬಗ್ಗೆ ಪರಿತಾಪ ಪಡುತ್ತಿ[...] ನೀನು ಅವರ ಬಗ್ಗೆ. ನನಗೆ ಅಳುವುದೇ ನಗುವುದ[...] ಅರ್ಥವಾಗುತ್ತಿಲ್ಲ."

ಪದ್ಮಿನಿ ಮೌನವಾಗಿ ಪುಸ್ತಕ ನೋ[...] ತ್ತಿದ್ದಳು.

"ಪದ್ಮಿನಿ ನಿನ್ನ ತಪ್ಪು ಇಲ್ಲವೇ ಇಲ್ಲವೇನು[...]

"ಹೇಳದೆ ಪತ್ರ ಬರೆದಿಟ್ಟು ಬಂದ[...] ತಪ್ಪು. ನಾನು ಮನುಷ್ಯಳಲ್ಲವೇ, ನಾನೂ ಉ[...] ಹಾಕಿಯೇ ಊಟ ಮಾಡುತ್ತೇನೆ. ರೋಷ ಕಣ್ಣ[...] ಮರೆಸುತ್ತಿರುವಾಗ, ಹೇಗಮ್ಮಾ ಸಾಮಾ[...] ಪರಿಸ್ಥಿತಿಯಲ್ಲಿರಲು ಸಾಧ್ಯ? ಅವರು ನನ್ನ[...] ಹೊಡೆಯಲಿಲ್ಲವೇ ವಿನಾ ಕೈ ಎತ್ತುವ ಲೆವ[...] ಬಂದಿದ್ದರಮ್ಮ. ಅದೆಷ್ಟು ಆರಲಾರದ ಗಾ[...] ಗೊತ್ತೆ. ನಿಧಾನವಾಗಿ ನನ್ನ ವಿಚಾರಣೆ ಮಾಡಿದ[...] ಅಮ್ಮಾ ಹೇಳಿದರೆಂದ ಮಾತ್ರಕ್ಕೆ ಜಡೆ ಹಿಡಿ[...] ಜಗ್ಗಿಸುವುದೆ? ಫ್ಲಾಟ್‌ಫಾರಂನಲ್ಲಿರುವ ರಿಕ್ಷಾ[...] ಮಾಡುವ ಕೆಲಸವಮ್ಮಾ ಅದು."

"ಹಾಗೆಲ್ಲ ಮಾತನಾಡಬೇಡ ಕಣೆ."

"ಏಕೆ ಮಾತನಾಡಿರೇನು? ಎರಡು ರಿ[...] ಯಲ್ಲೂ ಹೇಳುತ್ತೇನೆ. ಇದ್ದಕ್ಕಿದ್ದಂತೆ ಅವರೊ[...] ಬಂದು ಸೇರಿದ ಮೃಗ ಮಾಡಿರುವ ಕೆಲಸ ಅ[...] ಅವರಾಗಿ ಮಾಡಲಿಲ್ಲ. ಅದೂ ನನಗೆ ಗೊತ್ತಿ[...] ಆದರೆ ಆತುರ, ರೋಷ ನನ್ನನ್ನು ಓಡಿಸುತ್ತಿದೆಯ[...] ಸೂಟ್‌ಕೇಸ್ ಹಿಡಿದು ಬಂದೇ ಬಿಟ್ಟೆ ನಿಧಾನವ[...] ಯೋಚಿಸಿದಾಗ ನಾನು ಮಾಡಿದ್ದು ತಪ್ಪೆಂ[...] ಅನ್ನಿಸುತ್ತದೆ."

"ಹಾಗನಿಸಿದ ಮೇಲೆ ನೇರವಾಗಿ ಹೋ[...] ಕ್ಷಮೆ ಕೇಳುವುದೇ ತಾನೆ?"

"ಧಾರಾಳವಾಗಿ. ಅದಕ್ಕೇ ತಾನೆ ಭ[...] ಯಾಗಲು ಇಚ್ಛೆಸಿ ಫೋನ್ ಮಾಡಿದ್ದು. ಅವ[...] ಸರಿಯಾಗಿ ಮಾತನಾಡಲೇ ಇಲ್ಲ. ತಪ್ಪನ್ನು ನಾ[...] ಮಾತ್ರ ತಿಳಿದುಕೊಂಡರೆ ಸಾಕೆ, ಅವ[...] ಅರಿಯುವುದು ಬೇಡವೆ?"

(ಸ[...]

'ರಾಗಸಂಗಮ' ಲಾಟರಿ ಡ್ರಾ–೧೩೭

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1317 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ಹೆಚ್. ಎಂ. ಸುನೀತಾ,** D/o ಹೆಚ್. ಎಂ. ಮಂಜಪ್ಪ ಗೌಡ್ರು, **ಹುಯಿಗೆರೆ – 577 160,** ಖಾಂಡ್ಯಾ ಹೋಬಳಿ, ಚಿಕ್ಕಮಗಳೂರು ಜಿಲ್ಲೆ.
2. **ಪ್ರೇಮ,** 905/69 ಬಿ, 4ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, **ಮೈಸೂರು – 570 008.**
3. **ಹೆಚ್. ಎಸ್. ಸುಧಾ,** D/o ಹೆಚ್. ಎನ್. ಸುಬ್ಬರಾಜು, ಚತ್ರದ ಬೀದಿ, **ಕಡೂರು – 577 548,** ಚಿಕ್ಕಮಗಳೂರು ಜಿಲ್ಲೆ.
4. **ಕೆ. ಎಸ್. ಗಿರಿಜ,** ಭಾಷಾಂತರ ನಿರ್ದೇಶನಾಲಯ, 34/2, 2ನೇ ಮಹಡಿ, ಹರಿರಾಮ್ ಸಂಕೀರ್ಣ, ಕೆಂಪೇಗೌಡ ರಸ್ತೆ, **ಬೆಂಗಳೂರು – 560 009.**

ವಿ.ಸೂ. : **'ರಾಗಸಂಗಮ'**ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಮುಂದಿನ ಸಂಚಿಕೆ

ಶುಕ್ರವಾರ 21–8–92ರಂದು ಎಲ್ಲೆಡೆ ಲಭ್ಯ

ಈ ಸಂಚಿಕೆಯಲ್ಲಿ

ಶೈಲಜಾ ಪ್ರಕಾಶ್ ಅವರ

ಹೊಸ ಮೇಸ್ಟ್ರು

ಸಂಪೂರ್ಣ ಕಾದಂಬರಿ ಪ್ರಕಟವಾಗುತ್ತದೆ

ಪ್ರಶ್ನೋತ್ತರ

'ಕೆಎಸ್ನಾರ್'

* ಪಿ. ರಾಜಣ್ಣ, ಸೊಣ್ಣೇನಹಳ್ಳಿ

ಹಿಂದಿನ ಕಾಲದಲ್ಲಿ ರಾಜರು, ಇಂದಿನ ಕಾಲದಲ್ಲಿ ರಾಜಕಾರಣಿಗಳು, ಮುಂದಿನ ಕಾಲದಲ್ಲಿ ಯಾರು?

– ಗೂಂಡಾಗಳು.

* ಆರ್. ವೆಂಕಟಲಕ್ಷ್ಮಯ್ಯ, ಗುಂಡಂಗೆರೆ

ಭಾರತ ಮುಂದುವರೆಯುತ್ತಿರುವುದು ಯಾವುದರಲ್ಲಿ, ಹಿಂದುಳಿಯುವುದರಲ್ಲಿಯೇ?

– ಮುಂದುವರಿಯುತ್ತಿರುವುದು ರಾಜಕೀಯ ಪಕ್ಷಗಳ ಜಗಳಗಳಲ್ಲಿ. ಹಿಂದುಳಿದಿರುವುದು ದುಡಿಮೆಯಲ್ಲಿ.

* ರಾಜಸಾಹೇಬ್, ಹರಪನಹಳ್ಳಿ

ರಾಜ್‌ಕುಮಾರ್ ಅವರ ಪರಿವಾರದವರಿಗೆಲ್ಲ ಮೀಸೆ ಇಲ್ಲವಲ್ಲ ಏಕೆ?

– ಕೆಳಗಿನ ಪ್ರಶ್ನೆಯಲ್ಲೇ ಉತ್ತರವಿದೆ.

* ಹೆಚ್. ಎಸ್. ಮಂಜುನಾಥ್, ರಾಮನಗರ

'ಪುರುಷ ಲಕ್ಷಣಂ ಮೀಸೆ' ಎಂತಿದ್ದರೂ ಫ್ಯಾಶನ್‌ಗಾಗಿ ಅದನ್ನೇ ಬೋಳಿಸುತ್ತಿದ್ದಾರಲ್ಲ?

– ಲಕ್ಷಣಕ್ಕಿಂತ ಅನುಕೂಲ ಮುಖ್ಯ. ಮೀಸೆ ಬೋಳಿಸುವುದರಿಂದ ಕಾಲವ್ಯಯ ತಪ್ಪಿಸಬಹುದು.

* ಮಂಗಳ, ಮೈಸೂರು

ಕೆಲವರಿಗೆ ಮದುವೆಯ ವಿಷಯದ ಆಸಕ್ತಿಯೇ ಇರುವುದಿಲ್ಲವಲ್ಲ, ಕಾರಣ?

– ತಮ್ಮ ಮೇಲೆ ತಮಗೇ ಭರ ಇಲ್ಲದವರು.

* ವೆಂಕಟೇಶ ರಾ. ಪಟಗಾರ, ಸಿದ್ದೇಶ್ವರ

ಮಾಸ್ತರೇ ನೀವು ಯಾವ ಅ ಇಟ್ಟುಕೊಂಡು ಯೋಗ್ಯ ಪ್ರಶ್ನೆ ಮತ್ತು ಅಯೋ ಪ್ರಶ್ನೆ ಎಂದು ತೀರ್ಮಾನ ಮಾಡುತ್ತೀರಿ?

– ಪ್ರಶ್ನೆ ಮತ್ತು ಉತ್ತರ ಓದ ಇತರರಿಗೂ ಉಪಯೋಗಕಾರಿಯಾಗಿ ಇರುವ ನೋಡಿಕೊಳ್ಳುವುದೇ ಅಳತೆ.

* ಕಲಬಿ ಶ್ರೀನಿವಾಸ್, ಮಾರ್ತಾಂಡಪು

ಕೆಲವರಿಗೆ ಹೆಂಗಸರೆಂದರೆ ಹೆದರಿಕೆ. ಇ ಕಾರಣವೇನಿರಬಹುದು?

– ಮರ್ಯಾದೆಯನ್ನು ನೀವು ಹೆದ ಎಂದುಕೊಂಡಿರಬೇಕು.

* ಡಿ. ಆರ್. ರಮೇಶ್, ಕಾರವಾರ

ಕೆಎಸ್ನಾರ್‌ರವರೇ, ಪ್ರಪಂಚದಲ್ಲಿ ಅನ ದೇವರುಗಳಿವೆ. ಅವುಗಳಲ್ಲಿ ಹೀರೋ ದೇವ ಯಾರು?

– ದೇವರುಗಳಲ್ಲೂ ರಾಜಕಾರಣಿಗಳ ನಾನೇ ದೊಡ್ಡವನು ಎಂಬುದರಲ್ಲಿ ಪೈಪೋ ಇದೆ.

* ವೀಣಾ ಲಿಂಗಣ್ಣ, ಸೊಲ್ಲಾಪುರ

ಬದುಕಿದ್ದಾಗ ಕಷ್ಟದಲ್ಲಿ ಕನಿಕರಿಸದ ಸತ್ತಾಗ ಕಣ್ಣೀರಿಡುತ್ತಾರಲ್ಲ ಏಕೆ?

– ಎದ್ದು ಬಂದು ಸಾಲ ಕೇಳುವು ಎಂಬ ಧೈರ್ಯ.

ಪ್ರಶ್ನಿಕರಿಗೂ ತಲಾ ರೂ. 5ರಂತೆ ಬಹುಮಾನವನ್ನು ಈಗಾಗಲೇ ಕಳಿಸಲಾಗಿದೆ

* ಸಾವಿತ್ರಿ ರಿತ್ತಿಮಠ, ಗುತ್ತಲ

ಅತೀ ಪ್ರೀತಿ ವಿಶ್ವಾಸ, ಅತೀ ಕ್ರೂರ ಹೃದಯ ಎರಡೂ ಹೆಚ್ಚಾಗಿ ಹೆಣ್ಣಿನಲ್ಲಿಯೇ ಕಾಣುವುದು ಯಾಕೆ?

—ಮೃದು ಹೃದಯವೇ ಎರಡಕ್ಕೂ ಕಾರಣ.

* ಹ. ಗೋ. ಶಿ., ಕುಮಟಾ

ರಾಮಾಯಣದ ಮಂಥರೆಗೂ ಚಾಡಿ ಹೇಳುವ ಇಂದಿನ ಮಹಿಳೆಯರಿಗೂ ಇರುವ ವ್ಯತ್ಯಾಸವೇನು?

— ಆಗಿನ ಮಂಥರೆ ಅನಕ್ಷರಸ್ಥೆ, ಈಗಿನ ಮಂಥರೆಗಳು ವಿದ್ಯಾವಂತರು.

* ಆರ್. ಆರ್ಕೇಶ್ವರ, ಮೈಸೂರು

ಜೀವನದಲ್ಲಿ ಎಡವಿದ ಹೆಣ್ಣಿಗೆ ನರಕವೇ ನೆರಳಂತೆ. ಎಡವಿದ ಗಂಡಿಗೆ?

— ಇಬ್ಬರಿಗೂ ನರಕ ನೆರಳಲ್ಲ. ಪುನರ್ಜೀವನ ಕೊಡುವ ದೊಡ್ಡಸ್ತಿಕೆಯೇ ನೆರಳು.

* ಮನೋಹರ ಕೃಷ್ಣ, ಹಾಸನ

ಮದುವೆ ಆದ ಸಾಕ್ಷಿಗೆ ಗಂಡು ಹೆಣ್ಣಿಗೆ ತಾಳಿ ಕಟ್ಟುತ್ತಾನೆ. ಗಂಡಿಗೆ ಹೆಣ್ಣು ಏನು ಕಟ್ಟುತ್ತಾಳೆ?



— ಮೂಗುದಾರ, ಪರೋಕ್ಷವಾಗಿ.

* ಬಿ. ದೇವರಾಜು, ತುಂಬಕೆರೆ

ಸಾಮಾನ್ಯವಾಗಿ ಶ್ರೀಮಂತರ ಮಕ್ಕಳು ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿರಲು ಕಾರಣ?



— ಹಣವು ಇರುವುದರಿಂದ ಓದುವ ಚಟುವಟಿಕೆಗಳಿಗಿಂತ ಇತರ ಚಟುವಟಿಕೆಗಳು ಹೆಚ್ಚಾಗಿರುತ್ತದೆ.

* ವಿನಾಯಕ ಗಾಂವ್ಕರ್, ಗುಂದ

ನೆಗಡಿ ಬಂದರೆ ಮೂಗನ್ನೇ ಕೊಯ್ದುಕೊಳ್ಳುವ ಜನರಿಗೆ ಏನನ್ನಬೇಕು?

— ನಿಮ್ಮ ಹೋಲಿಕೆ ಸರಿಯಿಲ್ಲ. ನೆಗಡಿ ಬಂದರೆ ತಮ್ಮ ಮೂಗಿನ ಬದಲಿಗೆ ಪರರ ಮೂಗನ್ನು ಕತ್ತರಿಸುವವರೇ ಇಂದು ಹೆಚ್ಚು.

* ತೊಡಿಕಾನ ಅಬ್ದುಲ್ಲ, ಸುಳ್ಯ

ರುಣಮುಕ್ತನಾಗಬೇಕೆಂದಿದ್ದೇನೆ. ಅನ್ಯರಿಂದ ಎರವಲು ಪಡೆದ ಪ್ರೀತಿ, ಪ್ರೇಮ, ವಿದ್ಯೆ ಇತ್ಯಾದಿಗಳನ್ನು ಹೇಗೆ ಹಿಂದಿರುಗಿಸಲಿ?

— ನಿಷ್ಕಲ್ಮಶವಾದ ಗೌರವ ಕೊಡುವುದರಿಂದ.

* ಮಕ್ಕಳ ಕಥೆ *

ನಾಗರಹೊಳೆ

ಎಂ. ಶಿವಾಜಿರಾವ್

ಮೇದಪ್ಪ ಕೊಡಗಿನ ಕಲ್ಲಹಳ್ಳಿಯಲ್ಲಿ ವಾಸವಾಗಿದ್ದ. ಅವನು ಒಬ್ಬ ಅಂಚೆ ಪೇದೆ. ಬೆಳಗಾದ ಕೂಡಲೆ ಅಂಚೆಯ ಕಾಗದಗಳನ್ನು ಚೀಲದಲ್ಲಿಟ್ಟುಕೊಂಡು ಹಳ್ಳಿಯಿಂದ ಹಳ್ಳಿಗೆ ಹೋಗಿ ಅಂಚೆ ವಿಲೇವಾರಿ ಮಾಡುವುದು ಅವನು ಮಾಡುತ್ತಿದ್ದ ಕೆಲಸ. ಇದರಿಂದ ಜನರು ಮಧ್ಯಾಹ್ನದ ಹೊತ್ತಿಗೆ ತಂತಮ್ಮ ಊರಿನ ಕಟ್ಟೆಯ ಬಳಿ ನಿಂತು ತಮಗೆ ಬರುವ ಅಂಚೆಗಾಗಿ ಕಾಯುತ್ತಿದ್ದರು.

ಮಾರ್ಚ್ ತಿಂಗಳ ಮೊದಲನೇ ವಾರ. ಮೇದಪ್ಪ ಅಂಚೆ ಚೀಲ ಹೊತ್ತುಕೊಂಡು ವಿಲೇವಾರಿಗೆ ಹೊರಟ. ಅಷ್ಟರಲ್ಲಿ ಅವನ ಅಕ್ಕ "ನನ್ನ ಮಗುವನ್ನು ತನ್ನ ತಂದೆಯ ಮನೆಯಲ್ಲಿ ಬಿಟ್ಟು ಬಾ'' ಎಂದಳು. ವಾರಕ್ಕೆರಡು ಬಾರಿ ಮೇದಪ್ಪ ಮಗುವಿನ ಅಜ್ಜನಿದ್ದ ಊರಿಗೂ ಅಂಚೆಕೊಡಲು ಹೋಗುತ್ತಿದ್ದ. ಆದ್ದರಿಂದಲೇ ಅವನ ಅಕ್ಕ ಈ ಮಾತನ್ನು ಹೇಳಿದ್ದಳು. "ಓಹೋ ಅದಕ್ಕೇನು, ಮಗುವನ್ನು ರೆಡಿ ಮಾಡು, ಕರೆದೊಯ್ಯುತ್ತೇನೆ'' ಎಂದು ಹೇಳಿದ ಮೇದಪ್ಪ. ಅಕ್ಕ ಮಗುವಿಗೆ ಅನ್ನ ತಿನ್ನಿಸಿ, ಬೇರೆ ಬಟ್ಟೆ ತೊಡಿಸಿ ರೆಡಿ ಮಾಡಲು ಅರ್ಧ ಗಂಟೆಯಾಯಿತು. "ಆಯಿತೇ?'' ಎಂದು ಎರಡು ಬಾರಿ ಕೇಳಿದ. "ಆಯಿತು'' ಎಂದಳು ಅಕ್ಕ.

ಮಗು ಸಿದ್ಧವಾಯಿತು. ಅದನ್ನು ಭುಜದ ಮೇಲೆ ಹೊತ್ತುಕೊಂಡು ಇನ್ನೊಂದು ಕೈಯಲ್ಲಿ ಅಂಚೆಚೀಲ ಹೊತ್ತು ಮೇದಪ್ಪ ಓಡಲು ಪ್ರಾರಂಭಿಸಿದ. ಅವನು ದಕ್ಷಿಣ ದಿಕ್ಕಿಗೆ ಎಂದರ ನಾಗರಹೊಳೆ ಅರಣ್ಯದ ಮೂಲಕವೇ ಬ್ರಹ್ಮಗಿರಿ ಬೆಟ್ಟದ ಬಳಿಯ ಗ್ರಾಮಗಳಿಗೆ ಹೋಗಬೇಕಾ ಗಿತ್ತು. ಹೊತ್ತಾಯಿತೆಂದು ಬೇಗ ಬೇಗ ಓಡಲಾರಂಭಿಸಿದ. ಕಾಡನ್ನು ಅರ್ಧ ದಾಟಿರಬೇಕು ಇದ್ದಕ್ಕಿದ್ದಂತೆಯೇ ಏನೋ ಬಿಸಿಗಾಳಿ ಬರ ಲಾರಂಭಿಸಿತು. ಇದೇನು ವಿಚಿತ್ರವೆಂದು ಯೋಚಿ ಸುತ್ತ ಮೇದಪ್ಪ ಇನ್ನಷ್ಟು ವೇಗವಾಗಿ ಓಡ ತೊಡಗಿದ. ಇದ್ದಕ್ಕಿದ್ದಂತೆಯೇ ಕಾಡ್ಗಿಚ್ಚು ಕಾಣಿಸಿತು. ಮರಗಳು ದಗದಗನೆ ಉರಿಯುತ್ತಿದ್ದವು. ಮೇದಪ್ಪನಿಗೆ ಆಶ್ಚರ್ಯವಾಯಿತು. ಅವನ ಇಪ್ಪತ್ತು ವರ್ಷಗಳ ಸರ್ವಿಸ್ಸಿನಲ್ಲಿ ಹೀಗೆಂದೂ ಆಗಿರಲಿಲ್ಲ. ಕೊಡಗಿನ ಕಾಡುಗಳಲ್ಲಿ ಕಾಡ್ಗಿಚ್ಚು ಕಾಣಿಸಿರಲಿಲ್ಲ. ಅಲ್ಲದೆ ಮೇದಪ್ಪ ಬಹಳ ನಿಷ್ಠಾವಂತ ನೌಕರ. ತನ್ನ ಕೆಲಸವೆಂದರೆ ಬಹಳ ಶ್ರದ್ಧೆ. ನೂರಾರು ಜನರು ಅಂಚೆಗಾಗಿ ಕಾದಿರುತ್ತಾರೆ ಎಂಬುದೂ ಅವನಿಗೆ ತಿಳಿದಿತ್ತು. ಆದದ್ದಾಗಲಿ ಎಂದು ಮುಂದೆ ಸಾಗತೊಡಗಿದ. ಹೆಗಲಿನ ಮೇಲಿದ್ದ ಮಗುವನ್ನು ಸೊಂಟದ ಮೇಲೆ ಕುಳ್ಳಿರಿಸಿಕೊಂಡ. ಮುಂದಕ್ಕೆ ಹೋಗಲೋ ಬೇಡವೋ ಎಂದು ಯೋಚಿಸಿದ. ಆದರೆ ಹಿಂಭಾಗ ಮರಗಳಿಗೂ ಬೆಂಕಿ ಹರಡಲಾರಂಭಿಸಿತ್ತು. ಮೇದಪ್ಪ ಗಾಬರಿಯಾಗಲಿಲ್ಲ. ಮುಂದಕ್ಕೆ ಹೋಗುವುದೇ ಲೇಸು ಎಂದುಕೊಂಡ. ಹಾಗೆಂದುಕೊಂಡವನೇ ಇನ್ನಷ್ಟು ವೇಗವಾಗಿ ಓಡತೊಡಗಿದ.

ಮಧ್ಯಾಹ್ನದ ಸಮಯವಾಗಿತ್ತು. ತಂಪಾ ಗಿದ್ದ ನಾಗರಹೊಳೆ ಅರಣ್ಯ ಪ್ರದೇಶವು ಈಗ ಉರಿಯುವ ಒಲೆಯಾಗಿತ್ತು. ಸುತ್ತ ಮುತ್ತಲಿನ ಮರಗಳು ಕರಕಲಾಗಿ ನಿಂತಿದ್ದವು. ಮರಗಳ ಮೇಲಿನ ಹಕ್ಕಿಗಳು ವಿಕಾರವಾಗಿ ಕೂಗುತ್ತಿದ್ದವು.

ದೂರದಲ್ಲಿ ಪ್ರಾಣಿಗಳು ಓಡಿ ಬರುತ್ತಿರುವ, ಓಡಿ ಹೋಗುತ್ತಿರುವ ಶಬ್ದ ಕೇಳಿಸುತ್ತಿತ್ತು.

ಅಷ್ಟರಲ್ಲಿ ಸೊಂಟದ ಮೇಲಿದ್ದ ಮಗುವು ಅಳಲಾರಂಭಿಸಿತು. ಅದಕ್ಕೆ ಹಸಿವಾಗಿದೆ ಎಂದು ತಿಳಿದ ಮೇದಪ್ಪ ಬುತ್ತಿ ಬಿಚ್ಚಿ ತಿಂಡಿ ತಿನ್ನಿಸಿದ. ಸೀಸೆಯಲ್ಲಿದ್ದ ನೀರು ಕುಡಿಸಿದ. ಸ್ವಲ್ಪ ಹೊತ್ತು ಅಳುತ್ತಿದ್ದ ಮಗು ನಿದ್ರಿಸಲಾರಂಭಿಸಿತು.

ಮೇದಪ್ಪ ತನ್ನ ವೇಗವನ್ನು ಹೆಚ್ಚಿಸಿದ.

ಅಷ್ಟು ಹೊತ್ತಿಗೆ ಅವನು ಕೊಡಂಚೆ ಎಂಬ ಪ್ರದೇಶಕ್ಕೆ ಬಂದಿದ್ದ. ಅಲ್ಲಿ ಒಂದು ಕಲ್ಲಿನ ಮಂಟಪ ಕಾಣಿಸಿತು. ಮರಗಿಡಗಳು ದೂರವಿದ್ದ ಆ ಮಂಟಪಕ್ಕೆ ಬೆಂಕಿ ತಗುಲುವ ಭಯವಿರಲಿಲ್ಲ. ಆ ರಾತ್ರಿಯನ್ನು ಅಲ್ಲಿಯೇ ಕಳೆಯಲು ಮೇದಪ್ಪ ನಿಶ್ಚಯಿಸಿದ. ತನ್ನ ಟವಲನ್ನು ನೆಲದ ಮೇಲೆ ಹಾಸಿ ಅವನು ಕುಳಿತುಕೊಂಡ.



ಕಾವೇರಿದ ಗಾಳಿ ಇನ್ನೂ ಜೋರಾಗಿ ಬೀಸ ಲಾರಂಭಿಸಿತು. ಸಮೀಪದಲ್ಲಿ ಉರಿಯಿದೆ ಎಂದು ಮೇದಪ್ಪನಿಗೆ ತಿಳಿಯಿತು. ಅಲ್ಲದೆ ಸಂಜೆ ಆಗುತ್ತಿದ್ದುದರಿಂದ ಕತ್ತಲಿನಲ್ಲಿ, ಉರಿಯುವ ಕಾಡಿನಲ್ಲಿ ಪ್ರಯಾಣ ಮಾಡುವುದು ಅಪಾಯವೆಂದು ಮೇದಪ್ಪನಿಗೆ ತಿಳಿದಿತ್ತು. ಆದ್ದರಿಂದ ಆ ರಾತ್ರಿಯನ್ನು ಯಾವುದಾದ ರೊಂದು ಸುರಕ್ಷಿತ ಸ್ಥಳದಲ್ಲಿ ಕಳೆಯಲು ನಿಶ್ಚಯಿಸಿದ.

ಆಗ ರಾತ್ರಿ ಹತ್ತು ಗಂಟೆ ಯಾಗಿತ್ತು. ಎಲ್ಲಿಯೋ ಜನ ಓಡಾಡುತ್ತಿರುವ ಶಬ್ದ ಕೇಳಿಸಿತು. ಉತ್ಸಾಹದಿಂದ ಮೇದಪ್ಪ ಎದ್ದುನಿಂತ. ಅಷ್ಟು ಹೊತ್ತಿಗೆ ಬೆಂಕಿ ಆರಿಸುವ ನೀರಿನ ವ್ಯಾನು ಅಲ್ಲಿಗೆ ಬಂತು. ಅದನ್ನು ನೋಡಿ ಮೇದಪ್ಪ "ನಿಲ್ಲಿ ನಿಲ್ಲಿ'' ಎಂದು ಜೋರಾಗಿ ಕೈ ಆಡಿಸಿದ. ಅದನ್ನು ನೋಡಿದ ವ್ಯಾನಿನವರು ಅಲ್ಲಿ ಬಂದು ಮೇದಪ್ಪನನ್ನು ವ್ಯಾನಿನಲ್ಲಿ ಪಕ್ಕದ ಗ್ರಾಮಕ್ಕೆ, ಸುರಕ್ಷಿತ ಸ್ಥಳಕ್ಕೆ ಒಯ್ದರು.

'ರಾಗಸಂಗಮ' ಚಿತ್ರ ವಿಮರ್ಶೆ

ಜೀವನ ಚೈತ್ರ

ಪ್ಲಸ್ ಅಂಶಗಳು :

1) ಡಾ. ರಾಜ್‌ಕುಮಾರ್ ಅವರ ಮನೋಜ್ಞ ಅಭಿನಯ.

2) ಸ್ಮರಣೀಯ ಅನುಭವ ನೀಡುವ 'ನಾದಮಯ' ಹಾಡಿನ ಚಿತ್ರೀಕರಣ.

3) ಚುರುಕಾದ, ಹರಿತವಾದ ಸಂಭಾಷಣೆ.

ಮೈನಸ್ ಅಂಶಗಳು :

1) ಸುದೀರ್ಘವೆನಿಸುವ ನಿಧಾನ ನಿರೂಪಣೆಯ ಪ್ರಥಮಾರ್ಧ.

2) ಹೊಸ ಮಾದರಿಯ ತಾಂತ್ರಿಕ ಅಂಶಗಳ ಬಳಕೆ ಇಲ್ಲದಿರುವುದು.

ವಿಮರ್ಶೆ :

ಡಾ. ರಾಜ್‌ಕುಮಾರ್ ಮೂರು ವರ್ಷಗಳನಂತರ ಅಭಿಮಾನಿಗಳ ಒತ್ತಾಯಕ್ಕೆ ಮಣಿದು ಅಭಿನಯಸಿರುವ **'ಜೀವನ ಚೈತ್ರ'** ವಿಶೇಷವಾಗಿ ಕುಟುಂಬದ ಹಾಗೂ ಮಹಿಳಾ ಪ್ರೇಕ್ಷಕರ ಮೆಚ್ಚುಗೆ ಗಳಿಸುವ ರೀತಿಯಲ್ಲಿ ಚಿತ್ರೀಕೃತವಾಗಿದೆ. ಈ ಚಿತ್ರ ಕನ್ನಡ ಅಭಿಮಾನಿಗಳಿಗೆ ಎರಡು ರೀತಿಯ ಬೋನಸ್ ಆಗಿದೆ. ಡಾ. ರಾಜ್ ಅಭಿನಯಿಸಿರುವ ಚಿತ್ರವೊಂದು ಮೂರು ವರ್ಷಗಳನಂತರ ತೆರೆಕಾಣುತ್ತಿರುವುದು ಒಂದು ಬೋನಸ್ ಆದರೆ ಇಂದಿನ ರೀಮೇಕ್ ಯುಗದಲ್ಲಿ ಕನ್ನಡ ಕಾದಂಬರಿಯಾಧಾರಿತ ಚಿತ್ರವೊಂದು ಈ ನೆಲದ 'ನೇಟಿವಿಟಿ'ಯನ್ನು ಬಿಂಬಿಸುವ ರೀತಿಯಲ್ಲಿ ಚಿತ್ರೀಕೃತವಾಗಿರುವುದು ಎರಡನೆಯ ಬೋನಸ್. ಚಿತ್ರ ನೋಡಿದಾಗ ಡಾ. ರಾಜ್‌ಕುಮಾರ್ ಅವರು ದ್ವಿತೀಯಾರ್ಧದ ಕೆಲವು ದೃಶ್ಯಗಳಲ್ಲಿ ತಮ್ಮ ಸುದೀರ್ಘ ಅನುಭವದ ಸಾಮರ್ಥ್ಯವನ್ನೆಲ್ಲ ಈ

ಲಾಂಛನ : ದಾಕ್ಷಾಯಿಣಿ ಸಿನಿ ಕಂಬೈನ್ಸ್
ನಿರ್ಮಾಣ : ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾ[ರ್]
ನಿರ್ದೇಶನ : ದೊರೆ–ಭಗವಾನ್
ಸಾಹಿತ್ಯ : ಉದಯಶಂಕರ್
ಸಂಗೀತ : ಉಪೇಂದ್ರಕುಮಾರ್
ಛಾಯಾಗ್ರಹಣ : ಎಸ್. ವಿ. ಶ್ರೀಕಾಂತ್
ತಾರಾಗಣ : ಡಾ. ರಾಜ್‌ಕುಮಾರ್, ಮಾಧ[ವಿ], ಕೆ. ಎಸ್. ಅಶ್ವತ್, ಪಂಡರಿಬಾಯಿ, ಗುರುದತ್, ಅಭಿಜಿತ್, ಬಾಲರಾಜ್, ಪೃಥ್ವೀರಾಜ್, ತ್ರಿವೇಣಿ, ಶಿವಕುಮಾರ್, ಶ್ರೀರಕ್ಷಾ, ತೂಗುದೀಪ ಶ್ರೀನಿವಾಸ್, ಟೆನಿಸ್ ಕೃಷ್ಣ ಮತ್ತು ಇತರರು.

ಚಿತ್ರಕ್ಕೆ ಧಾರೆ ಎರೆದಿರುವುದು ಗೊತ್ತಾಗುತ್ತದೆ. ಅದರಲ್ಲೂ 'ನಾದಮಯ' ಹಾಡು ಹಾಗೂ ಅಲ್ಲಿಂದನಂತರದ ನಾಲ್ಕೈದು ದೃಶ್ಯಗಳಲ್ಲಂತೂ ಡಾ. ರಾಜ್‌ಕುಮಾರ್ ಅವರ ಅಭಿನಯ ಮನೋಜ್ಞವಾಗಿದೆ. ತಾಯಿ ಸತ್ತಾಗ ಆಕೆಯ ತಲೆಯನ್ನು ಹೆಗಲಮೇಲೆ ಒತ್ತಿಕೊಂಡು ಸದ್ದಿಲ್ಲದ ದುಃಖ ವ್ಯಕ್ತಪಡಿಸುವ ದೃಶ್ಯ ಚಿತ್ರದ 'ಹೈಲೈಟ್'. ವಾಸ್ತವವಾಗಿ ಚಿತ್ರಮಂದಿರದಿಂದ ಹೊರಬಂದ ನಂತರ ಡಾ. ರಾಜ್ ಅಭಿನಯವೇ ಮನಸ್ಸಿನಲ್ಲಿ ಉಳಿಯುತ್ತದೆ.

'ಜೀವನ ಚೈತ್ರ' ತಾಂತ್ರಿಕವಾಗಿ ಗಮನಾರ್ಹವೆನಿಸುವುದಿಲ್ಲ. ಚಿತ್ರದ ಅನೇಕ ದೃಶ್ಯಗಳ ನಿರೂಪಣೆ ನಾಟಕೀಯವಾಗಿದೆ. ಮೂರು ದಶಕಗಳ ಹಿಂದಿನ ನಿರೂಪಣಾ ಟೆಕ್ನಿಕ್ಕನ್ನೇ ಬಳಸಿಕೊಳ್ಳಲಾಗಿದೆ. ಶಾಟ್ ಸಂಯೋಜನೆ, ಹೊರಾಂಗಣ ದೃಶ್ಯಗಳ ಚಿತ್ರಣ ಹಾಗೂ ಹಿನ್ನೆಲೆ ಸಂಗೀತದಲ್ಲಿ ಸದ್ಯದ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡೇ ಇಲ್ಲ. ('ನಾದಮಯ' ಹಾಡಿನ ಚಿತ್ರೀಕರಣ ಇದಕ್ಕೆ ಅಪವಾದ.) ಜೊತೆಗೆ ಪ್ರಥಮಾರ್ಧದಲ್ಲಿ ಹೆಚ್ಚು ಪಾತ್ರಧಾರಿಗಳನ್ನು 'ಎಸ್ಟಾಬ್ಲಿಷ್' ಮಾಡುವ ಭರದಲ್ಲಿ ನಿರೂಪಣೆ ನಿಧಾನ ಗತಿಯಲ್ಲಿದೆ. ಹೀಗಾಗಿ ಚಿತ್ರದ ಪ್ರಥಮಾರ್ಧ ನಿರಾಸೆ ತರುತ್ತದೆ.

ಚಿ. ಉದಯಶಂಕರ್ ಅವರ ಸಾಹಿತ್ಯವೂ

'ಜೀವನ ಚೈತ್ರ' ಪ್ರೇಕ್ಷಕರಿಗೆ ಆಕರ್ಷಕವಾಗುವಂತೆ ಮಾಡಲು ಸಹಕಾರಿಯಾಗಿದೆ. ಮುಖ್ಯವಾಗಿ ಅವರ ಹರಿತವಾದ ಸಂಭಾಷಣೆ (ರಾಜ್‌ಕುಮಾರ್ ಮಕ್ಕಳಿಗೆ ಮತ್ತು ತೂಗುದೀಪ ಶ್ರೀನಿವಾಸ್‌ಗೆ



ಹೇಳುವಂತಹ ಮಾತುಗಳು) ನೆನಪಿನಲ್ಲಿ ಉಳಿಯುತ್ತವೆ. ಆದರೆ ಉಪೇಂದ್ರಕುಮಾರ್ ಅವರ ಸಂಗೀತದಲ್ಲಿ ಒಂದು ಹಾಡು ಮಾತ್ರ ಚೆನ್ನಾಗಿದೆ. ನಿರ್ದೇಶನದ ಬಗ್ಗೆ ವಿಶೇಷವಾಗಿ ಹೇಳುವುದೇನೂ ಇಲ್ಲ.

ಡಾ. ರಾಜ್‌ಕುಮಾರ್ ಅವರನ್ನು ಬಿಟ್ಟರೆ ಪಂಡರಿಬಾಯಿ ಮತ್ತು ಮಾಧವಿ ಉತ್ತಮ ಅಭಿನಯಕ್ಕಾಗಿ ನೆನಪಿನಲ್ಲಿ ಉಳಿಯುತ್ತಾರೆ. ತೂಗುದೀಪ ಶ್ರೀನಿವಾಸ್, ಗುರುದತ್, ಅಭಿಜಿತ್ ಹಾಗೂ ಬಾಲರಾಜ್, ಕೆ. ಎಸ್. ಅಶ್ವತ್ ಮುಂತಾದವರು ತಮ್ಮ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಡಾ. ರಾಜ್‌ಕುಮಾರ್ ಅವರ ಅಭಿನಯಕ್ಕಾಗಿಯೇ ಎಲ್ಲರ ನೆನಪಿನಲ್ಲಿ ಉಳಿಯುವ ಚಿತ್ರ 'ಜೀವನ ಚೈತ್ರ'.

○ ಆರ್. ಜಿ. ವಿಜಯಸಾರಥಿ

50/100


ಅತಿ ಸಾಧಾರಣ: 40ರ ಕೆಳಗೆ ಸಾಧಾರಣ: 41–50
ಉತ್ತಮ: 51–60 ಅತ್ಯುತ್ತಮ: 61ರ ಮೇಲೆ

ಸಿನಿ ಬಿಟ್ಸ್

ರಾಘವೇಂದ್ರ ರಾಜ್‌ಕುಮಾರ್ ವೈವಿಧ್ಯದ ಪಾತ್ರಗಳಲ್ಲಿ

'ಕಲ್ಯಾಣ ಮಂಟಪ' ಚಿತ್ರದವರೆಗೂ 'ಕಾಮಿಡಿ'ಗೆ ಒತ್ತು ನೀಡುವ ಪಾತ್ರಗಳಲ್ಲೇ ಹೆಚ್ಚಾಗಿ ಕಾಣಿಸಿಕೊಂಡು ಮುಂದುವರೆಯುತ್ತಿರುವ ರಾಘವೇಂದ್ರ ರಾಜ್‌ಕುಮಾರ್ ಈಗ ತುಂಬ ಭಿನ್ನವಾದ ಪಾತ್ರಗಳನ್ನು ಆರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಈಗ ಮುಕ್ತಾಯ ಹಂತ ತಲುಪಿರುವ **'ಭರ್ಜರಿ ಗಂಡು'** ಚಿತ್ರದಲ್ಲಿ ಸಾಹಸ ಹಾಗೂ ಹಾಸ್ಯ ದೃಶ್ಯಗಳಿಗೆ ಸಮನಾದ ಪ್ರಾಮುಖ್ಯತೆ ಇದೆ. **'ಚೈತ್ರದ ಪ್ರೇಮಾಂಜಲಿ'** ಹಾಗೂ **'ನಂಜುಂಡ'** ಚಿತ್ರಗಳ ನಿರ್ದೇಶಕರಾದ ಎಸ್. ನಾರಾಯಣ್ ಅವರು ನಿರ್ದೇಶಿಸುತ್ತಿರುವ ಹೊಸ ಚಿತ್ರವು ಸಂಪೂರ್ಣವಾಗಿ ಪ್ರೇಮಮಯ ಕಥಾ ವಸ್ತುವನ್ನು ಹೊಂದಿದೆ. ಹೀಗೆ ಪಾತ್ರಗಳನ್ನು ಆರಿಸಿಕೊಂಡು ಆದಷ್ಟು ವೈವಿಧ್ಯಮಯವಾದ ಚಿತ್ರಗಳಲ್ಲಿ ಅಭಿನಯಿಸಬೇಕೆನ್ನುವುದೇ ರಾಘವೇಂದ್ರ ರಾಜ್‌ಕುಮಾರ್ ಅಪೇಕ್ಷೆಯಾಗಿದೆ. ರೇಣುಕಾ ಶರ್ಮ ನಿರ್ದೇಶನದ **'ಭರ್ಜರಿ ಗಂಡು'** ಸಂಪೂರ್ಣವಾಗಿ ಮನರಂಜನಾ ಪ್ರಧಾನ ಚಿತ್ರವಾದರೆ ನಾರಾಯಣ್ ನಿರ್ದೇಶನದ ಚಿತ್ರದಲ್ಲಿ ತಮ್ಮ ಅಭಿನಯ ಸಾಮರ್ಥ್ಯವನ್ನು ರಾಘು ತೋರಿಸಲಿದ್ದಾರೆ.

ರಾಘವೇಂದ್ರರ ಹಿರಿಯಣ್ಣ ಶಿವರಾಜ್ ಕುಮಾರ್ ಈಗ ಅಭಿನಯಿಸುತ್ತಿರುವ **'ಮಾವನಿಗೆ ತಕ್ಕ ಅಳಿಯ'** ಸಂಪೂರ್ಣವಾಗಿ ಹಾಸ್ಯಮಯವಾಗಿರುತ್ತದೆ. ಈ ಚಿತ್ರದ ಅನಂತರ ಅವರು ಬೇರೆಯ ನಿರ್ಮಾಪಕರ ನಿರ್ಮಾಣದ ಚಿತ್ರಗಳಿಗೆ ಕಾಲ್‌ಶೀಟ್ ನೀಡುತ್ತಿದ್ದಾರೆ. ಆದರೆ ಈ ಪೈಕಿ ಯಾವ ಚಿತ್ರ ಪ್ರಾರಂಭವಾಗುತ್ತಿದೆ ಎನ್ನುವುದರ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ. ಡಿ. ರಾಜೇಂದ್ರಬಾಬು ಅವರು ಶಿವರಾಜ್ ಕುಮಾರ್ ಅವರ ಒಂದು ಚಿತ್ರವನ್ನು ನಿರ್ದೇಶಿಸುವುದಂತೂ ಖಚಿತವಾಗಿದೆ.



○ **ಸ್ವರ್ಣ**

ಭಾರತದ ಕ್ರಿಕೆಟ್ ತಂಡಕ್ಕೆ ಈಗ 'ಕಾಯಕಲ್ಪ ಚಿಕಿತ್ಸೆ' ಬೇಕು

ಭಾರತದ ಹಾಕಿ ತಂಡ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ತೀವ್ರ ನಿರಾಶೆಯ ಪ್ರದರ್ಶನ ನೀಡುತ್ತಿದೆ. ಈಗಾಗಲೇ ಆಡಿರುವ ಮೂರು ಪಂದ್ಯಗಳಲ್ಲಿ ಭಾರತ ಎರಡು ಪಂದ್ಯಗಳಲ್ಲಿ ದಯನೀಯವಾಗಿ ಸೋಲಪ್ಪಿದೆ. ವಾಸ್ತವವಾಗಿ ಭಾರತೀಯ ತಂಡದ ಆಟಗಾರರಿಗೆ ಪ್ರತಿಭೆ ಇಲ್ಲ ಎಂದು ಯಾರೂ ಹೇಳಲಾರರು. ಆದರೆ ಎದುರಾಳಿಯನ್ನು ಸೋಲಿಸುವ, ಬಗ್ಗು ಬಡಿಯುವ ಪ್ರವೃತ್ತಿ ನಮ್ಮ ತಂಡದಲ್ಲಿ ಕಡಿಮೆಯಾಗಿರುವುದಂತೂ ನಿಜ. ಇದೇ ಹಿನ್ನೆಲೆಯಲ್ಲಿ ನಮ್ಮ ಕ್ರಿಕೆಟ್ ತಂಡ ಈಚೆಗೆ ಕ್ರಿಕೆಟ್ ವಿಶ್ವಕಪ್ ಹಾಗೂ ಆಸ್ಟ್ರೇಲಿಯಾ ಪ್ರವಾಸದಲ್ಲಿ ಅನುಭವಿಸಿದ ಹಿನ್ನಡೆಯನ್ನೂ ಗಮನಿಸಬೇಕಾಗುತ್ತದೆ. ವಾಸ್ತವವಾಗಿ ಭಾರತೀಯ ಕ್ರಿಕೆಟ್ ತಂಡದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭೆ ಇರುವ ಆಟಗಾರರು ಇದ್ದರೂ ತಂಡದಲ್ಲಿ ಸಂಯೋಜನೆಯ ಕೊರತೆ ಎದ್ದು ಕಾಣುತ್ತಿತ್ತು. ಜೊತೆಗೆ ತಂಡದ ಎಲ್ಲ ಸದಸ್ಯರೂ ತಮ್ಮ ತಂಡವನ್ನು ಗೆಲ್ಲಿಸುವುದಕ್ಕಿಂತ ಮುಖ್ಯವಾಗಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಆಡುತ್ತಿದ್ದಾರೇನೋ ಎನಿಸಿತ್ತು. ಈ ಬಗ್ಗೆ ಸ್ವತಾ ನಾಯಕ ಅಜರುದ್ದೀನ್ ಅವರೇ 'ತಂಡದ ಆಟಗಾರರು ತಮ್ಮ ಪೂರ್ಣ ಸಾಮರ್ಥ್ಯವನ್ನು ನೀಡಲಿಲ್ಲ. ಯಾರಲ್ಲೂ ತಂಡವನ್ನು ಗೆಲ್ಲಿಸಬೇಕೆನ್ನುವ ದೃಢ ನಿರ್ಧಾರ ಇರಲಿಲ್ಲ' ಎಂದು ಹೇಳಿರುವುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಆದ್ದರಿಂದ ಭಾರತೀಯ ಕ್ರಿಕೆಟ್ ತಂಡಕ್ಕೆ ಕಾಯಕಲ್ಪ ಚಿಕಿತ್ಸೆ ಅಗತ್ಯವಾಗಿದೆ. ತಂಡದ ನಾಯಕ ಯಾರೇ ಆಗಲಿ, ಕಪಿಲ್ ಅವರನ್ನೇ ಮತ್ತೆ



ನಾಯಕ ಪಟ್ಟಕ್ಕೇರಿಸಲಿ, ಆದರೆ ತಂಡದ ಆಟಗಾರರೆಲ್ಲ ಒಮ್ಮತವಾಗಿ, ಅತ್ಯುತ್ತಮವಾಗಿ ಆಡದಿದ್ದರೆ ಭಾರತ ಗೆಲ್ಲುವುದು ಕಷ್ಟ.

○ ಕ್ರೀಡಾಪ್ರಿಯ

ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 16–8–92ರಿಂದ
ಶನಿವಾರ 22–8–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಛ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಡ, ಬೆ
ಮಕರ	ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಖ, ಝು, ಥ, ದೆ, ದೊ, ಚ, ಚಿ

ಮೇಷ

ಉದ್ಯೋಗದಲ್ಲಿ ಉನ್ನತಿ ಸಿಗುತ್ತದೆ. ವ್ಯಾಪಾರ ಚುರುಕಾಗಿ ನಡೆಯುತ್ತದೆ. ಉದ್ಯಮದಲ್ಲಿ ಮಲಗಿದ್ದ ಹಣವನ್ನು ಮತ್ತೆ ಪಡೆಯಬಹುದು. ಪರೀಕ್ಷೆ, ಪಯ್ಪೋಟಿಗಳಲ್ಲಿ ಸುಲಭ ಜಯ. ಸಮಾಜದ ಕೆಲಸಕ್ಕಾಗಿ ಭಾರೀ ಅಲೆದಾಟ ತಪ್ಪಿದ್ದಲ್ಲ. ಹೊರ ವ್ಯವಹಾರದಿಂದ ಮುಂದೆ ಒಳಿತಾಗಲಿದೆ. ಗಂಡ ಹೆಂಡಿರಲ್ಲಿ ಒಳ್ಳೆ ಸಂಬಂಧವಿರುತ್ತದೆ. ಸಂಸಾರದಲ್ಲಿ ವಿಶೇಷತೆ ಏನಿಲ್ಲ.

ವೃಷಭ

ಉದ್ಯಮ ಪ್ರಚಾರ, ಗುಡಿ ಕೈಗಾರಿಕೆಗಳು ಚೆನ್ನಾಗಿ ನಡೆದು ಒಳ್ಳೆಯ ಲಾಭ ತಂದುಕೊಡಲಿದೆ. ವ್ಯಾಪಾರ ಸುಮಾರಾಗಿ ನಡೆಯುತ್ತದೆ. ಹಣ ಕಾಸಿನ ಪರಿಸ್ಥಿತಿ ಸುಭದ್ರ. ಉದ್ಯೋಗದಲ್ಲಿ ಕೆಲಸದ ಭಾರ ತಗ್ಗಿ ಮನೋ ನೆಮ್ಮದಿ ನಿಮ್ಮದಾಗುತ್ತದೆ. ಮನೆಯಲ್ಲಿ ಶುಭ ಕಾರ್ಯವೊಂದು ಕೋಲಾಹಲಸಹಿತ ನಡೆಯುತ್ತದೆ. ಎದುರು ನೋಡಿದ ಬಾಬ್ತುಗಳಿಂದ ನಿರೀಕ್ಷಿಸಿದ್ದು ಆಗುತ್ತದೆ.

ಮಿಥುನ

ವ್ಯಾಪಾರವನ್ನು ವಿಸ್ತರಿಸಲು ಇದು ಸಕಾಲ. ಖರ್ಚುಗಳು ಅಂಕೆ ಮೀರಿ ಹೋಗುವುದರಿಂದ ಹಣಕಾಸಿನ ಪರಿಸ್ಥಿತಿ ಡೋಲಾಯಮಾನವಾಗುತ್ತದೆ. ಪತ್ರ ವ್ಯವಹಾರದಿಂದ ಒಳ್ಳೆಯ ಹೊಳವೊಂದು ಸಿಗಲಿದೆ. ಪಂದ್ಯಗಳಲ್ಲಿ ಲಾಭವು ನಿಮ್ಮದಾಗಲಿದೆ. ಪರೀಕ್ಷೆಗಳಲ್ಲಿ ಪಾಸಾಗುವಿರಿ. ಆದರೆ ಅಲೆದಾಟವನ್ನು ನೀವು ಬಿಟ್ಟರೂ ಅದು ನಿಮ್ಮನ್ನು ಬಿಡುವುದಿಲ್ಲ.

ಕಟಕ

ಹಣಕಾಸಿನ ವಿಷಯವಾಗಿ ನೀವು ಗಟ್ಟಿಕುಳ ಎನಿಸುವಿರಿ. ಆದರೂ ಖರ್ಚಿಗೆ ಕಡಿವಾಣ ಹಾಕದಿದ್ದರೆ ಮುಂದೆ ಹಣದ ಮುಗ್ಗಟ್ಟು ನಿಮ್ಮನ್ನು ಬಾಧಿಸಲಿದೆ. ಸರಕಾರಿ ಸಂಬಂಧವಾಗಿ ನಿಮಗೆ ಸಹಕಾರ ಸಿಕ್ಕು ಒಳಿತಾಗಲಿದೆ. ಕೆಲಸದಲ್ಲಿರುವವರು ಮೇಲಧಿಕಾರಿಗಳಿಂದ ಶಹಭಾಸ್‌ಗಿರಿ ಗಿಟ್ಟಿಸುವರು. ವ್ಯಾಜ್ಯಗಳು ನಿಮ್ಮಂತಾಗುತ್ತವೆ. ಕುಟುಂಬ ಜೀವನದಲ್ಲಿ ಅನುಕೂಲವೇ ಆಗಲಿದೆ.

ಸಿಂಹ

ಉದ್ಯೋಗದಲ್ಲಿ ಬಡ್ತಿ, ಸಂಬಳ ಹೆಚ್ಚಳವನ್ನು ಕಾಣುವಿರಿ. ಸ್ನೇಹಿತರು ಮೇಲಧಿಕಾರಿಗಳಿಂದ ಸಕಾಲದಲ್ಲಿ ಸಹಾಯ ಸಹಕಾರ ಸಿಗುತ್ತದೆ. ಎದುರು ನೋಡಿದ ಬಾಬತ್ತುಗಳಿಂದ ತಕ್ಕ

ಮಟ್ಟಿಗೆ ಒಳಿತಾಗಲಿದೆ. ಯಾವುದಾದರೊಂದು ವಿಪತ್ತು ಸಂಭವಿಸುವ ಸಂಭವವಿರುವುದರಿಂದ ಈ ವಾರ ಎಚ್ಚರಿಕೆಯ ಹೆಜ್ಜೆಯಿಡುವುದೇ ಕ್ಷೇಮ. ಹಳೆಯ ಸಾಲ ತೀರಿಸಿ ಹೆಚ್ಚು ಸಾಲ ಪಡೆಯುವಿರಿ.

ಕನ್ಯಾ

ಕುಟುಂಬದಲ್ಲಿ ಅಚಲವಾದ ನೆಮ್ಮದಿ ನೆಲೆಸುತ್ತದೆ. ಉದ್ಯಮದಲ್ಲಿ ನೀವು ಉನ್ನತ ಅಧಿಕಾರಿಗಳ ಸಹಕಾರ ಪಡೆಯುವಲ್ಲಿ ಯಶ ಗಳಿಸುವಿರಿ. ವ್ಯಾಪಾರದಲ್ಲಿ ಮಾಮೂಲು ಸ್ಥಿತಿ. ಹಣಕಾಸಿನ ವಿಷಯದಲ್ಲಿ ತಹಬಂದಿಗೆ ಬಾರದ ಖರ್ಚೇ ಶತ್ರು. ಪರೀಕ್ಷೆ ಪಯ್ಪೋಟಿಗಳ ಜಯ ಕಟ್ಟಿಟ್ಟ ಬುತ್ತಿ. ಹೊರ ವ್ಯವಹಾರಗಳಲ್ಲಿ ಉಂಟಾಗಿದ್ದ ಮನೋವೇದನೆ ತೊಲಗಿ ನಿರಾಳವಾಗುತ್ತದೆ.

ತುಲಾ

ವ್ಯಾಪಾರದಲ್ಲಿ ಎಣಿಸಿದ್ದೆಲ್ಲ ನಡೆಯುವುದಿಲ್ಲವಾದ್ದರಿಂದ ಮನಸ್ಸಿನ ಸಂತೋಷಕ್ಕೆ ಒಂದು ಮಿತಿ ಇರುತ್ತದೆ. ಕೆಲಸದಲ್ಲಿ ಮೇಲಧಿಕಾರಿಗಳ ಮೆಚ್ಚುಗೆ ಸಿಗುತ್ತದೆ. ಸಮಾಜದಲ್ಲಿ ನಿಮ್ಮ ಘನತೆ ಹೆಚ್ಚುತ್ತದೆ. ದೂರ ಪ್ರಯಾಣಗಳಿಂದ ಒಳಿತುಂಟಾಗಲಿದೆ. ಕುಟುಂಬ ಜೀವನದಲ್ಲಿ ಇನ್ನೂ ಹೆಚ್ಚಿನ ಸವಲತ್ತುಗಳು ನಿಮ್ಮದಾಗುತ್ತವೆ. ಗಂಡ ಹೆಂಡಿರ ನಡುವೆ ಒಳ್ಳೆ ತಿಳುವಳಿಕೆ ಇರುತ್ತದೆ.

ವೃಶ್ಚಿಕ

ಕೆಲಸದ ಭಾರ ಹೆಚ್ಚಿ ಉದ್ಯೋಗದಲ್ಲಿ ಚಂಚಲತೆ ಕಾಡುತ್ತದೆ. ಉದ್ಯಮದಲ್ಲಿ ಕೆಲಸಗಾರರನ್ನು ಕಟ್ಟಿಕೊಂಡರೆ ಭಾರೀ ಮುನ್ನಡೆ ಕಾಣಬಹುದು. ವ್ಯಾಪಾರದಲ್ಲಿ ಲಾಭದ ಪ್ರಮಾಣ ತಗ್ಗುತ್ತದೆ. ಹಣಕಾಸಿನ ಪರಿಸ್ಥಿತಿ ಹೇಳಿಕೊಳ್ಳುವಂತೇನೂ ಇರಲಾರದು. ಹೊಸ ಸಾಲ ಮಾಡಿ ಹಳೆಯ ಸಾಲ ತೀರಿಸಬೇಕಾಗುತ್ತದೆ. ಕಲಾರಂಗದಲ್ಲಿರುವವರಿಗೆ ಹೊಸ ಒಪ್ಪಂದದಿಂದ ನೆಮ್ಮದಿ.

ಧನುಸ್ಸು

ವ್ಯಾಪಾರೋದ್ಯಮದಲ್ಲಿ ಒಳ್ಳೆಯ ಮುನ್ನಡೆಯನ್ನು ಕಂಡು ಬೀಗುವಿರಿ. ಉದ್ಯೋಗದಲ್ಲಿ ನಿಮ್ಮ ಮಾತು ನಡೆಯುತ್ತದೆ. ವರಮಾನವೂ ಹೆಚ್ಚುತ್ತದೆ. ಹೊರ ವ್ಯವಹಾರದಲ್ಲಿ ಸಂತೋಷ ಸಿಗುತ್ತದೆ. ಘನತೆಯೂ ಮೇಲೆದ್ದು ನಿಲ್ಲುತ್ತದೆ. ಹಣಕಾಸಿನ ಪರಿಸ್ಥಿತಿ ಯಾವುದೇ ತೊಂದರೆಯಿಲ್ಲದೆ ಭದ್ರವಾಗಿರುತ್ತದೆ. ಕುಟುಂಬ ಜೀವನದಲ್ಲಿ ಸಣ್ಣ ತಕರಾರುಗಳಿರುತ್ತವೆ.

ಮಕರ

ಉದ್ಯಮ ನಿಧಾನವಾಗಿ ಮುನ್ನಡೆಯತ್ತ ಹೆಜ್ಜೆ ಹಾಕುತ್ತದೆ. ವ್ಯಾಪಾರದಲ್ಲಿ ಮೂಲೆಗೆ ಬಿದ್ದ ಸರಕುಗಳೆಲ್ಲ ಮಾರಾಟವಾಗಿ ಲಾಭವಾಗುತ್ತದೆ. ಹೊರ ವ್ಯವಹಾರಗಳಲ್ಲಿ ಎದುರು ನೋಡಿದ ಲಾಭ ಸಿಗುತ್ತದೆ. ಕಲಾವಿದರುಗಳಿಗೆ ಇದು ಅಭ್ಯುದಯದ ಕಾಲ. ಖರ್ಚುಗಳನ್ನು ನಿಭಾಯಿಸುವಲ್ಲಿ ನಿಮ್ಮನ್ನು ಬಿಟ್ಟರೆ ಬೇರಿಲ್ಲ. ಮನೆ, ವಾಹನ ಕೊಳ್ಳಲವಕಾಶವುಂಟು.

ಕುಂಭ

ಉದ್ಯಮದಲ್ಲಿ ಮುನ್ನಡೆಯ ಅವಕಾಶ ತೆರೆದುಕೊಳ್ಳಲಿದೆ. ಗಂಡ ಹೆಂಡಿರ ಸಂಬಂಧ ಉತ್ಸಾಹ ಉಕ್ಕಿಸುತ್ತದೆ. ಬೆನ್ನಹಿಂದಿನ ಶತ್ರುಗಳ ಕೆಲಸದಿಂದ ನಿಮಗೇ ಒಳಿತಾಗಲಿದೆ. ಖರ್ಚುಗಳು ನಿಭಾಯಿಸುವಂತಿರುತ್ತವೆ. ಹಣಕಾಸಿನ ಸ್ಥಿತಿ ಉತ್ತಮ. ಉನ್ನತ ಓದಿಗಾಗಿ ಹೆಚ್ಚಿನ ವೆಚ್ಚ ಮಾಡಬೇಕಾಗುತ್ತದೆ. ಬಹು ದಿನದಿಂದ ಬಾರದ ಬಾಕಿ ಬಂದು ಕುಟುಂಬಕ್ಕೆ ನೆಮ್ಮದಿ ತರುತ್ತದೆ.

ಮೀನ

ಉದ್ಯೋಗದಲ್ಲಿ ಮಾನಸಿಕ ನೆಮ್ಮದಿ ಸಿಗುತ್ತದೆ. ಕುಟುಂಬ ಜೀವನದಲ್ಲಿ ಒಳ್ಳೆಯ ಹೊಂದಾಣಿಕೆಯಿರುತ್ತದೆ. ದಾಂಪತ್ಯ ಸುಖ ಚೆನ್ನು. ಕೊಡು ಕೊಳ್ಳುವುದರಲ್ಲಿ ದಿಕ್ಕು ತಪ್ಪಬಹುದು. ಎದುರು ನೋಡಿದ ಬಾಬತ್ತುಗಳಿಂದ ಒಳ್ಳೆಯದಾಗಲಿದೆ. ವ್ಯಾಜ್ಯಗಳು ನಿಮ್ಮಂತಾಗಲಿವೆ. ಹೊರ ವ್ಯವಹಾರದಲ್ಲಿದ್ದ ಕಷ್ಟಗಳು ತೊಲಗಿ ಎಲ್ಲ ಒಳಿತು ಸೇರಿ ಬರುತ್ತದೆ.

ನಿಮ್ಮ ಪತ್ರಗಳು

ವಿ. ಬಿ. ಹೇಮಾವತಿ, ಸತೀಶ್ ಕುಮಾರ್, ಹೊಸಪೇಟೆ. ಕೆ. ಎಚ್. ಅಬುಬಕ್ಕರ್, ಅಬ್ಬೂರು ಕಟ್ಟೆ. ಬಿ. ಷಫಿವುಲ್ಲಾಖಾನ್, ಗೌರಿಬಿದನೂರು. ಎಸ್. ಪ್ರಕಾಶ್, ಜಯಪುರ. ಸಿ. ಸಿದ್ದರಾಜು, ಬೆಂಗಳೂರು.

ದಿನಾಂಕ 2–8–92ರ 'ರಾಗಸಂಗಮ' ನಿತ್ಯಾರವರ ಮುಖಪುಟದೊಂದಿಗೆ ಸುಂದರವಾಗಿ ಕಂಗೊಳಿಸುತ್ತಿತ್ತು.

ಲಿಂಗಪ್ಪ ಎನ್; ಉಪ್ಪಿನಂಗಡಿ. ಕರೇಗೌಡ್ರ ಹಾಲಪ್ಪ, ನರಸಾಪುರ. ವಿ. ಬಿ. ಹೇಮಾವತಿ, ಬಿಲ್ಲಾಡಿ ಸತೀಶ್‌ಕುಮಾರ್, ಹೊಸಪೇಟೆ. ಬಿ. ಸನಾವುಲ್ಲಖಾನ್, ಗೌರಿಬಿದನೂರು.

ಕುಮುದ ಅವರ ಕಾದಂಬರಿ 'ಪುನಾರಾವರ್ತನೆ' ಆರಂಭದಲ್ಲಿ ನೀರಸ ಎನಿಸಿದರೂ ಅನಂತರ ಓದಿಸಿಕೊಂಡು ಹೋಯಿತು. ಸರಳ ಶೈಲಿಯಲ್ಲಿದ್ದು ಆಕರ್ಷಣೀಯವಾಗಿ ಮೂಡಿ ಬಂದಿದೆ.

ವೈ. ಎಚ್. ಸಂಗಪ್ಪ, ಸಾಗರ

ಕುಮುದ ಅವರ 'ಪುನರಾವರ್ತನೆ' ಸಂಪೂರ್ಣ ಕಾದಂಬರಿ ಸಾಧಾರಣವಾಗಿದ್ದು ಚೆಕ್ಕದಾಗಿ ಚಿತ್ರಿಸಬಹುದಾಗಿದ್ದಂತಹ ಕತೆಯನ್ನು ಲೇಖಕಿಯವರು ಎಳೆ ಎಳೆದು ಹಿಗ್ಗಿಸಿರುವುದು ಓದುಗರು ಗುರುತಿಸುವಂತಿತ್ತು.

ಈರಯ್ಯ ಕೊಳ್ಳಿಮಠ ಹಳ್ಳೂರ, ಹುಣಸಗಿ. ಬಿ. ಸನಾವುಲ್ಲಾ ಖಾನ್, ಗೌರಿಬಿದನೂರು. ನಾಗರಾಜ, ಶೇಖರ, ಮಣಿ, ಲತ, ಬಾಲು, ಕಟ್ಟೇಬೆಳಗುಲಿ.

ಲಕ್ಷ್ಮಿದೇವಿಶಾಸ್ತ್ರಿ ಅವರ ಸಣ್ಣಕತೆ 'ಅಂತರ' ಚೆನ್ನಾಗಿ ಮೂಡಿ ಬಂದಿದೆ. ಸಣ್ಣಕತೆಯಾದರೂ ಚೆಕ್ಕದಾಗಿ ಚೊಕ್ಕವಾಗಿ ಅರ್ಥಪೂರ್ಣವಾಗಿ ಮೂಡಿ ಬಂದಿದೆ.

ವೈ. ಎನ್. ಸುಂದರ್ಶನ್, ಸಿ. ಸಿದ್ದರಾಜು, ಬೆಂಗಳೂರು.

ಸಿನಿಬಿಟ್ಸ್ ಅಂಕಣದ 'ವಿಷ್ಣು, ದ್ವಾರಕೀಶ್ ಸಮಾಗಮ' ಬರಹ ಸ್ವಾಗತಾರ್ಹ ಬಹು ವರ್ಷಗಳ ಬಳಿಕ ತಮ್ಮಲ್ಲಿನ ಕಹಿ ಮರೆತು ಒಂದುಗೂಡಿದ ನಟರೀರ್ವರ ನಡತೆ ಅಭಿಮಾನಿಗಳಿಗೆ ಖುಶಿ ನೀಡುವಂತಿತ್ತು.

ಎಮ್. ಸುರೇಶ್, ಮುಂಬಯಿ

ಕುಮುದ ಅವರ ಕಾದಂಬ 'ಪುನರಾವರ್ತನೆ' ಸಾಧಾರ ವಾಗಿತ್ತು. ಎಚ್. ಕೆ. ಅನಸೂ ಸಂಪತ್ ಅವರ 'ಚೆನ್ನದ ಪುತ್ಥ ಕುತೂಹಲಕಾರಿಯಾಗಿ ಮೂ ಬರುತ್ತಿದೆ.

ಎ. ಶ್ರೀನಿವಾಸಯ್ಯ, ಬೆಂಗಳೂರು

ಕಾದಂಬರಿ ವಿಭಾಗದ ಅತಿ ಹೆಚ್ಚು ನಗೆಹನಿಗಳನ ನೀಡಿದ್ದಕ್ಕೆ ಧನ್ಯವಾದಗಳು. ಸಂಚಿಕೆಯಲ್ಲಿನ ಕವನ ಚೆನ್ನಾಗಿತ್ತು

ಜಾನ್ ಬಿ. ಸಿಕ್ವೇರ, ಶ್ರೀನಿವಾ ಆಚಾರ್ಯ, ಭಾಸ್ಕರ ಪ ಮಣಿಪುರ.

ಅನಸೂಯ ಸಂಪತ್ ಅವ 'ಚೆನ್ನದ ಪುತ್ಥಳಿ' ಧಾರಾವಾ ತುಂಬ ಚೆನ್ನಾಗಿ ಓದಿಸಿಕೊಂಡು ಹೋಯಿತು. ಧಾರಾವಾಹಿ ಕೊನೆಯ ಹಂತಕ್ಕೆ ಬಂದಿರುವುದು ತುಂಬ ಬೇಸರವಾಯಿತು. ಎಲ್ಲ ಧಾರಾವಾಹಿಗಳು ಚೆನ್ನಾಗಿವೆ.

ಮೋಹನ್ ಬೋಳಂಗಡಿ, ಪಾಣೆಮಂಗಳೂರು

ಈ ವಾರದ ರಂಗೋಲಿ ಚೆನ್ನಾಗಿತ್ತು.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ವಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53



"ಓಹೋ ಏನು ಯೋಗ ಸ್ವಾಮಿ ನಿಮ್ದು, ಸಾಯೋವರ್ಗೂ ಬದ್ಕಿರೋ ಯೋಗ ಇದೆ ಸ್ವಾಮಿ!"



"ಮೈಸೂರು ಜೂನಲ್ಲಿ ಜಿರಾಫೆ ಮರಿ ಹಾಕಿರೋ ಸುದ್ದಿ ಇದೆ ಅಂದ್ಯಲ್ಲ, ಎಲ್ಲೋ?"

ಹಾಸ್ಯ ಸಂಗಮ



"ಇವರು ಪ್ರತಿಭಾವಂತ ಲೇಖಕರು ಸಾರ್. ಕಥೆ, ಕವನ, ಲೇಖನ ಅಂತ ಏನೇನೋ ಬರೀತಾ ಇರ್ತಾರೆ..."



"ಆದರೆ ಇನ್ನೂ ಒಂದೂ ಪ್ರಕಟವಾಗಿಲ್ಲ ಅಷ್ಟೇ."

RAGASANGAMA Weekly 23-8-92 Regd. No. BGW